ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ—ಸಂಖ್ಯೆ ೩೪

ಶ್ರೀ ವಸಿಷ್ಠ ಮಹರ್ಷಿ ವಿರಚಿತವೂ ಶ್ರೀ ವಾಲ್ಮೀಕಿ ಮಹರ್ಷಿ ಪ್ರೋಕ್ತವೂ
ಆದ

ಯೋಗವಾಸಿಷ್ಠ

ಸಂಪುಟ ೧೫

ನಿರ್ವಾಣ ಪ್ರಕರಣ

ಕನ್ನಡಿಸಿದವರು :
ದೇವುಡು

ಜಯಭಾರತ ಪ್ರೆಸ್
(ದಿ ಕರ್ಣಾಟಕ ಪ್ರಿಂಟರ್ಸ್ ಲಿಮಿಟೆಡ್)
ಚಾಮರಾಜಪೇಟೆ, ಬೆಂಗಳೂರು-೨
೧೯೫೦

ಯೋಗವಾಸಿಷ್ಠ

ಸಂಪುಟ ೧೫

ನಿರ್ವಾಣ ಪ್ರಕರಣ

ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ — ಸಂಖ್ಯೆ ೩೪

ಶ್ರೀ ವಸಿಷ್ಠ ಮಹರ್ಷಿ ವಿರಚಿತವೂ ಶ್ರೀ ವಾಲ್ಮೀಕಿಮಹರ್ಷಿ ಪ್ರೋಕ್ತವೂ
ಆದ

ಯೋಗವಾಸಿಷ್ಠ

ಸಂಪುಟ ೧೫

ನಿರ್ವಾಣ ಪ್ರಕರಣ

ಕನ್ನಡಿಸಿದವರು :
ದೇವುಡು

ಜಯಭಾರತ ಪ್ರೆಸ್
(ದಿ ಕರ್ಣಾಟಕ ಪ್ರಿಂಟರ್ಸ್ ಲಿಮಿಟೆಡ್)
ಚಾಮರಾಜಪೇಟೆ, ಬೆಂಗಳೂರು-೨
೧೯೫೦

ಪೀಠಿಕೆ

ಯೋಗವಾಸಿಷ್ಠವು ಅದ್ವೈತಸಿದ್ಧಾಂತಕ್ಕೆ ಸೇರಿದ ಪ್ರಕರಣ ಗ್ರಂಥ. ಇದಕ್ಕೆ ವಾಸಿಷ್ಠರಾಮಾಯಣ ಎಂದೂ ಹೆಸರುಂಟು. ಅದ್ವೈತ ಗುರುಪರಂಪರೆಯ ಆದ್ಯರಾದ ವಸಿಷ್ಠರು "ಸೃಷ್ಟಿಯ ಮೊದಲು ದಿನಗಳಲ್ಲಿ ಲೋಕದಲ್ಲಿ ಶಾಂತಿಯು ನೆಲೆಗೊಳ್ಳಲೆಂದು ಭಗವಂತನಾದ ಚತುರ್ಮುಖನು ಉಪದೇಶಿಸಿದ ಜ್ಞಾನವಿದ್ಯೆ" ಯನ್ನು ಶ್ರೀರಾಮನ ಚಿತ್ತಶಾಂತಿಗೆಂದು ಹೇಳಿದರೆಂದೂ, ಅದನ್ನೇ ವಾಲ್ಮೀಕಿಗಳು ಬ್ರಹ್ಮನಾಜ್ಞೆಯಿಂದ ಗ್ರಂಥವಾಗಿ ವಿರಚಿಸಿದರೆಂದೂ ಈ ಗ್ರಂಥದಲ್ಲಿ ಹೇಳಿದೆ. ವಿದ್ಯಾರಣ್ಯರು ನಿಶ್ಚಲದಾಸರು ಮೊದಲಾದ ಅದ್ವೈತಾಚಾರ್ಯರನೇಕರು ಈ ಗ್ರಂಥದ ಅನೇಕಾಂಶಗಳನ್ನು ತಮ್ಮ ಗ್ರಂಥಗಳಲ್ಲಿ ಸಂಗ್ರಹಿಸಿದ್ದಾರೆ. ವಾಸಿಷ್ಠ ಸಿದ್ಧಾಂತವೂ ಶಾಂಕರಸಿದ್ಧಾಂತವೂ ಕೆಲವೆಡೆಗಳಲ್ಲಿ ಭಿನ್ನೈಸುವುದೆಂದು ಕೆಲವರ ಅಭಿಪ್ರಾಯವಿದೆ. ಆದರೂ ಅದ್ವೈತ ಸಂಪ್ರದಾಯವನ್ನು ಹಿಡಿದ ಮುಮುಕ್ಷುಗಳೂ ಜಿಜ್ಞಾಸುಗಳೂ ಈ ಗ್ರಂಥವನ್ನು ಪರಮಾದರದಿಂದ ಅಧ್ಯಯನ ಮಾಡುತ್ತಾರೆ.

ಭೋಗೈಕಪರಾಯಣವಾದ ಆಧುನಿಕ ನಾಗರಿಕತೆಯ ದೇಶಗಳಲ್ಲಿಯೇ ಹುಟ್ಟಿ ಬೆಳೆದ ಅನೇಕ ದಾರ್ಶನಿಕರು ನಿರೂಪಿಸಿರುವ ಸಿದ್ಧಾಂತಗಳಿಗೂ ಈ ವಾಸಿಷ್ಠ ಸಿದ್ಧಾಂತಕ್ಕೂ ಎಷ್ಟೋ ಅಂಶಗಳಲ್ಲಿ ಏಕತಾನತೆಯು ಇರುವುದು ಒಂದು ವಿಶೇಷ ಸಂಗತಿ.

ಈ ಗ್ರಂಥದಲ್ಲಿ ನಿರ್ಣಯಸಾಗರ ಪ್ರೆಸ್ಸಿನಲ್ಲಿ ತಾತ್ಪರ್ಯಪ್ರಕಾಶವೆಂಬ ವ್ಯಾಖ್ಯಾನದೊಡನೆ ಮುದ್ರಿತವಾಗಿರುವ ಮೂಲವನ್ನೇ ಬಹುಮಟ್ಟಿಗೆ ಅನುಸರಿಸಲಾಗಿದೆ. ಹಿಂದೆ ಆಸ್ಥಾನ ವಿದ್ವಾನ್ ಬ್ರಹ್ಮಶ್ರೀ ಗುಂಡಶಾಸ್ತ್ರಿಗಳು ಕೃಷ್ಣರಾಜ ವೈಭವನೆಂಬ ಹೆಸರಿನಿಂದ ವೈರಾಗ್ಯ, ಮುಮುಕ್ಷು, ವ್ಯವಹಾರ, ಉತ್ಪತ್ತಿ, ಸ್ಥಿತಿ ಉಪಶಮಗಳೆಂಬ ಮೊದಲಿನೈದು ಪ್ರಕರಣಗಳನ್ನು ಮೂಲ-ಅನುವಾದ ಸಹಿತವಾಗಿ ಪ್ರಕಟಿಸಿದ್ದರು. ಈಗ ಇಲ್ಲಿ ಪ್ರಕಟವಾಗಿರುವ ಅನುವಾದವು ಸ್ವಸಂತ್ರವು ಅವಶ್ಯವೆಂದು ತೋರಿದ ಕಡೆಗಳಲ್ಲಿಯೂ ಗ್ರಂಥಾಂತರಗಳಲ್ಲಿ ಹೇಳಿರುವುದು ಓದುಗರ ಗಮನಕ್ಕೆ ಬಂದು ಓದಿದ ವಿಷಯವು ದೃಢವಾಗಲೆಂದೂ ಟಿಪ್ಪಣಿಗಳನ್ನು ಕೊಡಲಾಗಿದೆ.

ಭಾರತವಿಂದು ಜಾಗ್ರುತವಾಗಿದೆ. ಮಾದರಿಯ ಮೈಸೂರು ಅಕ್ಷರ ಪ್ರಚಾರವನ್ನು ದೇಶಾದ್ಯಂತವೂ ಹರಡಿ ಕೀರ್ತಿವಂತವಾಗಿದೆ. ನಾನಾಮುಖವಾಗಿ ಬೆಳೆಯುತ್ತಿರುವ ದೇಶದ ಸೌಭಾಗ್ಯ ಮಂದಿರಕ್ಕೆ ಕಲಶವಾಗಿ ಜನರಲ್ಲಿ ವಿದ್ಯಾವಂತರಾಗಬೇಕೆಂಬ ಆಸೆ ಬಲವಾಗುತ್ತಿದೆ. ಕಲಿತ ವಿದ್ಯೆಗಳೆಲ್ಲವೂ ಸಾರ್ಥಕವಾಗಬೇಕಾದರೆ ಬ್ರಹ್ಮವಿದ್ಯೆಯನ್ನು ಕಲಿಯಲೇಬೇಕೆಂಬ ಪ್ರಾಚೀನರ ಉಪದೇಶವೆಂದು ಎಲ್ಲರ ಮನಸ್ಸಿಗೂ ಬರುವ ಕಾಲವೂ ಬಂದಿದೆ. ಇಂತಹ ಸಂಧಿಕಾಲಗಳಲ್ಲಿ ಈ ಗ್ರಂಥವು ಸುಲಭ ಕನ್ನಡದಲ್ಲಿ ಬರುವುದು ಕನ್ನಡಲೋಕದ ಸುದೈವ. ಕಾವ್ಯಶೈಲಿಯಲ್ಲಿ ವೇದಾಂತವನ್ನು ಇಷ್ಟು ಸುಂದರವಾಗಿ ಸುಲಭವಾಗಿ ಬೋಧಿಸುವ ಗ್ರಂಥ ಇನ್ನೊಂದಿಲ್ಲ. ಇದನ್ನು ಓದಿ ಅರ್ಥಮಾಡಿಕೊಳ್ಳಲು ಗ್ರಂಥಾಂತರಗಳ ಸಹಾಯವು ಬೇಕಿಲ್ಲ. ಶ್ರದ್ಧೆಯೊಂದಿದ್ದರೆ ಸಾಕು: ಅದರಿಂದ ಈ ಗ್ರಂಥದಿಂದ ಆಗುವ ಲೋಕೋಪಕಾರವು ಅಷ್ಟಿಷ್ಟಲ್ಲ.

ಈ ಗ್ರಂಥವು ಈ ರೂಪದಲ್ಲಿ ಬರುವುದಕ್ಕೆ ಕಾರಣರು ನಮ್ಮನ್ನಾಳುವ ಶ್ರೀಮನ್ಮಹಾರಾಜರು ಶ್ರೀ ಜಯಚಾಮರಾಜೇಂದ್ರ ಒಡೆಯರು ಬಹದ್ದೂರ್, ಜಿ.ಸಿ.ಬಿ.,ಜಿ.ಸಿ.ಎಸ್.ಐ ಅವರು. ಈ ಗ್ರಂಥ ಪಠನ ಪಾಠನಗಳಿಂದ ಲಭಿಸುವ ಶ್ರೇಯಸ್ಸೆಲ್ಲವೂ ಮಹಾಸನ್ನಿಧಾನಕ್ಕೇ ಸೇರಿದುದು.

ಈ ಕಾರ್ಯಕ್ಕೆ ತನ್ನನ್ನು ನಿಯಮಿಸಿದ ಆಳುವ ಮಹಾಸ್ವಾಮಿಯವರಿಗೆ ಅನುವಾದಕನು ಅತ್ಯಂತ ಕೃತಜ್ಞನಾಗಿ ಈ ಗ್ರಂಥದ ಅಧ್ಯಯನದಿಂದ ತನಗೆ ಆದ ಪರೋಪಕಾರವನ್ನು ನೆನೆದು ಸಮಸ್ತ ಸನ್ಮಂಗಳಾನಿ ಭವಂತು ಎಂದು ಹರಕೆ ಹೊರುತ್ತಾನೆ.

ಬೆಂಗಳೂರು ನಗರ

೧೫-೬-೫೦

ದೇವುಡು.

ವಿಷಯ ಸೂಚಿಕೆ

ಸರ್ಗ	ವಿಷಯ	ಪುಟ
೨೮	ಪರಮಾರ್ಥ ಯೋಗೋಪದೇಶ	೧—೩೨
೨೯	ಜಗತ್ಪರಮಾತ್ಮಮಯತ್ವ ವರ್ಣನ	೩೩—೭೩
೩೦	ಚೇತ್ಯೋನ್ಮುಖ ಚಿದ್ವಿಚಾರ	೭೪—೧೦೬
೩೧	ಮನಃ ಪ್ರತಿಪಾದನಂ	೧೦೭—೧೨೫
೩೨	ದೇಹಪಾತ ವಿಚಾರ	೧೨೬—೧೪೨
೩೩	ದ್ವೈತೈಕ್ಯ ಪ್ರತಿಪಾದನ	೧೪೩—೧೫೬
೩೪	ಶ್ರೀ ಪರಮೇಶ್ವರೋಪದೇಶ	೧೫೭—೧೬೮
೩೫	ಮಹಾದೇವ ಪೂಜ್ಯಸೀಮಾಂತತ್ವ ಕಥನ	೧೬೯—೧೭೭
೩೬	ಪರಮೇಶ್ವರ ವರ್ಣನಂ	೧೭೮—೧೮೫
೩೭	ನಿಯತಿ ನೃತ್ಯ	೧೮೬—೧೯೬
೩೮	ಬಾಹ್ಯಪೂಜನ	೧೯೭—೨೦೬
೩೯	ದೇವಾರ್ಚನ ವಿಧಿ	೨೦೭—೨೨೪
೪೦	ದೇವತಾ ತತ್ತ್ವ ವಿಚಾರ	೨೨೫—೨೨೯
೪೧	ಜಗನ್ಮಿಥ್ಯಾತ್ವ ಪ್ರತಿಪಾದನ	೨೩೦—೨೪೫
೪೨	ಪರಮಾತ್ಮಭಿಧಾನ	೨೪೬—೨೫೬
೪೩	ವಿಶ್ರಾಂತಿ ವರ್ಣನ	೨೫೭—೨೬೬

ಶ್ರೀ

ಯೋಗವಾಸಿಷ್ಠ

ನಿರ್ವಾಣ ಪ್ರಕರಣಂ ಪೂರ್ವಾರ್ಧಂ

ಅಷ್ಟಾವಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಏವಂ ಭುಶುಂಡವೃತ್ತಾಂತಃ ಕಥಿತಸ್ತೇ ಮಯಾನಘ ।
ಅನಯಾ ಪ್ರಜ್ಞಯಾ ತೀರ್ಣೋ ಭುಶುಂಡೋ ಮೋಹಸಂಕಟಾತ್ ॥ ೧ ॥

ಇಪ್ಪತ್ತೆಂಟನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು :- ನಾನು ನಿನಗೆ ಭುಶುಂಡವೃತ್ತಾಂತವನ್ನು ಹೇಳಿದೆನು. ಎಲೆ ಪಾಪರಹಿತನೆ, ಈ ನಾನು ಹೇಳಿದ ಪ್ರಾಣೋಪಾಸನದಿಂದ ಭುಶುಂಡನು ಈ ಮೋಹಸಂಕಟದಿಂದ ಪಾರಾದನು.

(ಹಿಂದೆ ಪ್ರಾಣವೃತ್ತಿಗಳನ್ನು ಅನುಸಂಧಾನಮಾಡುತ್ತ ಚಿತ್ತವಿಶ್ರಾಂತಿಯನ್ನು ಪಡೆದು ಅದರಿಂದ ನಿರ್ವಾಣವನ್ನು ಹೊಂದುವುದನ್ನು ಕುರಿತು ಹೇಳಿ, ಈಗ ದೇವತಾರ್ಚನದಿಂದಲೂ ಚಿತ್ತವಿಶ್ರಾಂತಿಲಕ್ಷಣವಾದ ನಿರ್ವಾಣವು ದೊರೆಯುವುದು ಎಂಬುದನ್ನು ಹೇಳಲಾಗಿದೆ. ಪ್ರಾಸಂಗಿಕವಾಗಿ ನಿರ್ವಾಣೋಪಾಯಗಳಿಗೆಲ್ಲ ಪ್ರತಿಬಂಧಕವು ದೇಹಾಭಿಮಾನವಾದ್ದರಿಂದ ಅದರ ನಿವೃತ್ತಿಗಾಗಿ ಎರಡು ಹಿತ ವಾಕ್ಯಗಳನ್ನು ಹೇಳುತ್ತಾರೆ.—ಲಘುಯೋಗ ವಾಸಿಷ್ಠ ವ್ಯಾಖ್ಯಾನ)

ಏತಾಂ ದೃಷ್ಟಿಮವಷ್ಟಭ್ಯ ಸ್ವಪ್ರಾಣಾಭ್ಯಾಸಪೂರ್ವಿಕಾಂ।
ಭುಶುಂಡವನ್ಮಹಾಬಾಹೋ ಭವ ತೀರ್ಣಮಹಾರ್ಣವಃ ॥ ೨ ॥

ಯಥಾ ಜ್ಞಾನೇನ ಯೋಗೇನ ಸಂತತಾಭ್ಯಾಸಜನ್ಮನಾ।
ಭುಶುಂಡಃ ಪ್ರಾಪ್ತವಾನ್ಪ್ರಾಪ್ಯಂ ತಥಾಸಾದಯ ತತ್ಪದಂ ॥ ೩ ॥

ಅಸಕ್ತಬುದ್ಧಯಃ ಸರ್ವೇ ಭುಶುಂಡವದವಸ್ಥಿತಿಂ।
ಪ್ರಾಪ್ನುವಂತಿ ಪರೇ ತತ್ತ್ವೇ ಪ್ರಾಣಾಪಾನಾವಲೋಕಿನಃ ॥ ೪ ॥

(ವೇದಾಂತಗಳ ದೃಷ್ಟಿಯಲ್ಲಿ ಪಾಪವು ಖಂಡದ ಕಡೆಗೆ ಎಳೆಯುವ ಚಿತ್ತವೃತ್ತಿಯು. ಗೀತೆಯು ಕಾಮಕ್ರೋಧಾದಿಗಳನ್ನು ನರಕದ್ವಾರವೆಂದು ವರ್ಣಿಸಿರುವುದು. ಹೀಗೆಯೇ ದೈವೀಸಂಪತ್ತು ಮೋಕ್ಷವನ್ನೂ ಆಸುರಿಯು ಬಂಧವನ್ನೂ ಕೊಡುವುದು ಎಂದು ಹೇಳಿರುವುದನ್ನೂ ಧರ್ಮಾವಿರುದ್ಧಃ ಕಾಮೋಽಸ್ಮಿ ಭೂತೇಷು ಭರತರ್ಷಭ ಎಂದು ಹೇಳಿ ನರಕದ್ವಾರವಾದ ಕಾಮವೂ ಧರ್ಮಕ್ಕೆ ಅವಿರುದ್ಧವಾದರೆ ತನ್ನ ಸ್ವರೂಪವಾಗುವುದು ಎಂಬ ಭಗವದುಕ್ತಿಯನ್ನೂ ಚಿಂತಿಸಿ.)

೨. ಎಲೈ ಮಹಾಬಾಹುವೇ, ನೀನೂ ಪ್ರಾಣಾಭ್ಯಾಸಪೂರ್ವಕವಾಗಿ ಈ ಜ್ಞಾನಮಾರ್ಗವನ್ನು ಅವಲಂಬಿಸಿ, ಭುಶುಂಡನಂತೆಯೇ, (ಸಂಸಾರ) ಮಹಾಸಾಗರವನ್ನು ದಾಟಿದವನಾಗು.

(ಪ್ರಾಣಾಭ್ಯಾಸೋಽತ್ರ ಪ್ರಾಣಸ್ಯ ನಿರೋಧ ಉಪಾಸ್ತಿರ್ವಾ ತತ್ಪೂರ್ವಿಕಾಂ । ಮಹಾರ್ಣವ ಇತಿ ವಿಪುಲಸ್ಸಂಸಾರೋ ತಾ. ಪ್ರ.)

೩. ಜ್ಞಾನವನ್ನೂ ಯೋಗವನ್ನೂ ಸಂತತವಾಗಿ ಅಭ್ಯಾಸಮಾಡುತ್ತ ಭುಶುಂಡನು ಹೇಗೆ ಬ್ರಹ್ಮಸಿದ್ಧಿಯನ್ನು ಪಡೆದನೋ ನೀನೂ ಹಾಗೆಯೇ ಜ್ಞಾನಯೋಗಗಳನ್ನು ಅಭ್ಯಾಸಮಾಡಿ ಬ್ರಹ್ಮಪದವನ್ನು ಹೊಂದು.

೪. ಪ್ರಾಣಾಪಾನಗಳನ್ನು ದರ್ಶನಮಾಡುತ್ತ, ಅಸಕ್ತಬುದ್ಧಿಗಳಾದವರೆಲ್ಲರೂ ಭುಶುಂಡುವಿನಂತೆಯೇ ಪರಬ್ರಹ್ಮದಲ್ಲಿ ಸ್ಥಿತಿಯನ್ನು ಪಡೆಯುವರು.

ಏತಾ ವಿಚಿತ್ರಾ ಭವತಾ ಶ್ರುತಾ ವಿಜ್ಞಾನದೃಷ್ಟಯಃ।
ಇದಾನೀಂ ಧಿಯಮಾಲಂಬ್ಯ ಯಥೇಚ್ಛಸಿ ತಥಾ ಕುರು ॥ ೫ ॥

ಶ್ರೀ ರಾಮ ಉವಾಚ :—

ಭಗವನ್ಭವತಾ ಭೂಮಿಭಾಸ್ವತಾ ಜ್ಞಾನರಶ್ಮಿಭಿಃ।
ಹಾರ್ದಮುದ್ದಾಮದೌರಾತ್ಮ್ಯಂ ಪ್ರಮೃಷ್ಟಮಖಿಲಂ ತಮಃ ॥ ೬ ॥

ಪ್ರಬುದ್ಧಾಃ ಸ್ಮಃ ಪ್ರಹೃಷ್ಟಾಃ ಸ್ಮಃ ಪ್ರವಿಷ್ಟಾಃ ಸ್ಮಃ ಸ್ವಮಾಸ್ಪದಂ।
ಸ್ಥಿತಾಃ ಸ್ಮೋ ಜ್ಞಾತವಿಜ್ಞೇಯಾ ಭವಂತೋ ಹ್ಯಪರಾ ಇವ ॥ ೭ ॥

ಅಹೋ ಭುಶುಂಡಚರಿತಂ ಪರಂ ವಿಸ್ಮಯಕಾರಕಂ ।
ಭಗವನ್ಭವತಾ ಪ್ರೋಕ್ತಮುತ್ತಮಾರ್ಥಾವಬೋಧನಂ ॥ ೮ ॥

---

೫. ಹೀಗೆ ವಿಚಿತ್ರಗಳಾಗಿರುವ ಬ್ರಹ್ಮಸಂಸಿದ್ಧಿ ಸಂಪ್ರದಾಯಗಳನ್ನು ನೀನು ಕೇಳಿದೆಯಲ್ಲವೇ? ಇನ್ನು ನೀನು ನಿನಗೆ ತೋರಿದಂತೆ ಯಾವುದಾದರೂ ಒಂದನ್ನು ಆಶ್ರಯಿಸಿ ಕೃತಾರ್ಥನಾಗು.

೬. ಶ್ರೀರಾಮನು ಹೇಳಿದನು :- ಎಲೈ ಭಗವಂತನೇ, ಭೂಸೂರ್ಯನಾದ ನೀನು ಜ್ಞಾನಕಿರಣಗಳಿಂದ ನನ್ನ ಹೃದಯದಲ್ಲಿದ್ದ ನಿಬಿಡವೂ ದುಷ್ಟವೂ ಆದ ತಮಸ್ಸನ್ನೆಲ್ಲ ಚೆನ್ನಾಗಿ ಪರಿಹಾರಮಾಡಿರುವೆ.

೭. ನಾವಿಂದು (ನಿನ್ನದಯೆಯಿಂದ) ಪ್ರಬೋಧವನ್ನು ಪಡೆದೆವು: ಪ್ರಹರ್ಷವನ್ನು ಪಡೆದೆವು. ಆತ್ಮನಲ್ಲಿ ಸ್ಥಿತಿಯನ್ನು ಪಡೆದೆವು. ನಾವು ಅಪರವಸಿಷ್ಠರೋ ಎಂಬಂತೆ ಬ್ರಹ್ಮಜ್ಞರಾದೆವು.

೮. ಎಲೈ ಭಗವಂತನೇ, ನೀನು ಹೇಳಿದ ಭುಶುಂಡಚರಿತವು ನಿಜವಾಗಿಯೂ ವಿಸ್ಮಯಕಾರಕವು. ಉತ್ತಮವಾದ ಜ್ಞಾನವನ್ನು ಬೋಧಿಸುವುದು.

ಭುಶುಂಡಚರಿತೇ ಬ್ರಹ್ಮನ್ನೇತಸ್ಮಿನ್ಕಥಿತೇ ತ್ವಯಾ।
ಯಚ್ಛರೀರಗೃಹಂ ಪ್ರೋಕ್ತಂ ಮಾಂಸಚರ್ಮಾಸ್ಥಿನಿರ್ಮಿತಂ ॥ ೯ ॥

ತತ್ಕೇನ ನಾಮ ರಚಿತಂ ಕುತೋ ವಾ ತತ್ಸಮುತ್ಥಿತಂ ।
ಕಥಂ ವಾ ಸ್ಥಿತಿಮಾಯಾತಂ ಕೋ ವಾ ತತ್ರಾವತಿಷ್ಠತೇ ॥ ೧೦ ॥

ಶ್ರೀ ವಸಿಷ್ಠ ಉವಾಚ:—

ಪರಮಾರ್ಥಾವಬೋಧಾಯ ದೋಷಾಪಾಕರಣಾಯ ಚ ।
ಶೃಣು ರಾಘವ ತತ್ತ್ವೇನ ವಕ್ಷ್ಯಮಾಣಮಿದಂ ಮಯಾ ॥ ೧೧ ॥

ಅಸ್ಥಿಸ್ಥೂಣಂ ನವದ್ವಾರಂ ರಕ್ತಮಾಂಸಾವಲೇಪನಂ ।
ಶರೀರಸದನಂ ರಾಮ ನ ಕೇನಚಿದಿದಂ ಕೃತಂ ॥ ೧೨ ॥

ಆಭಾಸಮಾತ್ರಮೇವೇದಮಿತ್ಥಮೇವಾವಭಾಸತೇ ।
ದ್ವಿಚಂದ್ರವಿಭ್ರಮಾಕಾರಂ ಸದಸಚ್ಚ ವ್ಯವಸ್ಥಿತಂ ॥ ೧೩ ॥

೯-೧೦ ಎಲೈ ಬ್ರಹ್ಮನೆ, ನೀನು ಭುಶುಂಡಚರಿತವನ್ನು ಹೇಳುತ್ತ, ಶರೀರ ವೆಂಬ ಮನೆಯನ್ನು ಕುರಿತು ಹೇಳಿದೆಯಲ್ಲವೆ? ಮಾಂಸ, ಚರ್ಮ, ಅಸ್ಥಿಗ ಳಿಂದ ನಿರ್ಮಿತವಾದ ಆ ಶರೀರ ಗೃಹವನ್ನು ನಿರ್ಮಿಸಿದವರಾರು? ಯಾವುದರಿಂದ ಅದು ಹುಟ್ಟಿತು? ಅದು ಬದುಕಿರುವುದು ಹೇಗೆ? ಅದರಲ್ಲಿ ಇರುವವರು ಯಾರು?

೧೧. ಶ್ರೀ ವಸಿಷ್ಠನು ಹೇಳಿದನು –: ಪರಮಾರ್ಥವು ತಿಳಿಯಲೆಂದು, (ಮನಸ್ಸಿನಲ್ಲಿರುವ) ದೋಷವು ನಿವಾರಣವಾಗಲೆಂದು, ಎಲೈ ರಾಘವ, ತತ್ವವ ನ್ನು ಹೇಳುವೆನು ಕೇಳು.

೧೨. ಅಸ್ಥಿಗಳೆಂಬ ಮುಂಡಿಗೆಗಳೂ ನವದ್ವಾರಗಳೂ ರಕ್ತಮಾಂಸಗಳ ಮೆತ್ತುವಿಕೆಯೂ ಉಳ್ಳ ಈ ಶರೀರ ಮಂದಿರವನ್ನು ರಾಮ, ಯಾರೂ ಮಾಡಲಿಲ್ಲ.

೧೩. ಈ ಶರೀರವು ಇರುವಂತೆ ತೋರುವುದೇ ಹೊರತು ಇದಕ್ಕೆ ಶಾಶ್ವತ ವಾದ ಸ್ಥಿತಿಯಿಲ್ಲ. ಇದು (ನೇತ್ರದೋಷದಿಂದ ಆಕಾಶದಲ್ಲಿ ಕಾಣುವ) ಚಂದ್ರ

ದ್ವಿಚಂದ್ರದರ್ಶನವಿಧೌ ಚಂದ್ರದ್ವಿತ್ವಂ ಸದೈವ ಹಿ ।
ವಸ್ತುತಶ್ಚೈಕ ಏವೇಂದುಃ ಸ್ಥಿತೋ ದೇಹಸ್ತಥೈವ ಹಿ ॥ ೧೪ ॥

ದೇಹಪ್ರತ್ಯಯಕಾಲೇಹಿ ದೇಹೋಽಯಂ ಸಮುಪಸ್ಥಿತಃ ।
ಅಸನ್ನೇವ ಚ ಸತ್ತಸ್ಮಾತ್ಪ್ರೋಕ್ತಃ ಸದಾಸದಾತ್ಮಕಃ ॥ ೧೫ ॥

ಸ್ವಪ್ನೇ ಸ್ವಪ್ನಾವಬೋಧಃ ಸಂಸ್ತ್ವನ್ಯದಾ ಸ ಮುಧೈವ ಹಿ ।
ಬುದ್ಬುದೋ ಬುದ್ಬುದವಿಧೌ ಸತ್ಯೋ ಮಿಥ್ಯೈವ ಚಾನ್ಯದಾ ॥ ೧೬ ॥

ದ್ವಿತ್ವದಂತೆ (ಕೇವಲ ಭ್ರಾಂತರಿಗೆ ಮಾತ್ರ ಶಾಶ್ವತವೆನ್ನಿಸುವುದು.) ಇದು ಈಗ ಇರುವಂತೆ ಕಂಡರೂ ಶಾಶ್ವತವಲ್ಲ.

(ನ ಹಿ ಜಲೇ ಚಂದ್ರಾಭಾಸೋ ನಿರ್ಮಾತಾರಮಪೇಕ್ಷತೇ । ನಾಪಿ ತೈಮಿರಿಕ ಕಲ್ಪಿತ ದ್ವಿತೀಯಚಂದ್ರವಿಭ್ರಮಃ, ತದ್ವದಿತ್ಯರ್ಥಃ, ಈಶ್ವರಸ್ಯ ನಿರ್ಮಾತೃತ್ವಂತು ಶ್ರೌತಂ ನ ಮುಖ್ಯಂ। ಜೀವಸ್ಯ ನಿರ್ಮಾಪಯಿತೃತ್ವಮಪಿ ತಥಾ। ಅಬುದ್ಧಿಪೂರ್ವತ್ವಾತ್ ಅನಿಷ್ಟನಿರ್ಮಾಪಣಯೋಗಾಚ್ಚ ಇತಿ ಭಾವಃ —ತಾ. ಪ್ರ.)

೧೪. ಎರಡು ಚಂದ್ರರು ಕಾಣುವಾಗ, ಚಂದ್ರದ್ವಿತ್ವವು ಸತ್ಯವಾಗಿ ಇರುವಂತೆಯೇ ಕಾಣುವುದು. ಆದರೆ, ವಾಸ್ತವ್ಯವಾಗಿ ಚಂದ್ರನೊಬ್ಬನೇ ಇರುವನು. ಹಾಗೆಯೇ ದೇಹದ ತತ್ವವೂಕೂಡ.

೧೫. ದೇಹವಿರುವ ಸಮಯದಲ್ಲಿ ದೇಹವು ಇರುವುದು ನಿಜವಾದರೂ, ದೇಹವು ಶಾಶ್ವತವಾಗಿರದೆ ತಾತ್ಕಾಲಿಕವಾಗಿ ಮಾತ್ರ ಇರುವುದರಿಂದ ಈ ದೇಹವು ಸದಾ ಅಸತ್ ಎನ್ನಿಸಿಕೊಳ್ಳುವುದು.

(ಪರಮಾರ್ಥಸದಧಿಷ್ಠಾನಕತಯಾ ಉಪಚಾರಾತ್ ಸತ್ —ತಾ. ಪ್ರ.)

೧೬. ಸ್ವಪ್ನಕಾಲದಲ್ಲಿ ಸ್ವಪ್ನದ ಕಾಣುವಿಕೆಯು ನಿಜವೇ ಆಗಿದ್ದರೂ, ಬೇರೆ ಕಾಲದಲ್ಲಿ ಅದು ವ್ಯರ್ಥವೇ ಅಲ್ಲವೇ? ನೀರುಗುಳ್ಳೆಯು ತಾನು ಇರುವವರೆಗೂ ಸತ್ಯವೇ ಆಗಿದ್ದರೂ ಇತರ ಕಾಲಗಳಲ್ಲಿ ಅದು ಮಿಥ್ಯೆಯೇ ತಾನೆ?

ದೇಹೋ ದೇಹವಿಧೌ ಸತ್ಯೋ ಹ್ಯಸತ್ಯ ಇತರದ್ವಿಧೌ ।
ಪ್ರತಿಭಾಸವಿಧೌ ತಾವಜ್ಜಲಂ ಸದಸದನ್ಯದಾ ॥ ೧೭ ॥

ಪ್ರತಿಭಾಸವಿಧೌ ದೇಹಃ ಸನ್ನಸಂಶ್ಚಾನ್ಯದಾ ಸ್ಮೃತಃ ।
ಆಭಾಸಮಾತ್ರಮೇವೇದಮಿತ್ಥಂ ಸಂಪ್ರತಿ ಭಾಸತೇ ॥ ೧೮ ॥

ಅಯಂ ನಾಮಾಹಮಿತ್ಯಂತರ್ಗೃಹೀತಮನನಂ ಸ್ಥಿತಂ ।
ಮಾಂಸಾಸ್ಥಿಮಯನಿರ್ಮಾಣದೇಹೋಹಮಿತಿ ವಿಭ್ರಮಂ
ತ್ಯಜ ಸಂಕಲ್ಪನಿರ್ಮಾಣದೇಹಾಃ ಸಂತಿ ಸಹಸ್ರಶಃ ॥ ೧೯ ॥

---

೧೭. (ಹಾಗೆಯೇ) ದೇಹವು ದೇಹವಿರುವತನಕ ಸತ್ಯವೇ ಆಗಿದ್ದರೂ, ದೇಹಾತೀತವಾದುದನ್ನು ನೋಡುವ ವೇಳೆಯಲ್ಲಿ ಕೇವಲ ಅಸತ್ಯವೇ ಆಗುವುದು. ಬಿಸಿಲಿನ ಝಳವು ಹೆಚ್ಚಾದಾಗ ಕಾಣುವ ಮೃಗತೃಷ್ಣೆಯಂತೆ, ಇದೂಕೂಡ ಆ ಕಾಲದಲ್ಲಿ ಸತ್ಯದಂತೆಯೇ ಕಂಡರೂ ಅನ್ಯಕಾಲಗಳಲ್ಲಿ ಅಸತ್ಯವೇ ಸರಿ.

೧೮. ಹಾಗೆ, ದೇಹವು ತಾತ್ಕಾಲೀನವಾಗಿ ಮಾತ್ರ ಸತ್ಯವಲ್ಲದೆ, ಮಿಕ್ಕ ವೇಳೆಗಳಲ್ಲೆಲ್ಲಾ ಅಸತ್ಯವೇ ಸರಿ! ಅದರಿಂದ ಇದು ಆಭಾಸಮಾತ್ರವು! ಆಯಾ ಕಾಲದಲ್ಲಿ ಮಾತ್ರ ಇರುವಂತೆ ತೋರುವುದು.

೧೯. "ಇಂಥವನೆಂಬ ನಾನು" ಎಂಬ ಒಂದು ನಂಬಿಕೆಯು ಮನಸ್ಸಿನೊಳಗೆ ಬಹುಕಾಲದಿಂದ ಖಚಿತವಾಗಿ ನಿಂತುಹೋಗಿರುವುದು. ಆ ಮನನ ಬಲದಿಂದ ಸ್ಥಿರವಾಗಿರುವ ಭ್ರಾಂತಿಯೇ, ಮಾಂಸಾಸ್ಥಿಮಯವಾಗಿ ನಿರ್ಮಾಣವಾಗಿರುವ ದೇಹವನ್ನು ನಾನು ಎಂದುಕೊಂಡು ಇನ್ನಷ್ಟು ಭ್ರಾಂತಿಗೊಳಗಾಗುವುದು. ಅದರಿಂದ ಈ ದೇಹೋಽಹಂ ಭ್ರಮವನ್ನು ಬಿಡು. ಹೀಗೆ ಸಂಕಲ್ಪ ನಿರ್ಮಿತವಾದ ದೇಹಗಳು ಸಾವಿರಾರು ಇವೆ.

(ಪ್ರಾಗ್ಗೃಹೀತ ದೇಹಾಕಾರಂ ಮನನಮೇವ ಸಂಸ್ಕಾರ ದಾರ್ಢ್ಯಾತ್ ಪುನಃ ಪುನಃ ದೇಹಾಕಾರೇಣ ಸ್ಥಿತಂ: ತಾ. ಪ್ರ.)

ಸುಖತಲ್ಪಗತೋ ಯೇನ ಸ್ವಪ್ನದೇಹೇನ ದಿಕ್ತಟಾನ್ ।
ಪರಿಭ್ರಮಿಸಿ ಹೇ ರಾಮ ಸ ದೇಹಸ್ತೇ ಕ್ವ ಸಂಸ್ಥಿತಃ ॥ ೨೦ ॥

ಜಾಗರಾಯಾಂ ಮನೋರಾಜ್ಯೇ ಯೇನ ಸ್ವರ್ಗಪುರಾಂತರಂ ।
ಪರಿಭ್ರಮಿಸಿ ಮೇರುಂ ವಾ ಸ ದೇಹಸ್ತೇ ಕ್ವ ಸಂಸ್ಥಿತಃ ॥ ೨೧ ॥

ಸ್ವಪ್ನೇಷ್ವಪಿ ಚ ಯಃ ಸ್ವಪ್ನಸ್ತತ್ರ ಯೇನ ಮಹೀತಟಾನ್ ।
ಪರಿಭ್ರಮಿಸಿ ಹೇ ರಾಮ ಸ ದೇಹಸ್ತೇ ಕ್ವ ಸಂಸ್ಥಿತಃ ॥ ೨೨ ॥

ಮನೋರಾಜ್ಯಂ ಮನೋರಾಜ್ಯೇ ಮಹದ್ವಿಭವಭೂಮಿಷು ।
ಪರಿಭ್ರಮಿಸಿ ಯೇನೇಹ ಸ ದೇಹಸ್ತೇ ಕ್ವ ಸಂಸ್ಥಿತಃ ॥ ೨೩ ॥

---

೨೦. ಸುಖವಾದ ಹಾಸುಗೆಯಲ್ಲಿ ಮಲಗಿದ್ದವನು ಸ್ವಪ್ನದಲ್ಲಿ ಸ್ವಪ್ನದೇಹದಿಂದ ದಿಕ್ಕು ದಿಕ್ಕುಗಳನ್ನೆಲ್ಲ ಸುತ್ತುವೆಯಲ್ಲ! ಆಗಿನ, ಎಲೈ ರಾಮನೆ, ಆ ನಿನ್ನ ದೇಹವೆಲ್ಲಿ?

೨೧. ಜಾಗ್ರತ್ತಿನಲ್ಲಿಯೂ ಕೂಡ, ಮನೋರಾಜ್ಯದಲ್ಲಿ, ಸ್ವರ್ಗ, ಪುರ, ಮೊದಲಾದವುಗಳನ್ನೆಲ್ಲಾ, ಮೇರುವನ್ನೂ ಸುತ್ತಿ ಬರುವೆಯಲ್ಲ! ಆಗಿನ ಆ ನಿನ್ನ ದೇಹವೆಲ್ಲಿ?

೨೨. ಸ್ವಪ್ನದಲ್ಲಿ ಒಂದು ಸ್ವಪ್ನವಾದಾಗ, ಆಗ ಆ ಸ್ವಪ್ನ ಸ್ವಪ್ನದೇಹದಿಂದ ಭೂಮಂಡಲವನ್ನೆಲ್ಲ ಸುತ್ತಿ ಬರುವೆಯಲ್ಲ! ಆಗಿನ, ರಾಮ, ನಿನ್ನ ದೇಹವೆಲ್ಲಿ?

೨೩. ಮನಸ್ಸಿನಲ್ಲಿ ಏನೇನೋ ಹಗಲುಗನಸು ಕಾಣುತ್ತಿರುವಾಗ, ಅವರಲ್ಲಿ ಇನ್ನೊಂದು ಮನೋರಾಜ್ಯವು ಏರ್ಪಟ್ಟು, ಮಹಾ ವೈಭವಗಳಿಂದ ಕೂಡಿದ ಸ್ಥಿತಿಗಳಲ್ಲಿ ವಿಹರಿಸುವಾಗಿನ, ನಿನ್ನ ದೇಹವೆಲ್ಲಿ?

ಗತೈರ್ದೇಹೈರ್ಮನೋರಾಜ್ಯೇ ಯಾ ವಿಚಿತ್ರಾ ಜಗತ್ಕ್ರಿಯಾಃ ।
ಪ್ರಕರೋಷಿ ಮಹಾಬಾಹೋ ತೇ ದೇಹಾಸ್ತೇ ಕ್ವ ಸಂಸ್ಥಿತಾಃ ॥ ೨೪ ॥

ವಿಲಾಸಿನ್ಯಾನುರಾಗಿಣ್ಯಾ ಯೇನ ಸಂಕಲ್ಪಕಾಂತಯಾ ।
ನಿರ್ವೃತಿಂ ಯಾಸಿ ದೇಹೇನ ಸ ದೇಹಸ್ತೇ ಕ್ವ ಸಂಸ್ಥಿತಃ ॥ ೨೫ ॥

ಏತೇ ರಾಮ ಯಥಾ ದೇಹಾಃ ಮನಸಃ ಸದಸನ್ಮಯಾಃ ।
ತಥೈವ ತಾದೃಶಾಚಾರೋ ದೇಹೋಽಯಂ ಮನಸಃ ಸ್ಮೃತಃ ॥ ೨೬ ॥

ಇದಂ ಧನಮಯಂ ದೇಹೋ ದೇಶೋಽಯಮಿತಿ ವಿಭ್ರಮಃ ।
ತತ್ಸರ್ವಂ ಚಿತ್ತವೀರ್ಯಸ್ಯ ಸಂಕಲ್ಪಸ್ಯ ವಿಜೃಂಭಿತಂ ॥ ೨೭ ॥

---

೨೪. ಮನೋರಾಜ್ಯವನ್ನು ಬಿಟ್ಟು ಈಚೆಗೆ ಬಂದಮೇಲೆ ಗತವಾದ ಆ ನಿನ್ನ ಸಂಕಲ್ಪ ದೇಹದಿಂದ ಎಷ್ಟೋ ವಿಚಿತ್ರವಾದ ಜಗದ್ವ್ಯಾಪಾರಗಳನ್ನೆಲ್ಲ ನಡೆಸಿದೆಯಲ್ಲವೆ! ಎಲೈ ಮಹಾಬಾಹುವೇ, ಆ ನಿನ್ನ ಸಂಕಲ್ಪ ದೇಹಗಳೆಲ್ಲ ಏನಾದುವು?

೨೫. ನಿನ್ನ ಸಂಕಲ್ಪಜನ್ಯಳಾದ ಕಾಂತೆಯೊಡನೆ ಕೂಡಿ, ಜೊತೆಜೊತೆಯಲ್ಲಿ ಕಟ್ಟಿಕೊಂಡು ತಿರುಗಿ ಅನೇಕ ವಿಲಾಸಗಳನ್ನು ಅನುಭವಿಸಿ ಸಂತೋಷಿಸಿದ ಆ ಸಂಕಲ್ಪದೇಹವೆಲ್ಲಿಹೋಯಿತು?

೨೬. ನಿನ್ನ ಆ ದೇಹಗಳೆಲ್ಲವೂ ಹೇಗೆ ನಿನ್ನ ಮನಸ್ಸಂಕಲ್ಪದಿಂದ ಹುಟ್ಟಿ ಇರುವವರೆಗೂ ಸತ್ಯವಾಗಿರುವಂತೆಯೇ ಇದ್ದು ಮತ್ತೆ ಇಲ್ಲದೆ ಹೋಗಿ ಅಸನ್ಮಯಗಳೇ ಆದುವೋ, ಹಾಗೆಯೇ, ಈ ದೇಹವೂಕೂಡ, ಅವುಗಳಂತೆಯೇ ಕಾರ್ಯಕಾಲದಲ್ಲಿ ಮಾತ್ರ ಸತ್ಯವೇ ಆಗಿದ್ದಂತೆ ಕಂಡರೂ ಕೇವಲ ಮನೋಜನ್ಯವಾದುದೇ ಸರಿ!

(ಹಿಂದೆ ಉತ್ಪತ್ತಿ ಪ್ರಕರಣದಲ್ಲಿ ಬಂದ ಲೀಲೋಪಾಖ್ಯಾನವನ್ನು ಸ್ಮರಿಸಿಕೊಳ್ಳಿ.)

೨೭. ಇದು ನನ್ನಧನವು: ಇದು ನನ್ನ ದೇಹವು: ಇದು ನನ್ನ ದೇಶವು, ಮೊದಲಾದ ಭ್ರಾಂತಿಗಳೆಲ್ಲವೂ ಚಿತ್ತದ ಬಲದಿಂದ ರೂಪುಗೊಂಡ ಸಂಕಲ್ಪಗಳೇ ಎಂದು ತಿಳಿ.

ದೀರ್ಘಸ್ವಪ್ನಮಿಮಂ ವಿದ್ಧಿ ದೀರ್ಘಂ ವಾ ಚಿತ್ತವಿಭ್ರಮಂ ।
ದೀರ್ಘಂ ವಾಪಿ ಮನೋರಾಜ್ಯಂ ಸಂಸಾರಂ ರಘುನಂದನ ॥ ೨೮ ॥

ಪ್ರಬೋಧಮೇಷ್ಯಸಿ ಯದಾ ಪರಮಾತ್ಮೇಚ್ಛಯಾ ಸ್ವಯಾ ।
ದ್ರಕ್ಷ್ಯಸಿ ತ್ವಂ ಸದಾ ಸಮ್ಯಗಿದಮರ್ಕೋದಯೇ ಯಥಾ ॥ ೨೯ ॥

ಸ್ವಪ್ನಸಂಕಲ್ಪಜಾಲೇನ ಯಥಾನ್ಯೈವ ಜಗತ್ಸ್ಥಿತಿಃ ।
ತಥೈವೇಯಂ ಹಿ ಸಂಕಲ್ಪಕಲನಾ ಕಾಚಿದೇವ ಹಿ ॥ ೩೦ ॥

ಯಥಾ ಪೂರ್ವಂ ಮಯೋತ್ಪತ್ತಿಃ ಪ್ರೋಕ್ತಾ ಕಮಲಜನ್ಮನಃ ।
ಮನಸಃ ಸ್ವಯಮೇವಾಂತಃ ಸಂಕಲ್ಪ ಕಲನೋದ್ಭವಾ ॥ ೩೧ ॥

---

೨೮. (ಅದರಿಂದ ಈ ದೇಹದಲ್ಲಿ ಬಾಳುವಿಕೆಯನ್ನು) ದೀರ್ಘಸ್ವಪ್ನವೆಂದು ತಿಳಿ. ಅಥವಾ ಮನಸ್ಸಿನ ಭ್ರಾಂತಿಯೇ ಬಹುಕಾಲ ಎಳೆದಿರುವುದು ಎಂದುಕೋ. ರಾಘವ, ಅಥವಾ ನೀನು ಕಾಣುವ ಮನೋರಾಜ್ಯವೇ ಈ ಸಂಸಾರವೆಂದುಕೋ.

೨೯. ಪರಮಾತ್ಮನ ಕೃಪೆಯಾಗಿಯೋ, ಅಥವಾ ಸ್ವಯಂಪ್ರಜ್ಞಾ (ವಿಚಾರ) ಬಲದಿಂದಲೋ, ಈ ಕನಸಿನಿಂದ ನಿನಗೆ ಎಚ್ಚರವಾದಾಗ, ಸೂರ್ಯೋದಯವಾದಾಗ ಆಗುವಂತೆ, ಇದೆಲ್ಲವೂ ಕನಸು ಎಂಬುದು ನಿನಗೇ ತಿಳಿಯುವುದು.

೩೦. ಸ್ವಪ್ನದಲ್ಲಿ ಕಾಣುವ ಜಗತ್ತಿನ ವ್ಯವಹಾರವೆಲ್ಲವೂ ಹೇಗೋ ಹಾಗೆಯೇ ಈ ಜಾಗ್ರತ್ ಜಗತ್ತಿನ ವ್ಯವಹಾರವೂ ಕೂಡ ಕೇವಲ ಸಾಂಕಲ್ಪಿಕವೇ ! ಅನಿರ್ವಚನೀಯವೂ ಮಿಥ್ಯೆಯೂ ಆದುದು.

೩೧. ನಾನು ನಿನಗೆ (ಉತ್ಪತ್ತಿ ಪ್ರಕರಣದಲ್ಲಿ) ಬ್ರಹ್ಮನ ಉತ್ಪತ್ತಿಯನ್ನು ಕುರಿತು ಹೇಳುವಾಗ, ಮನಸ್ಸು ತನ್ನೊಳಗೆ ತಾನೇ ಮಾಡುವ ಸಂಕಲ್ಪಗಳಿಂದಲೇ ಈ ಸೃಷ್ಟಿಯೆಲ್ಲವೂ ಆಗುವುದೆಂದು ಹೇಳಿದ್ದೆನಲ್ಲವೇ ?

ವಿಚಿತ್ರರಚಸೋಪೇತಂ ಮನಸ್ತತ್ರಾತ್ತ ವಿಭ್ರಮಂ ।
ಸಂಕಲ್ಪ ಕಲನಾಮಾತ್ರಂ ತಥೇದಮವಭಾಸನಂ ॥ ೩೨ ॥

ಯಥಾ ಕಲ್ಪಿತ ಆಭಾಸೋ ಮನಸೋಬ್ಜಜತಾಂ ಗತಃ ।
ದೇಹಾದ್ವಿಚಿಂತಿತೋ ದೇಹಃ ಸ್ಥಿತೋನ್ಯಸ್ತದ್ವದೇವ ಹಿ ॥ ೩೩ ॥

ಪ್ರಾಕ್ಪ್ರವಾಹ ಚಿರಾಭ್ಯಸ್ತೋ ವಾಸನಾತಿಶಯೇನ ಯಃ ।
ತಥೈವ ದೃಶ್ಯತೇ ದೇಹಃ ತಥಾಕೃತ್ಯುದಯೇನ ಸಃ ॥ ೩೪ ॥

ಪೌರುಷೇಣ ಪ್ರಯತ್ನೇನ ಸಂಕಲ್ಪೋ ಹ್ಯಯಮೇವ ಚಿತ್ ।
ಅನ್ಯಥಾ ಭಾವ್ಯತೇ ರಾಮ ಭೂಯತೇ ತದಿಹಾನ್ಯಥಾ ॥ ೩೫ ॥

---

೩೨. ಚಿತ್ರವಿಚಿತ್ರವಾದ ಕಾರ್ಯಗಳಿಂದ ಕೂಡಿ, ಮನಸ್ಸು, ಹುಚ್ಚುಗೊಂಡಂತೆ, ಮಾಡಿದ ಸಂಕಲ್ಪಗಳೇ ಹೀಗೆ ಜಗತ್ತಾಗಿ (ದೇಹವಾಗಿ) ತೋರುವುದು.

೩೩. (ಹಿಂದೆ ಹೇಳಿದಂತೆ) ಮನಸ್ಸಿನ ಕಲ್ಪನೆಯಿಂದಲೇ ಚತುರ್ಮುಖ ಬ್ರಹ್ಮನಾದದ್ದು. ಅಲ್ಲದೇ ದೇಹವಿರುವಾಗ ಏನನ್ನು ಕುರಿತು ಚಿಂತನವು ನಡೆಯುವುದೋ ಅದೇ ಮುಂದೆ ಮತ್ತೊಂದು ದೇಹವಾಗುವುದು.

(ಯಂ ಯಂ ವಾಪಿಸ್ಮರ್ನ್ ಭಾವಂ ತ್ಯಜತ್ಯಂತೇ ಕಲೇವರಂ ।
ತಂತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ — ಗೀತಾ.

ಸ್ಥಿತಿ ಪ್ರಕರಣದಲ್ಲಿ ಬಂದಿರುವ ಐಂದವೋಪಾಖ್ಯಾನವನ್ನು ಸ್ಮರಿಸಿಕೊಳ್ಳಿ.)

೩೪. ಮೊದಲಿನಿಂದಲೂ ಪ್ರವಾಹರೂಪವಾಗಿ ಬಂದು ದೃಢವಾಗಿ ಅಭ್ಯಾಸವಾಗಿ ಹೋಗಿರುವ ವಾಸನಾತಿಶಯ ಬಲದಿಂದ ಯಾವ ದೇಹವು ಸಿದ್ಧವಾಗವುದೋ ಅದೇ ದೇಹದಲ್ಲಿ ಜನ್ಮವಾಗುವುದು.

೩೫. ಪೌರುಷದಿಂದಲೂ, ಪ್ರಯತ್ನದಿಂದಲೂ, ಸಂಕಲ್ಪ ರೂಪವಾದ ಈ ಚಿತ್ತು ಬೇರೊಂದು ರೂಪವನ್ನು ಹೊಂದಿದುದೇ ಆದರೆ, (ಈಗ ಈ ರೂಪವಾಗಿರುವ ಚಿತ್ತನ್ನು ನಿನ್ನ ಪೌರುಷ ಪ್ರಯತ್ನಗಳ ಬಲದಿಂದ ಅನ್ಯಥಾ ಭಾವಿಸ

ಅಯಂ ಸೋಽಹಂ ಮಮಾಯಂ ಚ ಸಂಸಾರ ಇತಿ ಭಾವಿತೇ ।
ಸತ್ಯೋ ಯೋ ಭಾವ್ಯತೇ ರಾಮ ಭಾವನಾದಾರ್ಢ್ಯ ಸಂಭವಃ ॥ ೩೬ ॥

ಭಾವಿತಂ ತೀವ್ರವೇಗೇನ ಯದೇವಾಶು ತದೇವ ಹಿ ।
ಸರ್ವತ್ರ ದೃಶ್ಯತೇ ರಾಮ ಕಾಂತೇವಾತ್ಯಂತ ವಲ್ಲಭಾ ॥ ೩೭ ॥

ಅಹರ್ವ್ಯಾಪೃತ್ತಿರಭ್ಯಸ್ತಾ ಯಥಾ ಸ್ವಪ್ನೇಷು ದೃಶ್ಯತೇ ।
ತಥಾಯಂ ಭಾವನಾಭ್ಯಸ್ತಃ ಸಂಸಾರೋಽಪ್ಯವಲೋಕ್ಯತೇ ॥ ೩೮ ॥

ಯಥಾ ಸ್ವಪ್ನಾವನೌ ಕ್ಷಿಪ್ರಮಹರ್ಯದವಭಾಸತೇ ।
ತಥೇದಮಲ್ಪಕಾಲಸ್ಥಮಪಿ ಸಂಲಕ್ಷ್ಯತೇ ಸ್ಥಿರಂ ॥ ೩೯ ॥

ಬಲ್ಲೆಯಾದರೆ) ರಾಮ, ಆ ಚಿತ್ತ ನಿನ್ನ ಸಂಕಲ್ಪ ಬಲದಿಂದ ಅನ್ಯಥಾ ಆಗಿಯೇ ಆಗುವುದು.

೩೬. ಇವನು, ಅವನು, ನಾನು, ಈ ಸಂಸಾರವು ನನ್ನದು ಎಂದು ಭಾವನೆ ಯಿಟ್ಟುಕೊಂಡಿರುವಾಗ, ಆ ಭಾವನೆಯು ದೃಢವಾಗಿ ದೃಢವಾಗಿ, ರಾಮ, ಅದೇ ಸತ್ಯ ಎಂದಾಗುವುದು.

೩೭. ತೀವ್ರವೇಗದಿಂದ ಯಾವುದನ್ನು ನಾವು ಹೇಗೆಂದು ಭಾವನೆಮಾಡು ತ್ತೇವೆಯೋ ಅದು ಹಾಗೆಯೇ ಆಗುವುದು ಎಂಬುದನ್ನು ಎಲ್ಲೆಲ್ಲಿಯೂ ಕಾಣ ಬಹುದು. ಕಾಂತೆಯೊಬ್ಬಳನ್ನು ಮೋಹಿಸಿ, ಆ ಮೋಹಬಲದಿಂದ ಅವಳೇ ತನ್ನ ಮನೋವಲ್ಲಭೆಯೆಂದು ಧ್ಯಾನ ಮಾಡುತ್ತ ಬಂದರೆ, ಚಿತ್ತವು ಅವಳಲ್ಲಿಯೇ ನಿಂತು ಅವಳೇ ಅತ್ಯಂತ ಪ್ರಿಯತಮಳಾಗುವಳಲ್ಲವೆ?

೩೮. ಹಗಲಿನಲ್ಲಿ ಮಾಡಿದ ವ್ಯಾಪಾರವೇ ರಾತ್ರಿಯ ಹೊತ್ತು ಕನಸಿನಲ್ಲಿ ಕಾಣುವಂತೆ, ಭಾವನೆಯು ಬಲವಾದರೆ, ಆ ಭಾವನಾದಾರ್ಢ್ಯದಿಂದ, ಪದೇ ಪದೇ ತೀವ್ರವಾಗಿ ಚಿಂತಿಸುತ್ತಿರುವುದರಿಂದ, ಈ ಸಂಸಾರವೂ ಸತ್ಯವಾಗಿರುವಂತೆಯೇ ನಂಬಿಕೆಯಾಗಿ ತೋರುವುದು.

೩೯. (ಜಾಗ್ರತ್ಪ್ರಪಂಚದ) ಕ್ಷಣಾದಿ ಕಾಲಗಳೇ ಕನಸಿನಲ್ಲಿ ಒಂದು ಹಗ ಲಿನಷ್ಟು ಕಾಲವಾಗಿ, ಸ್ಥಿರವಾಗಿರುವಂತೆ ಕಾಣುವಂತೆ,

ವ್ಯೋಮನ್ಯೇವ ಯಥಾ ತಾಪತಪ್ತೇ ಸಂದೃಶ್ಯತೇ ಸರಿತ್
ಧರಾಪ್ಯವಿದ್ಯಮಾನಾಪಿ ಸಂಕಲ್ಪಾದ್ದೃಶ್ಯತೇ ತಥಾ। ॥ ೪೦ ॥

ದೃಶ್ಯತೇ ದೃಷ್ಟಿವೈರೂಪ್ಯಾದ್ಯಥಾ ವ್ಯೋಮನಿ ಪಿಚ್ಛಿಕಾ
ತಥೈವೇಯಂ ಜಗಲ್ಲಕ್ಷ್ಮೀರ್ದುರ್ಜ್ಞಾನಾದವಭಾಸತೇ ॥ ೪೧ ॥

ದೃಶ್ಯತೇ ಸಮಯಾ ದೃಷ್ಟ್ಯಾ ನ ಯಥಾ ವ್ಯೋಮ್ನಿ ಪಿಚ್ಛಿಕಾ।
ಸಮ್ಯಗ್ದೃಷ್ಟ್ಯಾ ಜಗಲ್ಲಕ್ಷ್ಮೀಸ್ತಥೇಯಂ ನಾವಭಾಸತೇ ॥ ೪೨ ॥

ಭೀರುರಭ್ಯೇತಿ ನ ಯಥಾ ಸ್ವಸಂಕಲ್ಪೇಷು ಸಂಭ್ರಮಂ।
ಸ್ವಸಂಕಲ್ಪೇಹಿ ಸಂಸಾರೇ ನ ತಥೈತಿ ಭಯಂ ಸುಧೀಃ ॥ ೪೩ ॥

---

೪೦. ಚೆನ್ನಾಗಿ ಬಿಸಿಲಿನಿಂದ ಕಾದುಹೋಗಿರುವ ಆಕಾಶದಲ್ಲಿ ತಾಪದ ಝಳದಿಂದ ಒಂದು ನದಿಯು ಇರುವಂತೆ ಕಾಣುವ ಹಾಗೆ ಭೂಮಂಡಲವೂ ವಾಸ್ತವ್ಯವಾಗಿಯೂ ಅಸತ್ಯವಾಗಿದ್ದರೂ ಸಂಕಲ್ಪ ಬಲದಿಂದ ಇದ್ದಂತೆಯೇ ತೋರುವುದು.

(ಎಂದಾದರೂ ಒಂದು ದಿನ ನಾಶವಾಗಿಯೇ ತೀರುವುದು ಎಂಬುದನ್ನು ಗಣಿಸಿದರೆ, ಆ ಕಾಲವು ನಮ್ಮ ದೃಷ್ಟಿಯಿಂದ ಎಷ್ಟೇ ದೀರ್ಘವಾದರೂ, ಸಾಂತ ವೆಂಬ ಕಾರಣದಿಂದಲಾದರೂ ಈ ಜಗತ್ತು ಅಸತ್ಯವೆಂದು ಒಪ್ಪಬಹುದು.)

೪೧. ದೃಷ್ಟಿ ದೋಷದಿಂದ ಆಕಾಶದಲ್ಲಿ ನವಿಲು ಗರಿಯ ಬಣ್ಣಗಳು ಕಾಣಿಸುವಂತೆ, ಜ್ಞಾನವು ಕೆಟ್ಟು ಹೋಗಿರುವಾಗ (ಎಂದರೆ ಸಮ್ಯಗ್‌ಜ್ಞಾನವಿಲ್ಲದಾಗ) ಈ ಜಗತ್ತೆಂಬ ದೃಶ್ಯವು ಕಾಣಿಸುವುದು.

೪೨. ದೃಷ್ಟಿಯಲ್ಲಿರುವ ದೋಷವನ್ನು ಕಳೆದುಕೊಂಡು ಸರಿಪಡಿಸಿಕೊಂಡು ನೋಡಿದರೆ ಹೇಗೆ ನವಿಲುಗರಿಯ ಬಣ್ಣಗಳು ಕಾಣುವುದು ನಿಂತು ಹೋಗುವುದೋ ಹಾಗೆಯೇ ಸಮ್ಯಗ್‌ಜ್ಞಾನವನ್ನು ಪಡೆದವನಿಗೆ ಈ ಜಗಲ್ಲಕ್ಷ್ಮಿಯು ಇಲ್ಲವಾಗುವುದು.

೪೩. ಭೀರುವಾದವನೂಕೂಡ ತನ್ನ ಸಂಕಲ್ಪಮಯವಾದ ಮನೋರಾಜ್ಯಗಳಲ್ಲಿ ಬರುವ ಆನೆ, ಹುಲಿ, ಮುಂತಾದುವುಗಳನ್ನು ನೋಡಿ ಹೇಗೆ ಹೆದರುವುದಿ

ಸ ಏವ ಹಿ ಸ್ವಭಾವೋಽಯಮಿತ್ಥಂ ಸಂಪ್ರತಿ ಭಾಸತೇ ।
ಸಂಸಾರಸರಣಿಸ್ಥಿತ್ಯಾಂ ಕಸ್ಮಾತ್ಕೋಽತ್ರ ಬಿಭೇಮಿ ಕಿಂ ॥ ೪೪ ॥

ಸ ಏವ ಕಿಂಚಿತ್ಸಂಶೋಧ್ಯಃ ಶುದ್ಧ್ಯಾ ವಿಮಲತಾಂ ಗತೇ ।
ತಸ್ಮಿನ್ನ ದೃಶ್ಯತೇ ರಾಮ ಮೋಹೋಽಯಂ ಜಗತಃ ಸ್ಥಿತಃ ॥ ೪೫ ॥

ಸಮ್ಯಗಾಲೋಕಮಾತ್ರೇಣ ಸ್ವಭಾವಃ ಶುದ್ಧಿಮೃಚ್ಛತಿ ।
ನ ಗೃಹ್ಣಾತಿ ಮಲಂ ಭೂಯಸ್ತಾಮ್ರತಾಮಿವ ಕಾಂಚನಂ ॥ ೪೬ ॥

ಲ್ಲವೋ, ಹಾಗೆಯೇ ಬುದ್ಧಿವಂತನು ಸ್ವಸಂಕಲ್ಪ ಬಲದಿಂದ ನಡೆಯುತ್ತಿರುವ ಈ ಸಂಸಾರದಲ್ಲಿ ಏನೇಆದರೂ ಹೆದರುವುದಿಲ್ಲ.

೪೪. ಸ್ವಭಾವವೇ (ಆತ್ಮನೇ) ತಾನೇ ಬಹಿರ್ಮುಖದಶೆಯಲ್ಲಿ ಹೀಗೆ ಸಂಸಾರರೂಪದೃಶ್ಯವಾಗಿ ಕಾಣುವುದು. ಅದರಿಂದ, ಏತಕ್ಕಾಗಿ, ಏನನ್ನು ಕಂಡು, ಹೆದರಬೇಕು?

೪೫. ಹಾಗೆ ಹೆದರುವವನು ತನ್ನ ಹೆದರಿಕೆಯನ್ನೂ ತನ್ನನ್ನೂ, ಕುರಿತು ಯೋಚಿಸಬೇಕು, ಹಾಗೆ ವಿಚಾರದಿಂದ ವಿವೇಚಿಸಿನೋಡಿದರೆ, (ಭಯರೂಪವಾದ) ದೇಹವು ಇರುವುದೇ ಇಲ್ಲ. (ವಿಚಾರದಿಂದ ಶುದ್ಧವಾದ ಮನಸ್ಸು ಅದ್ವಯನಾದ ಆತ್ಮನನ್ನು ಎಲ್ಲಿ ಎಲ್ಲಿಯೂ ನೋಡುವುದರಿಂದ ಭಯಕಾರಣವೇ ಇಲ್ಲವಾಗುವುದು.)
("ಯನ್ಮದನ್ಯನ್ನಾಸ್ತಿ ಕಸ್ಮಾನ್ನು ಬಿಭೇಮೀತಿ । ತತ ಏವಾಸ್ಯ ಅಯಂ ಭಯಂ ವೀಯಾಯ । ಕಸ್ಮಾದ್ಧ್ಯಭೇಷ್ಯತ್ । ದ್ವಿತೀಯಾದ್ವೈ ಭಯಂ ಭವತಿ ಇತಿ ಶ್ರುತಿಃ- ತಾ. ಪ್ರ.)

೪೬. (ಹಾಗಾದರೆ ಯಾವ ಉಪಾಯದಿಂದ ಮನಸ್ಸು ಶುದ್ಧಿಯಾಗುವುದು-ಎಂದರೆ) ಕಾಂಚನವು ಚೆನ್ನಾಗಿ ನೋಡದಿದ್ದಾಗ ತಾಮ್ರವೋ ಎನ್ನಿಸಿದರೂ, ಚೆನ್ನಾಗಿ ನೋಡಿ ಪರೀಕ್ಷೆಗಳನ್ನು ನಡೆಸಿದ ಮೇಲೆ, ಮತ್ತೆ ತಾಮ್ರವೆಂಬ ಭ್ರಾಂತಿಗೊಳಗಾದಂತೆ, ಸಮ್ಯಗ್ಜ್ಞಾನವನ್ನು ಪಡೆದರೆ ಮನಸ್ಸು ಶುದ್ಧಿಯಾಗುವುದು. ಮತ್ತೆ "ದೃಶ್ಯವು" ಎಂಬ ಮಲವನ್ನು ಗ್ರಹಿಸುವುದಿಲ್ಲ. (ತಾತ್ಪರ್ಯ ಪ್ರಕಾಶಕಾರರು ಇಲ್ಲಿ ಸ್ವಭಾವ ಆತ್ಮಾ ಎಂದಿದ್ದಾರೆ.)

ಆಭಾಸಮಾತ್ರಮೇವೇದಂ ನ ಸನ್ನಾಸಜ್ಜಗತ್ರಯಂ ।
ಇತ್ಯಂತಕಲನಾತ್ಯಾಗಃ ಸಮ್ಯಗಾಲೋಕನಂ ವಿದುಃ ॥ ೪೭ ॥

ಮರಣಂ ಜೀವಿತಂ ಸ್ವರ್ಗೋ ಜ್ಞಾನಮಜ್ಞಾನಮೇವ ಚ ।
ಚಿದಾಭಾಸಾದೃತೇ ನಾಸ್ತೀತ್ಯೇಕತಾ ಸಮ್ಯಗೀಕ್ಷಣಂ ॥ ೪೮ ॥

ತ್ವಮಹಂತಾದಿ ಸಂಸಾರ ಇತಿ ಮೇ ನ ದಿಶೋ ದಶ ।
ಸರ್ವಂ ಸ್ವಾಭಾಸಮೇವೇತಿ ಸಮ್ಯಗಾಲೋಕನಂ ವಿದುಃ ॥ ೪೯ ॥

ಸದಸನ್ಮಯ ಸಂಸಾರೇ ಯಥಾ ಭೂತಾರ್ಥ ದರ್ಶನಾತ್ ।
ನಾಸ್ತಮೇತಿ ನಚೋದೇತಿ ಸಮ್ಯಗಾಲೋಕನಾನ್ಮನಃ ॥ ೫೦ ॥

---

೭. "ಈ ಜಗತ್ರಯವೆಲ್ಲವೂ ಬರಿಯ ತೋರಿಕೆಯೇ ಹೊರತು, ಇದು ಸತ್ ಅಲ್ಲ ಅಸತ್ ಕೂಡ ಅಲ್ಲ" ಎಂದು ನಿಶ್ಚಯಿಸಿಕೊಂಡು ಬೇರೆ ವಿಕಲ್ಪಗಳೆಲ್ಲವನ್ನೂ ತೊರೆಯುವುದು ಯಾವುದೋ ಅದೇ "ಸಮ್ಯಗಾಲೋಕನ" ವೆಂದು ಬಲ್ಲವರು ಹೇಳುವರು.

೪೮. ಮರಣವಾಗಲಿ, ಜೀವಿತವಾಗಲಿ, ಸ್ವರ್ಗವಾಗಲಿ, ಜ್ಞಾನವಾಗಲಿ, ಅಜ್ಞಾನವಾಗಲಿ, ಚಿದಾಭಾಸವಲ್ಲದೆ ಇನ್ನೇನೂ ಇಲ್ಲವೆಂಬ ಏಕತೆಯೇ ಸಮ್ಯಗಾಲೋಕನವು.

೪೯. ನೀನು (ಎಂದು ತನಗಿಂತ ಪ್ರತ್ಯೇಕವಾದ ಇನ್ನೊಂದಿದೆ) ಯೆಂಬುದೂ ನಾನು (ಎಂದು ಸ್ವದೇಹಮಾತ್ರವನ್ನು ನೋಡಿಕೊಳ್ಳುವುದು) ಯೆಂಬುದೂ ಮೊದಲಾದ ಸಂಸಾರವೆಂಬುದು ನನಗೆ ಹತ್ತುದಿಕ್ಕುಗಳಲ್ಲೂ ಇಲ್ಲ. ಇರುವುದೆಲ್ಲವೂ ಆತ್ಮನ ಆಭಾಸವೇ ಎಂಬುದನ್ನೇ ಸಮ್ಯಗಾಲೋಕನವೆಂದು ಹೇಳುವರು.

೫೦. ಸತ್ (ಬ್ರಹ್ಮ) ಅಸತ್ (ಮಾಯೆ) ಇವುಗಳಿಂದ ತುಂಬಿರುವ ಈ ಸಂಸಾರದಲ್ಲಿ ಹಿಂದೆ ನಡೆದ ಕಥೆಯನ್ನು ಕೇಳಿದರೆ ಹೇಗೆ ಮನಸ್ಸು ಅಸ್ತವೂ ಆಗದೆ ಉದಯವೂ ಆಗಿದೆ ಇರುವುದೋ ಹಾಗೆಯೇ ಸಮ್ಯಗಾಲೋಕನವನ್ನು ಪಡೆದ ಮನಸ್ಸು ಸ್ಥಿರವಾಗಿರುವುದು.

ನಿರ್ಣೀಯ ಸರ್ವಭಾವಾನಾಮಸತ್ತ್ವಂ ಸತ್ತ್ವಮೇವ ಚ ।
ನಿಷ್ಕಾಮಂ ಶಾಂತಿಮಭ್ಯೇತಿ ಸಮ್ಯಗಾಲೋಕನಾತ್ಮನಃ ॥ ೫೧ ॥

ನ ನಿಂದತಿ ನ ಚ ಸ್ತೌತಿ ನ ಹೃಷ್ಯತಿ ನ ಶೋಚತಿ ।
ಶೀತಲಾಂ ಸತ್ಯತಾಮೇತಿ ಸಮ್ಯಗಾಲೋಕನಾತ್ಮನಃ ॥ ೫೨ ॥

ಅವಶ್ಯಮೇವ ಮರ್ತವ್ಯಂ ಸರ್ವೈರೇವ ಹಿ ಬಂಧುಭಿಃ ।
ಇತಿ ಬಂಧುವಿಯೋಗೇಷು ಕಿಂ ವೃಥಾ ಪರಿತಪ್ಯಸೇ ॥ ೫೩ ॥

ಅವಶ್ಯಮೇವ ಚ ಮಯಾ ಮರ್ತವ್ಯಮಿತಿ ನಿಶ್ಚಯಃ ।
ಇತ್ಯಾತ್ಮಮರಣಪ್ರಾಪ್ತೌ ಕಿಂ ಮುಧಾ ಪರಿತಪ್ಯಸೇ ॥ ೫೪ ॥

---

೫೧. ಸಮ್ಯಗಾಲೋಕನವನ್ನು ಪಡೆದ ಮನಸ್ಸು ಸರ್ವಭಾವಗಳ ಸತ್ಯತೆ ಅಸತ್ಯತೆಗಳನ್ನು ನಿಶ್ಚಯಿಸಿಕೊಂಡು, ಕಾಮವನ್ನು ಬಿಟ್ಟು, ಶಾಂತಿಯನ್ನು ಹೊಂದುವುದು.

೫೨. ಸಮ್ಯಗಾಲೋಕನವನ್ನು ಪಡೆದ ಮನಸ್ಸು ಯಾರನ್ನೂ ನಿಂದಿಸುವುದಿಲ್ಲ. ಯಾರನ್ನೂ ಹೊಗಳುವುದಿಲ್ಲ. ಯಾವುದಕ್ಕೂ ಹರ್ಷಿಸುವುದಿಲ್ಲ: ಯಾವುದಕ್ಕೂ ಶೋಕಿಸುವುದಿಲ್ಲ: ಶಾಂತವಾಗಿ ಸತ್ಯತೆಯನ್ನು ಮಾತ್ರ ಹೊಂದುವುದು.

೫೩. (ಸಮ್ಯಗಾಲೋಕನವನ್ನು ಪಡೆದಮನಸ್ಸು) ನೆಂಟರಿಷ್ಟರು ಎಲ್ಲರೂ ಸಾಯಬೇಕಾಗಿರುವಾಗ ಬರಿಬರಿದೇ ಏಕೆ ಪರಿತಪಿಸುವೇ? (ಎಂದು ಬಂಧುವಿಯೋಗಗಳಲ್ಲಿ ಹೇಳಿಕೊಳ್ಳುವುದು.)

೫೪. (ಸಮ್ಯಗಾಲೋಕನವನ್ನು ಪಡೆದಮನಸ್ಸು) ನಾನೂಕೂಡ ಸಾಯಲೇಬೇಕು: ಹೀಗಿರಲು ನನಗೆ ಮರಣದ ಕಾಲಬಂತಲ್ಲಾ ಎಂದು ಪರಿತಪಿಸುವುದೇಕೆ? (ಎಂದು ಕೇಳುವುದು.)

ಅವಶ್ಯಮೇವ ಜಾತೇನ ಕಿಂಚಿತ್ಸು ವಿಭವಾದಿಕಂ ।
ಪ್ರಾಪ್ತವ್ಯಂ ಪುರುಷೇಣೇತಿ ಹರ್ಷಸ್ಯಾವಸರೋ ಹಿ ಕಃ ॥ ೫೫ ॥

ಸರ್ವಸ್ಯೈವಹಿ ಸಂಸಾರೇ ನರಸ್ಯ ವ್ಯವಹಾರಿಣಃ ।
ಅರ್ಥಾಯಾತಾ ಭವತ್ಯಾಪಚ್ಛೋಕಸ್ಯಾವಸರೋ ಹಿ ಕಃ ॥ ೫೬ ॥

ಬೃಂಹತ್ಯುದೇತಿ ಸ್ಫುರತಿ ಬುದ್ಬುದೌಘ ಇವಾರ್ಣವೇ ।
ಇದಂ ಹಿ ಜಗತಾಂ ಜಾಲಂ ಕಿಮತ್ರ ಪರಿದೇವನಾ ॥ ೫೭ ॥

ಸತ್ಸದೇವ ಸದೈವೈತದಸದೇವಾ ಸದೇವ ಹಿ ।
ಕ್ರಿಯಾವೈಚಿತ್ರ್ಯಮಾತ್ರೇ ತು ಕಿಮನ್ಯತ್ಪರಿದೇವ್ಯತೇ ॥ ೫೮ ॥

---

೫೫. ಹುಟ್ಟಿದವನು ಪ್ರತಿಯೊಬ್ಬನಿಗೂ ಒಳ್ಳೆಯ ವಿಭವಾದಿಗಳು ಕೊಂಚವಾದರೂ ಬಂದೇ ಬರಬೇಕು. ಹಾಗಿರಲು, ಹರ್ಷಪಡುವುದಕ್ಕೆ ಅವಸರವೆಲ್ಲಿಯದು ? (ಎಂದು ಸಮ್ಯಗಾವಲೋಕನವನ್ನು ಪಡೆದ ಮನಸ್ಸು ಕೇಳುವುದು.)

೫೬. ವ್ಯವಹಾರದಲ್ಲಿರುವ ಎಲ್ಲರಿಗೂ ಸಂಸಾರದಲ್ಲಿ ಸಮಯದಲ್ಲಿ ಒಂದು ದ್ರವ್ಯಮೂಲವಾಗಿ ಆಪತ್ತು ಬಂದೇಬರುವುದು. ಹೀಗಿರಲು ಆಪತ್ತು ಬಂದಿತೆಂದು ಶೋಕ ಪಡಬೇಕಾದ ಅವಸರವೇನು ?

೫೭. ಸಮುದ್ರದಲ್ಲಿ ಗುಳ್ಳೆಗಳು ಗುಂಪುಗುಂಪುಗಳಾಗಿ ಹುಟ್ಟುವಂತೆ ಈ ಜಗತ್ತು ಜಗತ್ತಗಳೆಲ್ಲವೂ, ಬ್ರಹ್ಮದಲ್ಲಿಯೇ ಉಬ್ಬುವುದು, ಮೇಲಕ್ಕೆ ಏಳುವುದು ಹೀಗಿರಲು, ಇವುಗಳ ನಾಶಕ್ಕಾಗಿ ಏಕೆ ವ್ಯಥೆಪಡಬೇಕು ?

೫೮. ಸತ್ ಆದುದು ಯಾವಾಗಲೂ ಸತ್ ಆಗಿಯೇ ಇರುವುದು. ಅಸತ್ ಆದುದು ಯಾವಾಗಲೂ ಅಸತ್ ಆಗಿಯೇ ಇರುವುದು. ಆಗುವುದೆಲ್ಲವೂ ಕೇವಲ (ಮಾಯಾಮಯ) ಕ್ರಿಯಾವೈಚಿತ್ರ್ಯಗಳು ಮಾತ್ರ, ಹೀಗಿರಲು ಯಾವುದಕ್ಕಾಗಿ ವ್ಯಥೆಪಡುವುದು ?

ನಾಹಮಸ್ಮಿ ನ ಚಾಭೂವಂ ಭವಿಷ್ಯಾಮಿ ನ ಸೋಧುನಾ ।
ದೇಹೋಽಯಂ ಚಿತ್ರದೋಷೋತ್ಥಃ ಕಿಮನ್ಯತ್ಪರಿದೇವ್ಯತೇ ॥ ೨೮ ॥

ನಾಸತೋಽವಿದ್ಯತೇ ಭಾವಃ । ನಾಭಾವೋಽವಿದ್ಯತೇ ಸತಃ ॥ ಗೀತಾ ೨-೧೬.

೨೮. ಅಹಂ ಎಂದುಕೊಳ್ಳುತ್ತಿರುವ ನಾನು (ಪ್ರತ್ಯೇಕವಾಗಿ) ಇಲ್ಲ; ಇರಲಿಲ್ಲ; ಇರುವುದಿಲ್ಲ. (ಹಾಗಾದರೆ ಅಹಂಕಾರದ ಅಭಿಮಾನಕ್ಕೆ ಆಶ್ರಯವಾಗಿರುವ) ಈ ದೇಹವು (ಏನು ಎಂದರೆ ಅದು) ಚಿತ್ರದೋಷದಿಂದ (ಎಂದರೆ ಅವಿದ್ಯಾಕಾಮಕರ್ಮದೋಷದಿಂದ) ಕಾಣಿಸುತ್ತಿರುವುದು. ಹೀಗಿರಲು ಯಾವುದಕ್ಕಾಗಿ ಅಳುವುದು?

(ಪಿಂಡಗ್ರಹ ನಿವೃತ್ತಿಯಾದವರ ಮಾತು ಇದು.)

[ಹಾಗಿಲ್ಲದೆ, ದೃಶ್ಯವಾದ ಈ ದೇಹದಲ್ಲಿ ಘನತ್ವ, ಪೀವರತ್ವಾದಿಗಳು ಇವೆಯಲ್ಲ, ಇದು ಸತ್ಯವಲ್ಲ ಎನ್ನುವುದು ಹೇಗೆ? ಎನ್ನುವವರು ಪಂಚೀಕರಣವನ್ನು ನೋಡಬೇಕು. ಈ ದೇಹವು ಸಂಘಾತವು ಎಂದರೆ, ಪಂಚಭೂತಗಳ ಜೋಡಣೆಯಿಂದ ಆದುದು. ಪಂಚಭೂತಗಳಲ್ಲಿ ಸೂಕ್ಷ್ಮವಾದ ಅಂಶ ಬೇರೆ, ಸ್ಥೂಲವಾದ ಅಂಶ ಬೇರೆ. ಆಕಾಶವು ಇದ್ದರೂ ಇಂದ್ರಿಯಗೋಚರವಲ್ಲದ್ದು; ಅದರಿಂದ ಹುಟ್ಟುವ ವಾಯುವು ಸ್ಥೂಲವಾದಾಗ ತ್ವಗಿಂದ್ರಿಯಗೋಚರವಾಗುವುದು. ಅದರಿಂದ ಹುಟ್ಟುವ ತೇಜಸ್ಸಿನ ಸ್ಥೂಲರೂಪವು ದೃಗ್ಗೋಚರವಾಗುವುದು. ಅದರಿಂದ ಹುಟ್ಟುವ ಜಲಭೂತವು ಮೂರು ಇಂದ್ರಿಯಗಳಿಗೆ ಗೋಚರವಾಗುವುದು. ಅದರಿಂದ ಹುಟ್ಟಿದ ಪೃಥ್ವೀಭೂತದ ಸ್ಥೂಲರೂಪವು ಸರ್ವೇಂದ್ರಿಯ ಗೋಚರವಾಗುವುದು.

(ಈ ವಿಚಾರವನ್ನು ಈ ಸರ್ಗದ ಕೊನೆಯಲ್ಲಿ ವಿಸ್ತಾರವಾಗಿ ಬರೆಯಲಾಗಿದೆ ನೋಡಿ.)

ಪ್ರಾಕೃತರೆಲ್ಲರೂ ಜ್ಞಾನವು ಇಂದ್ರಿಯಗಳಿಂದಲೇ ಬರುವುದು ಎನ್ನುವರು. ಆದರೆ, ಅದ್ವೈತಿಗಳು ಹೇಳುವ ವಿಷಯಗಳೆಲ್ಲ ಅತೀಂದ್ರಿಯಗಳೇ! ಅದರಿಂದ ಅದ್ವೈತವನ್ನು ತಿಳಿಯಲು ಅತೀಂದ್ರಿಯಜ್ಞಾನ ಸಂಪನ್ನರಾಗಬೇಕು. ಆಗ, ಈಗ ನಾವು ಕಾಣುತ್ತಿರುವ ಈ ದೃಶ್ಯಜಾತವೆಲ್ಲವೂ ಸತ್ಯವಲ್ಲ ಎಂದು ತಿಳಿಯು

ದೇಹಾಚ್ಛೇದನ್ಯ ಏವಾಹಂ ಚಿದಾಭಾಸಸ್ತದಂಗ ಹೇ ।
ಕೌ ತೌ ಮೇ ಸದಸದ್ಭಾವೌ ಯನ್ನಿಷ್ಠಂ ಪರಿತಪ್ಯತೇ । ॥ ೬೦ ॥

ವುದು. ಕನಸಿನಲ್ಲಿಯೇ ಇರುವಾಗ, ಕನಸು ಸುಳ್ಳು ಎನ್ನುವ ಅನುಭವವು ಬರುವುದು ಹೇಗೆ? ಕನಸಿನಿಂದ ಎಚ್ಚೆತ್ತವನು ಕನಸಿನ ಸ್ವರೂಪವನ್ನು ತಿಳಿಯುವಂತೆ, ಈ ಜಾಗ್ರತ್ತಿನಿಂದ ಮುಂದಿನ ಅವಸ್ಥೆಯಾದ ತುರೀಯಕ್ಕೆ ಹೋದವನು ಈ ಜಾಗ್ರತ್ತು ಎಷ್ಟು ಸತ್ಯವಾದುದು ಎಂಬುದನ್ನು ತಿಳಿಯಬಲ್ಲನು. ಹಾಗೆ ತುರೀಯಕ್ಕೆ ಹೋದವನಿಗೆ ಈ ಜಗದ್ವ್ಯಾಪಾರವೆಲ್ಲವೂ ಸಿನೀಮಾದಂತೆ ಕಾಣುವುದು.

ಗಾತ್ರ, ಉದ್ದ, ದಪ್ಪ, ತೂಕ, ಉಳ್ಳ ವ್ಯಕ್ತಿಗಳೂ, ವಸ್ತುಗಳೂ ಸಿನೀಮಾದಲ್ಲಿ ಕೇವಲ ಛಾಯಾಮಾತ್ರಗಳಾಗಿ ತೋರಿದರೂ, ಅವುಗಳ ವ್ಯವಹಾರವು ಸತ್ಯದಂತೆ ಕಂಡು ಬರುವಂತೆಯೇ ಮಾಯಾಕಲ್ಪಿತ ದೇಶ ಕಾಲ ಕಲ್ಪನಾ ವೈಚಿತ್ರ್ಯ ಚಿತ್ರೀಕೃತ''ವಾದ ಈ ಜಗದ್ವ್ಯಾಪಾರವನ್ನು ಸತ್ಯಾರ್ಥವನ್ನು ತಿಳಿಯದವರು ಸತ್ಯವೆಂದು ನಂಬುವರು. ಸಿನೀಮಾ ನೋಡುವವರು ಪಟದ ಮೇಲೆ ಕಂಡು ಬಂದ ನೆರಳುಗಳನ್ನು ನೋಡಿ, ಈ ನೆರಳುಗಳ ಮೂಲವಾಗಿ ವ್ಯಕ್ತಿಗಳಿದ್ದಾರೆಂದು ತಿಳಿದು, ನೆರಳಿನ ಕ್ರಿಯಾಕಲಾಪಗಳನ್ನೆಲ್ಲ ಆ ವ್ಯಕ್ತಿಗಳಿಗೇ ಅನ್ವಯಿಸಿಕೊಳ್ಳುವಂತೆ, ಪ್ರಾಜ್ಞರು ಆತ್ಮನು ಕರ್ತೃವಲ್ಲ, ಭೋಕ್ತೃವಲ್ಲ ಎಂಬುದನ್ನು ಮನಗಂಡು, ''ಗುಣಾಗುಣೇಷು ವರ್ತಂತೇ ಇತಿ ಮತ್ವಾನಸಜ್ಜತೇ'' ''ಪ್ರಕೃತೇರ್ಗುಣ ಸಮ್ಮೂಢಃ ಕರ್ತಾಹಮಿತಿಮನ್ಯತೇ'' ಮುಂತಾದ ಗೀತಾ ವಾಕ್ಯಾರ್ಥವನ್ನು ಪರಿಚಿಂತನಮಾಡಿ, ಕಾಣುತ್ತಿರುವುದೆಲ್ಲವೂ ಮಾಯಾ ಕಲ್ಪಿತವಾದದು'' ಎಂದು ಕಂಡುಕೊಂಡರೆ, ಆಗ ಈ ಶ್ಲೋಕದ ಅರ್ಥವು ಸರಿ ಎನ್ನಿಸುವುದು.

೬೦. ನಾನು ಎನ್ನುವುದು ಯಾವುದೋ ಅದು ದೇಹಕ್ಕಿಂತ ಬೇರೆ ಎನ್ನುವುದಾದರೆ, ಅದು ಚಿತ್ತಿನ ಆಭಾಸವು. ಹೀಗಿರಲು, ಆ ಸದ್ಭಾವ ಅಸದ್ಭಾವಗಳು ಯಾವವು? ಅವುಗಳಿಂದ ನನಗೆ ಏನಾಗಬೇಕು? ಅವುಗಳಿಗಾಗಿ ಏಕೆ ಪರಿತಾಪ ಪಡಬೇಕು? (ಯಾವ ಸದ್ಭಾವ ಅಸದ್ಭಾವಗಳನ್ನು ಕುರಿತು ಎಲ್ಲರೂ ಪರಿತಾಪ ಪಡುವರೋ? ಅವುಗಳಿಂದ ನನಗೇನಾಗಬೇಕು?)

ಇತಿ ನಿಶ್ಚಯವತ್ಸ್ವಾಂತಂ ಸಮ್ಯಗ್ಜ್ಞಾನಾತ್ಮನೋ ಮುನೇಃ ।
ನಾಸ್ತಮೇತಿ ನ ಚೋದೇತಿ ನಾ ಶಾಂತಂ ಪರಿತಪ್ಯತೇ ॥ ೬೧ ॥

ಪರತಾಮೇವ ನಾಶಾಂತಾಮನುತ್ತಮಪದೇ ಸ್ಥಿತಃ ।
ಆದತ್ತೇ ತಿತ್ತಿರೀ ವೃದ್ವೀಂ ತೃಣಕೋಟಿಮಿವಾಮಲಾಂ ॥ ೬೨ ॥

---

೬೧. ಸಮ್ಯಗ್ಜ್ಞಾನವುಳ್ಳವನ ಅಂತಃಕರಣವು ಇಂತಹ ನಿಶ್ಚಯ ಜ್ಞಾನವುಳ್ಳದ್ದಾಗಿರುವುದು. ಆದರಿಂದ, ಅದು ಅಸ್ತವಾಗುವುದಿಲ್ಲ (ದುಃಖದಲ್ಲಿ ಮುಳುಗುವುದಿಲ್ಲ) ಉದಯವಾಗುವುದಿಲ್ಲ. (ಹರ್ಷದಲ್ಲಿ ಉಬ್ಬುವುದಿಲ್ಲ) ನಷ್ಟವಾದುದನ್ನು ಕುರಿತು ಪರಿತಾಪಪಡುವುದಿಲ್ಲ.

೬೨. ತಿತ್ತಿರಿಯೆಂಬ ಪಕ್ಷಿಯು ಹುಲ್ಲಿನ ಒರಟು ಭಾಗವನ್ನು ಬಿಟ್ಟು ವೃದುವಾದ ಭಾಗವನ್ನೇ ತಂದು ಗೂಡು ಕಟ್ಟಿಕೊಳ್ಳುವಂತೆ, ಅನುತ್ತಮವಾದ (ಎಂದರೆ ಅದಕ್ಕಿಂತಲೂ ಉತ್ತಮವಾದುದು ಇನ್ನೊಂದು ಇಲ್ಲದ) ಪದವಿಯಲ್ಲಿ ನೆಲೆಯಾಗಿ ನಿಂತಿರುವ ಮುನಿಯು ನಾಶದ ಆಚೆಯಿರುವ (ಎಂದರೆ ನಾಶಕ್ಕೆ ಸಿಕ್ಕದ) ಪರವಸ್ತುವನ್ನೇ ಎಲ್ಲ ಕಡೆಯಲ್ಲಿಯೂ ಪಡೆಯುವನು.

(ದೃಶ್ಯಜಾತವಾದ ಈ ಜಗತ್ತು ವಿವರ್ತವಾಗಿ ಕಾಣುವ ಬ್ರಹ್ಮವಸ್ತುವೇ ಎಂದು ಅರಿತ ಬ್ರಹ್ಮಜ್ಞನು ಅಧ್ಯಸ್ತವಾಗಿರುವ ಈ ಭೇದರೂಪಗಳನ್ನು ಕಾಣುವುದನ್ನು ನಿರಾಕರಿಸಿ, ಇದೆಲ್ಲಕ್ಕೂ ಅಧಿಷ್ಠಾನವಾಗಿರುವ ಬ್ರಹ್ಮವಸ್ತುವನ್ನೇ ಕಾಣುವನು. ಕಾಮಿಯಾದವನು ಒಂದು ಗುಂಪು ಹೆಂಗಸರು ಹಾಡು ಹೇಳುತ್ತಿದ್ದರೆ, ಕಣ್ಣಿಗೆ ಕಾಣಿಸದಿದ್ದರೂ ಧ್ವನಿಯಿಂದ ತನ್ನ ಸ್ತ್ರೀಯನ್ನು ಗುರುತಿಸುವಂತೆ, ಬ್ರಹ್ಮಜ್ಞನು ಬ್ರಹ್ಮವನ್ನು ಗುರುತಿಸುವನು. ಬ್ರಹ್ಮವನ್ನು ಪಡೆಯಬೇಕೆನ್ನುವವರು ಬ್ರಹ್ಮದರ್ಶನವೆನ್ನುವುದು ಇಂದ್ರಿಯಗೋಚರವಾಗುವ ಹಾಗೆ ಎನ್ನುವುದನ್ನು ಮೊದಲು ಬಿಡಬೇಕು. ಬ್ರಹ್ಮದರ್ಶನ ಎನ್ನುವುದು ಸ್ಮೃತಿಗಿಂತ ಸೂಕ್ಷ್ಮವಾದ ಅರಿವು. ಸ್ಮೃತಿಯಲ್ಲಿ ಕಾಲಾಂತರದಲ್ಲಿ ಆದ ಅನುಭವವೊಂದು

ಏತದರ್ಥಮಸತ್ಯೇಽಸ್ಮಿನ್ನಾಸ್ಥಾ ಕಾರ್ಯಾ ಮನಾಗಪಿ ।
ಸುರಜ್ಜ್ವೇವ ಬಲೀವರ್ದೋ ಬಧ್ಯತೇ ಜಂತುರಾಸ್ಥಯಾ ॥ ೬೩ ॥

ಅತಸ್ತ್ವಯಾ ದೃಢಮಿದಮಿತಿ ನಿರ್ಣೀಯ ಬುದ್ಧಿತಃ ।
ಆಸ್ಥಾರಹಿತಯಾ ಬುದ್ಧ್ಯಾ ವಿಹರ್ತವ್ಯಮಿಹಾನಘ ॥ ೬೪ ॥

ವಾಸನಾರೂಪವಾಗಿ ಅರಿವಾಗುವುದು. ಸ್ಮೃತಿಯಲ್ಲಿರುವ ವಾಸನಾಬೀಜವೂ ಹೋಗಿ, ಅರಿವು ಮಾತ್ರ ನಿಲ್ಲುವುದು ಯಾವುದೋ ಅದನ್ನು ಬ್ರಹ್ಮಾನುಭವಕ್ಕೆ ಹೋಲಿಸಬಹುದು.

ನಮ್ಮ ಅನುಭವವೆಲ್ಲ ಬುದ್ಧಿ ಮನಸ್ಸುಗಳದು. ಬುದ್ಧಿಯು ಮನಸ್ಸಿಗಿಂತ ಸೂಕ್ಷ್ಮ. ಬುದ್ಧಿಗಿಂತ ಆಚೆ ಇರುವುದು ಬ್ರಹ್ಮ. ಬುದ್ಧಿಯಲ್ಲಿರುವ ಅವಿದ್ಯಾ ಕಾಮ ಕರ್ಮಗಳು ಹೋಗಿ ಅದು ಶುದ್ಧ ಸತ್ತ್ವಸಂಪನ್ನವಾದಾಗ ಸುಖ ದುಃಖ ಗಳೆರಡೂ ಇಲ್ಲದಿದ್ದರೂ ಅವೆರಡಕ್ಕಿಂತಲೂ ಬಲವಾಗಿ ಬುದ್ಧಿಯನ್ನು ಸಂಗ್ರಹಿ ಸುವ ಆನಂದಾನುಭವವು ಆಗುವುದು. ಅದು ಬ್ರಹ್ಮದರ್ಶನ.

ಒಮ್ಮೆ ಆ ಅನುಭವವಾದವನು ಅದನ್ನು ಮರೆಯಲಾರದೆ ಅದನ್ನೇ ಚಿಂತಿಸುವನು. ಕುಲೀನಳಾದ ಕಾಂತೆಯನ್ನು ಏಕಾಂತದಲ್ಲಿ ಸೇರಿದವನು ಹೇಗೆ ತನ್ನ ಸುಖವನ್ನು ಮತ್ತೊಬ್ಬರೊಡನೆ ಹೇಳಿಕೊಳ್ಳಲಾರದಿದ್ದರೂ ಮರೆಯಲಾರದೆ ತದೇಕಧ್ಯಾನದಲ್ಲಿರುವನೋ, ಹಾಗೆಯೇ ಬ್ರಹ್ಮಾನುಭವವಾದವನು, ಜಗದ್ವ್ಯಾ ಪಾರದಲ್ಲಿ ಇದ್ದವನಂತೆ ಇದ್ದರೂ ತನ್ನ ವಿಶ್ರಾಂತಿ ಸ್ಥಾನವು ಜಗತ್ತಲ್ಲ, ಬ್ರಹ್ಮ ಎಂಬುದನ್ನು ಸಂತತವಾಗಿ ಧ್ಯಾನ ಮಾಡುತ್ತಲೇ ಇರುವನು.

೬೩. ಅದರಿಂದ ತಿಳಿದವನು ಅಸತ್ತಾದ ಈ ದೃಶ್ಯಜಾತದಲ್ಲಿ ಎಂದಿಗೂ ಆಸ್ಥೆಯನ್ನಿಟ್ಟುಕೊಳ್ಳಬಾರದು. ಆಸ್ಥೆಯು ಬಲವಾದ ಹಗ್ಗವು ಎತ್ತನ್ನು ಬಂಧಿ ಸುವ ಹಾಗೆ, ಬಲವಾಗಿ ಬಂಧಿಸುವುದು.

೬೪. ಆದರಿಂದ, ನೀನು ಇದು ಇಂಥದು ಎಂಬುದನ್ನು ದೃಢವಾಗಿ

ಕರ್ತವ್ಯಮೇವ ಕರ್ತವ್ಯಮಕರ್ತವ್ಯಮುಪೇಕ್ಷ್ಯತೇ ।
ಆಸ್ಥಾನಾಸ್ಥೇ ಪರಿತ್ಯಜ್ಯ ಲೀಲಯೈವ ಮಹಾಧಿಯಾ ॥ ೬೫ ॥

ಆಭಾಮಾತ್ರಮೇವೇದಂ ಯಸ್ಯ ಚ ಪ್ರತಿಭಾಸತೇ ।
ಸೋಂತಃ ಶೀತಲತಾಮೇತಿ ದಿನಾಂತೇ ಭುವನಂ ಯಥಾ ॥ ೬೬ ॥

ಪ್ರತಿಭಾಸಂ ಪರಿತ್ಯಜ್ಯ ಪದಾರ್ಥಪಟಲವ್ರಜೇ ।
ಆಭಾಸಮಾತ್ರ ಸಾಮಾನ್ಯಮಿದಮಾಲೋಕಯಾನಘ ॥ ೬೭ ॥

ನಿಶ್ಚಯಿಸಿಕೊಂಡು (ಎಂದರೆ ಇದು ಆತ್ಮ, ಇದು ಅನಾತ್ಮ, ಇದು ಸತ್, ಇದು ಅಸತ್, ಎಂದು ತಿಳಿದುಕೊಂಡು) (ಅನಾತ್ಮ-ಅಸತ್‌ಗಳಲ್ಲಿ) ಆಸ್ಥೆಯನ್ನು ಬಿಟ್ಟಿರುವ ಬುದ್ಧಿಯುಳ್ಳವನಾಗಿ, ಈ ಸಂಸಾರದಲ್ಲಿ, ಎಲೆ ಪಾಪರಹಿತನೆ, ವಿಹರಿಸಿಕೊಂಡಿರು.

೬೫. ಬುದ್ಧಿವಂತನಾದವನು (ವಿಧಿಪೂರ್ವಕವಾಗಿ ಪ್ರಾಪ್ತವಾಗಿರುವ ಕರ್ತವ್ಯವನ್ನು ಮಾತ್ರ ಮಾಡುವನು. ಅಕರ್ತವ್ಯವು ಯಾವುದೋ ಅದನ್ನು ಉಪೇಕ್ಷಿಸುವನು. ಕರ್ತವ್ಯ ಅಕರ್ತವ್ಯವೆರಡರಲ್ಲಿಯೂ ಆಸ್ಥೆಯನ್ನಾಗಲೀ, ಅನಾಸ್ಥೆಯನ್ನಾಗಲೀ ಮಾಡದೆ ಲೀಲೆಯಿಂದ ಸುಖವಾಗಿರುವನು.

೬೬. ಈ ಜಗತ್ತೆಲ್ಲವೂ ಆಭಾಸಮಾತ್ರವಲ್ಲದೆ ಇನ್ನೇನೂ ಅಲ್ಲ ಎಂಬುದು ಯಾವನಿಗೆ ದೃಢವಾಗಿ ತಿಳಿದಿರುವುದೋ ಅವನು, ದಿನಾಂತದಲ್ಲಿ ಜಗತ್ತು ಶಾಂತಿಯನ್ನು ಪಡೆಯುವಂತೆ, ಅಂತಶ್ಶೀತಲತೆಯನ್ನು ಪಡೆಯುವನು.

೬೭. ಎಲೈ ಪಾಪರಹಿತನೆ, ಕಣ್ಣಿಗೆ ಕಾಣುತ್ತಿರುವ ದೃಶ್ಯಜಾತದಲ್ಲಿ ವಿಶೇಷಾಕಾರವಾಗಿ ಕಾಣುತ್ತಿರುವ ಭೇದಗಳನ್ನೆಲ್ಲ ಬಿಟ್ಟು, ಇವೆಲ್ಲವೂ ಆಭಾಸವೇ ಎಂಬ ಸಾಮಾನ್ಯ ದೃಷ್ಟಿಯಿಂದ ನೋಡು.

ಆಭಾಸಮಾತ್ರಕಂ ರಾಮ ಚಿತ್ತಾಮರ್ಶ ಕಲಂಕಿತಂ ।
ತತಸ್ತದಪಿ ಸಂತ್ಯಜ್ಯ ನಿರಾಭಾಸೋ ಭವೋತ್ತಮ ॥ ೬೮ ॥

ಚಿದಾಕಾಶಮಯೋ ನಿತ್ಯಂ ಸರ್ವಗಃ ಸರ್ವವರ್ಜಿತಃ ।
ಆಭಾಸಸ್ಯ ಪರಿತ್ಯಾಗೇ ಭವಸ್ಯೇಕಾಂತ ನಿರ್ಮಲಃ ॥ ೬೯ ॥

ನಾಹಮಸ್ಮಿ ನ ಮೇ ಭೋಗಾಃ ಸತ್ಯಾ ಇತ್ಯಭಿಭಾವಿತೇ ।
ನೇದಮಾಡಂಬರಂ ವ್ಯರ್ಥಮನರ್ಥಾಯಾವಭಾಸತೇ ॥ ೭೦ ॥

---

೬೮. ಎಲೈ ಉತ್ತಮನಾದ ರಾಮನೆ, ಆಭಾಸಮಾತ್ರವಾಗಿ ಕಾಣುತ್ತಿರುವುದೆಲ್ಲವೂ ಚಿತ್ತದ ವಿಶೇಷ ಕಲ್ಪನೆಯಿಂದ ಕಲುಷಿತವಾದುದು. ಆದರಿಂದ ಆದನ್ನೆಲ್ಲ ಬಿಟ್ಟು, ನಿರಾಭಾಸದಲ್ಲಿ ನಿಲ್ಲುವವನಾಗು.

೬೯. ನೀನು ಆಭಾಸವನ್ನು ತೊರೆದು ನಿಂತರೆ, ಚಿದಾಕಾಶಮಯನಾಗುವೆ. ಯಾವಾಗಲೂ ಸರ್ವಗನೂ ಸರ್ವವರ್ಜಿತನೂ ಏಕಾಂತನಿರ್ಮಲನೂ ಆಗುವೆ.

(ಸರ್ವಗ, ಸರ್ವವರ್ಜಿತ, ಎಂಬ ಪದಗಳು ಅರ್ಥವಾಗಲು, ಪ್ರಶ್ನೋಪನಿಷತ್ತಿನಲ್ಲಿ ಹೇಳಿರುವ ಓಂಕಾರೋಪಾಸನೆಯನ್ನು ಕುರಿತು ಚಿಂತಿಸಿ)

೭೦. ನಾನು ಎನ್ನುವುದು ಪ್ರತ್ಯೇಕವಾಗಿ ಒಂದಿಲ್ಲ. ಈ ಭೋಗಗಳು ಒಂದೂ ಸತ್ಯವಲ್ಲ ಎಂದು ತಿರಸ್ಕರಿಸಿ ಬಿಟ್ಟರೆ, ಈ ಜಗದಾಡಂಬರವೆಲ್ಲವೂ ವ್ಯರ್ಥವಾಗುವುದು. ನಿನಗೆ ಯಾವ ಅನರ್ಥವನ್ನೂ ಉಂಟುಮಾಡಲಾರದಾಗುವುದು.

ಅಹಮೇವ ಹಿ ವಾ ಸರ್ವಂ ಚಿದಿತ್ಯೇವಂ ವಿಭಾವಿತೇ ।
ನೇದಮಾಡಂಬರಂ ವ್ಯರ್ಥಮನರ್ಥಾಯಾವಭಾಸತೇ ॥ ೭೧ ॥

ದರ್ಶನದ್ವಯಮಪ್ಯೇತತ್ಸತ್ಯಮತ್ಯಂತ ಸಿದ್ಧಿದಂ ।
ಯದೇಕಮೇತಯೋರ್ವೇತ್ಸಿ ರಮ್ಯಂ ತದ್ರಾಮ ಸಂಶ್ರಯ ॥ ೭೨ ॥

ದ್ವಾಭ್ಯಾಮೇವಾಥ ವೈ ತಾಭ್ಯಾಂ ದರ್ಶನಾಭ್ಯಾಮಿಹಾನಘ ।
ವಿಹರ್ರಕುರು ಕಲ್ಯಾಣ ರಾಗದ್ವೇಷಪರಿಕ್ಷಯಂ ॥ ೭೩ ॥

ಯತ್ಕಿಂಚಿದುದಿತಂ ಲೋಕೇ ಯನ್ನಭಸ್ಯಥ ವಾ ದಿವಿ ।
ತತ್ಸರ್ವಂ ಪ್ರಾಪ್ಯತೇ ರಾಮ ರಾಗದ್ವೇಷಪರಿಕ್ಷಯಾತ್ ॥ ೭೪ ॥

---

೭೧. ಹಾಗಲ್ಲದಿದ್ದರೆ, ಇರುವ, ಇದ್ದ, ಇರಬರುವ, ಎಲ್ಲವೂ ನಾನೇ! ಇದೆಲ್ಲವೂ ಚಿತ್ತೇ ಎಂದಾದರೂ ಭಾವನೆಮಾಡು. ಈ ಜಗದಾಡಂಬರವು ವ್ಯರ್ಥವಾಗುವುದು. ಇದು ನಿನಗೆ ಏನೂ ಅನರ್ಥವನ್ನು ಉಂಟುಮಾಡಲಾರದು.

೭೨. ರಾಮ, ಈ ಸಿದ್ಧಾಂತಗಳೆರಡೂ (ಎಂದರೆ ನಾನು ಎನ್ನುವುದೇ ಇಲ್ಲ ಎಂದರೂ ಸರಿ, ಇರುವುದೆಲ್ಲವೂ ನಾನೇ ಎಂದರೂ ಸರಿ) ಸತ್ಯವು. ಪರಮೋತ್ತಮವಾದ ಸಿದ್ಧಿಯನ್ನು ಕೊಡುವುವು. ಇವುಗಳಲ್ಲಿ ಯಾವುದು ನಿನಗೆ ಒಪ್ಪುವುದೋ ಅದನ್ನು ಅಂಗೀಕರಿಸು.

೭೩. ಈ ಎರಡು ಸಿದ್ಧಾಂತಗಳಲ್ಲಿ, ಎಲೈ ಅನಘನೇ, ಎಲೈ ಕಲ್ಯಾಣನೆ, ನೀನು ಯಾವುದಾದರೊಂದನ್ನು ಹಿಡಿದು, ವಿಹರಿಸುತ್ತ ರಾಗ ದ್ವೇಷಗಳು ಕ್ಷೀಣವಾಗಿ ಹೋಗುವಂತೆ ಮಾಡಿಕೊ.

೭೪. ರಾಮ, ನೀನು ರಾಗದ್ವೇಷಗಳು ಚೆನ್ನಾಗಿ ಕ್ಷಯಿಸುವಂತೆ ಮಾಡಿದರೆ, ಲೋಕದಲ್ಲಿ ಆಗಲಿ ಅಂತರಿಕ್ಷದಲ್ಲಿಯಾಗಲೀ, ಸ್ವರ್ಗದಲ್ಲಿಯೇ ಆಗಲಿ, ಇರು

ರಾಗಾದಿಹತಯಾ ಬುದ್ಧ್ಯಾ ಯಾದೃಗ್ರಾಮ ವಿಚೇಷ್ಟಿತಂ ।
ತತ್ತದೇವ ಪ್ರಯಾತ್ಯಾಶು ಮೂಢಾನಾಂ ವಿಪರೀತತಾಂ ॥ ೭೫ ॥

ದ್ವೇಷದೋಷೋರ್ಮಿ ರುದ್ಧಾಸು ನ ಗುಣಾಶ್ಚಿತ್ತವೃತ್ತಿಷು ।
ಏವಂ ಕುರ್ವಂತಿ ದಗ್ಧಾಸು ಸ್ಥಲೀಷು ಹರಿಣಾ ಇವ ॥ ೭೬ ॥

ವುದು ಯಾವು ಯಾವುದುಂಟೋ ಅದೆಲ್ಲವೂ ನಿನ್ನದಾಗುವುದು.

(ಹೋಲಿಸಿ)

ರಾಗದ್ವೇಷ ವಿಯುಕ್ತೈಸ್ತು ವಿಷಯಾನಿಂದ್ರಿಯೈಶ್ಚರ್ರ, ಆತ್ಮವಶ್ಯೈರ್ವಿಧೇಯಾತ್ಮಾ ಪ್ರಸಾದ ಮಧಿಗಚ್ಛತಿ ॥ ೬೪ ॥ ಪ್ರಸಾದೇ ಸರ್ವದುಃಖಾನಾಂ ಹಾನಿರಸ್ಯೋಪಜಾಯತೇ ಪ್ರಸನ್ನ ಚೇತಸೋಹ್ಯಾಶು ಬುದ್ಧಿಃ ಪರ್ಯವತಿಷ್ಠತೇ ॥ ೬೫ ॥ ತಸ್ಮಾದ್ಯಸ್ಯ ಮಹಾಬಾಹೋ ನಿಗೃಹಿತಾನಿ ಸರ್ವಶಃ ಇಂದ್ರಿಯಾಣೀಂದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥ ೬೮ ॥

ಲೋಕದ ವ್ಯಾಪಾರವೆಲ್ಲವೂ ಇಂದ್ರಿಯಗಳ ಮೂಲಕವಾಗಿ ಇಂದ್ರಿಯ ಇಂದ್ರಿಯಕ್ಕೂ ರಾಗದ್ವೇಷಗಳುಂಟು (ಗೀ ೩-೩೪) ಅವುಗಳನ್ನು ತಿಳಿದು, ತಾನು ವಿಧೇಯಾತ್ಮನಾಗಿ, (ಎಂದರೆ ಅಂತಃಕರಣಗಳನ್ನು ತನ್ನ ವಶದಲ್ಲಿರಿಸಿಕೊಂಡು) ತನಗೆ ವಶಗಳಾದ ಇಂದ್ರಿಯಗಳಿಂದ ರಾಗದ್ವೇಷಗಳಿಲ್ಲದೆ ವ್ಯಾಪಾರಮಾಡಿದರೆ, ಅದೇ ದೇಹೋಹಂಭಾವನೆಯನ್ನು ಬಿಟ್ಟವನ ವ್ಯಾಪಾರ. ಅಂಥವನಿಗೆ ಪ್ರಸಾದವು ಲಭಿಸುವುದು. ಅಂಥವನಿಗೆ ಸರ್ವ ದುಃಖ ಶಾಂತಿಯೂ ಲಭಿಸುವುದು.)

೭೫ ಮೂಢರಾದವರ ಬುದ್ಧಿಯು ರಾಗಾದಿಗಳಿಂದ ದುಷ್ಟವಾಗಿ ವ್ಯಾಪಾರ ಮಾಡುವುದು. ರಾಮ, ಆದರಿಂದಲೇ ಆ ವ್ಯಾಪಾರಗಳೆಲ್ಲವೂ ವಿಪರೀತಗಳಾಗಿ ಅನರ್ಥಕಾರಿಗಳಾಗುವುವು.

೭೬. ದ್ವೇಷವೆಂಬ ದೋಷಗಳು ಯಾವ ಚಿತ್ತ ವೃತ್ತಿಗಳಲ್ಲಿ ತರಂಗವಾಗಿ

ರಾಗೋ ದ್ವೇಷಶ್ಚ ಸರ್ಪೌ ದ್ವೌ ನ ವಿಲೀನೌ ಮನೋಬಿಲೇ ।
ಯಸ್ಯ ಕಲ್ಪತರೋಸ್ತಸ್ಮಾತ್ಕಿಂ ನಾಮಾಂಗ ನ ಲಭ್ಯತೇ　　　　　॥ ೨೭ ॥

ಯೇ ಹಿ ಪ್ರಾಜ್ಞಾಃ ಸ್ವನಿಯುತಾ ವಿದಗ್ಧಾಃ ಶಾಸ್ತ್ರಶಾಲಿನಃ ।
ರಾಗದ್ವೇಷಮಯಾಸ್ತೇ ವೈ ಜಂಬುಕಾಸ್ತೇ ಧಿಗಸ್ತು ತಾನ್　　　　　॥ ೨೮ ॥

ಮದ್ಧನಂ ಭುಕ್ತಮನ್ಯೇನ ಧನಂ ತ್ಯಕ್ತಂ ಮಯಾನ್ಯತಃ ।
ಇತಿ ಸಂವ್ಯವಹಾರೇಹಾಃ ಕೇ ರಾಗದ್ವೇಷಯೋಃ ಕ್ರಮಾಃ　　　　　॥ ೨೯ ॥

ಬರುತ್ತಿರುವುವೋ ಆ ಚಿತ್ತಗಳಲ್ಲಿ ಗುಣಗಳು ಯಾವುವೂ ನಿಲ್ಲಲಾರವು, ಸುಟ್ಟು ಕರಿಯಾಗಿರುವ ಕಾಡುಗಳಲ್ಲಿ ಜಿಂಕೆಗಳು ನಿಲ್ಲುವುದುಂಟೆ ?

೨೭. ರಾಗ, ದ್ವೇಷ ಎಂಬ ಎರಡು ಸರ್ಪಗಳು ಉಂಟು, ಅವು ಮನಸ್ಸೆಂಬ ಬಿಲದಲ್ಲಿ ಸೇರಿಕೊಂಡಿರುವುವು. ಅವು ಕಲ್ಪ ವೃಕ್ಷದಲ್ಲಿಯೇ ಸೇರಿಕೊಂಡರೂ, ಆ ಕಲ್ಪ ವೃಕ್ಷವು ದುಃಖವನ್ನಲ್ಲದೆ ಇನ್ನೇನನ್ನೂ ಕೊಡಲಾರದು.

೨೮. ಯಾರಾದರೆ ಪ್ರಾಜ್ಞರು, ಸ್ವನಿಯುತರು, ಪಂಡಿತರು, ಶಾಸ್ತ್ರಜ್ಞರು ಆಗಿದ್ದರೂ ರಾಗ ದ್ವೇಷಗಳನ್ನು ಬಿಟ್ಟವರಲ್ಲವೋ ಅವರು ನಿಜವಾಗಿಯೂ ನರಿಗಳೇ ಸರಿ. ಅಂಥವರಿಗೆ ಧಿಕ್ಕಾರವಿರಲಿ,

(ಸ್ವನಿಯುತ = ತಾನು ಹೇಗಿರಬೇಕು ಎಂಬುದನ್ನು ಇತರರಿಂದ ಹೇಳಿಸಿಕೊಳ್ಳಬೇಕಾದ ಅವಶ್ಯಕತೆ ಇಲ್ಲದವನು.)

೨೯. ನನ್ನ ಹಣವನ್ನು ಇವನು ತಿಂದು ಹಾಕಿದನಲ್ಲ ; ಅವನಿಂದ ಬರಬೇಕಾಗಿದ್ದ ಹಣವು ಹೋಯಿತಲ್ಲ! (ಬಿಡಬೇಕಾಗಿ ಬಂತಲ್ಲ) ಎಂದು ಮುಂತಾಗಿ ಮಾಡುವ ವ್ಯವಹಾರದ ಮೇಲಿನ ಆಶೆಗಳು ಯಾವವುಂಟೋ ಅವೆಲ್ಲವೂ ರಾಗ ದ್ವೇಷಗಳಿಂದ ಆದವೇ.

ಧನಾನಿ ಬಂಧವೋ ಮಿತ್ರಂ ಪುನರಾಯಾಂತಿ ಯಾಂತಿ ಚ ।
ಕಿಮೇತೇಷು ನರಃ ಪ್ರಾಜ್ಞೋ ರಜ್ಯತೇ ವಾ ವಿರಜ್ಯತೇ ॥ ೬೦ ॥

ಭಾವಾಭಾವಭವಾ ಭೋಗಾ ಮಾಯೇಯಂ ಪಾರಮೇಶ್ವರೀ ।
ಸಂಸಾರರಚನಾ ಸರ್ವಾ ಸಂಸಕ್ತಂ ಪಾತಯತ್ಯಲಂ ॥ ೬೧ ॥

ನ ಧನಂ ನ ಜನೋ ನಾತ್ಮಾ ಸತ್ಯಂ ರಾಘವ ವಸ್ತುತಃ ।
ಮಿಥ್ಯೈವ ಮಿಥ್ಯಾವಸಿತ ಮಿತೀದಂ ಪರಿಲಕ್ಷ್ಯತೇ ॥ ೬೨ ॥

---

೬೦. ಧನಗಳು, ಬಂಧುಗಳು, ಮಿತ್ರರು, ಇವೆಲ್ಲವೂ ಬರುವುವು ಹೋಗುವುವು. ಇವುಗಳಲ್ಲಿ ಮನುಷ್ಯರು ಪ್ರಾಜ್ಞರಾದರೆ, ಆಸ್ಥೆಯನ್ನಿಡುವುದೇಕೆ? ಆಸ್ಥೆಯನ್ನು ಬಿಟ್ಟು ದ್ವೇಷಮಾಡುವುದೇತಕ್ಕೆ?

೬೧, ಭಾವ ಅಭಾವಗಳಿಂದ ಉಂಟಾಗುವ ಭೋಗಗಳೇ ಪರಮೇಶ್ವರನ ಮಾಯೆಯು. ಇದೇ ಸಂಸಾರದ ಹರಡುವಿಕೆಯು. ಇದರಲ್ಲಿ ಆಸಕ್ತನಾದವನನ್ನು ಇದು ತಪ್ಪದೆ ಕೆಳಕ್ಕೆ ಉರುಳಿಸುವುದು.

[ದೈವೀ ಹ್ಯೇಷಾ ಗುಣಮಯೀ ಮಮ ಮಾಯಾದುರತ್ಯಯಾ ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ ಗೀತಾ ೭-೧೪.)

೬೨. ಹಣವಾಗಲೀ, ಜನವಾಗಲೀ, ತಾನೇ ಆಗಲೀ, ರಾಘವ, ಯಾವುದೂ ಸತ್ಯವಲ್ಲ. ಇದೆಲ್ಲವೂ ಮಿಥ್ಯೆಯು. ಮಿಥ್ಯೆಯಿಂದಲೇ ಆಗಿರುವುದು ಎಂಬುದು ವಿಚಾರ ಮಾಡಿದರೆ ಚೆನ್ನಾಗಿ ಗೋಚರವಾಗುವುದು.

ಆದ್ಯಂತಯೋಃ ಸರ್ವಮಸತ್ ಮಧ್ಯೇಪ್ಯಸ್ಥಿರಮಾಧಿಮತ್ ।
ಕ್ವ ಬಧ್ನಾತಿ ರತಿಂ ಪ್ರಾಜ್ಞೋ ಹ್ಯನ್ಯಕಲ್ಪಿತಖದ್ರುಮೇ ॥ ೮೩ ॥

ಏಕೇನ ಕಲ್ಪಿತಾ ಖೇ ಸ್ತ್ರೀ ಭುಂಕ್ತೇ ತಾಂ ದೂರಗೋಽಪರಃ ।
ಇತೀಯಮಂಗ ಸಂಸಾರರಚನಾ ತೇನ ಮಾ ಭ್ರಮ ॥ ೮೪ ॥

ಭೂತಾಜವಂ ಜವೀಭಾವ ಮಿಮಮಾತತಮಾಕುಲಂ ।
ಗಂಧರ್ವಪುರ ನಿರ್ಮಾಣವಿಲಾಸೇನ ಸಮಂ ವಿದುಃ ॥ ೮೫ ॥

ಸ್ವಪ್ನ ಸಂಕಲ್ಪಪುರವತ್ ಅಸದೇವೇದ ಮುತ್ಥಿತಂ ।
ಸರ್ವತ್ರ ಸಂಸ್ಥಮೇವೇದಂ ಸುಷುಪ್ತಿಮಿವ ವಿಚ್ಯುತಂ ॥ ೮೬ ॥

---

೮೩. ಸರ್ವವೂ ಆದಿಯಲ್ಲಿಯೂ ಇದ್ದುದಲ್ಲ ಕೊನೆಯಲ್ಲಿಯೂ ಉಳಿಯುವುದಲ್ಲ. ಮಧ್ಯದಲ್ಲಿ ತಾನೇ ಸ್ಥಿರವಾಗಿರುವುದೇನು ? ಯಾವುದಾದರೊಂದು ಚಿಂತೆಯಿಂದ ಕೂಡಿಯೇ ಇರುವುದು. ಅದರಿಂದ ಇದು ಹೀಗೆ, ಇನ್ನೊಬ್ಬನು ಕಲ್ಪಿಸಿಕೊಂಡ ಆಕಾಶ ವೃಕ್ಷದಂತಿರುವ ಈ ಸಂಸಾರದಲ್ಲಿ ಪ್ರಾಜ್ಞನಾದವನು ಯಾವನು ತಾನೇ ಆಸ್ಥೆಯನ್ನು ಇಡುವನು ?

೮೪. ಒಬ್ಬನು ಆಕಾಶದಲ್ಲಿ ಒಬ್ಬ ಸ್ತ್ರೀಯನ್ನು ಕಲ್ಪಿಸಿದನಂತೆ ; ಅವಳನ್ನು ದೂರದಲ್ಲಿದ್ದ ಯಾವನೋ ಭೋಗಿಸಿದನಂತೆ ಸಂಸಾರ ರಚನೆಯು ಇಂಥದು ಅದರಿಂದ, ಇದರಲ್ಲಿ ಭ್ರಾಂತಿ ಪಡಬೇಡ.

೮೫. ಹರಡುತ್ತಿರುವ ಸೃಷ್ಟಿಯನ್ನೂ ಆಕುಲವಾಗಿ ಮರೆಯಾಗುತ್ತಿರುವುದನ್ನೂ ಬಲ್ಲವರು ಗಂಧರ್ವಪುರ ನಿರ್ಮಾಣದಂತೆ ಒಂದು ಆಟವೆಂದು ಭಾವಿಸುವರು.

೮೬. ಸ್ವಪ್ನದಲ್ಲಿ ಸಂಕಲ್ಪಮಾತ್ರದಿಂದ ಕಾಣುವ ನಗರದಂತೆ, ಈ ಸೃಷ್ಟಿಯೆಲ್ಲವೂ ಅಸತ್ತಾಗಿಯೇ ವಿಜೃಂಭಿಸುತ್ತಿರುವುದು. ಎಲ್ಲೆಲ್ಲಿಯೂ ಇರುವಂತೆ

ಪರಿಪಶ್ಯಸಿ ಸಂಸಾರ ದೀರ್ಘಸ್ವಪ್ನಪುರದ್ರುಮಂ ।
ಅಜ್ಞಾನ ನಿದ್ರಾಲುಠನಸ್ವಭಾವಾತ್ಮಕಮಚ್ಯುತಂ ॥ ೮೭ ॥

ಸಂಸಾರಸ್ವಪ್ನ ಸಂಭ್ರಾಂತೋ ಭವಾನಯಮಿಹ ಸ್ಥಿತಃ ।
ತದೇನಾಂ ವಿತತಾಂ ನಿದ್ರಾಂ ಘನಾಜ್ಞಾನಮಯಾತ್ಮಿಕಾಂ ।
ತ್ಯಜಾಲಕ್ಷ್ಮೀ ಮಿವಾವಾಪ್ತ ನಿಧಾನಃ ಪುರುಷೋತ್ತಮಃ । ॥ ೮೮ ॥

ಪ್ರಬೋಧಮೇಹಿ ಪಶ್ಯಸ್ವಮಾತ್ಮಾನ ಮುದಿತಂ ಸದಾ
ನಿರ್ವಿಕಲ್ಪಂ ಚಿದಾಭಾಸಂ ಪ್ರಾತಃ ಪದ್ಮಂ ರವಿಂ ಯಥಾ । ॥ ೮೯ ॥

ತೋರಿದರೂ ಇದು ಸ್ವಪ್ನದಂತೆಯೂ ಸುಷುಪ್ತಿಯಲ್ಲಿಯೂ ಇರುವಂತೆಯೇ ಸರಿ.

[ಕಲ್ಪನಾಯಾಃ ಸಂಭವಾತ್, ಅಧಿಷ್ಠಾನಚಿತ್ ಸದ್ಭಾವಾತ್ ಸರ್ವತ್ರ ಸಂಸ್ಥಂ ವಿಚ್ಯುತಂ ಸ್ವಪ್ನಾದಿ ಭಾವಾಪನ್ನಂ ತಾ ಪ್ರ.]

೮೭. ಅಜ್ಞಾನವೆಂಬ ನಿದ್ದೆಯಲ್ಲಿ ಒದ್ದಾಡುತ್ತ ಇರುವುದರಿಂದ ಕಾಣಿಸುತ್ತಿರುವ ಈ ಸಂಸಾರವು ದೀರ್ಘ ಸ್ವಪ್ನದಲ್ಲಿ ಕಾಣುತ್ತಿರುವ ಪುರದಂತೆಯೂ ದ್ರುಮದಂತೆಯೂ ಇರುವುದು ಎಂಬುದನ್ನು ಕಾಣುವವನಾಗು.

೮೮. ಸಂಸಾರ ಸ್ವಪ್ನವನ್ನು ಕಂಡು ಭ್ರಾಂತನಾಗಿರುವ ಜೀವ ಸ್ವರೂಪನಾಗಿ ನೀನು ಇಲ್ಲಿ ಸಿಕ್ಕಿ ಬಿದ್ದಿರುವೆ. ಅದರಿಂದ ಘನವಾದ ಅಜ್ಞಾನ ಸ್ವರೂಪವಾಗಿರುವ ಈ ಗಾಢನಿದ್ರೆಯನ್ನು, ನಿಧಿಯನ್ನು ಪಡೆದ ಪುರುಷೋತ್ತಮನು ದಾರಿದ್ರ್ಯವನ್ನು ಬಿಡುವಂತೆ, ಬಿಡು.

೮೯. ಎಚ್ಚರಗೊಳ್ಳುವನಾಗು, ಯಾವಾಗಲೂ ಬೆಳಗುತ್ತಲೇ ಇರುವ ಆತ್ಮನ ದರ್ಶನವನ್ನು ಮಾಡು. ಉದಯಕಾಲದ ಪದ್ಮವು ಸೂರ್ಯನನ್ನು ಕಾಣುವಂತೆ, ನಿರ್ವಿಕಲ್ಪನೂ ಚಿತ್ತಿನಿಂದ ಬೆಳಗುವನೂ ಆದ ಆತ್ಮನ ದರ್ಶನವನ್ನು ಮಾಡು.

ಪ್ರಬುಧ್ಯಸ್ವ ಪ್ರಬುಧ್ಯಸ್ವ ಪುನಃ ಪುನರಯಂ ಮಯಾ
ಪ್ರಬೋಧ್ಯಸೇ ಮಹಾಬಾಹೋ ಪಶ್ಯಾತ್ಮಾರ್ಕಮನಾಮಯಂ । ॥ ೯೦ ॥

ಮಯೈತೇನಾಭಿವೃಷ್ಟೇನ ಶೀತೇನ ಜ್ಞಾನವಾರಿಣಾ
ಸಶಬ್ದಶಾಲಿನಾ ರಾಮ ಹ್ಯನೇನೈವಾಸಿ ಬೋಧಿತಃ । ॥ ೯೧ ॥

ಬೋಧಮಾಸಾದಯ ಪರಂ ಪ್ರಬೋಧೋದ್ಯೈವ ರಾಘವ
ಸತ್ಯಮಾಲೋಕಯಾಲೀಕಂ ತ್ಯಕ್ತ್ವೇಮಂ ಜಾಗತಂ ಭ್ರಮಂ । ॥ ೯೨ ॥

ನ ತೇ ಜನ್ಮ ನ ತೇ ದುಃಖಂ ನ ದೋಷಾಸ್ತೇ ನ ತೇ ಭ್ರಮಾಃ
ಸರ್ವಂ ಸಂಕಲ್ಪಮುತ್ಸೃಜ್ಯ ತಿಷ್ಠಾತ್ಮನಿ ಸುಸಂಸ್ಥಿತಃ । ॥ ೯೩ ॥

---

೯೦. ಏಳು, ಏಳು. ನಾನು ಮತ್ತೆ ಮತ್ತೆ ನಿನ್ನನ್ನು ಎಬ್ಬಿಸುತ್ತಿರುವೆನು. ಎಲೈ ಮಹಾಬಾಹುವೆ, ಏನೊಂದು ಆತಂಕವೂ ಇಲ್ಲದೆ ಬೆಳಗುತ್ತಿರುವ ಆತ್ಮನೆಂಬ ಸೂರ್ಯನನ್ನು ನೋಡು.

೯೧. ನಾನು ಸುಶೀತಲವಾದ ಈ ಜ್ಞಾನ ಜಲವನ್ನು, ಗುಡುಗು ಮಿಂಚುಗಳಿಂದ ಕೂಡಿದ ಮೋಡದಂತೆ, ಅಭಿವರ್ಷಣ ಮಾಡುತ್ತಿರುವೆನು. ಇದರಿಂದ, ರಾಮ, ಎಚ್ಚರಗೊಳ್ಳುವವನಾಗು.

೯೨. ಶ್ರೇಷ್ಠವಾದ ಜ್ಞಾನವನ್ನು ಪಡೆದುಕೊ. ಈಗಲೇ ಪ್ರಜ್ಞಾನಘನನಾಗು. ರಾಘವ, ಸತ್ಯವನ್ನು ಕಂಡು, ಸುಳ್ಳು ಸುಳ್ಳಾದ ಈ ಜಾಗತ ಭ್ರಮವನ್ನು ನಿರಾಕರಿಸು.

೯೩. ನಿನಗೆ ಜನ್ಮವಿಲ್ಲ ನಿನಗೆ ದುಃಖವಿಲ್ಲ. ನಿನಗೆ ದೋಷಗಳಿಲ್ಲ. ನಿನಗೆ ಭ್ರಮೆಗಳಿಲ್ಲ. ಈ ಸಂಕಲ್ಪಗಳನ್ನೆಲ್ಲ ಬಿಟ್ಟು, ಭದ್ರವಾಗಿ ಆತ್ಮನಲ್ಲಿ ಸ್ಥಿತಿಯುಳ್ಳವನಾಗು.

ಪರಿಗಲಿತವಿಕಲ್ಪದೋಷಜಾಲಸ್ತ್ವಮಸಿ ಸುಸಾರಸುಷುಪ್ತಸಾಮ್ಯದೃಷ್ಟಿಃ ।
ಅತಿವಿತತಮಿದಂ ಸುಶುದ್ಧಯೇ ತ್ವಂ ಸಮುಪಶಮಾತ್ಮನಿತಿಷ್ಠ ಹೇ ಮಹಾತ್ಮನ್ ॥೯೪॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ "ಪರಮಾರ್ಥ ಯೋಗೋಪದೇಶೋ" ನಾಮ ಅಷ್ಟಾವಿಂಶಃಸರ್ಗಃ.

---

೯೪. ನೀನು ಎಲ್ಲಾ ಜಾತಿಯ ವಿಕಲ್ಪಗಳೆಂಬ ದೋಷ ಸಮೂಹಗಳನ್ನು ಬಿಟ್ಟು, ಸುಷುಪ್ತಿಯಲ್ಲಿರುವ ಸಾರವತ್ತಾದ ಸೌಮ್ಯ ದೃಷ್ಟಿ ಯಾವದುಂಟೋ ಅದು ಉಳ್ಳವನಾಗು. ಈ ಜಗತ್ತು ಇಷ್ಟು ವಿಸ್ತಾರವಾಗಿ ಹರಡಿದ್ದರೂ, ಇದನ್ನೆಲ್ಲ ಶುದ್ಧ ಬ್ರಹ್ಮ ಸಾಕ್ಷಾತ್ಕಾರಕ್ಕಾಗಿ ಉಪಶಾಂತಿಗೊಳಿಸು. ಎಲೈ ಮಹಾತ್ಮನೆ, ಆತ್ಮನಲ್ಲಿ ಸಂಸ್ಥಿತಿಯುಳ್ಳವನಾಗು.

[ಸಾಮ್ಯದೃಷ್ಟಿಃ= ಸಾಮ್ಯಾ ನಿರ್ವಿಕ್ಷೇಪಾದೃಷ್ಟಿಃ ಯಸ್ಯಸಃ. ವಿಕ್ಷೇಪರಹಿತ ವಾದ ದೃಷ್ಟಿಯುಳ್ಳವನು. –ತಾ. ಪ್ರ.]

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ನಿರ್ವಾಣ ಪ್ರಕರಣದಲ್ಲಿ "ಪರಮಾರ್ಥ ಯೋಗೋಪದೇಶ" ವೆಂಬ ಇಪ್ಪತ್ತೆಂಟನೆಯ ಸರ್ಗವು.

ಪಂಚೀಕರಣ

ವೇದಾಂತದಲ್ಲಿ "ಅಹಂ" ಎಂಬುವನು ಯಾರು ಎಂದು ತಿಳಿದುಗೊಳ್ಳುವುದೇ ಗುರಿ, ಪ್ರಾಕೃತರು ಅಹಂ ಎಂದುಕೊಳ್ಳುವ ದೇಹವು ಅಹಂ ಅಲ್ಲ ಎಂದು ವಿಚಾರಿಗೆ ತೋರುವುದು ದೇಹದಲ್ಲಿ ಜಡವಾಗಿ ಬೆಳೆದು ಕುಗ್ಗುತ್ತಿರುವ ಅಂಗಾಂಗ ಸಮೂಹವು ಅನ್ನಮಯ ಕೋಶ. ಇದು ಸ್ಥೂಲ ದೇಹ. ಇದರಲ್ಲಿ ಶ್ವಾಸಮುಖವಾಗಿ ತೋರಿಸಿಕೊಳ್ಳುತ್ತ, ಸರ್ವ ಕರ್ಮಗಳನ್ನೂ ಮಾಡಿಸುತ್ತ ಇರುವ ಪ್ರಾಣವಿರುವುದು. ಅದೇ ಪ್ರಾಣಮಯ ಕೋಶ; ಅದರಲ್ಲಿ ಸಂಕಲ್ಪ ವಿಕಲ್ಪಾದಿ ವೃತ್ತಿಗಳೆಲ್ಲಾ ಪ್ರಕಟ

ವಾಗುವ ಕ್ಷೇತ್ರವಾಗಿರುವುದು ಮನೋಮಯಕೋಶ. ಕರ್ತೃತ್ವ ಭೋಕ್ತೃತ್ವ ಸ್ವರೂಪವಾದ ಅಹಂಕಾರದಿಂದ ಕೂಡಿ ತಾನು ಬೇರೆ ಎಂದುಕೊಳ್ಳುತ್ತಿರುವುದು ವಿಜ್ಞಾನಮಯ ಕೋಶ ಈ ಮೂರು ಕೋಶಗಳೂ ಸೇರಿ ಸೂಕ್ಷ್ಮದೇಹ; ಇದರೊಳಗೆ ಸಾತ್ವಿಕಾಹಂಕಾರ ಸಂಪನ್ನವಾಗಿ ಆನಂದ ಸ್ವರೂಪನಾದರೂ ಸುಖ ದುಃಖಾದಿ ವಿಕಾರಾಪನ್ನವಾಗಿರುವುದು ಆನಂದಮಯಕೋಶ. ಇದು ಕಾರಣದೇಹ. ಇದರಿಂದ ಆಚೆಯಿರುವ ಅಹಂಕಾರ ರಹಿತನಾದ ಕೇವಲ ಪ್ರಜ್ಞಾನ ಘನನಾಗಿರುವುದು ಜೀವ. ಅದು ನಿಜವಾದ ಅಹಂ, ಅದು ಗೀತೆಯ ೭-೫ ರಲ್ಲಿ ಹೇಳುವ ಪರಾಪ್ರಕೃತಿ.

ಬ್ರಹ್ಮವು ಏಕೈಕವಾಗಿದ್ದುದು ಪುರುಷ ಸೂಕ್ತದಲ್ಲಿ ಹೇಳುವಂತೆ ಸಾಶನ ನಿರಶನವಾದ ದ್ವಿಸ್ವರೂಪವುಳ್ಳ ವಿರಾಟನಾಯಿತು. ಸಾಶನಾಂಶವೇ ಪರಾ ಪ್ರಕೃತಿಯಾದ ಜೀವ ಸ್ವರೂಪ. ನಿರಶನ ವಿರಾಟ್ಪುರುಷನಿಂದ ಮಹತ್, ಮಹತ್‌ನಿಂದ ಕ್ರಮವಾಗಿ ಆಕಾಶ, ವಾಯು, ಅಗ್ನಿ, ಜಲ, ಪೃಥ್ವಿ, ಎಂಬ ಐದು ಭೂತಗಳೂ ಹುಟ್ಟಿದುವು. ಮಹತ್ ಎನ್ನುವುದು ತ್ರಿಗುಣಾತ್ಮಿಕಾ ಮಾಯಾ. ಆದರ ತ್ರಿಗುಣಗಳು ಪಂಚ ಭೂತಗಳಲ್ಲಿ ವ್ಯಾಪಾರ ಮಾಡಿದಾಗ ಸತ್ವಾಂಶದಿಂದ ಮನೋ ಬುದ್ಧಿಗಳೂ ಜ್ಞಾನೇಂದ್ರಿಯಗಳೂ ಹುಟ್ಟಿದುವು. ಈ ಜ್ಞಾನೇಂದ್ರಿಯಗಳ ಸಮಷ್ಟಿ ಸ್ವರೂಪವೇ ಜ್ಞಾತೃ ಸ್ವರೂಪವಾದ ಅಹಂಕಾರ, ಐದು ಭೂತಗಳೂ ಮನೋ ಬುದ್ಧಿಗಳೂ ಅಹಂಕಾರ. ಇವಿಷ್ಟು ಸೇರಿ ಗೀತೆಯ ೨-೪ರಲ್ಲಿ ಹೇಳಿರುವ ಅಪರಾಪ್ರಕೃತಿ.

ರಜೋಗುಣದ ವ್ಯಾಪಾರದಿಂದ ಭೂತಗಳಲ್ಲಿ ಕರ್ಮೇಂದ್ರಿಯ ಪ್ರಾಣಗಳು ಆದುವು. ಜ್ಞಾನೇಂದ್ರಿಯ ಪಂಚಕ, ಕರ್ಮೇಂದ್ರಿಯ ಪಂಚಕ ಮನೋಬುದ್ಧಿಗಳು ಸೇರಿ ಹದಿನೇಳು ತತ್ತ್ವಗಳ ಸೂಕ್ಷ್ಮ ಶರೀರವಾಯಿತು.

ತಮೋಗುಣದ ವ್ಯಾಪಾರದಿಂದ ಭೂತಗಳಲ್ಲಿ ಪಂಚೀಕರಣವಾಗಿ, ಸ್ಥೂಲಾಂಶಗಳು ಹುಟ್ಟಿ ಸೂಕ್ಷ್ಮ ಶರೀರವು ಇರುವ ಗೂಡಾಗಿ ಸ್ಥೂಲ ದೇಹವು ಏರ್ಪಟ್ಟುವು. ಪಂಚೀಕರಣವೆಂದರೆ ಭೂತವು ಮೊದಲು ಅರ್ಧ-ಅರ್ಧವಾಗಿ ಎರಡು ಪಾಲಾಗಿ

ಒಡೆಯುವುದು. ಎರಡನೆಯ ಅರ್ಧವು ಮತ್ತೆ ಎಂಟು ಪಾಲಾಗಿ ಒಡೆಯುವುದು. ಹೀಗೆ ಎಂಟೆಂಟು ಪಾಲಾಗಿ ಒಡೆದ ಪಂಚ ಭೂತಗಳಲ್ಲಿ ಎರಡೆರಡು ಪಾಲುಗಳು ಸೇರಿ ಒಂದೊಂದು ಸ್ಥೂಲ ತತ್ವವಾಗುವುದು ಅರ್ಧವಾಗಿ ನಿಂತ ಭೂತಗಳದು ಎರಡೆರಡು ಪಾಲು ಸೇರಿ ಆದವು ಇಪ್ಪತ್ತು ಇವಿಷ್ಟೂ ಸೇರಿ ಇಪ್ಪತ್ತೈದು ತತ್ತ್ವಗಳ ಸ್ಥೂಲ ದೇಹವು.

ಹೀಗೆ ಆಕಾಶದ ಅರ್ಧ ಭಾಗದಿಂದ ಜ್ಞಾತೃ ವಾಯುವಿನ ಅರ್ಧದಿಂದ ಪ್ರಾಣ ನಾಮಕನಾದ ವ್ಯಾನವಾಯು, ಅಗ್ನಿಯ ಅರ್ಧಾಂಶದಿಂದ ನೇತ್ರ, ಜಲದ ಅರ್ಧಾಂಶದಿಂದ ರಸ. ಪೃಥ್ವಿಯ ಅರ್ಧಾಂಶದಿಂದ ಪಾಯು, ಆದುವು. ಮಿಕ್ಕ ಅಂತಃಕರಣ ಚತುಷ್ಟಯವು ಆಕಾಶಾಂಶದಿಂದ, ಪ್ರಾಣ ಚತುಷ್ಟಯವು ವಾಯ್ವಂಶದಿಂದ. ಕರ್ಮೇಂದ್ರಿಯ ಚತುಷ್ಟಯವು ಅಗ್ನ್ಯಂಶದಿಂದ, ಗುಣ ಚತುಷ್ಟಯವು ಪೃಥ್ವ್ಯಂಶದಿಂದ ಆದುವು.

ಹೀಗೆ ಜ್ಞಾನೇಂದ್ರಿಯ ಪಂಚಕದ ಸಂಘಾತ ಸ್ವರೂಪನಾಗಿರುವ ಜ್ಞಾತೃವು ಕೇವಲ ಜಡವಾದ ಆಕಾಶ ಭೂತದ ತಮೋಂಶದ ಅರ್ಧವು. ಅದರ ಹಿಂದೆ ಅದಕ್ಕೆ ಆಧಾರವಾಗಿರುವ ಜ್ಞಾನ ಸ್ವರೂಪ ಚೇತನವು ಸಾಕ್ಷಿ ಸ್ವರೂಪನಾದ ಜೀವನು, ಅಹಂ ಶಬ್ದ ವಾಚ್ಯನು. ಅವನು ಕರ್ತೃವೂ ಅಲ್ಲ ಭೋಕ್ತೃವೂ ಅಲ್ಲ ಎಂಬುದನ್ನು ಗೀತೆಯ ೧೩ನೆಯ ಅಧ್ಯಾಯದಲ್ಲಿ ನೋಡಿ ತಿಳಿಯುವುದು. ಆ ಕ್ಷೇತ್ರ ಕ್ಷೇತ್ರಜ್ಞ ವಿಭಾಗವನ್ನು ತಿಳಿಯಲು ಸಾಧಕವಾದುದು ಪಂಚೀಕರಣ.

ಇತಿ - ಓಂ

ಏಕೋನ ತ್ರಿಂಶಃ ಸರ್ಗಃ

ಶ್ರೀ ವಾಲ್ಮೀಕಿರುವಾಚ :—

ಇತ್ಯಾಕರ್ಣಯತಿ ಸ್ವಸ್ಥಸಮಚೇತಸಿ ರಾಘವೇ ।
ವಿಶ್ರಾಂತೇ ಸ್ವಾತ್ಮನಿ ಸ್ವೈರಂ ಪರಮಾನಂದಮಾಗತೇ ॥ ೧ ॥

ತತ್ರಸ್ಥೇಷು ಚ ಸರ್ವೇಷು ತೇಷೂಪಶಮಶಾಲಿಷು ।
ರಾಘವಸ್ಯಾತ್ಮ ವಿಶ್ರಾಂತೇಃ ಸ್ಥಿತ್ಯರ್ಥಂ ವಚನಾಮೃತಂ ॥ ೨ ॥

ವಿರರಾಮ ಮುನೇರ್ವಾರಿ ಸಸ್ಯೇಷ್ವಂಬುಧರಾದಿವ ॥ ೩ ॥

ಇಪ್ಪತ್ತೊಂಭತ್ತನೆಯ ಸರ್ಗ

ಶ್ರೀ ವಾಲ್ಮೀಕಿಯು ಹೇಳಿದನು :—

೧. ಹೀಗೆ (ಶ್ರೀ ವಸಿಷ್ಠೋಪದೇಶ ವಾಕ್ಯಗಳನ್ನು) ಕೇಳುತ್ತ ಶ್ರೀರಾಮನು ಸ್ವಸ್ಥನಾಗಿ ಬ್ರಹ್ಮದಲ್ಲಿ ಮನಸ್ಸು ನಿಲ್ಲಿಸಿ, ಬ್ರಹ್ಮಪದದಲ್ಲಿ ವಿಶ್ರಾಂತಿ ಪಡೆದು ಪರಮಾನಂದ ಸ್ವರೂಪನಾದನು.

೨–೩. ಅಲ್ಲಿದ್ದವರೂ ಕೂಡ ಉಪಶಾಂತಿಯನ್ನು ಪಡೆದು ಸ್ವಸ್ಥಮಾನಸರಾದರು.

ಮಳೆಗರೆದು ಸಸ್ಯಗಳಿಗೆ ಬೇಕಾದ ನೀರನ್ನು ಕೊಟ್ಟು ಮೋಡವು ಸುಪ್ತನಾಗುವಂತೆ, ಶ್ರೀ ವಸಿಷ್ಠ ಮುನೀಂದ್ರನ ವಚನಾಮೃತ ಮಹಾವರ್ಷವೂ ಕೂಡ, ರಾಘವನ ಆತ್ಮ ವಿಶ್ರಾಂತಿಗೆ ಅಡ್ಡ ಬರಬಾರದೆಂದು ಅಷ್ಟು ಕಾಲ ವಿರಾಮವನ್ನು ಪಡೆಯಿತು.

ಅಥ ಯಾತೇ ಮುಹೂರ್ತಾರ್ಧೇ ರಾಘವೇ ಪ್ರತಿಭೋಧಿತೇ ।
ಪುನರಾಹ ತಮೇವಾರ್ಥಂ ವಸಿಷ್ಠೋ ವದತಾಂ ವರಃ ॥ ೪ ॥

ಶ್ರೀ ವಸಿಷ್ಠ ಉವಾಚ :—
ರಾಮ ಸಮ್ಯಕ್ಪ್ರಬುದ್ಧೋಽಸಿ ಸ್ವಾತ್ಮಾನಮಸಿ ಲಬ್ಧವಾನ್ ।
ಏವಮೇವಾವಲಂಬ್ಯಾರ್ಥಂ ತಿಷ್ಠ ನೇಹ ಪದಂ ಕೃಥಾಃ ॥ ೫ ॥

---

೪. ಹೀಗೆ ಅರ್ಧ ಮುಹೂರ್ತವು ಶಾಂತವಾಗಿ ಮೌನವಾಗಿ ಕಳೆದ ಮೇಲೆ ರಾಘವನು ಮತ್ತೆ ಪ್ರತಿಬೋಧವನ್ನು ಪಡೆದು ಎಚ್ಚರವಾದನು. ಆಗ ಮತ್ತೆ ಅದೇ ಉಪದೇಶ ವಾಕ್ಯಾಮೃತ ಧಾರೆಯನ್ನು ವಾಗ್ಮಿಶ್ರೇಷ್ಠನಾದ ವಸಿಷ್ಠ ಮುನೀಂದ್ರನು ಮುಂದುವರಿಸಿದನು.

ಶ್ರೀ ವಸಿಷ್ಠರು ಹೇಳಿದರು :—

೫. ರಾಮ, ನೀನು ಈಗ ಚೆನ್ನಾಗಿ ಪ್ರಬೋಧವನ್ನು ಪಡೆದವನಾದೆ, ಆತ್ಮ ಲಾಭವು ನಿನಗಾಯಿತು. ನೀನು ಈಗ ಯಾವ ಸ್ಥಿತಿಯಲ್ಲಿ ಇದ್ದೀಯೋ, ಅದೇ ಸ್ಥಿತಿಯಲ್ಲಿಯೇ ಇರು. ಮತ್ತೆ ಸಂಸಾರವು ಸತ್ಯವೆಂಬ ಭ್ರಾಂತಿಗೆ ವಶನಾಗಬೇಡ.

(ಸ್ವಾತ್ಮಾನಮಸಿ ಲಬ್ಧವಾನ್=ಆತ್ಮ ಲಾಭವು ನಿನಗಾಯಿತು ಎಂಬಲ್ಲಿ, ಪ್ರತ್ಯೇಕವಾಗಿ ಇದುವರೆಗೂ ಅಲಭ್ಯವಾಗಿದ್ದ ವಸ್ತ್ವಂತರವೊಂದರ ಲಾಭ ವಾಯಿತು ಎಂದು ಅರ್ಥ ಮಾಡಬಾರದು. ಹಿರಿಯರು ಹೇಳುವ ಕಂಠಾಭರಣ ನ್ಯಾಯವನ್ನು ಇಲ್ಲಿ ಅನುಸಂಧಾನ ಮಾಡಬೇಕು.

ಒಬ್ಬ ಸ್ತ್ರೀಯು ತನ್ನ ಕಂಠಾಭರಣವು ಎಲ್ಲಿ ಹೋಯಿತೆಂದು ಬಹುವಾಗಿ ವ್ಯಥೆಪಟ್ಟು ಎಲ್ಲಿಟ್ಟೆನೋ ಎಂದು ಮನೆಯಲ್ಲೆಲ್ಲಾ ಹುಡುಕಿ ಕೊನೆಗೆ ಹಠಾತ್ತಾಗಿ ತನ್ನ ಕತ್ತಿನಲ್ಲಿಯೇ ಇರುವುದನ್ನು ಕಂಡುಕೊಂಡು ಸದ್ಯಕ್ಕೆ ಸಿಕ್ಕಿತಲ್ಲಾ ಎಂದು ಸಂತೋಷಪಟ್ಟಳಂತೆ. ಹಾಗೆ.

ಅಭಿಯುಕ್ತರು ಇಲ್ಲಿ ದಶಮನ್ಯಾಯವನ್ನು ಹೇಳುವರು. ಹತ್ತು ಜನರು ನದಿಯನ್ನು ದಾಟಿದರು. ದಾಟಿದ ಮೇಲೆ ಎಲ್ಲರೂ ಸುರಕ್ಷಿತವಾಗಿ ಸೇರಿದೆವೋ,

ಇದಂ ಸಂಸಾರಚಕ್ರಂ ಹಿ ನಾಭೌ ಸಂಕಲ್ಪಮಾತ್ರಕೇ ।
ಸಂರೋಧಿತಾಯಾಂ ಮಹತಾದ್ರಘುನಂದನ ರುಧ್ಯತೇ ॥ ೬ ॥

ಕ್ಷೋಭಿತಾಯಾಂ ಮನೋನಾಭ್ಯಾಮಿದಂ ಸಂಸಾರಚಕ್ರಕಂ ।
ಪ್ರಯತ್ನಾದ್ರೋಧಿತಮಪಿ ಪ್ರವಹತ್ಯೇವ ವೇಗತಃ ॥ ೭ ॥

ಪರಂ ಪೌರುಷಮಾಸ್ಥಾಯ ಬಲಂ ಪ್ರಜ್ಞಾಂ ಚ ಯುಕ್ತಿತಃ ।
ನಾಭಿಂ ಸಂಸಾರಚಕ್ರಸ್ಯ ಚಿತ್ತಮೇವ ನಿರೋಧಯೇತ್ ॥ ೮ ॥

ಇಲ್ಲವೋ ಎಂದು ಲೆಕ್ಕ ಮಾಡುವವನು ತನ್ನನ್ನು ಬಿಟ್ಟುಕೊಂಡು ಲೆಕ್ಕ ಮಾಡಿ ನೋಡಿ ಒಂಭತ್ತೇ ಜನರು ಇರುವುದನ್ನು ಕಂಡು ಅಯ್ಯೋ ಒಬ್ಬನು ನದಿಯ ಪಾಲಾದನು ಎಂದು ಅತ್ತನು. ಕೊನೆಗೆ ಪಾಂಥನೊಬ್ಬನು ಬಂದು ಲೆಕ್ಕವನ್ನು ಸರಿಯಾಗಿ ತೋರಿಸಿ ಅಳುವನ್ನು ಕೊನೆಗಾಣಿಸಿದಂತೆ. ಹಾಗೆ.)

೬. ಈ ಸಂಸಾರ ಚಕ್ರವೂ ಚಕ್ರದಂತೆಯೇ ಎಂದುಕೋ! ಚಕ್ರದ ನಾಭಿಯನ್ನು ಹಿಡಿದು ನಿಲ್ಲಿಸಿದರೆ ಚಕ್ರ ಗತಿಯು ನಿಲ್ಲುವುದು. ಅದರಂತೆಯೇ ಸಂಕಲ್ಪವೇ ಮೂಲವಾಗಿ ನಡೆಯುವ ಸಂಸಾರ ಚಕ್ರದ ಗತಿಯೂ ಸಂಕಲ್ಪ ನಿರೋಧದಿಂದ ನಿರುದ್ಧವಾಗುವುದು.

(ಮೋಟಾರ್ ಬಂಡಿಗಳ ಬ್ರೇಕ್‌ಗಳನ್ನು ಚಿಂತಿಸಿ, ಯೋಗವಾಸಿಷ್ಠ ರಚನೆಯಾದ ಕಾಲದಲ್ಲಿಯೂ ಈರೀತಿಯಾದ ಬ್ರೇಕುಗಳಿದ್ದುವೋ?)

೭. ಮನಸ್ಸೆಂಬುದೇ ಈ ಸಂಸಾರ ಚಕ್ರದ ನಾಭಿಯು. ಇದು ಕ್ಷೋಭೆಗೆ ಒಳಗಾದರೆ, ಎಷ್ಟೇ ಪ್ರಯತ್ನಪಟ್ಟರೂ ಈ ಸಂಸಾರಚಕ್ರವು ವೇಗದಿಂದ ಓಡುವುದೇ ಹೊರತು ನಿಲ್ಲುವುದಿಲ್ಲ.

(ಕ್ಷೋಭೆಯು ಬರುವುದು ರಾಗ ದ್ವೇಷಗಳಿಂದ.)

೮. ಅದರಿಂದ, ಪ್ರಬಲವೂ ಶ್ರೇಷ್ಠವೂ ಆದ ಪೌರುಷವನ್ನು ಸಮಾಶ್ರಯಣ

ಪ್ರಜ್ಞಾ ಸೌಜನ್ಯಯುಕ್ತೇನ ಶಾಸ್ತ್ರಸಂವಲಿತೇನ ಚ ।
ಪೌರುಷೇಣ ನ ಯತ್ಪ್ರಾಪ್ತಂ ನ ತತ್ಕ್ವಚನ ಲಭ್ಯತೇ ॥ ೯ ॥

ದೈವೈಕಪರತಾಂ ತ್ಯಕ್ತ್ವಾ ಬಾಲಬೋಧೋಪ ಕಲ್ಪಿತಾಂ ।
ನಿಜಂ ಪ್ರಯತ್ನಮಾಶ್ರಿತ್ಯ ಚಿತ್ತಮಾದೌ ನಿರೋಧಯೇತ್ ॥ ೧೦ ॥

ಆವಿರಿಂಚಾತ್ಪ್ರವೃತ್ತೇನ ಭ್ರಮೇಣಾಜ್ಞಾನರೂಪಿಣಾ ।
ಅಸದೇವ ಸದಾಭಾಸಮಿದಮಾಲಕ್ಷ್ಯತೇನಘ ॥ ೧೧ ॥

ಮಾಡಿ ಬಲವನ್ನೂ, ಪ್ರಜ್ಞೆಯನ್ನೂ, ಯುಕ್ತಿಯಿಂದ ವಿನಿಯೋಗಿಸಿ, ಸಂಸಾರ ಚಕ್ರದ ನಾಭಿಯಾದ ಚಿತ್ತವನ್ನೇ ಕಟ್ಟಿ ಹಾಕಿ ನಿರೋಧಿಸಬೇಕು.

(ಹೋಲಿಸಿ:—ಯೋಗಶ್ಚಿತ್ತ ವೃತ್ತಿ ನಿರೋಧಃ. –ಯೋಗಶಾಸ್ತ್ರ.)

೯. ಪ್ರಜ್ಞೆಯನ್ನೂ, ಸೌಜನ್ಯವನ್ನೂ, ಶಾಸ್ತ್ರ ಜ್ಞಾನವನ್ನೂ, ಪೌರುಷ ವನ್ನೂ ಒಟ್ಟುಗೂಡಿಸಿ ಸಾಧಿಸಿದರೆ ಯಾವ ಉತ್ತಮ ಫಲವು ಲಭಿಸುವುದೋ ಅದು ಇನ್ನೆಲ್ಲಿಯೂ (ಇನ್ನು ಹೇಗೆ ಹೇಗೂ) ದೊರೆಯುವುದಿಲ್ಲ

೧೦. ಆದರಿಂದ, ಇನ್ನೂ ಬುದ್ಧಿಯು ಪಕ್ವವಾಗಿಲ್ಲದಿರುವವರಿಗೋಸ್ಕರ ಮಾತ್ರ ಕಲ್ಪಿತವಾಗಿರುವ ಗೌಣವಾದ ದೈವವನ್ನು ನಂಬಿಕೊಂಡು ಕುಳಿತಿರು ವುದನ್ನು ಬಿಟ್ಟು, ಸ್ವಪ್ರಯತ್ನವನ್ನು ಆಶ್ರಯಿಸಿ ಚಿತ್ತವನ್ನು ಮೊದಲು ನಿರೋಧಿಸಬೇಕು.

೧೧. ಎಲೈ ಅನಘನಾದ ಶ್ರೀರಾಮನೆ, ವಿರಂಚಿ ಬ್ರಹ್ಮನನ್ನು ಮೊದಲು ಮಾಡಿಕೊಂಡು ಈ ಅಜ್ಞಾನವೆಂಬ ಭ್ರಮವು ಎಲ್ಲರನ್ನೂ ಹಿಡಿದಿರುವುದು. ಆ ಭ್ರಮದ ಬಲದಿಂದಲೇ, ಅದು ಹಿಡಿದಿರುವುದರಿಂದಲೇ, ಅಸತ್ತಾದ ಈ ಜಗತ್ಸ್ಥಿತಿಯೆಲ್ಲವೂ ಸತ್ತಿನಂತೆಯೇ ತೋರುತ್ತಿರುವುದು.

ಅಜ್ಞಾನ ಭ್ರಮವಿಸ್ತಾರಸೂತ್ರಕಾಕೃತಯೋನಘ ।
ಇಮೇ ದೇಹಾ ಭ್ರಮಂತೀಹ ಸರ್ವಧರ್ಮಾತ್ಸಮುತ್ಥಿತಾಃ ॥ ೧೨ ॥

ಸಂಕಲ್ಪಃ ಪುನರಸ್ತ್ಯೇವ ದೇಹಸ್ಯಾರ್ಥೇ ಕದಾಚನ ।
ಸುಖದುಃಖ ವಿಚಾರಿತ್ವಂ ನ ಕಾರ್ಯಂ ರಾಮ ಧೀಮತಾ ॥ ೧೩ ॥

ದುಃಖಮ್ಲಾನ ಮುಖಃ ಕ್ಲೇದೀ ಪ್ರಸನ್ನಾತ್ಕ್ಲೇದವರ್ಜಿತಾತ್ ।
ಅಪಿ ಚಿತ್ರನರಾದ್ದೇಹನರಸ್ತುಚ್ಛತರಃ ಸ್ಮೃತಃ । ॥ ೧೪ ॥

ಆಧಿವ್ಯಾಧಿ ಪರಿಮ್ಲಾನೇ ಸ್ವಯಂ ಕ್ಲೇದಿನಿ ನಾಶಿನಿ ।
ನ ತಥಾ ಸ್ಥಿರತಾ ದೇಹೇ ಚಿತ್ರಪುಂಸೋ ಯಥಾ ಕಿಲ ॥ ೧೫ ॥

---

೧೨. ಅಜ್ಞಾನ ಭ್ರಮದ ಹರಡುವಿಕೆಯೋ, ಆದರ ಹೊಮ್ಮುವಿಕೆಯೋ ಈ ಆಕೃತಿಗಳೆಲ್ಲವೂ ಎಲೈ ಪಾಪರಹಿತನೇ, ಈ ದೇಹಗಳಾಗಿ ತೋರುತ್ತಿರುವುದೆಲ್ಲವೂ ಸರ್ವ ಧರ್ಮಗಳನ್ನೂ ತನ್ನಲ್ಲಿ ಉಳ್ಳ ಆ ವಿರಂಚಿಯಿಂದಲೇ ಉದ್ಭವಿಸಿ ಈ ಸಂಸಾರದಲ್ಲಿ ವ್ಯವಹರಿಸುತ್ತಿರುವುವು.

(ಸರ್ವೇಧರ್ಮಾ ವಿಕಲ್ಪಾಃ । ಯಸ್ಮಾತ್ ಸರ್ವಧರ್ಮಾ ಸಂಕಲ್ಪಃ ತಸ್ಮಾತ್ । ಅತಏವ ನೈತದ್ದೇಹ ನಾಶ ಮಾತ್ರೇಣ ಇಷ್ಟಸಿದ್ಧಿಃ ಯತಃ ಪುನರ್ದೇಹ ಪರಂಪರೋತ್ಪಾದಕಃ ಸಂಕಲ್ಪೋಽಸ್ತ್ಯೇವ । ಕ ಉಪಾಯ ಇತಿಚೇತ್ ತಮಾಹ.)

೧೩. ಸಂಕಲ್ಪವಿರುವ ವರೆಗೂ ದೇಹಗಳು ಬರುವುದು ತಪ್ಪಿದ್ದೇ ಅಲ್ಲ. (ಬಂದ ದೇಹವು ಹೋಗುವುದೂ ತಪ್ಪಿದ್ದೇ ಅಲ್ಲ. ಅದರಿಂದ ಬಂದು ಬಂದು ಹೋಗುವ ಸಂಕಲ್ಪ ಮೂಲವಾದ ಈ ದೇಹಗಳ) ಸುಖ ದುಃಖಗಳೇನು ಎಂದು ವಿಚಾರಿಸುತ್ತ ಕುಳಿತಿರುವುದು ಬುದ್ಧಿವಂತರು ಮಾಡುವ ಕೆಲಸವಲ್ಲ.

೧೪. ದುಃಖದಿಂದ ಮುಖವನ್ನು ಬಾಡಿಸಿಕೊಂಡು, ಕಣ್ಣೀರನ್ನು ಸುರಿಸಿಕೊಳ್ಳುತ್ತ ಇರುವ ಮನುಷ್ಯನು ಪ್ರಸನ್ನ ಮುಖನೂ, ದುಃಖವರ್ಜಿತನೂ ಆಗಿರುವ ಚಿತ್ರದಲ್ಲಿರುವ ನರನಿಗಿಂತಲೂ ತುಚ್ಛನೇ ಎನ್ನುವರು.

೧೫. (ಏಕೆಂದರೆ, ಚಿತ್ರಗತನಾದ ಮನುಷ್ಯನ ದೇಹವಾದರೂ ಕೊಂಚ

ವಿನಾಶಿತೋ ಹಿ ಚಿತ್ರಸ್ಥೋ ದೇಹೋ ನಶ್ಯತಿ ನಾನ್ಯಥಾ ।
ಅವಶ್ಯನಾಶೋ ಮಾಂಸಾತ್ಮಾ ಸ್ವಯಂ ದೇಹೋ ವಿನಶ್ಯತಿ ॥ ೧೬ ॥

ಪಾಲಿತಃ ಸುಸ್ಥಿರಾಂ ಶೋಭಾಮಾದತ್ತೇ ಚಿತ್ರಮಾನವಃ ।
ದೇಹಸ್ತು ಪಾಲಿತೋಽಪ್ಯುಚ್ಚೈರ್ನಶ್ಯತ್ಯೇವ ನ ವರ್ಧತೇ ॥ ೧೭ ॥

ತೇನ ಶ್ರೇಷ್ಠಶ್ಚಿತ್ರದೇಹೋ ನಾಯಂ ಸಂಕಲ್ಪದೇಹಕಃ ।
ಯೇ ಗುಣಾಶ್ಚಿತ್ರದೇಹೇ ಹಿ ನ ತೇ ಸಂಕಲ್ಪದೇಹಕೇ ॥ ೧೮ ॥

ಕಾಲ ಇರುವುದು. ಅದರಷ್ಟು ಕಾಲವೂ ಬಾಳಲಾರದೆ, ಆಧಿ (ಮನೋರೋಗ) ವ್ಯಾಧಿ (ಶರೀರ ರೋಗ) ಇವುಗಳಿಂದ ಬಾಡಿ ಬಸವಳಿದು, ತಾನಾಗಿಯೇ ಕರಗಿ ನಾಶವಾಗಿ ಹೋಗುವ ಈ ದೇಹವುಳ್ಳವನು (ಆ ಚಿತ್ರಗತ ಮನುಷ್ಯನಿಗಿಂತಲೂ ಹೀನವೇ ಅಲ್ಲವೆ?)

೧೬. ಚಿತ್ರಗತವಾದ ದೇಹವನ್ನು ಇತರರು ಯಾರಾದರೂ ಪ್ರಯತ್ನಪಟ್ಟು ನಾಶಮಾಡಿದರೆ ಮಾತ್ರ ಹೋಗುವುದೇ ಹೊರತು ತಾನಾಗಿ ಹೋಗುವುದಿಲ್ಲ. ಈ ಮಾಂಸಮಯವಾದ ದೇಹವಾದರೋ ಯಾರ ಪ್ರಯತ್ನವೂ ಇಲ್ಲದೆಯೇ ತಾನಾಗಿಯೇ, ಅವಶ್ಯವಾಗಿ ನಾಶವಾಗಿಯೇ ಹೋಗುವುದು.

೧೭. ಕಾಪಾಡಿಕೊಂಡು ಇದ್ದರೆ ಎಷ್ಟೇ ದಿನವಾಗಲಿ, ಚಿತ್ರಗತವಾದ ದೇಹವು ಕಾಂತಿಯುಕ್ತವಾಗಿ ಚೆನ್ನಾಗಿಯೇ ಇರುವುದು. ಈ ಮಾಂಸ ದೇಹವನ್ನು ಎಷ್ಟೇ ಭಾರಿಯ ಪ್ರಯತ್ನಗಳಿಂದ ಪಾಲಿಸಿದರೂ ಇದು ನಾಶವಾಗುವುದೇ ಹೊರತು ಬಾಳುವುದಿಲ್ಲ.

೧೮. ಅದರಿಂದ, ಸಂಕಲ್ಪ ಮೂಲವಾಗಿ ಲಭಿಸುವ ಈ ಮಾಂಸಮಯ ದೇಹಕ್ಕಿಂತಲೂ ಚಿತ್ರಗತವಾದ ದೇಹವೇ ಶ್ರೇಷ್ಠವು. ಚಿತ್ರ ದೇಹದಲ್ಲಿರುವ ಗುಣಗಳು ಯಾವುವೂ ಈ ಸಂಕಲ್ಪ ದೇಹದಲ್ಲಿಲ್ಲ.

ಚಿತ್ರದೇಹಾದಪಿ ಜಡಾದ್ಯೋಯಂ ತುಚ್ಛತರಃ ಕಿಲ ।
ತಸ್ಮಿನ್ಮಾಂಸಮಯೇ ದೇಹೇ ಕೈವಾಸ್ಥಾ ಭಾವತೋಽನಘ ॥ ೧೯ ॥

ದೀರ್ಘಸಂಕಲ್ಪದೇಹೋಽಯಂ ತಸ್ಮಿನ್ನಾಸ್ಥಾ ಮಹಾಮತೇ ।
ಸ್ವಪ್ನಸಂಕಲ್ಪಜಾದ್ದೇಹಾದಪಿ ತುಚ್ಛತರೋ ಹ್ಯಯಂ ॥ ೨೦ ॥

ಅಲ್ಪಸಂಕಲ್ಪಜೋ ದೀರ್ಘೈಃ ಸುಖದುಃಖೈರ್ನ ಗೃಹ್ಯತೇ ।
ದೀರ್ಘ ಸಂಕಲ್ಪಜಶ್ಚಾಯಂ ದೀರ್ಘದುಃಖೇನ ದುಃಖಿತಃ ॥ ೨೧ ॥

ದೇಹೋ ಹಿ ಸಂಕಲ್ಪಮಯೋ ನಾಯಮಸ್ತಿ ನ ವಾಸ್ತಿ ನಃ ।
ಕಿಂ ವ್ಯರ್ಥಮೇತದರ್ಥಂಹಿ ಮೂಢೋಽಯಂ ಕ್ಲೇಶಭಾಜನಂ ॥ ೨೨ ॥

---

೧೯. ಈ ಮಾಂಸಮಯ ದೇಹವು ಹೀಗೆ ಜಡಾತ್ ಜಡತರವಾದ ಚಿತ್ರ ದೇಹಕ್ಕಿಂತಲೂ ಕಡೆಯಾಗಿರಲು, ತುಚ್ಛವಾಗಿರಲು, ವಿಚಾರಪರರಾದವರಿಗೆ ಈ ಮಾಂಸಮಯ ದೇಹದಲ್ಲಿ, ಎಲೈ ಪಾಪರಹಿತನೆ, ಏನುತಾನೇ ಆಸ್ಥೆಯಿದ್ದೀತು ?

೨೦. ಆದರಿಂದ, ಬಹುಕಾಲವಿರುವಂತೆ ಕಂಡುಬಂದರೂ, ಕೇವಲ ಸಂಕಲ್ಪಮಯವೇ ಆದ ಈ ದೇಹದಲ್ಲಿ, ಎಲೈ ಮಹಾಮತಿಯೇ, ಏನೂ ಆಸ್ಥೆಯನ್ನು ಮಾಡಬಾರದು. ಅಲ್ಲದೆ ಈ ಮಾಂಸಮಯವಾದ ದೇಹವು ಸ್ವಪ್ನ ದೇಹಕ್ಕಿಂತಲೂ ಕಡೆಯು.

೨೧. ಏಕೆಂದರೆ, ತುಚ್ಛವಾದ ಈ ದೇಹವು ಸ್ವಪ್ನ ದೇಹದಂತೆ ಯಥೇಚ್ಛವಾದ ಸುಖದುಃಖಗಳನ್ನು ಅನುಭವಿಸಲಾರದು.

ಅಷ್ಟೇ ಅಲ್ಲದೆ, ಇದು ಎಷ್ಟುಕಾಲ ಬದುಕಿರುವುದೋ ಅಷ್ಟು ಕಾಲವೂ ಇದನ್ನು ದುಃಖವು ಆಶ್ರಯಿಸಿಯೇ ಇರುವುದರಿಂದ, ಆ ದೀರ್ಘ ದುಃಖವನ್ನು ಇದು ಅನುಭವಿಸಿಯೇ ತೀರಬೇಕಾಗುವುದು.

೨೨. ಈ ದೇಹವು ನಿಜವಾಗಿಯೂ ಸಂಕಲ್ಪ ಮಯವು. ಆದರಿಂದ, ನಮಗೆ ಈ ದೇಹವುಂಟು ಎನ್ನುವುದೂ ಇಲ್ಲ, ಇಲ್ಲವೆನ್ನುವುದೂ ಇಲ್ಲ. ಆದರಿಂದ,

ಯಥಾ ಚಿತ್ರಮಯೇ ಪುಂಸಿ ಕ್ಷತೇ ಕ್ಷೀಣೇ ನ ತತ್ಕ್ಷತಿಃ ।
ತಥಾ ಸಂಕಲ್ಪ ಪುರುಷೇ ಕ್ಷತೇ ಕ್ಷೀಣೇ ನ ತತ್ಕ್ಷತಿಃ ॥ ೨೩ ॥

ಯಥಾ ಮನೋರಾಜ್ಯಮಯೇ ಕ್ಷತೇ ಕ್ಷೀಣೇ ನ ತತ್ಕ್ಷತಿಃ ।
ಯಥಾ ದ್ವಿತೀಯೇ ಶಶಿನಿ ಕ್ಷತೇ ಕ್ಷೀಣೇ ನ ತತ್ಕ್ಷತಿಃ ॥ ೨೪ ॥

ಯಥಾ ಸ್ವಪ್ನಸಮಾರಂಭೇ ಕ್ಷತೇ ಕ್ಷೀಣೇ ನ ತತ್ಕ್ಷತಿಃ ।
ಯಥಾ ನದ್ಯಾತಪತಲೇ ಕ್ಷತೇ ಕ್ಷೀಣೇ ನ ತತ್ಕ್ಷತಿಃ ॥ ೨೫ ॥

ಸಂಕಲ್ಪಮಾತ್ರ ರಚಿತೇ ಪ್ರಕೃತ್ಯೈವ ಚ ನಾಶಿನಿ ।
ತಥಾ ಶರೀರಯಂತ್ರೇಽಸ್ಮಿನ್ ಕ್ಷತೇ ಕ್ಷೀಣೇ ನ ತತ್ಕ್ಷತಿಃ ॥ ೨೬ ॥

ಈ ದೇಹಕ್ಕಾಗಿ ಕ್ಲೇಶಪಟ್ಟು ಅಳುವುದಕ್ಕಿಂತ ಇನ್ನೇನು ತಾನೇ ಮೂಢ ತನವುಂಟು ?

೨೩. ಚಿತ್ರಮಯನಾದ ಪುರುಷನಿಗೆ ಗಾಯವಾದರೂ, ಹಾನಿಯಾದರೂ, ಯಾವ ಹಾನಿಯೂ ಇಲ್ಲವೋ, ಹಾಗೆಯೇ ಸಂಕಲ್ಪ ಮಯನಾದ ಪುರುಷನಿಗೂ, ಗಾಯವಾದರೂ, ಹಾನಿಯಾದರೂ ಏನೂ ನಷ್ಟವಿಲ್ಲ.

೨೪. ಮನೋರಾಜ್ಯದಲ್ಲಿರುವ ಪುರುಷನೊಬ್ಬನಿಗೆ ಗಾಯವಾದರೂ, ಹಾನಿ ಯಾದರೂ ಹೇಗೆ ಏನೂ ನಷ್ಟವಿಲ್ಲವೋ ಹಾಗೆ, (ಕಣ್ಣಿನ ದೋಷದಿಂದ ಕಾಣುವ) ಎರಡನೆಯ ಚಂದ್ರನಿಗೆ ಗಾಯಕ್ಷಯಗಳಾದರೆ (ಮೊದಲನೆಯ ಚಂದ್ರನಿಗೆ) ಹೇಗೆ ಏನೂ ಹಾನಿಯಿಲ್ಲವೋ ಹಾಗೆ.

೨೫. ಕನಸಿನಲ್ಲಿ ಮಾಡುತ್ತಿರುವ ಕೆಲಸವು ಕೆಟ್ಟುಹೋದರೆ, ಹೇಗೆ ಏನೂ ನಷ್ಟವಿಲ್ಲವೋ ಹಾಗೆ, ಮರೀಚಿಕಾ ನದಿಯಲ್ಲಿ ನೀರು ಕೆಟ್ಟುಹೋದರೂ, ಬತ್ತಿ ಹೋದರೂ ಹೇಗೆ ಏನೂ ನಷ್ಟವಿಲ್ಲವೋ ಹಾಗೆ.

೨೬. ಹಾಗೆಯೇ, ಸಂಕಲ್ಪ ಮಾತ್ರದಿಂದ ಸಿದ್ಧವಾಗಿ, ನಾಶವಾಗುವುದೇ

ದೀರ್ಘ ಸ್ವಪ್ನಮಯೇ ಹ್ಯಸ್ಮಿನ್ ಚಿತ್ತ ಸಂಕಲ್ಪ ಕಲ್ಪಿತೇ ।
ಭೂಷಿತೇ ದೂಷಿತೇ ದೇಹೇ ನ ಹಿ ಕಿಂಚಿಚ್ಚಿತಃ ಕ್ಷತಂ || ೨೭ ||

ನ ಚಿದಂತ ಮುಪಾಯಾತಿ ನಾತ್ಮಾ ಚಲತಿ ರಾಘವ ।
ನ ಬ್ರಹ್ಮ ವಿಕೃತಿಂ ಯಾತಿ ಕಿಂವಾ ದೇಹಕ್ಷಯೇ ಕ್ಷತಂ || ೨೮ ||

ಭ್ರಮುಚ್ಚಕ್ರೋಪರಿಸ್ಥೋ ಹಿ ಪೂರ್ವಚಕ್ರೋಪಚಕ್ರವತ್ ।
ಯಥಾ ಪಶ್ಯತಿ ದಿಕ್ಚಕ್ರಂ ಭ್ರಮುದತ್ಯಂತಮೋಹಿತಃ || ೨೯ ||

ಅಕಸ್ಮಾದೇವ ರೂಢೇನ ಮಿಥ್ಯಾಜ್ಞಾನೇನ ವಲ್ಗತಾ ।
ತತ್ರಸ್ಥೇನ ತಥೈವೇದಂ ದೃಶ್ಯತೇ ದೇಹಚಕ್ರಕಂ || ೩೦ ||

ಪ್ರಕೃತಿಯಾಗುಳ್ಳ ಈ ಶರೀರ ಯಂತ್ರವು, ಮುರಿದರೂ, ಮುಗ್ಗಿದರೂ ಏನುತಾನೇ ನಷ್ಟವಾದೀತು ?

೨೭. ದೀರ್ಘವಾದ ಸ್ವಪ್ನದಂತಿರುವ, ಚಿತ್ತದ ವಿಕಾರವಾದ ಸಂಕಲ ದಿಂದಲೇ ಕಲ್ಪಿತವಾಗಿರುವ, ಈ ದೇಹಕ್ಕೆ ಭೂಷಣವಾದರೇನು? ದೂಷಣವಾದ ರೇನು ? ಇದರಿಂದ, ಆ ಚಿತ್ತಿಗೆ ಏನು ತಾನೇ ನಷ್ಟವಾದೀತು ?

೨೮. ರಾಘವ, ದೇಹಕ್ಷಯವಾಯಿತು ಎನ್ನು : ಚಿತ್ತು ಏನಾದರೂ ಸಾಯುವುದೇ ? ಆತ್ಮನೇನಾದರೂ ಸ್ಥಾನಭ್ರಷ್ಟನಾಗುವನೇ ? ಬ್ರಹ್ಮದಲ್ಲಿ ಏನಾದರೂ ವಿಕಾರವು ಸಂಭವಿಸುವುದೇ ? ಹೀಗಿರಲು ಏನುತಾನೇ ನಷ್ಟ ವಾದಂತಾಯಿತು ?

೨೯. ತಿರುಗುತ್ತಿರುವ ಚಕ್ರದ ಮೇಲೆ ಕುಳಿತಿರುವವನು, ಆ ತಿರುಗುವಿಕೆ ಯಿಂದ ಮೋಹಗೊಂಡು, ದಿಕ್ಚಕ್ರವೆಲ್ಲವೂ ಚಕ್ರಗಳಂತೆ ತಿರುಗುವುದನ್ನು ಹೇಗೆ ಕಾಣುವನೋ.

೩೦. ಕಾರಣವೇ ಇಲ್ಲದೆ ಅಕಸ್ಮಾತ್ತಾಗಿ ಒಂದು ನೆಲೆಯಾಗಿ ನಿಂತಿರುವ

ಭ್ರಮದಂ ಚ ಭ್ರಮದ್ರೂಪಂ ಪತದ್ರೂಪಂ ಪ್ರಪಾತಿತಂ ।
ಹತಂ ಚ ಹನ್ಯಮಾನಂ ಚ ದೃಶ್ಯತೇ ದೇಹಚಕ್ರಕಂ ।
ಧೀರತಾಮುಲಮಾಲಂಬ್ಯ ಘನಭ್ರಮಮಿಮಂ ತ್ಯಜೇತ್ ॥ ೩೧ ॥

ಸಂಕಲ್ಪೇನ ಕೃತೋ ದೇಹೋ ಮಿಥ್ಯಾಜ್ಞಾನೇನ ಸನ್ನಸನ್ ।
ಅಸತ್ಯೇನ ಕೃತಂ ಯಸ್ಮಾನ್ನ ತತ್ಸತ್ಯಂ ಕದಾಚನ ॥ ೩೨ ॥

ಅಸದಭ್ಯುತ್ಥಿತೋ ದೇಹೋ ರಜ್ಜ್ವಾಮಿವ ಭುಜಂಗಧೀಃ ।
ಅಸತ್ಯಾಮೇವ ಸತ್ಯಾಂಚ ಕರೋತ್ಯಪಿ ಜಗತ್ಕ್ರಿಯಾಂ ॥ ೩೩ ॥

ಮಿಥ್ಯಾ ಜ್ಞಾನದ ವಿಲಾಸದಿಂದ ಅದರಲ್ಲಿ ಸಿಕ್ಕಿಬಿದ್ದಿರುವವರಿಗೆ, ಈ ದೇಹ ಚಕ್ರವು ತಿರುಗುತ್ತಿರುವಂತೆ (ವ್ಯಾಪಾರ ಮಾಡುತ್ತಿರುವಂತೆ) ಭಾಸವಾಗುವುದು.

(ದೇಹಚಕ್ರಕಂ-ದೇಹ ಪರಂಪರಾ ಚಕ್ರ. -ತಾ. ಪ್ರ.)

೩೧. ದೇಹಚಕ್ರ ಪರಂಪರೆಯು ಭ್ರಾಂತಿಪ್ರದವಾಗಿಯೂ, ಸುತ್ತುತ್ತಿರುವಂತೆಯೂ, ಬೀಳುತ್ತಿರುವಂತೆಯೂ, ಬಿದ್ದಿರುವಂತೆಯೂ, ಹತವಾಗಿರುವಂತೆಯೂ. ಹನ್ಯಮಾನವಾಗಿರುವಂತೆಯೂ ಕಾಣುವುದು.

ಆದರಿಂದ, ಧೈರ್ಯವನ್ನು ಅವಲಂಬಿಸಿ, ಘನವಾದ ಹೆಪ್ಪು ಕಟ್ಟಿಕೊಂಡಿರುವ ಈ ಭ್ರಾಂತಿಯನ್ನು ಬಿಡಬೇಕು.

೩೨. ಈ ದೇಹವು ಹುಟ್ಟಿದುದು ಸಂಕಲ್ಪದಿಂದ ಇಲ್ಲದಿದ್ದರೂ (ಅಸತ್ಯವಾದರೂ) ಇರುವಂತೆ ತೋರುತ್ತಿರುವುದು ಮಿಥ್ಯಾಜ್ಞಾನದಿಂದ. ಅದರಿಂದ, ತಾನೇ ಇಲ್ಲದ ಮಿಥ್ಯಾಜ್ಞಾನದಿಂದ ಇರುವಂತೆ ತೋರುವ ಈ ದೇಹವು ಎಂದಿಗೂ ಸತ್ಯವಾಗಲಾರದು.

೩೩. ಹಗ್ಗವನ್ನು ನೋಡಿ ಹಾವು ಎಂದುಕೊಂಡಂತೆ ಆಗಿ ಅಸತ್ತಾಗಿಯೇ ಹುಟ್ಟಿರುವ ಈ ದೇಹವು ಅಸತ್ತೇ ಆಗಿದ್ದರೂ ಸತ್ಯದಂತೆ ಕಾಣುವ ಜಗತ್ತಿನ ಕಾರ್ಯಕಲಾಪಗಳನ್ನೆಲ್ಲ ಮಾಡುವುದು.

ಜಡೇನ ರಾಮ ಕ್ರಿಯತೇ ಯನ್ನ ತತ್ಕೃತಮುಚ್ಯತೇ ।
ಕುರ್ವನ್ನಪಿ ಸದಾ ದೇಹೋ ನ ಕರ್ತಾ ಕ್ವಚಿದೇವ ಹಿ ॥ ೩೪ ॥

ನಿರೀಹೋ ಹಿ ಜಡೋ ದೇಹೋ ನಾತ್ಮನೋಽಸ್ಯಾಭಿವಾಂಛಿತಂ ।
ಕರ್ತಾ ನ ಕಶ್ಚಿದೇವಾತೋ ದ್ರಷ್ಟಾ ಕೇವಲಮಸ್ಯ ಸಃ ॥ ೩೫ ॥

ಯಥಾ ದೀಪೋ ನಿವಾತಸ್ಥಃ ಸ್ವಾತ್ಮನ್ಯೇವಾವತಿಷ್ಠತೇ ।
ಸಾಕ್ಷಿವತ್ಸರ್ವಭಾವೇಷು ತಥಾ ತಿಷ್ಠೇಜ್ಜಗತ್ಸ್ಥಿತೌ ॥ ೩೬ ॥

ಯಥಾ ದಿವಸಕರ್ಮಾಣಿ ಭಾಸ್ಕರಃ ಖಸ್ಥ ಏವ ಸನ್ ।
ಕರೋತ್ಯೇವಮಿಮಾಂ ರಾಮ ಕುರು ಪಾರ್ಥಿವಸಂಸ್ಥಿತಿಂ ॥ ೩೭ ॥

---

೩೪. ಜಡವಾದುದು ಏನನ್ನು ಮಾಡಿದರೂ ಅದು ಆದಂತೆಯೇ ಅಲ್ಲ. ಅದರಿಂದ, ರಾಮ, ದೇಹವು ಕಾರ್ಯಕಾರಿಯಾಗಿದ್ದರೂ ಅದನ್ನು ಯಾರೂ ಕರ್ತಾ ಎನ್ನುವುದಿಲ್ಲ.

೩೫. ದೇಹವು ಜಡವು: ಯಾವುದೊಂದೂ ಉದ್ದೇಶವೂ ಇದಕ್ಕಿಲ್ಲ. ಇದು ಕಾರ್ಯ ಮಾಡುವುದರಿಂದ ಆತ್ಮನಿಗೂ ಏನೂ ಲಾಭವಿಲ್ಲ. ಅದರಿಂದ ದೇಹ ಕಾರ್ಯಗಳಿಗೆ ಆತ್ಮನು ಕರ್ತನಲ್ಲ. ಆತ್ಮನು ಅದೇ ಕಾರಣದಿಂದ ಕೇವಲ ಸಾಕ್ಷಿಯಾಗಿರುವನು.

೩೬. ಅದರಿಂದ ಗಾಳಿಯಿಲ್ಲದ ಕಡೆಯಲ್ಲಿ ಇರುವ ದೀಪವು ತನ್ನ ಪಾಡಿಗೆ ತಾನು ನೆಟ್ಟಗಿರುವಂತೆ, ಜಗತ್ತಿನ ವ್ಯಾಪಾರಗಳಲ್ಲಿ ಎಲ್ಲಾ ಭಾವಗಳಲ್ಲಿಯೂ ಸಾಕ್ಷಿಯಂತೆ ಇರಬೇಕು.

೩೭. ಸೂರ್ಯನು ಆಕಾಶದಲ್ಲಿಯೇ ಇದ್ದುಕೊಂಡು ದಿವಸ ಕರ್ಮಗಳನ್ನೆಲ್ಲ ಮಾಡುವಂತೆ, ನೀನೂ ಈ ರಾಜ್ಯದಾಡಳಿತವನ್ನೆಲ್ಲ ಸ್ವಸ್ಥನಾಗಿಯೇ ಇದ್ದುಕೊಂಡು ಮಾಡು.

ಅಸ್ಮಿನ್ನಸನ್ಮಯೇ ದೇಹಗೃಹೇ ಶೂನ್ಯೇ ಸಮುತ್ಥಿತೇ ।
ಸತ್ತಾಮುಪಗತೇ ಮಿಥ್ಯಾಬಾಲ ಕಲ್ಪಿತಯಕ್ಷವತ್ ॥ ೩೮ ॥

ಕುತೋಪ್ಯಾಗತ್ಯ ನಿಃಸಾರಃ ಸರ್ವಸಜ್ಜನವರ್ಜಿತಃ ।
ಅಹಂಕಾರಃ ಕುವೇತಾಲಃ ಪ್ರವಿಷ್ಟಶ್ಚಿತ್ತನಾಮಕಃ ॥ ೩೯ ॥

ಅಸ್ಯ ಮಾ ಭೃತ್ಯತಾಂ ಗಚ್ಛ ತ್ವಮಹಂಕಾರದುರ್ಮತೇಃ ।
ಅಸ್ಯ ಭೃತ್ಯತಯಾ ರಾಮ ನಿರಯಃ ಪ್ರಾಪ್ಯತೇ ಫಲಂ ॥ ೪೦ ॥

ಸ್ವಸಂಕಲ್ಪ ವಿಲಾಸೇನ ದೇಹಗೇಹೇ ದುರಾಕೃತಿಃ ।
ಉನ್ಮತ್ತ ಚಿತ್ತವೇತಾಲಃ ಪರಿವಲ್ಗತಿ ಲೀಲಯಾ ॥ ೪೧ ॥

ಶೂನ್ಯ ದೇಹಗೃಹಂ ಪ್ರಾಪ್ಯ ಚಿತ್ತಯಕ್ಷೇಣ ತತ್ಕೃತಂ ।
ಭೀತಾ ಯೇ ನ ಮಹಾಂತೋಪಿ ಸಮಾಧಿನಿಯತಾಃ ಸ್ಥಿತಾಃ ॥ ೪೨ ॥

---

೩೮. ಮಿಥ್ಯಾ ಬಾಲಕನು ಕಲ್ಪಿಸಿಕೊಂಡ ಯಕ್ಷನಂತೆ ಈ ಅಸನ್ಮಯವಾದ ದೇಹವೆಂಬ ಪಾಳು ಮನೆಯೊಂದು ಸದ್ಭಾವದಿಂದ ಕೂಡಿಕೊಂಡು ಎದ್ದು ಕಾಣುತ್ತಿರುವುದು.

೩೯. ನಿಸ್ಸಾರವಾದ ಕೆಟ್ಟ ಬೇತಾಳವೊಂದು ಎಲ್ಲಿಂದಲೋ ಬಂದು ಅದನ್ನು ಹೊಕ್ಕಿಕೊಂಡಿರುವುದು. ಚಿತ್ತವೆಂದು ಆ ಬೇತಾಳನ ಹೆಸರು. ಅಹಂಕಾರವವರ ರೂಪವು.

೪೦. ನೀನು ಆ ಅಹಂಕಾರವೆಂಬ ದುರ್ಬುದ್ಧಿಗೆ ವಶನಾದೀಯೆ! ಅದಕ್ಕೆ ವಶನಾಗಿ, ಅದು ಹೇಳಿದಂತೆ ನೀನು ಕೇಳುವುದಾದರೆ, ನಿಜವಾಗಿಯೂ ನರಕದ ಪಾಲಾಗುವೆ.

೪೧. ತನಗೆ ತೋರಿದಂತೆ ಮಾಡುವ ಸಂಕಲ್ಪಗಳೆಂಬ ವಿಲಾಸಗಳಿಂದ, ಆ ದುರಾಕೃತಿಯು (ವಿಕಾರ ರೂಪಿಯು) ದೇಹಗೇಹದಲ್ಲಿ, ಆ ಚಿತ್ತವೆಂಬ ಹುಚ್ಚು ಹಿಡಿದ ಬೇತಾಳನು, ಸ್ವಚ್ಛಂದವಾಗಿ ಕುಣಿದು ಕುಪ್ಪಳಿಸುತ್ತಿರುವನು.

೪೨. ಶೂನ್ಯವಾದ ಈ ದೇಹವೆಂಬ ಮನೆಗೆ ಬಂದವರು, ಚಿತ್ತವೆಂಬ ಯಕ್ಷನು ಅಲ್ಲಿ ಮಾಡುತ್ತಿರುವ ಯಕ್ಷಿಣಿಗಳನ್ನು ಕಂಡು ಹೆದರಿಕೆ ಪಡದ

ಚಿತ್ತವೇತಾಲಮುದ್ವಾಸ್ಯ ಸ್ವಶರೀರಕ ಮಂದಿರಾತ್ ।
ಸಂಸಾರಶೂನ್ಯನಗರೇ ನ ಬಿಭೇತಿ ಕದಾಚನ ॥ ೪೩ ॥

ಚಿತ್ತಭೂತಾಭಿಭೂತೇಽಸ್ಮಿನ್ಯೇ ಶರೀರಗೃಹೇ ರತಾಃ ।
ಚಿತ್ರಮದ್ಯಾಪಿ ತೇ ಕಸ್ಮಾದ್ಧಟತಾ ಆತ್ಮವತ್ಸ್ಥಿತಾಃ ॥ ೪೪ ॥

ಗ್ರಸ್ತೇ ಚಿತ್ತಪಿಶಾಚೇನ ದೇಹಸದ್ಮನಿ ಯೇ ಮೃತಾಃ ।
ಪಿಶಾಚಸ್ಯೇವ ಯಾ ಬುದ್ಧಿರ್ನಾಪಿಶಾಚಸ್ಯ ರಾಘವ ॥ ೪೫ ॥

ಅಹಂಕಾರ ಬೃಹದ್ಯಕ್ಷಗೃಹೇ ದಗ್ಧಶರೀರಕೇ ।
ವಿರಹನ್ನಾಸ್ಥಯಾ ಸಾಧೋ ನತು ವೈ ತತ್ಕಿಲ ಸ್ಥಿರಂ ॥ ೪೬ ॥

ಮಹಾತ್ಮರು ಯಾರು ಉಂಟೋ ಅವರೇ ಸಮಾಧಿ ಸಂಪನ್ನರು: ಬ್ರಹ್ಮದಲ್ಲಿ ಸ್ಥಿತಿಯನ್ನು ಪಡೆದವರು.

೪೩. ತನ್ನ ಶರೀರವೆಂಬ ಮಂದಿರದಿಂದ ಚಿತ್ತ ವೇತಾಲನನ್ನು ಹೊರ ನೂಕಿದವನು, ಸಂಸಾರವೆಂಬ ಈ ಶೂನ್ಯ ನಗರದಲ್ಲಿ ಎಂದಿಗೂ ಹೆದರುವುದಿಲ್ಲ.

೪೪. ಚಿತ್ತವೆಂಬ ಭೂತವು ಸೇರಿಕೊಂಡಿರುವ ಈ ದೇಹ ಮಂದಿರದಲ್ಲಿ ಅಭಿಮಾನವಿಟ್ಟುಕೊಂಡಿರುವವರು, ಅದೇಕೆ ಇದರಲ್ಲಿ ಆತ್ಮನೆಂದು ಅಭಿಮಾನವಿಟ್ಟು ಕೊಂಡಿರುವರೋ, ಇನ್ನೂ ಏಕೆ ಆ ಅಭಿಮಾನವನ್ನು ಬಿಡಲು ಯತ್ನಿಸಿಲ್ಲವೋ, ಅದೇ ಒಂದು ಚಿತ್ರವಾಗಿರುವುದು.

೪೫. ಚಿತ್ತವೆಂಬ ಪಿಶಾಚವು ಹೊಕ್ಕಿರುವ ಈ ದೇಹ ಮಂದಿರದಲ್ಲಿ ಸತ್ತವರು, ಯಾರೋ ಅವರಿಗೆ ಪಿಶಾಚದ ಬುದ್ಧಿಯೇ ಬರುವುದೇ ಹೊರತು, ರಾಘವ, ಅಪಿಶಾಚದ ಬುದ್ಧಿಯೆಂತು ಬಂದೀತು ?

೪೬. ಅಹಂಕಾರವೆಂಬ ಭಾರಿಯ ಯಕ್ಷನು ಸೇರಿಕೊಂಡು ತನ್ನದೇ ಮಾಡಿಕೊಂಡು ಸುಟ್ಟು ಹಾಳು ಮಾಡಿರುವ ಈ ದೇಹವೆಂಬ ಮನೆಯಲ್ಲಿ,

ಅಹಂಕಾರಾನುಚರತಾಂ ತ್ಯಕ್ತ್ವಾ ವಿತತಯಾ ಧಿಯಾ ।
ಅಹಂಕಾರಾಸ್ಮೃತಿಂ ಪ್ರಾಪ್ಯ ಸ್ವಾತ್ಮೈವಾಶ್ವವಲಂಬ್ಯತಾಂ ॥ ೪೭ ॥

ಅಹಂಕಾರ ಪಿಶಾಚೇನ ಗ್ರಸ್ತಾ ಯೇ ನಿರಯೈಷಿಣಃ ।
ತೇಷಾಂ ಮೋಹಮದಾಂಧಾನಾಂ ನ ಮಿತ್ರಾಣಿ ನ ಬಾಂಧವಾಃ ॥ ೪೮ ॥

ಅಹಂಕಾರೋಪಹತಯಾ ಬುದ್ಧ್ಯಾ ಯಾ ಕ್ರಿಯತೇ ಕ್ರಿಯಾ ।
ವಿಷವಲ್ಲ್ಯಾ ಇವ ಫಲಂ ತಸ್ಯಾಃ ಸ್ಯಾನ್ಮರಣಾತ್ಮಕಂ ॥ ೪೯ ॥

ವಿವೇಕ ಧೈರ್ಯಹೀನೇನ ಸ್ವಾಹಂಕಾರ ಮಹೋತ್ಸವಃ ।
ಮೂರ್ಖೇಣಾಲಂಬಿತೋ ಯೇನ ನಷ್ಟ ಮೇವಾಶು ವಿದ್ಧಿ ತಂ ॥ ೫೦ ॥

ಯಾವನು ಅಕ್ಕರೆಯಿಂದ ವಿಹರಿಸುವನೋ ಅವನೂ, ಎಲೆ ಸಾಧುವೆ, ಯಕ್ಷನೇ ಆಗುವುದರಲ್ಲೇನು ವಿಚಿತ್ರ ?

೪೭. (ಆದರಿಂದ) ಅಹಂಕಾರದ ಜೆನ್ನು ಹಿಡಿದು ಹೋಗುವುದನ್ನು ಬಿಟ್ಟು, ಬುದ್ಧಿಯನ್ನು ಚೆನ್ನಾಗಿ ಬೆಳೆಸಿಕೊಂಡು, ಅಹಂಕಾರವನ್ನೇ ಮರೆತು, ಸ್ವಸ್ವಭಾವ ರೂಪವಾದ ಆತ್ಮನನ್ನು ಆದಷ್ಟು ಬೇಗ ಆಶ್ರಯಿಸು.

೪೮. ಅಹಂಕಾರವೆಂಬ ಪಿಶಾಚ ಹಿಡಿತಕ್ಕೆ ಸಿಕ್ಕಿ ನರಕದಲ್ಲಿ ಬಿದ್ದು ನಾಶವಾಗಿ ಹೋಗುವ, ಮೋಹ ಮದಗಳಿಂದ ಅಂಧರಾಗಿರುವವರಿಗೆ ಮಿತ್ರರೂ ಇಲ್ಲ : ಬಾಂಧವರೂ ಇಲ್ಲ.

೪೯. ಅಹಂಕಾರದ ಹೊಡೆತಕ್ಕೆ ಸಿಕ್ಕಿರುವ ಬುದ್ಧಿಯಿಂದ ಯಾವ ಕೆಲಸವನ್ನೇ ಮಾಡಲಿ, ಅದು ವಿಷವಲ್ಲರಿಯ ಫಲದಂತೆ ಮರಣವನ್ನೇ ತರುವುದು.

೫೦. ವಿವೇಕವೂ ಧೈರ್ಯವೂ ಇಲ್ಲದೆ, ಮೂರ್ಖನು ತನ್ನ ಅಹಂಕಾರ ವನ್ನು ಮೆರೆಯುವನಲ್ಲವೆ? ಅಂಥವನು ಬೇಗ ಹಾಳಾಗುವನು ಎಂದು ತಿಳಿ.

ಅಹಂಕಾರ ಪಿಶಾಚೇನ ವರಾಕಾ ಯೇ ವಶೀಕೃತಾಃ ।
ತ ಏತೇ ನರಕಾಗ್ನೀನಾಂ ರಾಘವೇಂಧನತಾಂ ಗತಾಃ ॥ ೫೧ ॥

ಅಹಂಕಾರೋರಗೋ ಯಸ್ಯ ಪರಿಸ್ಫೂರ್ಜತಿ ಕೋಟರೇ ।
ಸ್ವದೇಹಪಾದಪೋಧೀರ್ರೈರಚಿರೇಣ ನಿಪಾತ್ಯತೇ ॥ ೫೨ ॥

ಅಹಂಕಾರ ಪಿಶಾಚೋಽಸ್ಮಿನ್ ದೇಹೇ ತಿಷ್ಠತು ಯಾತು ವಾ ।
ತ್ವಮೇನಮಾಲೋಕಯ ಮಾ ಮನಸಾ ಮಹತಾಂ ವರ ॥ ೫೩ ॥

ಅವಧೂತೋ ಹ್ಯವಜ್ಞಾತ ಶ್ಚೈತಸ್ಯೇವ ತಿರಸ್ಕೃತಃ ।
ಅಹಂಕಾರ ಪಿಶಾಚಸ್ತೇ ನೇಹ ಕಿಂಚಿತ್ಕರಿಷ್ಯತಿ ॥ ೫೪ ॥

ದೇಹಾಲಯೇ ಸ್ಫುರತ್ಯಸ್ಮಿನ್ ರಾಮ ಚಿತ್ತಪಿಶಾಚಕೇ ।
ಅಸ್ಯಾನಂತವಿಲಾಸಸ್ಯ ಕಿಮಾಗತಮಾತ್ಮನಃ ॥ ೫೫ ॥

---

೫೧. ಅಹಂಕಾರ ಪಿಶಾಚದ ವಶವಾಗಿಹೋಗುವ ಪಾಮರರು ಯಾರು ಯಾರು ಉಂಟೋ ಅವರೆಲ್ಲರೂ, ರಾಘವ, ನರಕಾಗ್ನಿಗಳಿಗೆ ಸೌದೆಯೇ ಆಗುವರು.

೫೨. ದೇಹವೆಂಬ ಯಾವ ಮರದ ಪೊಟ್ಟರೆಯಲ್ಲಿ ಅಹಂಕಾರವೆಂಬ ಮಹೋರಗವು ನಲಿಯುತ್ತಿರುವುದೋ ಆ ಮರವನ್ನು ಇಂದ್ರಿಯಗಳು ಬೇಗನೆ ಕೆಡಹಿಬಿಡುವುದು.

(ಅಧೀರೈಃ ಎಂಬಲ್ಲಿ ಅ-ಧೀ-ರ = ಬುದ್ಧಿಯ ಕಡೆಗೆ ಬಿಡದವರು ಇಂದ್ರಿಯಗಳು ಎಂದು ಅರ್ಥಮಾಡಲಾಗಿದೆ.)

೫೩. ಅಹಂಕಾರವೆಂಬ ಪಿಶಾಚವು ಈ ದೇಹದಲ್ಲಿ ಇರಲಿ, ಅಥವಾ ಹೋಗಲಿ ನೀನು ಮಾತ್ರ, ಎಲೈ ಮಹಾತ್ಮನೆ, ನಿನ್ನ ಮನಸ್ಸಿನಿಂದ ಅತ್ತಕಡೆ ನೋಡಲೇಬೇಡ,

೫೪ ಹೀಗೆ ಉಪೇಕ್ಷೆಮಾಡಿ, ಗೌರವಿಸದೆ, ಮನಸ್ಸಿನಲ್ಲಿಯೇ ತಿರಸ್ಕಾರಮಾಡಿದುದೇ ಆದರೆ, ಆ ಅಹಂಕಾರ ಪಿಶಾಚವು ನಿನಗೆ ಏನೂ ಮಾಡಲಾರದೆ ಹೋಗುವುದು.

೫೫. ಈ ದೇಹಾಲಯದಲ್ಲಿ ಈ ಚಿತ್ತ ಪಿಶಾಚಿಕವು ಕುಣಿಯುತ್ತಿದ್ದರೂ ಕೂಡ, ಇದರ ಅನಂತ ವಿಲಾಸಗಳಿಂದ ನಿನಗೇನು ಆದೀತು ?

ಚಿತ್ತಯಕ್ಷಾಭಿಭೂತಾನಾಂ ಯಾಃ ಪುಂಸಾಂ ವಿತತಾಪದಃ ।
ಶಕ್ಯಂತೇ ಪರಿಸಂಖ್ಯಾತುಂ ನ ತಾ ವರ್ಷಶತೈರಪಿ ॥ ೩೬ ॥

ಹಾಹಾ ಮೃತೋಽಸ್ಮಿ ದಗ್ಧೋಽಸ್ಮೀತ್ಯೇತಾ ಯೈ ದುಃಖವೃತ್ತಯಃ ।
ಅಹಂಕಾರ ಪಿಶಾಚಸ್ಯ ಶಕ್ತಯೋಽನ್ಯಸ್ಯ ನಾನಘ ॥ ೩೭ ॥

ಸರ್ವಗೋಽಪಿ ಯಥಾಕಾಶಃ ಸಂಬಂಧೋ ನೇಹ ಕೇನಚಿತ್ ।
ಸರ್ವಗೋಽಪಿ ತಥೈವಾತ್ಮಾ ನಾಹಂಕಾರೇಣ ಸಂಗತಃ ॥ ೩೮ ॥

ಯತ್ಕರೋತಿ ಯದಾದತ್ತೆ ದೇಹಯಂತ್ರಮಿದಂ ಚಲಂ ।
ವಾತರಜ್ಜುಯುತಂ ರಾಮ ತದಹಂಕಾರಚೇಷ್ಟಿತಂ ॥ ೩೯ ॥

---

೩೬. ಚಿತ್ತವೆಂಬ ಈ ಯಕ್ಷನ ಏಟಿಗೆ ಸಿಕ್ಕಿದವರಿಗೆ ಎಷ್ಟೆಷ್ಟು ದೊಡ್ಡದೊಡ್ಡ ಆಪತ್ತುಗಳು ಬರುವುವೋ ಅವುಗಳನ್ನು ಲೆಕ್ಕಮಾಡಲು ನೂರು ವರ್ಷಗಳಾದರೂ ಸಾಲದು.

೩೭. ಅಯ್ಯೋ ! ಮೃತನಾದೆನು ! ಅಯ್ಯೋ ! ಸುಟ್ಟು ಹೋದೆನು ! ಎಂದು ಮುಂತಾಗಿ ಹೊರಡುವ ದುಃಖ ರೋದನಗಳು ಯಾವವುಂಟೋ ಅವೆಲ್ಲವೂ ಅಹಂಕಾರ ಪಿಶಾಚದ ಶಕ್ತಿಗಳೇ. ಬೇರೆ ಯಾವುದರದೂ ಅಲ್ಲ.

೩೮. ಆಕಾಶವು ಸರ್ವತ್ರ ಇದ್ದರೂ ಹೇಗೆ ಯಾವುದರೊಡನೆಯೂ ಸಂಬಂಧವನ್ನು ಪಡೆಯುವುದಿಲ್ಲವೋ ಹಾಗೆಯೇ ಆತ್ಮನೂ ಎಲ್ಲದರಲ್ಲಿಯೂ ಇರುವವನಾದರೂ ಅಹಂಕಾರದೊಡನೆ ಸಂಗತನಾಗುವುದಿಲ್ಲ.

(ಅಹಮಿತ್ಯಾತ್ಮೈವ ಅನುಭೂಯತ ಇತಿನೈಯಾಯಿಕಾದೀನಾಂಭ್ರಾಂತಿಂ ವಾರಯತಿ. –ತಾ. ಪ್ರ.)

೩೯. ಪ್ರಾಣವಾಯುಗಳೆಂಬ ಹಗ್ಗಗಳಿಂದ ಕೂಡಿರುವ ಚಂಚಲವಾದ ಈ ದೇಹ ಯಂತ್ರವು ಏನೇನು ಮಾಡುವುದೋ ಏನೇನುಸಂಗ್ರಹಿಸುವುದೋ ಅದೆಲ್ಲವೂ ಅಹಂಕಾರದ ಚೇಷ್ಟೆಗಳೇ !

ವೃಕ್ಷೋತ್ಪತ್ತೌ ಯಥಾ ಹೇತುರಕರ್ತ್ರಪಿ ಕಿಲಾಂಬರಂ ।
ಆತ್ಮಸಂಸ್ಥಸ್ತಥೇಹಾತ್ಮಾ ಚಿತ್ತಚೇಷ್ಟಾಸು ಕಾರಣಂ ॥ ೬೦ ॥

ಆತ್ಮಸನ್ನಿಧಿಮಾತ್ರೇಣ ಸ್ಫುರತ್ಯಾತ್ತವಪುರ್ಮನಃ ।
ದೀಪಸಂನಿಧಿಮಾತ್ರೇಣ ಕುಡ್ಯರೂಪ ಮಿವಾಮಲಂ ॥ ೬೧ ॥

ಅಪಿ ವಿಶ್ಲಿಷ್ಟಯೋ ರಾಮ ನಿತ್ಯಮೇವಾತ್ಮಚಿತ್ತಯೋಃ ।
ದ್ಯಾವಾಪೃಥಿವ್ಯೋರಿವ ಕಃ ಸಂಬಂಧಃ ಪ್ರಕಟಾಂಧಯೋಃ ॥ ೬೨ ॥

ಚಪಲಸ್ಪಂದನೇರಾಭಿರಾತ್ಮಶಕ್ತಿಭಿರಾವೃತಂ ।
ಚಿತ್ತಮಾತ್ಮೇತಿ ಮೌರ್ಖ್ಯೇಣ ದೃಶ್ಯತೇ ರಘುನಂದನ ॥ ೬೩ ॥

---

೬೦. ವೃಕ್ಷವು ಹುಟ್ಟಿ ಬೆಳೆಯುವುದಕ್ಕೆ ಕರ್ತೃವಲ್ಲದಿದ್ದರೂ ಆಕಾಶವು ಹೇತು (ಗಳಲ್ಲಿ ಒಂದು) ಆಗಿರುವಂತೆ, ಆತ್ಮನು ತನ್ನಪಾಡಿಗೆ ತಾನು ಇದ್ದರೂ ಚಿತ್ತವ್ಯಾಪಾರಗಳಿಗೆ ಕಾರಣನಾಗಿರುವನು.

(ಅಹಂಕಾರವೇ ಎಲ್ಲಾ ವ್ಯಾಪಾರಗಳಿಗೂ ನಿಮಿತ್ತವು. ಆತ್ಮನಲ್ಲ ಎಂದರೆ-ಶ್ರುತಿಗಳಲ್ಲಿ "ಕೇನೇಷಿತಂ ಪತತಿ ಪ್ರೇಷಿತಂ ಮನಃ"- ಮೊದಲಾದ ಶ್ರುತಿಗೆ ವಿರೋಧವಲ್ಲವೇ ಎನ್ನುವುದಕ್ಕೆ ಉತ್ತರವಾಗಿ ಈ ಮಾತು ಹೇಳಿದೆ– ತಾ.ಪ್ರ.)

೬೧. ಆತ್ಮನ ಸನ್ನಿಧಿ ಇದ್ದರೆ ಸಾಕು. ಅದಷ್ಟರಿಂದಲೇ ಮನಸ್ಸು ಸ್ಥಿತಿಯನ್ನು ಹೊಂದಿ ವ್ಯಾಪಾರಮಾಡುವುದು. ದೀಪದ ಸನ್ನಿಧಿ ಮಾತ್ರದಿಂದಲೇ ಬೆಳಕುಬಿದ್ದು ಗೋಡೆ ಮೊದಲಾದವುಗಳು ಕಾಣುವವಲ್ಲವೆ?

೬೨. ಅಲ್ಲದೆ, ರಾಮ, ಆತ್ಮಚಿತ್ತಗಳೆರಡೂ ಒಂದಕ್ಕೊಂದು ಸಂಬಂಧಪಟ್ಟವಲ್ಲ. ಕಣ್ಣಿದ್ದವನಿಗೂ ಕುರುಡನಿಗೂ ದ್ಯಾವಾಪೃಥಿವಿಗಳಿಗೂ ಹೇಗೆ ಸಂಬಂಧವಿಲ್ಲವೋ ಹಾಗೆ ಆತ್ಮಚಿತ್ತಗಳಿಗೆ ಪರಸ್ಪರ ಸಂಬಂಧವಿಲ್ಲ.

(ಪ್ರಕಟಾಂಧಯೋಃ = ಚಿಜ್ಜಡಯೋಃ -ತಾ.ಪ್ರ.)

೬೩. ರಾಮ, ಚಂಚಲವಾದ ವ್ಯಾಪಾರಗಳನ್ನು ಪ್ರೇರಿಸುವ ಪ್ರಾಣಶಕ್ತಿಗಳಿಂದ ಕೂಡಿರುವ ಚಿತ್ತವನ್ನು ಆತ್ಮವೆಂದು, ತಿಳಿಯದವರು, ಮೂರ್ಖತನದಿಂದ ತಿಳಿದುಕೊಳ್ಳುವರು.

ಆತ್ಮಾ ಪ್ರಕಾಶರೂಪೋ ಹಿ ನಿತ್ಯಃ ಸರ್ವಗತೋ ವಿಭುಃ ।
ಚಿತ್ತಂ ಶಠಮಹಂಕಾರಂ ವಿದ್ಧಿ ಹಾರ್ದಂ ಬೃಹತ್ತಮಃ ॥ ೬೪ ॥

ಆತ್ಮಾಸಿ ವಸ್ತುತಸ್ತ್ವಂ ಹಿ ಸರ್ವಜ್ಞೋ ನ ಮನೋ ಭೃಶಂ ।
ದೂರೇ ಕುರು ಮನೋಮೋಹಂ ಕಿಮುತೇನಾಭಿಸಂಗತಃ ॥ ೬೫ ॥

ಪಿಶಾಚೋಽಪಿ ಮನೋ ರಾಮ ಶೂನ್ಯದೇಹಗೃಹೇ ಸ್ಥಿತಃ ।
ಭಾವಯತ್ಯೇಷ ದುಷ್ಟಾತ್ಮಾ ಮೌನಮುತ್ತಮ ಸಂಸ್ಪೃಶನ್ ॥ ೬೬ ॥

ಭವಪ್ರದಮಕಲ್ಯಾಣಂ ಧೈರ್ಯ ಸರ್ವಸ್ವಹಾರಿಣಂ ।
ಮನಃ ಪಿಶಾಚಮುತ್ಸೃಜ್ಯ ಯೋಽಸಿ ಸ ತ್ವಂ ಸ್ಥಿರೋಭವ ॥ ೬೭ ॥

(ಚಪಲಸ್ಪಂದನಾನ್ ಈರಯಂತಿ ಪ್ರೇರಯಂತೀತಿ ಚಪಲಸ್ಪಂದನೇರಾಃ । ತಥಾವಿಧಾಭಿಃ ಆತ್ಮನಃ ಪ್ರಾಣಸ್ಯ ಶಕ್ತಿಭಿರಾವೃತಂ ವಶೀಕೃತಂ ಚಿತ್ತಂ ತಾದಾತ್ಮ್ಯಾಧ್ಯಾಸಲಕ್ಷಣೇನ ಮೌರ್ಖ್ಯೇಣ ಅಜ್ಞಾನೇನ ದೃಶ್ಯತೇ ನ ವಸ್ತುವೃತ್ತೇನ ಇತ್ಯರ್ಥಃ- ತಾ. ಪ್ರ.)

೬೪. ಆತ್ಮನು ಪ್ರಕಾಶರೂಪನು. ನಿತ್ಯನು ಸರ್ವಗತನು. ವಿಭುವು. ಚಿತ್ತವು ಶಠ (ವಂಚಕ)ವು. ಅಹಂಕಾರವು ಹೃದಯದಲ್ಲಿ ತುಂಬಿರುವ ಕತ್ತಲೆಯು.

೬೫. ನೀನು ವಾಸ್ತವ್ಯವಾಗಿ ಆತ್ಮನು. ಅಷ್ಟೇ ಅಲ್ಲ, ಸರ್ವಜ್ಞನು ಮನಸ್ಸು ಎಂದೆಂದಿಗೂ ಅಲ್ಲ. ಆದರಿಂದ ಮನಸ್ಸು ನಾನು ಎಂಬ ಮೋಹವನ್ನು ಬಿಡು. ಇದನ್ನು ಕಟ್ಟಿಕೊಂಡು ನಿನಗೇನಾಗಬೇಕು ?

೬೬. ಮನಸ್ಸೆಂಬ ಪಿಶಾಚವು, ರಾಮ, ಈ ದೇಹವೆಂಬ ಶೂನ್ಯಗೃಹದಲ್ಲಿ ಇರುವುದು. ಈ ದುಷ್ಟಾತ್ಮನು ತನಗೂ ಆತ್ಮನಿಗೂ ಸಂಬಂಧವಿಲ್ಲದಿದ್ದರೂ ಆತ್ಮನ ಮೌನವನ್ನೇ ಅಂಗೀಕಾರವನ್ನಾಗಿ ಗಣಿಸಿ, ತಾನು ಉತ್ತಮರ (ಆತ್ಮನ) ಸಂಬಂಧವುಳ್ಳವನು ಎಂದು ಹೆಮ್ಮೆ ಪಟ್ಟುಕೊಳ್ಳುವನು.

(ಹೇ ಉತ್ತಮ, ಮನಃ ಪಿಶಾಚಃ ಆತ್ಮಾನಮಸಂಸ್ಪೃಶನ್ನಪಿ ಮೌನಂ ತೂಷ್ಣೀಂ ಏವ ಸ್ವಸಂಸ್ಪೃಷ್ಟಂ ಭಾವಯತೀತಿ- ಅನ್ವಯಃ-ತಾ.ಪ್ರ)

೬೭. ಜನ್ಮ ಮರಣ ರೂಪವಾದ ಸಂಸಾರವನ್ನು ಗಂಟುಕಟ್ಟುವ, ಧೈರ್ಯ

ಚಿತ್ತಯಕ್ಷ ದೃಢಾಕ್ರಾಂತಂ ನ ಶಾಸ್ತ್ರಾಣಿ ನ ಬಾಂಧವಾಃ ।
ಶಕ್ನುವಂತಿ ಪರಿತ್ರಾತುಂ ಗುರವೋ ನ ಚ ಮಾನವಂ ॥ ೬೮ ॥

ಸಂಶಾಂತಚಿತ್ತವೇತಾಲಂ ಗುರುಶಾಸ್ತ್ರಾರ್ಥಬಾಂಧವಾಃ ।
ಶಕ್ನುವಂತಿ ಸಮುದ್ಧರ್ತುಂ ಸ್ವಲ್ಪ ಪಂಕಾನ್ಮೃಗಂ ಯಥಾ ॥ ೬೯ ॥

ಅಸ್ಮಿನ್ ಜಗಚ್ಛೂನ್ಯಪುರೇ ಸರ್ವಮೇವ ಪ್ರದೂಷಿತಂ ।
ದೇಹಗೇಹಂ ಪ್ರಮತ್ತೇನ ಚಿತ್ತಯಕ್ಷೇಣ ವಲ್ಗತಾ ॥ ೭೦ ॥

ಚಿತ್ತವೇತಾಲವಲಿತಾ ಸಮಸ್ತಾ ದೇಹಖಂಡಜಾ ।
ಇಯಂ ಜಗದರಣ್ಯಾನೀ ಶೂನ್ಯಾ ಕಸ್ಯ ನ ಭೀತಯೇ ॥ ೭೧ ॥

ಸರ್ವಸ್ವವನ್ನೂ ಅಪಹರಿಸುವ, ಈ ಮನಃ ಪಿಶಾಚವನ್ನು ದೂರಮಾಡಿ, ನೀನು ನಿನ್ನ ಮೊದಲಿನ ಸ್ವಭಾವವು ಯಾವುದೋ ಅದೇ ಆಗಿ ಸ್ಥಿರನಾಗಿರು.

೬೮. ಚಿತ್ತಯಕ್ಷನು ಯಾರನ್ನು ದೃಢವಾಗಿ ಹಿಡಿದುಕೊಂಡಿರುವನೋ ಅವನನ್ನು ಶಾಸ್ತ್ರಗಳಾಗಲಿ, ಬಂಧುಗಳಾಗಲಿ, ಗುರುಗಳೇ ಆಗಲಿ ಕಾಪಾಡಲು ಸಮರ್ಥರಾಗುವುದಿಲ್ಲ.

೬೯. ಚಿತ್ತವೇತಾಲನನ್ನು ಶಾಂತಗೊಳಿಸಿರುವ ಪುರುಷನನ್ನು ಗುರುಗಳಾಗಲಿ, ಶಾಸ್ತ್ರಾರ್ಥವಾಗಲಿ, ಬಂಧುಗಳಾಗಲಿ, ಆಳವಿಲ್ಲದ ಕೆಸರಿನಲ್ಲಿರುವ ಮೃಗವನ್ನು ಎತ್ತುವಂತೆ, ಉದ್ಧಾರಮಾಡಬಲ್ಲರು.

೭೦. ಜಗತ್ತೆಂಬ ಈ ಶೂನ್ಯರೂಪದಲ್ಲಿ ಇರುವ ದೇಹಮಂದಿರವು ಮಾತ್ರವಲ್ಲ, ಸರ್ವವೂ ಕುಣಿಯುತ್ತಿರುವ ಚಿತ್ತಯಕ್ಷನಿಂದ ಧ್ವಂಸವಾಗಿರುವುದು.

೭೧. ಚಿತ್ತವೆಂಬ ಬೇತಾಳನು ಆಕ್ರಮಿಸಿಕೊಂಡಿರುವ, ಖಂಡಖಂಡವಾಗಿರುವ ದೇಹಗಳಿಂದಲೇ ಆಗಿರುವ, ಈ ಜಗತ್ತೆಂಬ ಅರಣ್ಯಸ್ಥಲವೆಲ್ಲವೂ ಶೂನ್ಯವೇ ಆಗಿರಲು, ಯಾರು ತಾನೇ ಇದನ್ನು ಕಂಡು ಹೆದರದಿರುವರು ?

ಜಗನ್ನಗರ್ಯಾಮಸ್ಯಾಂ ತು ಶಾಂತಚಿತ್ತ ಪಿಶಾಚಕಂ ।
ದೇಹಗೇಹಂ ಕತಿಪಯೈಃ ಸೇವ್ಯತೇ ಸದ್ಭಿರೇವ ಯತ್ ॥ ೭೨ ॥

ಇಹ ಸಶ್ರೂಯತೇ ಯಯಾ ದಿಕ್ಸ್ವೈವ ರಘುನಂದನ ।
ಪ್ರಮತ್ತಮೋಹವೇತಾಲೈಃ ಪೂರ್ಣಾ ದೇಹಶ್ಮಶಾನಕೈಃ ॥ ೭೩ ॥

ಅಸ್ಯಾಂ ಜಗದರಣ್ಯಾನ್ಯಾಂ ಮುಹ್ಯಂತಂ ಮುಗ್ಧಬಾಲವತ್ ।
ಸ್ವಯಮಾರಾಧ್ಯ ಧೈರ್ಯಾಂಶಮಾತ್ಮನಾತ್ಮಾನ ಮುದ್ಧರೇತ್ ॥ ೭೪ ॥

ಜಗಜ್ಜರದರಣ್ಯೇಸ್ಮಿಂಶ್ಚರದ್ಭೂತಮೃಗವ್ರಜೇ ।
ಧೃತಿಂ ತೃಣರಸೈ ರಾಮ ಮಾ ಗಚ್ಛ ಮೃಗಪ್ರೋತವತ್ ॥ ೭೫ ॥

---

೭೨. ಈ ಜಗತ್ತೆಂಬ ನಗರದಲ್ಲಿ ದೇಹಗಳೆಂಬ ಮನೆಗಳು ತುಂಬಿರುವುವು. ಅವುಗಳಲ್ಲಿ ಕೆಲವು ಮಾತ್ರ ಚಿತ್ತವೆಂಬ ಪಿಶಾಚದ ಬಾಧೆಯಿಲ್ಲದಿರುವುವು. ಅಂಥವುಗಳನ್ನು ಸಜ್ಜನರು ಇಟ್ಟುಕೊಂಡಿರುವರು.

೭೩. ಈ ಜಗತ್ತಿನಲ್ಲಿ ಶಬ್ದವು ಕೇಳಿಬರುವ ಯಾವ ದಿಕ್ಕಿಗೇ ತಿರುಗಿದರೂ, ಎಲೈ ರಾಘವ, ಆ ಆ ದಿಕ್ಕುಗಳಲ್ಲೆಲ್ಲ ದೇಹಶ್ಮಶಾನಗಳೇ ತುಂಬಿರುವುವು. ಆ ಶ್ಮಶಾನಗಳಲ್ಲಿ ಚೆನ್ನಾಗಿ ಕೊಬ್ಬಿಹೋಗಿರುವ ಬೇತಾಳಗಳು ಸೇರಿಕೊಂಡಿರುವುವು, ಆ ಬೇತಾಳಗಳ ಹೆಸರು ಮೋಹವೆಂದು.

೭೪. ಈ ಜಗತ್ತೆಂಬ ಅರಣ್ಯದಲ್ಲಿ ಜೀವನು ಎಳೆಯ ಹುಡುಗನಂತೆ ಹೆದರಿಕೊಳ್ಳುವನು. ಆದರೂ, ಅವನು ತನಗೆತಾನೇ ಧೈರ್ಯವನ್ನು ತಂದುಕೊಂಡು, ತನ್ನನ್ನು ತಾನೇ ಉದ್ಧರಿಸಿಕೊಳ್ಳಬೇಕು.

೭೫. ಈ ಜಗತ್ತೆಂಬ ಅರಣ್ಯದಲ್ಲಿ ಸಂಚರಿಸುತ್ತಿರುವ ಪ್ರಾಣಿಗಳೆಲ್ಲವೂ ತೃಣದಂತೆ ನಿಸ್ಸಾರವಾದ ವಿಷಯಾನಂದದಿಂದಲೇ ತೃಪ್ತರಾಗುವುವು. ಆದರೆ, ರಾಮ, ನೀನೂ ಅವುಗಳಂತಯೇ, ವಿಷಯಾನಂದದಿಂದಲೇ ತೃಪ್ತನಾಗಬೇಡ.

ಅಸ್ಮಿನ್ಮಹೀತಲಾರಣ್ಯೇ ಚರಂತಿ ಮೃಗಪೋತಕಾಃ ।
ತ್ವಮಜ್ಞಾನಗಜಂ ಭುಕ್ತ್ವಾ ಸೈಹೀಂ ವೃತ್ತಿಮುಪಾಶ್ರಯ ॥ ೭೬ ॥

ಅನ್ಯೇ ನರಮೃಗಾ ಮುಗ್ಧಾ ಜಂಬೂದ್ವೀಪೇ ಸ್ವಜಂಗಲೇ ।
ವಿಹರಂತಿ ಯಥಾ ರಾಮ ತಥಾ ಮಾ ವಿಹರಾನಘ ॥ ೭೭ ॥

ಅತ್ಯಲ್ಪಕಾಲಶಿಶಿರೇ ಕರ್ದಮಾಲೇಪದಾಯಿನಿ ।
ನ ಮಂಕ್ತವ್ಯಂ ಬಂಧುರೂಪೇ ಮಹಿಷೇಣೇವ ಪಲ್ವಲೇ ॥ ೭೮ ॥

ಭೋಗಾಭೋಗಾ ಬಹಿಷ್ಕಾರ್ಯಾ ಆರ್ಯಸ್ಯಾನುಸರೇತ್ ಪದಂ ।
ಪ್ರವಿಚಾರ್ಯ ಮಹಾರ್ಥಂ ಸ್ವಮೇಕಮಾತ್ಮಾನಮಾಶ್ರಯೇತ್ ॥ ೭೯ ॥

---

೭೬. ಈ ಜಗತ್ತೆಂಬ ಅರಣ್ಯದಲ್ಲಿ ವಿಷಯಾನಂದವೆಂಬ ತೃಣಗಳಿಂದಲೇ ತೃಪ್ತನಾಗುವ (ಇಂದ್ರಿಯಗಳೆಂಬ) ಜಿಂಕೆಗಳು ತಿರುಗುತ್ತಿರುವುವು. ನೀನೂ ಅವುಗಳಂತೆ ಆಗದೆ, ಅಜ್ಞಾನವೆಂಬ ಮದಗಜವನ್ನು ಹೊಡೆದು ತಿನ್ನುವ ಸಿಂಹವಾಗು.

೭೭. ಜಂಬೂದ್ವೀಪವೆಂಬ ಈ ಭೂಮಿಯು ಮಾನವರಿಗೆ ಮೀಸಲಾಗಿರುವುದು. ಇಲ್ಲಿ ಈ ಮಾನವ ಮೃಗಗಳು ಅದೆಷ್ಟೆಷ್ಟೋ ಲೆಕ್ಕವಿಲ್ಲದೆ ಇರುವುವು. ರಾಮ, ನೀನೂ ಅವರಂತೆಯೇ ವಿಷಯಾನಂದವೇ ಪರಮವೆಂದುಕೊಂಡು ಮಗ್ನನಾಗುವ ಮೃಗವಾಗದೆ ಇರು.

೭೮. ಬಹಳ ಕೊಂಚಹೊತ್ತುಮಾತ್ರ ತಂಪುಕೊಡುವ ಕೆಸರನ್ನು ಕೊಡುವ ಒಂದು ಕೊಚ್ಚೆಯ ನೀರು ಉಂಟು. ಅದರ ಹೆಸರು ಬಂಧುಗಳು ಎಂದು. ಆ ಬಂಧು ರೂಪವಾದ ಕೆಸರಿನಲ್ಲಿ ನೀನು ಎಮ್ಮೆಯಂತೆ ಮುಳುಗದಿರು.

೭೯. ಈ ಭೋಗಜಾಲವು ಎಷ್ಟೇ ವಿಸ್ತಾರವಾಗಿದ್ದರೂ ಇದನ್ನು ಬಹಿಷ್ಕರಿಸಲೇಬೇಕು. ಇದರಲ್ಲಿ ಮಗ್ನರಾಗಬಾರದು. ಆರ್ಯನಾಗಿ ಜೀವನ್ಮುಕ್ತನಾದವನ ಮಾರ್ಗವನ್ನೇ ಅನುಸರಿಸಬೇಕು. ಚೆನ್ನಾಗಿ ವಿಚಾರ ಮಾಡಿ, ಉತ್ತಮವಾದ ಉದ್ದೇಶವಾವುದು ಎಂಬುದನ್ನು ಗೊತ್ತುಮಾಡಿಕೊಳ್ಳಬೇಕು. ತನ್ನ ಸ್ವರೂಪವೇ ಆಗಿರುವ, ಏಕನಾದ, ಆತ್ಮನನ್ನೇ ಆಶ್ರಯಿಸಬೇಕು.

ಅಪವಿತ್ರಸ್ಯ ತುಚ್ಛಸ್ಯ ದುರ್ಭಗಸ್ಯ ದುರಾಕೃತೇಃ ।
ದೇಹಸ್ಯಾರ್ಥೇ ನ ಮಂಕ್ತವ್ಯಂ ಚಿಂತಾಚಂಡೀ ಸುದಾರಣಾ ॥೮೦॥

ಅನ್ಯೇನ ರಚಿತೋ ದೇಹೋ ಯಕ್ಷೇಣಾನ್ಯೇನ ಸಂಶ್ರಿತಃ ।
ದುಃಖಮನ್ಯಸ್ಯ ಭೋಕ್ತಾನ್ಯಶ್ಚಿತ್ರೇಯಂ ಮೌರ್ಖ್ಯಚಕ್ರಿಕಾ ॥೮೧॥

ಯಥೈಕರೂಪಾ ಘನತಾ ದೃಷದೋಽಸ್ಯಾತ್ಮನಸ್ತಥಾ ।
ಸತ್ತಾಮಾತ್ರೈಕ ಸಾಮಾನ್ಯಾದಿತರಸ್ಯಾಪ್ಯಸಂಭವಾತ್ ॥೮೨॥

ಯಥೋಪಲಸ್ಯ ಘನತಾ ಮಾನಸಾದಿ ತಥಾತ್ಮನಃ ।
ಸತ್ತಾಮಾತ್ರಾದಭಿನ್ನತ್ವಾದಭಾವಾದಸ್ಯ ಸಂಸ್ಥಿತೇಃ ॥೮೩॥

---

೮೦. ಅಪವಿತ್ರವಾಗಿ, ತುಚ್ಛವಾಗಿ, ದುರ್ಜಾತವಾಗಿ, ಕುರೂಪಿಯಾಗಿರುವ ಈ ದೇಹವನ್ನೇ ಪರಮವೆಂದುಕೊಂಡು, ಇದಕ್ಕಾಗಿ ಮೋಹಪಂಕದಲ್ಲಿ ಮುಳುಗ ಬಾರದು. ಹಾಗೆ ಮುಳುಗಿದವನನ್ನು ಭಯಂಕರಳಾದ ಚಿಂತೆಯೆಂಬ ಚಂಡಿಯು ಸ್ವಾಹಾಮಾಡಿಬಿಡುವಳು.

೮೧. ಈ ದೇಹವನ್ನು (ಕರ್ಮವೆಂಬ) ಒಬ್ಬನು ಸೃಜಿಸುವನು ಅದರಲ್ಲಿ (ಅಹಂಕಾರವೆಂಬ) ಇನ್ನೊಬ್ಬ ಯಕ್ಷನು ಸೇರಿಕೊಳ್ಳುವನು. (ಮನಸ್ಸು ಎಂಬ) ಇನ್ನೊಬ್ಬನು ದುಃಖಗಳನ್ನು ಸಂಪಾದಿಸಿಕೊಂಡು ಬರುವನು. (ಜೀವನೆಂಬ) ಮತ್ತೊಬ್ಬನು ಅದನ್ನು ಭೋಗಿಸುವನು. ಈ ಮೂಢತನವೆಂಬ ಚಕ್ರಪರಂಪರೆಯು ಅದೆಂತಹ ವಿಚಿತ್ರವು !

೮೨. ಬಂಡೆಯು ಹೇಗೆ ಹೇಗೆ ನೋಡಿದರೂ ಒಳಗೆ ಹೊರಗೆ ಮೇಲೆ ಕೆಳಗೆ ಎಲ್ಲಾ ಒಂದೇ ರೂಪವಾಗಿರುವುದೋ, ಹಾಗೆಯೇ ಸತ್ತಾಮಾತ್ರ ಸ್ವರೂಪನಾದ ಆತ್ಮನನ್ನು ಬಿಟ್ಟು ಇನ್ನೇನೂ ಇಲ್ಲದಿರುವುದರಿಂದ, ಆತ್ಮನು ತಾನೇತಾನಾಗಿರುವನು

೮೩. ಬಂಡೆಯು ಹೇಗೆಹೇಗೂ ಒಂದೇ ರೂಪವಾಗಿರುವಂತೆ ಮನಸ್ಸಮೂಹವೆಲ್ಲವೂ ಒಂದೇ ಆಗಿರುವುದು. ಈ ಮನಸ್ಸು ಆತ್ಮನಿಂದ ಭಿನ್ನವಾಗಿ ತೋರಿದರೂ ಆತ್ಮಸತ್ತೆಯೇ ಮನೋರೂಪವಾಗಿ ತೋರುವುದರಿಂದ, ಈ ಮನಸ್ಸಿಗೆ ಪ್ರತ್ಯೇಕವಾದ ಸ್ಥಿತಿಯೇ ಬೇರೆ ಇಲ್ಲದಿರುವುದರಿಂದ, ಇರುವುದೆಲ್ಲವೂ ಆತ್ಮನೇ !

ಯಥೋಪಲಸ್ಯೋಪಲತಾ ಘಟಸ್ಯ ಘಟತಾ ಯಥಾ ।
ಸತ್ತಾಸಾಮಾನ್ಯಾದಭಿನ್ನೈವ ಮಾನಸಾದಿ ಯಥಾತ್ಮನಃ ॥ ೮೪ ॥

ಅತ್ರೇಮಾಮಪರಾಂ ದೃಷ್ಟಿಂ ಮಹಾಮೋಹ ವಿನಾಶಿನೀಂ ।
ಶೃಣು ಯಾ ಕಥಿತಾ ಪೂರ್ವಂ ಮಮ ಕೈಲಾಸಕಂದರೇ ॥ ೮೫ ॥

ಸಂಸಾರದುಃಖ ಶಾಂತ್ಯರ್ಥಂ ದೇವೇನಾರ್ಧೇಂದುಮೌಲಿನಾ ॥ ೮೬ ॥

ಅಸ್ತೀಂದುಕರಸಂಭಾರಭಾಸುರಃ ಪಾರಗೋ ದಿವಃ
ಕೈಲಾಸೋ ನಾಮ ಶೈಲೇಂದ್ರೋ ಗೌರೀರಮಣಮಂದಿರಂ ।
ತತ್ರಾಸ್ತೇ ಭಗವಾನ್ದೇವೋ ಹರಶ್ಚಂದ್ರ ಕಲಾಧರಃ ॥ ೮೭ ॥

ತಂ ಪೂಜಯನ್ಮಹಾದೇವಂ ತಸ್ಮಿನ್ನೇವ ಗಿರೌ ಪುರಾ ।
ಕದಾಚಿದವಸಂ ಗಂಗಾತಟೇ ವಿರಚಿತಾಶ್ರಮಃ ॥ ೮೮ ॥

(ಮಾನಸಾದಿ-ಮಾನಸಂ ಸಮಷ್ಟಿ ವ್ಯಷ್ಟಿ ಮನಸ್ಸಮೂಹಃ । ಆದಿಪದಾತ್ ತತ್ತತ್ಕಾರ್ಯ ಸ್ಥೂಲಪ್ರಪಂಚಶ್ಚ ತತ್ಕೃತಃ - ತಾ. ಪ್ರ.)

೮೪. ಬಂಡೆಯ ಬಂಡೆತನವು ಹೇಗೆ ಬಂಡೆಯಿಂದ ಬೇರೆಯಲ್ಲವೋ, ಘಟದ ಘಟತೆಯು ಹೇಗೆ ಘಟದಿಂದ ಪ್ರತ್ಯೇಕವಾಗಿಲ್ಲವೋ, ಹಾಗೆಯೇ ಆತ್ಮಮನಸ್ಸುಗಳು ಸತ್ತಾ ಸಾಮಾನ್ಯವಾದುದರಿಂದ ಒಂದಕ್ಕೊಂದು ಅಭಿನ್ನಗಳು.

೮೫-೮೬. ಇದೇ ಸಂಬಂಧದಲ್ಲಿ, ಮಹಾ ಮೋಹವಿನಾಶಿನಿಯಾದ ಮತ್ತೊಂದು ದೃಷ್ಟಿಯಿರುವುದು. ಕೈಲಾಸಮಂದಿರದಲ್ಲಿ, ಚಂದ್ರಶೇಖರನಾದ ಸ್ವಾಮಿಯು ಸಂಸಾರ ದುಃಖಶಾಂತ್ಯರ್ಥವಾಗಿ ನನಗೆ ಅದನ್ನು ಉಪದೇಶಿಸಿದನು.

೮೭. ಅಂತರಿಕ್ಷದ ಆಚೆಯಲ್ಲಿ, ಚಂದ್ರನ ಕಿರಣಗಳೆಲ್ಲವೂ ಒಟ್ಟಾಗಿ ರಾಶಿಗೊಂಡಿರುವುವೋ ಎಂಬಂತಿರುವ, ಕೈಲಾಸವೆಂಬ ಒಂದು ಪರ್ವತವುಂಟು. ಅದು ಗೌರೀರಮಣನಾದ ಪರಶಿವನು ಇರುವ ಸ್ಥಾನವು. ಚಂದ್ರಶೇಖರನಾದ ಭಗವಾನ್ ಮಹಾದೇವನು ಅಲ್ಲಿರುವನು.

೮೮. ನಾನು ಹಿಂದೊಮ್ಮೆ ಗಂಗಾತೀರದಲ್ಲಿ ಆಶ್ರಮವನ್ನು ಮಾಡಿಕೊಂಡು, ಆ ಮಹಾದೇವನನ್ನು ಪೂಜಿಸುತ್ತ ಆ ಗಿರಿಯಲ್ಲಿಯೇ ವಾಸವಾಗಿದ್ದೆನು.

ತಪೋಽರ್ಥಂ ತಾಪಸಾಚಾರೇ ಚಿರಾಯ ರಚಿತಸ್ಥಿತಿಃ ।
ಸಿದ್ಧಸಂಘಾತವಲಿತಃ ಕೃತಶಾಸ್ತ್ರಾರ್ಥಸಂಗ್ರಹಃ ॥ ೮೯ ॥

ಪುಷ್ಪಾರ್ಥಂ ಸ್ಯೂತಪುಟಕಃ ಪುಸ್ತಕವ್ಯೂಹ ಸಂಗ್ರಹೀ ।
ಏವಂಗುಣ ವಿಶಿಷ್ಟಸ್ಯ ಕೈಲಾಸವನಕುಂಜರೇ ॥ ೯೦ ॥

ತಪಃ ಪ್ರಚರತೋ ರಾಮ ಮಮ ಕಾಲೋಽತ್ಯವರ್ತತ ।
ಅಥೈಕದಾ ಕದಾಚಿತ್ತು ಬಹುಲಸ್ಯಾಷ್ಟಮೀ ದಿನೇ ॥ ೯೧ ॥

ಗತೇ ಶ್ರಾವಣಪಕ್ಷಸ್ಯ ರಾತ್ರ್ಯಗ್ರೇ ಕ್ಷಯಮಾಗತೇ ।
ದಿಕ್ಷು ಸಂಶಾಂತರೂಪಾಸು ಕಾಷ್ಠಮೌನಸ್ಥಿತಾಸ್ವಿವ ॥ ೯೨ ॥

ಖಡ್ಗಚ್ಛೇದ್ಯಾಂಧಕಾರೇಷು ಕುಂಜೇಷು ಗಹನೇಷುಚ ।
ಏತಸ್ಮಿನ್ನಂತರೇ ತತ್ರ ಯಾಮಾರ್ಧೇ ಪ್ರಥಮೇ ಗತೇ ॥ ೯೩ ॥

ಸಮಾಧಿಂ ತನುತಾಂ ನೀತ್ವಾ ಸ್ಥಿತೋಽಹಂ ಬಾಹ್ಯಮುಗ್ರದೃಕ್ ।
ಅಪಶ್ಯಂ ಕಾನನೇ ತೇಜೋ ಝಟಿತ್ಯೇವ ಸಮುತ್ಥಿತಂ ॥ ೯೪ ॥

---

೮೯. ಸಿದ್ಧ ಸಂಘಗಳಿಂದ ಸೇವಿತನಾಗಿ, ಶಾಸ್ತ್ರಾರ್ಥಗಳನ್ನೆಲ್ಲ ಸಂಗ್ರಹಿಸುತ್ತ, ತಾಪಸರ ಆಚಾರಗಳನ್ನು ಅನುಸರಿಸುತ್ತ, ತಪಸ್ಸು ಮಾಡಿಕೊಂಡು ಬಹು ಕಾಲವಿದ್ದೆನು.

೯೦. ಪುಷ್ಪಾರ್ಥವಾಗಿ ಬುಟ್ಟಿಯನ್ನು ಇಟ್ಟುಕೊಂಡು, ಪುಸ್ತಕಗಳನೆಲ್ಲಾ ಸಂಗ್ರಹಿಸಿಕೊಂಡು, ಕೈಲಾಸದ ಸಮೀಪದ ವನದಲ್ಲಿದ್ದೆನು.

೯೧-೯೨. ಹೀಗೆ ತಪಸ್ಸುಮಾಡಿಕೊಂಡು ಇರಲು ಬಹುಕಾಲವು ಕಳೆದು ಹೋಯಿತು. ಒಂದು ಶ್ರಾವಣಮಾಸದ ಅಷ್ಟಮಿಯು ಬಂತು. ರಾತ್ರಿಯ ಮೊದಲನೆಯ ಝಾಮವು ಅರ್ಧ ಕಳೆದಿತ್ತು. ದಿಕ್ಕುಗಳೆಲ್ಲವೂ ಶಾಂತವಾಗಿದ್ದುವು. ಒಣಗಿದ ಕಡ್ಡಿಯಂತೆ ಮೌನವಾಗಿದ್ದವು.

(ಕರಾದಿಚೇಷ್ಟಯಾ ಅಪಿ ಅರ್ಥಾನಿರ್ವೇದನಂ ಕಾಷ್ಠಮೌನವ್ರತಂ-ತಾ.ಪ.)

೯೩-೯೪. ದಟ್ಟವಾದ ಪೊದೆಗಳಲ್ಲಿ ಕತ್ತಲು ಕತ್ತಿಯಿಂದ ಕಡಿಯಬಹುದೋ ಎನ್ನುವ ಮಟ್ಟಿಗೆ ದಪ್ಪವಾಗಿತ್ತು. ಹೀಗಿರುವ ರಾತ್ರಿಯಲ್ಲಿ ಮೊದಲನೆಯ ಯಾ

ಶುಭ್ರಾಭ್ರಶತಸಂಕಾಶಂ ಚಂದ್ರಬಿಂಬಗಣೋಪಮಂ ।
ಪ್ರಕಟೀಕೃತದಿಕ್ಕುಂಜಂ ತದಾಲೋಕ್ಯ ಮಯಾ ಸ್ಮಯಾತ್ ॥ ೯೫ ॥

ಅಂತಃಪ್ರಕಾಶಶಾಲಿನ್ಯಾ ಬುದ್ಧಿದೃಷ್ಟ್ಯಾವಲೋಕಿತಂ ।
ಯಾವತ್ಪಶ್ಯಾಮಿ ತಂ ಸಾನುಂ ಪ್ರಾಪ್ತಶ್ಚಂದ್ರಕಲಾಧರಃ ॥ ೯೬ ॥

ಗೌರೀಕರಾರ್ಪಿತಕರೋ ನಂದಿಪ್ರೋತ್ಸಾರಿತಾಗ್ರಗಃ ।
ಶಿಷ್ಯಾನ್ಸಂಬೋಧ್ಯ ತತ್ರಸ್ಥಾನ್ ಗೃಹೀತ್ವಾರ್ಘ್ಯಂ ಸುಸಂಯುತಃ ॥ ೯೭ ॥

ಅಗಮಂ ಸುಮನಾಸ್ತಸ್ಯ ದೃಷ್ಟಿಪೂತಮಹಂ ಪುರಃ ।
ತತ್ರ ಪುಷ್ಪಾಂಜಲಿಂ ದತ್ವಾ ದೂರಾದೇವ ತ್ರಿಲೋಚನಃ ॥ ೯೮ ॥

ಮವು ಅರ್ಧ ಕಳೆದಿರುವಾಗ, ನಾನು ಧ್ಯಾನಸಮಾಧಿಯನ್ನು ಶಿಥಿಲಗೊಳಿಸಿ ಬಾಹ್ಯಮುಖನಾಗಿ ಅಗ್ರದೃಕ್ಕಾಗಿ ಕುಳಿತಿದ್ದೆನು. (ಅಗ್ರದೃಕ್ ಎಂದರೆ ಎದುರಿಗಿರುವುದನ್ನು ಉದ್ದೇಶರಹಿತವಾಗಿ ನೋಡುತ್ತಿರುವುದು) ಆ ಸಮಯದಲ್ಲಿ ಆರಣ್ಯದಲ್ಲಿ ಹಠಾತ್ತಾಗಿ ಒಂದು ತೇಜೋರಾಶಿಯು ಕಾಣಿಸಿತು. ಆ ತೇಜೋಮಂಡಲವು ಶುಭ್ರವಾದ ಮೇಘಗಳು ನೂರಾರು ಸೇರಿರುವಂತೆಯೂ, ಚಂದ್ರಬಿಂಬಗಳು ಗುಂಪುಗುಂಪಾಗಿ ಬಂದಂತೆಯೂ ಇದ್ದು ದಿಕ್ಕುದಿಕ್ಕುಗಳನೆಲ್ಲ ಬೆಳಗುತ್ತಿರುವುದನ್ನು ನೋಡಿ ನನಗೆ ಆಶ್ಚರ್ಯವಾಯಿತು.

೯೬. ಇದೇನೆಂದು ವಿಸ್ಮಯಪಟ್ಟು, ಹೊರಕಣ್ಣಿಗೆ ಕಂಡುದು ಏನು ಎಂಬುದನ್ನು, ಒಳಗೆ ತೋರಿಸಿಕೊಡುವ ಬುದ್ಧಿ ದೃಷ್ಟಿಯನ್ನು ಹಿಡಿದು ನೋಡುವುದರೊಳಗಾಗಿ, ಚಂದ್ರಶೇಖರನಾದ ಸ್ವಾಮಿಯು ಕಣ್ಣೆದುರು ನಿಂತನು.

೯೭. ಆ ಪ್ರಭುವಿಗೆ ಗೌರೀದೇವಿಯು ಹಸ್ತಲಾಘವವನ್ನು ಕೊಡುತ್ತಿದ್ದಳು. ನಂದಿಕೇಶ್ವರನು ದಾರಿಯನ್ನು ತೋರಿಸಿಕೊಂಡು ಮುಂದೆ ನಡೆದು ಬರುತ್ತಿದ್ದನು. ಮಹಾದೇವನು ಸಾವಧಾನದಿಂದ ದಾರಿಯಲ್ಲಿರುವ ಶಿಷ್ಯರನೆಲ್ಲ ಮಾತನಾಡಿಸುತ್ತಾ, ಅವರು ಒಪ್ಪಿಸಿದ ಅರ್ಘ್ಯಗಳನ್ನು ಸ್ವೀಕರಿಸುತ್ತಾ ಬರುತ್ತಿದ್ದನು.

೯೮. ಆ ಮಹಾದೇವನು ನನ್ನ ಕಡೆ ತಿರುಗಲು ಆತನ ದೃಷ್ಟಿಪ್ರಸಾರಮಾತ್ರದಿಂದಲೇ ಪಾವನನಾಗಿ, ಸಂತೋಷಗೊಂಡು, ಆತನ ಬಳಿ ಸಾರಿ, ದೂರದಿಂದಲೇ ಪುಷ್ಪಾಂಜಲಿಯನ್ನು ಒಪ್ಪಿಸಿ, ಆ ತ್ರಿಲೋಚನನ ಸನ್ನಿಧಿಯನ್ನು ಸೇರಿದೆನು.

ದತ್ತಾರ್ಘ್ಯೇಣ ಮಯಾ ದೇವಃ ಸಂಪ್ರಣಮ್ಯಾಭಿನಂದಿತಃ ॥ ೯೯ ॥

ತತಶ್ಚಂದ್ರ ಪ್ರಭಾಸಖ್ಯಾ ಋಜ್ವ್ಯಾ ಶೀತಲಯಾ ತಯಾ ।
ದೃಶಾ ಸರ್ವಾರ್ತಿಹಾರಿಣ್ಯಾ ಚಿರಮಸ್ಮ್ಯಾಸ್ಪದೀಕೃತಃ ॥ ೧೦೦ ॥

ಪುಷ್ಪಸಾನೂಪವಿಷ್ಟಾಯ ತಸ್ಮೈ ತ್ರೈಲೋಕ್ಯಸಾಕ್ಷಿಣೇ ।
ಅರ್ಘ್ಯಂ ಪುಷ್ಪಂ ತಥಾ ಪಾದ್ಯಮಭ್ಯುಪೇತ್ಯಾರ್ಪಿತಂ ಮಯಾ ॥ ೧೦೧ ॥

ಮಂದಾರಪುಷ್ಪಾಂಜಲಯೋ ವಿಕೀರ್ಣಾ ಬಹವಃ ಪುರಃ ।
ನಾನಾವಿಧೈರ್ನಮಸ್ಕಾರೈಃ ಸ್ತೋತ್ರೈಶ್ಚಾಭ್ಯರ್ಚಿತಃ ಶಿವಃ ॥ ೧೦೨ ॥

೯೯-೧೦೦. ಅರ್ಘ್ಯವನ್ನು ಕೊಟ್ಟು ಪ್ರಣಾಮವನ್ನೂ ಅಭಿವಾದನವನ್ನೂ ಮಾಡಿ ಚಂದ್ರನ ಚಂದ್ರಿಕೆಯ ಸಖಿಯೋ ಎಂಬಂತಿರುವ ಋಜುವೂ ಶೀತಲವೂ ಆದ, ಸಮಸ್ತವಾದ ಆರ್ತಿಗಳನ್ನೂ ಆರಿಸುವ, ಆತನ ಪ್ರಸಾದದೃಷ್ಟಿಗೆ ಪಾತ್ರನಾದೆನು.

(ಪ್ರಣಾಮ = ದೇಹದಿಂದ ಮಾಡುವ ನಮಸ್ಕಾರ. ಅಭಿವಾದನ = ಕಿವಿಗಳನ್ನು ಹಿಡಿದುಕೊಂಡು ಪ್ರವರ ಹೇಳಿಕೊಂಡು ಪಾದಗಳನ್ನು ಮುಟ್ಟಿ ಮಾಡುವ ನಮಸ್ಕಾರ.)

೧೦೧. ಹೂಗಳು ದಟ್ಟವಾಗಿ ಬೆಳೆದಿದ್ದ ಒಂದೆಡೆಯಲ್ಲಿ ಆ ಮಹಾದೇವನನ್ನು ಆಸನಾಸೀನನಾಗುವಂತೆ ಪ್ರಾರ್ಥಿಸಿಕೊಂಡು, ಆತನ ಬಳಿಸಾರಿ ಆ ತ್ರೈಲೋಕ್ಯಸಾಕ್ಷಿಯಾದ ಶಂಕರನಿಗೆ ಅರ್ಘ್ಯವನ್ನು ಪುಷ್ಪವನ್ನೂ ಪಾದ್ಯವನ್ನೂ ಮತ್ತೆ ಭಕ್ತಿಯಿಂದ ಒಪ್ಪಿಸಿದೆನು.

೧೦೨. ಮಂದಾರ ಪುಷ್ಪಗಳನ್ನು ಬೊಗಸೆಬೊಗಸೆಯಾಗಿ ಆತನಿಗೆ ಪೂಜೆ ಮಾಡಿ, ನಾನಾವಿಧವಾದ ನಮಸ್ಕಾರಗಳಿಂದಲೂ ಬಹುವಿಧವಾದ ಸ್ತೋತ್ರಗಳಿಂದಲೂ ಆ ಪರಶಿವ ಮೂರ್ತಿಯನ್ನು ಅಭ್ಯರ್ಚನಮಾಡಿದೆನು.

ತತೋ ಭಗವತೀ ಗೌರೀ ತಾದೃಶ್ಯೈವ ಸಪರ್ಯಯಾ ।
ಸಂಪೂಜಿತಾ ಸಖೀಯುಕ್ತಾ ಗಣಮಂಡಲಿಕಾ ತಥಾ ॥ ೧೦೩ ॥

ಪೂಜಾಂತೇ ಪೂರ್ಣಶೀತಾಂಶುರಸ್ಮಿನ್ ಶೀತಲಯಾ ಗಿರಾ ।
ತತ್ರೋಪವಿಷ್ಟಂ ಪ್ರೋವಾಚ ಮಾಮರ್ಧೇಂದುಕಲಾಧರಃ ॥ ೧೦೪ ॥

ಬ್ರಹ್ಮನ್ಪ್ರಶಮಶಾಲಿನ್ಯಃ ಪ್ರಾಪ್ತವಿಶ್ರಾಂತಯಃ ಪರೇ ।
ಕಚ್ಚಿತ್ಕಲ್ಯಾಣಕಾರಿಣ್ಯಃ ಸಂವಿದಸ್ತೇ ಸ್ಥಿತಾಃ ಪದೇ ॥ ೧೦೫ ॥

ಕಚ್ಚಿತ್ತಪಸ್ತೇ ನಿರ್ವಿಘ್ನಂ ಕಲ್ಯಾಣಮನುವರ್ತತೇ ।
ಕಚ್ಚಿತ್ಪ್ರಾಪ್ಯಮನುಪ್ರಾಪ್ತಂ ಕಚ್ಚಿಚ್ಛಾಮ್ಯಂತಿ ಭೀತಯಃ ॥ ೧೦೬ ॥

---

೧೦೩. ಹಾಗೆಯೇ ಆ ಪರಶಿವನ ಅರ್ಧಾಂಗಿಯಾದ ಗೌರೀದೇವಿಯನ್ನೂ ಅದೇರೀತಿಯಲ್ಲಿ ಪೂಜೆಮಾಡಿದೆನು. ಆಕೆಯ ಸಖಿಯರನ್ನೂ ಗಣಗಳನ್ನೂ ಸಹ ಹಾಗೆಯೇ ಪೂಜೆಮಾಡಿದೆನು.

೧೦೪. ಪೂಜೆಯೆಲ್ಲವೂ ಮುಗಿದಮೇಲೆ, ಪ್ರಶಾಂತವಾದ ವಾಕ್ಯಗಳಿಂದ, ಅಲ್ಲಿಯೇ ಕುಳಿತುಕೊಳ್ಳೆಂದು ಹೇಳಿ ಕುಳ್ಳಿರಿಸಿಕೊಂಡು, ಆ ಚಂದ್ರಶೇಖರನಾದ ಸ್ವಾಮಿಯು ನನ್ನನ್ನು ಕುರಿತು ಮಾತನಾಡಿದನು.

೧೦೫. ಎಲೈ ಬ್ರಹ್ಮನೆ, ಪ್ರಶಾಂತಿಗುಣ ವಿಶಿಷ್ಟಗಳೂ, ವಿಶ್ರಾಂತಿಯನ್ನು ಚೆನ್ನಾಗಿ ಪಡೆದವೂ, ಯಾವಾಗಲೂ ಅನುಗ್ರಹವನ್ನೇ ಮಾಡುವುವೂ ಆದ ನಿನ್ನ ಚಿತ್ತವೃತ್ತಿಗಳು ಪರಮಪದದಲ್ಲಿ ಯಾವಾಗಲೂ ನೆಲಸಿರುವವಷ್ಟೆ ?

(ತದಾಜ್ಞಯಾ ತತ್ರ ಸಾನೌ ಉಪವಿಷ್ಟಂ ಮಾಂ । ತತ್ರ ಕುಶಲ ಪ್ರಶ್ನೇ ಕರ್ತವ್ಯೇ ಸರ್ವ ಕೌಶಲ್ಯ ಪರಮಕಾಷ್ಠಾಂ ಪರಮಾತ್ಮನಿ ಚಿತ್ತವಿಶ್ರಾಂತಿಮೇವ ಭಗವಾನ್ ಪ್ರಥಮ ಮನುಜಿಘೃಕ್ಷಯಾ ಪೃಚ್ಛತಿ - ತಾ ಪ)

೧೦೬ ನಿನ್ನ ತಪಸ್ಸುಗಳೆಲ್ಲವೂ ನಿರ್ವಿಘ್ನವಾಗಿ, ಕಲ್ಯಾಣಪ್ರದಗಳಾಗಿ ನಡೆಯುತ್ತಿರುವುವೇ ? ನೀನು ಏನನ್ನು ಪಡೆಯಬೇಕೆಂದಿರುವೆಯೋ ಅದು ದೊರೆಯಿತೆ? ನಿನ್ನ ಭೀತಿಗಳೆಲ್ಲ ಶಾಂತವಾದುವೆ ?

ಏವಂವಾದಿನಿ ದೇವೇಶೇ ಸರ್ವಲೋಕೈಕಕಾರಿಣಿ ।
ಗಿರಾನುನಯಶಾಲಿನ್ಯಾ ಮಯೋಕ್ತಂ ರಘುನಂದನ ॥ ೧೦೭ ॥

ತ್ರ್ಯಕ್ಷಾನುಸ್ಮೃತಿ ಕಲ್ಯಾಣವತಾಮಿಹ ಮಹೇಶ್ವರ ।
ನ ಕಿಂಚದಪಿ ದುಷ್ಪ್ರಾಪಂ ನಚ ಕಾಶ್ಚನ ಭೀತಯಃ ॥ ೧೦೮ ॥

ತ್ವದನುಸ್ಮರಣಾನಂದ ಪರಿಘೂರ್ಣಿತ ಚೇತಸಾಂ ।
ನ ತೇ ಸಂತಿ ಜಗತ್ಕೋಶೇ ಪ್ರಣಮಂತಿ ನ ಯೇ ಪುನಃ ॥ ೧೦೯ ॥

ತೇ ದೇಶಾಸ್ತೇ ಜನಪದಾಸ್ತಾ ದಿಶಸ್ತೇ ಚ ಪರ್ವತಾಃ ।
ತ್ವದನುಸ್ಮರಣೈಕಾಂತಧಿಯೋ ಯತ್ರ ಸ್ಥಿತಾಃ ಜನಾಃ ॥ ೧೧೦ ॥

---

೧೦೭. ದೇವದೇವನಾದ ಮಹಾದೇವನು ಹೇಗೆ ಕೇಳಲು, ರಾಘವ, ಅನುನಯದಿಂದಕೂಡಿದ ಮಾತುಗಳಿಂದ, ಸರ್ವಲೋಕಗಳಿಗೂ ಕಾರಣನಾದ ಆ ಸದಾಶಿವನಿಗೆ ನಾನು ಹೀಗೆ ಅರಿಕೆಮಾಡಿಕೊಂಡೆನು.

೧೦೮. ಮಹೇಶ್ವರನೇ, ತ್ರಿಲೋಚನನಾದ ನಿನ್ನ ಮನಸ್ಸಿನಲ್ಲಿ ನೆನೆಪು ಬರುವಷ್ಟು ಪುಣ್ಯವಂತರಾದವರಿಗೆ, ಯಾವುದು ತಾನೇ ದೊರೆಯದಿರುವುದು? ಅಂತಹವರಿಗೆ ಬರುವ ಭೀತಿಗಳುತಾನೇ ಎಂಥವು?

೧೦೯. ಯಾರು ನಿನ್ನ ನೆನೆಪಿನಲ್ಲಿ ಒಮ್ಮೆಯಾದರೂ ಸುಳಿಯುವರೋ, ಅಂತಹವರಿಗೆ ಮತ್ತೆ ಮತ್ತೆ ಪ್ರಣಾಮಗಳನ್ನು ಆಚರಿಸದಿರುವವರೂ ಈ ಬ್ರಹ್ಮಾಂಡದಲ್ಲಿ ಉಂಟೆ?

೧೧೦. ನಿನ್ನ ಸ್ಮೃತಿಪಥದಲ್ಲಿ ಬರುವಷ್ಟು ಪುಣ್ಯಮಾಡಿದ ಏಕಾಂತಬುದ್ಧಿಯಾದವರು ಎಲ್ಲಿ ನೆಲಸುವರೋ ಆ ದೇಶಗಳೇ ಧನ್ಯವು! ಆ ಜನಪದಗಳೇ ಧನ್ಯವು! ಆ ದಿಕ್ಕುಗಳೇ ಧನ್ಯವು! ಆ ಪರ್ವತಗಳೇ ಧನ್ಯವು!

ಫಲಂ ಭೂತಸ್ಯ ಪುಣ್ಯಸ್ಯ ವರ್ತಮಾನಸ್ಯ ಸೇಚನಂ ।
ತನೋತಿ ಚೈಷ್ಯತೋ ಬೀಜಂ ತ್ವದನುಸ್ಮರಣಂ ಪ್ರಭೋ ॥ ೧೧೧ ॥

ಜ್ಞಾನಾಮೃತೈಕ ಕಲಶೋ ಧೃತಿಜ್ಯೋತ್ಸ್ನಾ ನಿಶಾಕರಃ ।
ಅಪವರ್ಗಪುರದ್ವಾರಂ ತ್ವದನುಸ್ಮರಣಂ ಪ್ರಭೋ ॥ ೧೧೨ ॥

ತ್ವದನುಸ್ಮರಣೋದಾರ ಚಿಂತಾಮಣಿಮತಾ ಮಯಾ ।
ಸರ್ವಾಸಾಮಾಪದಾಂ ಮೂರ್ಧ್ನಿ ದತ್ತಂ ಭೂತಪತೇ ಪದಂ ॥ ೧೧೩ ॥

ಇತ್ಯುಕ್ತ್ವಾ ಸುಪ್ರಸನ್ನಂ ತಂ ಭಗವಂತಂ ಮಹೇಶ್ವರಂ ।
ಅವೋಚಂ ಪ್ರಣತೋ ಭೂತ್ವಾ ಯದ್ರಾಮ ತದಿದಂ ಶೃಣು ॥ ೧೧೪ ॥

---

೧೧೧. ಪ್ರಭುವೆ, ನಿನ್ನ ಘನಚಿತ್ತದಲ್ಲಿ ಒಮ್ಮೆಯಾದರೂ ಯಾರದಾದರೂ ನೆನೆಪು ಬರಬೇಕಾದರೆ, ಅದು ಬಹುಕಾಲದಿಂದ ಮಾಡಿದ್ದ ಸಂಚಿತ ಪುಣ್ಯದ ಫಲವು. ಆ ನೆನೆಪು ಈಗ ಮಾಡುತ್ತಿರುವ ಪುಣ್ಯಕ್ಕೆ ಅಮೃತಧಾರೆಯು. ಮುಂದೆಬರುವ ಪುಣ್ಯದ ಬೀಜವು.

೧೧೨. ಪ್ರಭುವೆ, ನಿನ್ನ ಘನಚಿತ್ತದಲ್ಲಿ ಸ್ಮರಣವು ಬರುವುದು ಎಂದರೆ, ಅದು ಜ್ಞಾನಾಮೃತದ ಕಲಶವು ! ಧೃತಿಯೆಂಬ ಚಂದ್ರಿಕೆಯನ್ನು ಹರಡುವ ಚಂದ್ರನು ! ಅಪವರ್ಗ (ಮೋಕ್ಷ) ವೆಂಬ ಮಹಾನಗರದ ಹೆಬ್ಬಾಗಿಲು.

೧೧೩. ನಿನ್ನ ಮನಸ್ಸಿನಲ್ಲಿ ನೀನು ಒಮ್ಮೆ ನೆನೆದೆಯೆಂಬ ಚಿಂತಾಮಣಿಯು ನನಗೆ ದೊರೆತಿರಲು, ಎಲೈ ಭೂತಪತಿಯೇ, ಸರ್ವ ಆಪತ್ತುಗಳನ್ನೂ ತಲೆ ಮೆಟ್ಟಿ ತುಳಿದಂತೆಯೇ ಆಯಿತು.

೧೧೪. ಹೀಗೆಂದು ಹೇಳಿ ಸುಪ್ರಸನ್ನನಾಗಿರುವ ಭಗವಂತನಾದ ಆ ಮಹಾದೇವನನ್ನು ಮತ್ತೆ ನಮಸ್ಕಾರಮಾಡಿ, ನಾನು ಒಂದು ವರವನ್ನು ಯಾಚಿಸಿದೆನು. ಅದನ್ನು ಹೇಳುವೆನು. ರಾಮ, ಕೇಳು.

ಭಗವಂಸ್ತ್ವತ್ಪ್ರಸಾದೇನ ಪೂರ್ಣಾ ಮೇ ಸಕಲಾ ದಿಶಃ |
ಕಿಂತು ಪೃಚ್ಛಾಮಿ ದೇವೇಶ ಸಂದೇಹೇ ತತ್ರ ನಿರ್ಣಯಂ || ೧೧೫ ||

ಬ್ರೂಹಿ ಪ್ರಸನ್ನಯಾ ಬುದ್ಧ್ಯಾತ್ಯಕ್ತ್ವೋದ್ವೇಗಮನಾಮಯಂ || ೧೧೬ ||

ಸರ್ವ ಪಾಪ ಕ್ಷಯಕರಂ ಸರ್ವ ಕಲ್ಯಾಣ ವರ್ಧನಂ |
ದೇವಾರ್ಚನ ವಿಧಾನಂ ತತ್ಕೀದೃಶಂ ಭವತಿ ಪ್ರಭೋ || ೧೧೭ ||

---

೧೧೫. ಭಗವಂತನೇ, ದೇವದೇವನೇ, ನೀನು ಪ್ರಸನ್ನನಾಗಿರುವೆಯಾಗಿ ನನಗೆ ದಿಕ್ಕುದಿಕ್ಕುಗಳಲ್ಲಿಯೂ ಪೂರ್ಣತೆಯು ಲಭಿಸಿರುವುದು. ಆದರೂ, ಎಲೈ ದೇವೇಶ್ವರನೇ, ಒಂದು ವಿಚಾರದಲ್ಲಿ ಸಂದೇಹವುಂಟು. ಅದರಲ್ಲಿ ನಿರ್ಣಯವೇನು ಎಂಬುದನ್ನು ಅನುಗ್ರಹಿಸು.

೧೧೬. ಪ್ರಭುವೆ, ನಾನು ಹೀಗೆ ಕೇಳಿದೆನೆಂದು ಕೋಪಗೊಳ್ಳದೆ, ಮನಸ್ಸಿಗೆ ಆಯಾಸಮಾಡಿಕೊಳ್ಳದೆ, ಪ್ರಸನ್ನನಾಗಿ, ನನಗೆ ಅನುಗ್ರಹವಾಗಲೆಂದು, ಅಪ್ಪಣೆ ಕೊಡಿಸು.

೧೧೭. ನಾವು ಮಾಡುವ ದೇವತಾರ್ಚನದ ವಿಧಾನವು ಹೇಗೆ? ಹೇಗೆ ಮಾಡಿದರೆ ಆ ದೇವಾರ್ಚನವು ಸರ್ವ ಪಾಪಗಳನ್ನು ನಿವಾರಣಮಾಡುವುದು? ಹೇಗೆ ಆಚರಿಸಿದರೆ ಆ ಅರ್ಚನವು ಸರ್ವಕಲ್ಯಾಣಗಳನ್ನೂ ಬೆಳೆಸುವುದು? ಅದನ್ನು ಎಲೈ ಪ್ರಭುವೆ, ಕೃಪೆಮಾಡಿ ಅಪ್ಪಣೆಕೊಡಿಸು.

(ಪೂರ್ಣಾ ಮೇ ಸಕಲಾ ದಿಶಾ-ಎಂದು ಹೇಳಿರುವುದರಿಂದ ವಸಿಷ್ಠನಿಗೆ ವಿಷಯ ಭೋಗಾಭಿಲಾಷೆಯು ಶೂನ್ಯವಾಗಿದೆಯೆಂದೇ ಅರ್ಥವಾಗುವುದು. ಆದರೂ ಸರ್ವ ಪಾಪಕ್ಷಯಕರಂ, ಸರ್ವಕಲ್ಯಾಣವರ್ಧನಂ, ಎಂಬ ಎರಡು ವಿಶೇಷಣಗಳಿಂದ ಸರ್ವಾನರ್ಥನಿವೃತ್ತಿಯನ್ನು ಒಳಗೊಂಡ ನಿರತಿಶಯಾನಂದ ರೂಪ ಮೋಕ್ಷಸಾಧನ ವಿಷಯದಲ್ಲಿಯೇ ಈ ಪ್ರಶ್ನವು ಎಂದು ಸರ್ವಜ್ಞನೂ ಪರಮ ಕಾರುಣಿಕನೂ ಆದ ಈಶ್ವರನು ನಿಶ್ಚಯಿಸಿಕೊಂಡು ಸರ್ವರೀತಿಯಿಂದಲೂ ಪ್ರಸನ್ನನಾಗಿರುವ ಆತನಿಗೆ ಪರಮ ಪುರುಷಾರ್ಥಸಾಧನವಾದ ತತ್ತ್ವಜ್ಞಾನವನ್ನೇ ಪರಮರಹಸ್ಯವಾದ ಸರ್ವದೇವಾರ್ಚನ ರೂಪವಾಗಿ ಉಪದೇಶಿಸುವನು. ತಾ.ಪ್ರ.)

ಈಶ್ವರ ಉವಾಚ :---

ಶೃಣು ಬ್ರಹ್ಮವಿದಾಂ ಶ್ರೇಷ್ಠ ದೇವಾರ್ಚನಮನುತ್ತಮಂ ।
ವದಾಮಿ ಮುಚ್ಯತೇ ಯೇನ ಕೃತೇನ ಸಕೃದೇವ ಹಿ ॥ ೧೧೮ ॥

ಕಚ್ಚಿದ್ವೇತ್ಸಿ ಮಹಾಬಾಹೋ ದೇವಃ ಕಃ ಸ್ಯಾದಿತಿ ದ್ವಿಜ ।
ನ ದೇವಃ ಪುಂಡರೀಕಾಕ್ಷೋ ನ ಚ ದೇವಸ್ತ್ರಿಲೋಚನಃ ॥ ೧೧೯ ॥

ನ ದೇವಃ ಕಮಲೋದ್ಭೂತೋ ನ ದೇವಸ್ತ್ರಿದಶೇಶ್ವರಃ ।
ನ ದೇವಃ ಪವನೋ ನಾರ್ಕೋ ನಾನಲೋ ನ ನಿಶಾಕರಃ ॥ ೧೨೦ ॥

ನ ಬ್ರಾಹ್ಮಣೋ ನಾವನಿಪೋ ನಾಹಂ ನ ತ್ವಂ ದ್ವಿಜೋತ್ತಮ ।
ನ ದೇವೋ ದೇಹರೂಪೋ ಹಿ ನ ದೇವಶ್ಚಿತ್ತರೂಪಧೃಕ್ ॥ ೧೨೧ ॥

---

೧೧೮. ಬ್ರಹ್ಮವೇತ್ತರಲ್ಲಿ ಶ್ರೇಷ್ಠನಾದ ವಸಿಷ್ಠನೆ, ದೇವಾರ್ಚನವನ್ನು ಕುರಿತು ಹೇಳುವೆನು ಕೇಳು. ಅದಕ್ಕಿಂತ ಉತ್ತಮವಾದ ಮೋಕ್ಷೋಪಾಯವು ಮತ್ತೊಂದಿಲ್ಲ. ನಾನು ಹೇಳುವಂತೆ ದೇವತಾರ್ಚನವನ್ನು ಒಮ್ಮೆಮಾಡಿದರೆ ಸಾಕು. ಮೋಕ್ಷವು ಲಭಿಸುವುದು

೧೧೯. ಬಾಹ್ಯಪೂಜೆಗಳನ್ನು ಮಾಡಿ ಕೃತಾರ್ಥವಾಗಿರುವ ಹಸ್ತಗಳುಳ್ಳ ದ್ವಿಜಶ್ರೇಷ್ಠನೆ, ಅರ್ಚನಮಾಡಿಸಿಕೊಳ್ಳುವ ದೇವನಾರು ಎಂಬುದನ್ನು ಬಲ್ಲೆಯಾ ? ಪುಂಡರೀಕಾಕ್ಷನಾದ ಮಹಾವಿಷ್ಣುವೂ ದೇವನಲ್ಲ! ತ್ರಿಲೋಚನನಾದ ಪರಮೇಶ್ವರನೂ ದೇವನಲ್ಲ.

(ಪರಿಚ್ಛಿನ್ನ ವಸ್ತುಗಳಲ್ಲಿಯೇ ಶ್ರದ್ಧೆಯಿಟ್ಟುಕೊಂಡಿರುವುದೂ ಒಂದುಜಾಡ್ಯ ಅದನ್ನು ಕಳೆಯಲು ಹೀಗೆ ಹೇಳಿದೆ. ತಾ. ಪ್ರ.)

೧೨೦. ಕಮಲಾಸನನಾದ ಬ್ರಹ್ಮನೂ ದೇವನಲ್ಲ! ಸುರೇಶ್ವರನಾದ ಇಂದ್ರನೂ ದೇವನಲ್ಲ! ವಾಯುವು ದೇವನಲ್ಲ! ಸೂರ್ಯನು ದೇವನಲ್ಲ! ಅಗ್ನಿಯು ದೇವನಲ್ಲ! ಚಂದ್ರನು ದೇವನಲ್ಲ.

೧೨೧. ಬ್ರಾಹ್ಮಣನು ದೇವನಲ್ಲ! ಕ್ಷತ್ರಿಯನು ದೇವನಲ್ಲ! ನಾನೂ ಅಲ್ಲ! ನೀನು ಅಲ್ಲ. ದೇಹರೂಪವಾದವನು ಯಾವನೂ ದೇವನಲ್ಲ. ಚಿತ್ತರೂಪಧಾರಿಯಾದವನೂ ದೇವನಲ್ಲ.

ನ ದೇವಃ ಕಮಲಾರೂಪೀ ನಾಪಿದೇವೋ ಭವೇನ್ಮತಿಃ ।
ಅಕೃತ್ರಿಮಮನಾದ್ಯಂತಂ ದೇವನಂ ದೇವ ಉಚ್ಯತೇ ॥ ೧೨೨ ॥

ಆಕಾರಾದಿ ಪರಿಚ್ಛಿನ್ನೇ ಮಿತೇ ವಸ್ತುನಿ ತತ್ಕೃತಃ ।
ಅಕೃತ್ರಿಮ ಮನಾದ್ಯಂತಂ ದೇವನಂ ಚಿಚ್ಛಿವಂ ವಿದುಃ ॥ ೧೨೩ ॥

(ವಸಿಷ್ಠನೆಂದು ವೇದಗಳಲ್ಲಿ ಮುಖ್ಯಸಮಷ್ಟಿ ಪ್ರಾಣವನ್ನು ಸಂಬೋಧಿಸಿದೆ. ಇನ್ನೊಂದೆಡೆ ಪ್ರಾಣವೇ ಸರ್ವದೇವತಾತ್ಮಕವೆಂದು ಹೇಳಿದೆ. ಹಾಗೆಯೇ ಆಧ್ಯಾತ್ಮಿಕವಾಗಿ ಚಕ್ಷುರಾದಿಗಳಲ್ಲಿ ದೇವಶಬ್ದದ ಪ್ರಯೋಗವಿದೆ. "ತ್ವಚೇ ಸ್ವಾಹಾ ! ಲೋಮಭ್ಯಃ ಸ್ವಾಹಾ," ಮೊದಲಾದ ಮಂತ್ರಗಳಿಂದಲೂ ಪ್ರಾಪ್ತವಾಗುವ ದೇವತ್ವವನ್ನು ನಿವಾರಿಸಿ "ಪರಮಾರ್ಥದೇವನ ಎಂದರೆ ನಿರತಿಶಯ ಪ್ರಮೋದವಾದ ಚಿದಾಕಾಶವೇ ದೇವನು" ಎಂದು ಇಲ್ಲಿ ಹೇಳಿದೆ. ಮಹಾವಿಷ್ಣುವಿನಿಂದ ಹಿಡಿದು ಮತಿಯವರೆಗೂ ಇರುವ ಸರ್ವವೂ ಚಿತ್ಪ್ರಕಾಶಾಧೀನ ಸತ್ತೆಯೂ ಸ್ಫೂರ್ತಿಯೂ ಉಳ್ಳವು. ಆದರಿಂದ ಚಿತ್ತಿನಲ್ಲಿ ಅಧ್ಯಸ್ತವಾದವು. ಆದರಿಂದ ಚಿತ್ಪ್ರಕಾಶದಿಂದ ಅವರೆಲ್ಲರನ್ನೂ ಬೇರೆಮಾಡಿದರೆ, ಅವರಿಗೇ ಸ್ವರೂಪಸಿದ್ಧಿಯೇ ದುರ್ಲಭವಾಗುವುದು. ಆದರಿಂದ ಚಿತ್ತು ಒಂದೇ ದೈವ ಎಂದುದರಿಂದ ಶ್ರುತಿ ಸ್ಮೃತ್ಯಾದಿಗಳಿಗೆ ವಿರೋಧವಿಲ್ಲವು ತಾ. ಪ.)

೧೨೨. ಮಹಾಲಕ್ಷ್ಮಿಯೂ ದೇವನಲ್ಲ! ಮತಿಯೂ ದೇವನಲ್ಲ ! ಅಕೃತ್ರಿಮವಾಗಿ, ಸಹಜವಾಗಿ, ಆದಿ-ಅಂತಗಳಿಲ್ಲದೆ, ಕೇವಲ ಪ್ರಕಾಶ ಸ್ವರೂಪವಾಗಿರುವ ಚಿತ್ತು ಯಾವುದೋ ಅದೇ ದೇವನು.

(ಇಲ್ಲಿ ಪ್ರಕರಣವು ಆಧ್ಯಾತ್ಮಿಕವಾದುದರಿಂದ ಕಮಲಾ ಎಂದರೆ ದೇಹಾದಿ ಶೋಭಾ ಎಂದೂ, ಮತಿ ಎಂದರೆ ಸರ್ವ ಆಧ್ಯಾತ್ಮಿಕ ಭಾವಗಳು ಎಂದೂ ಅರ್ಥ ಮಾಡಬೇಕು. ತಾ. ಪ್ರ.)

೧೨೩. ಆಕಾರಾದಿಗಳಿಂದ ಪರಿಚ್ಛಿನ್ನನಾಗಿ ಪರಿಮಿತವಾಗಿರುವ ಯಾವ ವಸ್ತುವು ತಾನೇ ಅಕೃತ್ರಿಮವೂ ಆದ್ಯಂತರವೂ ಸ್ವಯಂ ಪ್ರಕಾಶವೂ ಆದ ಚಿತ್ತು

ತದೇವ ದೇವಶಬ್ದೇನ ಕಥ್ಯತೇ ತತ್ಪ್ರಪೂಜಯೇತ್ ।
ತದೇವಾಸ್ತಿ ಯತಃ ಸರ್ವಂ ಸತ್ತಾಸತ್ತಾತ್ಮರೂಪಧೃಕ್ ॥ ೧೨೪ ॥

ಅಜ್ಞಾತಶಿವತತ್ತ್ವಾನಾಮಾಕಾರಾದ್ಯರ್ಚನಂ ಕೃತಂ ।
ಯೋಜನಾಧ್ವನ್ಯಶಕ್ತಸ್ಯ ಕ್ರೋಶಾಧ್ವಾ ಪರಿಕಲ್ಪತೇ ॥ ೧೨೫ ॥

ಹೇಗೆ ಆದೀತು ? ಅದರಿಂದ ಆ ಚಿತ್ತು ಒಂದೇ ದೇವನು ಎಂದು ತತ್ತ್ವಜ್ಞರು ಹೇಳುವರು.

(ದಿವ್ ಎಂಬ ಧಾತುವಿಗೆ ಕ್ರೀಡಾ ವಿಜಿಗೀಷಾ ವ್ಯವಹಾರ ದ್ಯುತಿ ಸ್ತುತಿ ಮೋದ ಮದ ಸ್ವಪ್ನ ಕಾಂತಿ ಗತಿ ಎಂಬ ಹತ್ತು ಅರ್ಥಗಳಿರುವುವು. ಅವುಗಳಲ್ಲೆಲ್ಲಾ ಪ್ರಸಿದ್ಧವಾದ ದೀವ್ಯ ಎಂಬ ಧಾತುವಿನಿಂದ ಅಚ್‌ಪರವಾಗಿ ದೇವಶಬ್ದವು ಬರುವುದರಿಂದ, ಅರ್ಥ ಸಂಕೋಚವಾಗುವುದರಲ್ಲಿ ಪ್ರಮಾಣವಿಲ್ಲವಾಗಿ, ಮಾಯಿಕ, ನಿರಂಕುಶ, ಐಶ್ವರ್ಯ ಸ್ವಚ್ಛಂದ ಕ್ರೀಡಾ ವಿಜಿಗೀಷಾ ವ್ಯವಹಾರ ಸ್ತುತಿಗಳನ್ನೂ ಅವಿದ್ಯಕ ಮದ ಸ್ವಪ್ನ ಇಚ್ಛಾಗತಿಗಳನ್ನೂ ಹೇಳಬಹುದಾದರೂ ದ್ಯುತಿ ಮೋದಗಳೇ ಮುಖ್ಯಾರ್ಥಗಳು. ಅವು ನಿತ್ಯ ನಿರತಿಶಯಾನಂದ ಸ್ವಪ್ರಕಾಶ ಬ್ರಹ್ಮದಲ್ಲಿ ಮಾತ್ರ ಸಂಭವವೇ ಹೊರತು ಪರಿಚ್ಛಿನ್ನವಾದ ಜಡವಸ್ತುಗಳಲ್ಲಿ ಅಲ್ಲ. ಅದರಿಂದ ಅಕೃತ್ರಿಮವಾದ ಚಿತ್ತೇ ಶಿವವಾದ ದೇವನೆಂದು ತತ್ವಜ್ಞರು ಹೇಳುವರು. ತಾ. ಪ್ರ.)

೧೨೪. ಅದರಿಂದ ದೇವ ಎಂದೆನಿಸಿಕೊಳ್ಳುವ ಚಿತ್ತನ್ನೇ ಪೂಜೆಮಾಡಬೇಕು. ಇರುವುದೆಲ್ಲ ಅದೊಂದೇ ! ಅದರಿಂದಲೇ ಸತ್ತಾ ಅಸತ್ತಾರೂಪವಾಗಿರುವ ಎಲ್ಲವೂ ಬರುವುದು.

೧೨೫. (ಹಾಗಾದರೆ ಮೂರ್ತಿ ಪೂಜೆಯು ಏಕೆ ಎಂದರೆ) ಶಿವತತ್ತ್ವವನ್ನು ಅರಿಯದವರಿಗೆಂದು ಆಕಾರಾದಿಗಳ ಅರ್ಚನವು ಏರ್ಪಟ್ಟಿರುವುದು. ಒಂದು ಯೋಜನ ದೂರ ಹೋಗಲಾರದವನಿಗೆ ಕ್ರೋಶಮಾತ್ರವೇ ಸಾಕು ಎಂದಂತೆ ಈ ಮೂರ್ತಿ ಪೂಜೆಯು.

ಇಯತ್ತಾದಿ ಪರಿಚ್ಛಿನ್ನಂ ರುದ್ರಾದೇಃ ಪ್ರಾಪ್ಯತೇ ಫಲಂ ।
ಅಕೃತ್ರಿಮಮನಾದ್ಯಂತಂ ಫಲಮಾನಂದ ಆತ್ಮನಃ ॥ ೧೨೬ ॥

ಅಕೃತ್ರಿಮಫಲಂ ತ್ಯಕ್ತ್ವಾ ಯಃ ಕೃತ್ರಿಮಫಲಂ ವ್ರಜೇತ್ ।
ತ್ಯಕ್ತ್ವಾ ಸ ಮಂದಾರವನಂ ಕಾರಂಜಂ ಯಾತಿ ಕಾನನಂ ॥ ೧೨೭ ॥

ಬೋಧಃ ಸಾಮ್ಯಂ ಶಮ ಇತಿ ಪುಷ್ಪಾಣ್ಯಗ್ರ್ಯಾಣಿ ತತ್ರಜ ।
ಶಿವಂ ಚಿನ್ಮಾತ್ರಮಮಲಂ ಪೂಜ್ಯಂ ಪೂಜಾವಿದೋ ವಿದುಃ ॥ ೧೨೮ ॥

ಶಮಬೋಧಾದಿಭಿಃ ಪುಷ್ಪೈರ್ದೇವ ಆತ್ಮಾ ಯದರ್ಚ್ಯತೇ ।
ತತ್ತು ದೇವಾರ್ಚನಂ ವಿದ್ಧಿ ನಾಕಾರಾರ್ಚನಮರ್ಚನಂ ॥ ೧೨೯ ॥

---

೧೨೬. ರುದ್ರಾದಿಗಳನ್ನು ಪೂಜೆಮಾಡುವುದರಿಂದ ಇಷ್ಟೇ ಎಂದು ಗೊತ್ತಾಗಿರುವ ನಿಯತಫಲವು ಲಭಿಸುವುದು. ಅಕೃತ್ರಿಮವೂ ಅನಾದ್ಯಂತವೂ ಆದ ಆತ್ಮನನ್ನು ಪೂಜಿಸುವುದರಿಂದ ಅಕೃತ್ರಿಮವೂ ಆದ್ಯಂತ ರಹಿತವೂ ಆದ ಆನಂದವೇ ಫಲವಾಗಿ ಲಭಿಸುವುದು.

೧೨೭. ಅಕೃತ್ರಿಮವಾದ ಆನಂದವೆಂಬ ಅನಾದ್ಯಂತ ಫಲವನ್ನು ಬಿಟ್ಟು ಕೃತ್ರಿಮವಾದ ವಿಷಯಾನಂದವನ್ನು ಕೊಡುವ ಭೋಗಸಾಧನ ಲಾಭವೆಂಬ ಫಲಕ್ಕೆ ಬಾಯಿ ಬಿಟ್ಟವನು ಮಂದಾರವನವನ್ನು ಬಿಟ್ಟು ಮುಳ್ಳು ತುಂಬಿದ ಕಾಡಿಗೆ ಹೋದವನಂತಹನು.

೧೨೮. "ಶಿವನಾದ ಆ ಚಿತ್ತನ್ನು ಪೂಜೆಮಾಡಲು ಬೋಧ, ಸಾಮ್ಯ, ಶಮ, ಎಂಬ ಮೂರು ಹೂವುಗಳು ಶ್ರೇಷ್ಠವಾದವು: ಅಮಲವಾದ ಚಿತ್ತನ್ನು ಈ ಪುಷ್ಪಗಳಿಂದಲೇ ಪೂಜಿಸಬೇಕು" ಎಂದು ಆತ್ಮ ಪೂಜಾ ವಿಧಾನವನ್ನು ಅರಿತವರು ಹೇಳುವರು.

(ಸಾಮ್ಯ = ಸರ್ವತ್ರ ತನ್ನಂತೆಯೇ ಎಂದು ನಡೆಯುವುದು. ತಾ. ಪ್ರ.)

೧೨೯. ಶಮ, ಬೋಧ, ಮೊದಲಾದ ಪುಷ್ಪಗಳಿಂದ ದೇವನಾದ ಆತ್ಮನನ್ನು ಪೂಜಿಸುವುದೇ ದೇವಾರ್ಚನವು. ಸಾಕಾರದ ಅರ್ಚನವು ಅರ್ಚನವೇ ಅಲ್ಲ.

ಆತ್ಮಸಂವಿತ್ತಿರೂಪಂ ತು ತ್ಯಕ್ತ್ವಾ ದೇವಾರ್ಚನಂ ಜನಾಃ ।
ಕೃತ್ರಿಮಾರ್ಚಾಸು ಯೇ ಸಕ್ತಾಶ್ಚಿರಂ ಕ್ಲೇಶಂ ಭಜಂತಿ ತೇ ॥ ೧೩೦ ॥

ಜ್ಞಾತಜ್ಞೇಯಾ ಹಿ ಯೇ ಸಂತೋ ಬಾಲಕ್ರೀಡೋಪಮಂ ಚ ತೇ ।
ಆತ್ಮಧ್ಯಾನಾದೃತೇ ಬ್ರಹನ್ಕುರ್ವಂತೋ ದೇವ ಪೂಜನಂ ॥ ೧೩೧ ॥

ಆತ್ಮೈವ ದೇವೋ ಭಗವಾನ್ ಶಿವಃ ಪರಮ ಕಾರಣಂ ।
ಜ್ಞಾನಾರ್ಚನೇನಾವಿರತಂ ಪೂಜನೀಯಃ ಸ ಸರ್ವದಾ ॥ ೧೩೨ ॥

ತ್ವಮೇತಚ್ಚೇತನಾಕಾಶಮಾತ್ಮಾನಂ ಜೀವಮವ್ಯಯಂ ।
ಸ್ವಭಾವಂ ವಿದ್ಧಿ ನ ತ್ವನ್ಯಃ ಪೂಜ್ಯಃ ಪೂಜಾತ್ಮಪೂಜನಂ ॥ ೧೩೩ ॥

---

೧೩೦. ಆತ್ಮಸಂವಿತ್ಸ್ವರೂಪವಾದ ದೇವನನ್ನು ಅರ್ಚಿಸುವುದನ್ನು ಬಿಟ್ಟು ಕೃತ್ರಿಮ (ವಾದಸಗುಣಮೂರ್ತಿ) ಗಳ ಅರ್ಚನದಲ್ಲಿ ಆಸಕ್ತರಾದವರು ಚಿರಕಾಲ ಕ್ಲೇಶಭಾಜನರಾಗುವರು.

(ಹೋಲಿಸಿ :— ಕ್ಲೇಶೋಽಧಿಕತರಸ್ತೇಷಾ ಮವ್ಯಕ್ತಾಸಕ್ತ ಚೇತಸಾಂ ॥ –ಗೀತಾ.)

೧೩೧. ಜ್ಞಾತಜ್ಞೇಯರಾದವರೂ ಕೂಡ ಸಗುಣಾರಾಧನವನ್ನು ಮಾಡುವರಲ್ಲ ಎಂದರೆ ಅದು ಬಾಲಕ್ರೀಡೆಯಂತೆ. ಸಾಧುಗಳು ಆತ್ಮಧ್ಯಾನವು ಸಡಿಲವಾಗಿ ಬಹಿರ್ಮುಖರಾದಾಗ, ಎಲೈ ಬ್ರಹ್ಮನೆ, ಕೃತ್ರಿಮದೇವನನ್ನು ಪೂಜಿಸುವರು.

೧೩೨. ಆತ್ಮನೇ ದೇವನು. ಆತ್ಮನೇ ಭಗವಂತನು. ಆತ್ಮನೇ ಪರಮಕಾರಣನಾದ ಶಿವನು. ಇಂತಹ ದೇವನನ್ನು ಜ್ಞಾನವೆಂಬ ಪುಷ್ಪದಿಂದ ಎಡೆಬಿಡದೆ ಯಾವಾಗಲೂ ಪೂಜಿಸುತ್ತಿರಬೇಕು.

೧೩೩. ಅದರಿಂದ, ನೀನು ಚೇತನಾಕಾಶಸ್ವರೂಪವಾಗಿರುವ ಆತ್ಮನನ್ನೇ, ಜೀವನೆನ್ನಿಸಿಕೊಳ್ಳುವ ಅವ್ಯಯನನ್ನೇ, ಸ್ವಭಾವನನ್ನೇ ಪೂಜ್ಯನೆಂದು ತಿಳಿ. ಇನ್ನು ಯಾರೂ ಪೂಜ್ಯರೇ ಇಲ್ಲ. ಆತ್ಮ ಪೂಜನವೇ ಪೂಜೆಯು.

ಶ್ರೀ ವಸಿಷ್ಠ ಉವಾಚ :—
ಚೇತನಾಕಾಶಮಾತ್ರಾತ್ಮಾ ಯಥಾ ಜಗದಿದಂ ಪ್ರಭೋ ।
ಯಥಾ ತಚ್ಚೇತನಸ್ಯೈವ ಜೀವಾದಿತ್ವಂ ತದುಚ್ಯತಾಂ ॥ ೧೩೪ ॥

ಶ್ರೀ ಈಶ್ವರ ಉವಾಚ :—
ಚಿದ್ವ್ಯೋಮೈವ ಕಿಲಾಸ್ತೀಹ ಪಾರಾವಾರ ವಿವರ್ಜಿತಂ ।
ಸರ್ವತ್ರಾಸ ಭವಚ್ಚೇತ್ಯಂ ಯತ್ಕಲ್ಪಾಂತೇಽವಶಿಷ್ಯತೇ ॥ ೧೩೫ ॥

ಯದ್ಯತ್ಸ್ವಯಂ ಪ್ರಕಟತಿ ತಸ್ಯ ಸ್ವಕಟನಸ್ಯ ತು ।
ಸ್ವಯಂ ಯತ್ಸ್ಪಂದಿತಂ ನಾಮ ತೇನೇದಂ ಜಗದಿತ್ಯಲಂ ॥ ೧೩೬ ॥

(ದೇಹೋ ದೇವಾಲಯಃ ಪ್ರೋಕ್ತೋಜೀವೋದೇವಸ್ಸದಾಶಿವಃ । ತ್ಯಜೇದ ಜ್ಞಾನ ನಿರ್ಮಾಲ್ಯಂ ಸೋಽಹಂಭಾವೇನ ಪೂಜಯೇತ್ ॥)

೧೩೪. ಶ್ರೀ ವಸಿಷ್ಠನು ಕೇಳಿದನು :- ಚೇತನಾಕಾಶ ಮಾತ್ರವಾದ ಆತ್ಮನು ಈ ಜಗತ್ತಾದುದು ಹೇಗೆ? ಪ್ರಭುವೆ, ಆ ಚೇತನವೇ ಜೀವಾದಿತ್ವವನ್ನು ಪಡೆದುದು ಹೇಗೆ? ಅದನ್ನು ಕರುಣಿಸು.

೧೩೫. ಶ್ರೀ ಈಶ್ವರನು ಹೇಳಿದನು :- ಅಂತವೂ ಪಾರವೂ ಇಲ್ಲದ ಚಿದಾಕಾಶವು ಇದ್ದೇ ಇರುವುದಲ್ಲವೆ? ಅದರಲ್ಲಿ ಎಲ್ಲಿ ಹುಡುಕಿದರೂ ಚೈತ್ಯವು ಇಲ್ಲವೇ ಇಲ್ಲ. ಆ ಚಿದಾಕಾಶವು ಕಲ್ಪಾಂತವಾದಮೇಲೆಯೂ ಉಳಿದಿರುವುದು.

(ಚಿತ್ಸತ್ತೆಯು ಚೇತ್ಯಕ್ಕೆ ಅಧೀನವಾದುದಲ್ಲ ಎಂಬುದು "ಸರ್ವಚೇತ್ಯವೂ ಲಯವಾಗಿ ಹೋದಮೇಲೆಯೂ ಅದು ಯಾವ ಅಪಾಯವೂ ಇಲ್ಲದೇ ಇರುವುದು" ಎಂಬುದರಿಂದ ಪ್ರಸಿದ್ಧವು. ಚೇತ್ಯವೂ ಚಿತ್ತನ್ನೇ ಹಿಡಿದು ತೋರುವುದು. ಆದರೆ ಅದಕ್ಕೆ ಈ ತೋರಿಕೆ(ಭಾನ)ಇರುವಂತೆ, ಸತ್ತೆಯೂ ಮತ್ತೊಂದು ಇಲ್ಲ ಎಂಬುದನ್ನು ಹೇಳುವುದು ತಾತ್ಪರ್ಯ. ತಾ ಪ್ರ)

೧೩೬. ಯಾವುದು ತಾನೇ ಸ್ವಯಂ ಹೊಳೆಯಬಲ್ಲುದೋ ಅದರ ಹೊಳೆಯುವಿಕೆಯೇ ಈ ಜಗತ್ತಾಗಿ ತೋರುವುದು, ಎಂಬುದು ಪ್ರಸಿದ್ಧವು.

ಇತ್ಯೇವ ಸ್ವಪ್ನಪುರವಜ್ಜಗದ್ಭಾತಿ ಚಿದಾತ್ಮಕಂ ।
ಏವಂ ಚಿದ್ವ್ಯೋಮಮಾತ್ರಾತ್ಮಾ ಜಗದಚ್ಛಂ ನ ಭಿತ್ತಿಮತ್ ॥ ೧೩೭ ॥

ಅತ್ಯಂತಾಸಂಭವಾಚ್ಚೇತ್ಯಂ ದೃಶ್ಯಂ ಚಿದ್ವ್ಯೋಮಮಾತ್ರಕಂ ।
ಚಿತ್ತ್ವಾತ್ಕಚತಿ ಸರ್ಗಾದೌ ಯತ್ತಜ್ಜಗದಿತಿ ಸ್ಮೃತಂ ॥ ೧೩೮ ॥

ತಸ್ಮಾತ್ಸ್ವಪ್ನಪುರಾಕಾರಂ ಯದಿದಂ ಭಾಸತೇ ಜಗತ್ ।
ತತ್ರ ಚಿದ್ವ್ಯೋಮಮಾತ್ರಾತ್ಮನ್ಯನ್ಯತಾ ನಾಮ ಕಾ ಕುತಃ ॥ ೧೩೯ ॥

ಚಿನ್ಮಾತ್ರಮೇವ ಗಿರಯಶ್ಚಿನ್ಮಾತ್ರಂ ಜಗದಂಬರಂ ।
ಚಿನ್ಮಾತ್ರಮಾತ್ಮಾಜೀವಶ್ಚ ಚಿನ್ಮಾತ್ರಂ ಭೂತಸಂತತಿಃ ॥ ೧೪೦ ॥

---

೧೩೭. ಅದರಿಂದ, ಹೀಗೆ ನಾನಾಕಾರವಾಗಿ ತೋರುತ್ತಿರುವ ಜಗತ್ತೆಲ್ಲವೂ ಚಿದಾತ್ಮಕವೇ ಆಗಿದ್ದರೂ ಸ್ವಪ್ನಪುರದಂತೆ ಭಾನವಾಗುವುದು. ಹೀಗೆಯೇ ಚಿದಾಕಾರ ಮಾತ್ರವಲ್ಲದೆ ಇನ್ನೇನು ಅಲ್ಲದ ಆತ್ಮನೇ ಜಗತ್ತಾಗಿ ಭಾಸವಾಗುವನು. ನಿಜವಾಗಿಯೂ ಜಗತ್ತು ನಿರ್ಮಲವಾದ ಚಿತ್ತೇಸರಿ. ಅದರಿಂದ ಜಗತ್ತು ಎಂಬುದಕ್ಕೆ ಆಧಾರವಾದ ಇನ್ನೊಂದು ಬೇರೆಯಾಗಿ ಯಾವುದೂ ಇಲ್ಲ.

೧೩೮. ಚೇತ್ಯವು ಸ್ವತಂತ್ರವೆಂಬುದು ಅತ್ಯಂತವಾಗಿ ಅಸಂಭವವು. ಅದರಿಂದ ಚೇತ್ಯವಾದ ದೃಶ್ಯವು ಯಾವುದುಂಟೋ ಅದು ಚಿದಾಕಾಶವೇ ಅಲ್ಲದೆ ಇನ್ನೇನೂ ಅಲ್ಲ. ಅದು ಚಿತ್ತು ಆದುದರಿಂದಲೇ ಅದು ವ್ಯಾಪಾರ ಮಾಡುವುದು. ಅದರ ವ್ಯಾಪಾರದಿಂದಲೇ ಸೃಷ್ಟಿಯು ಆರಂಭವಾಗಿ ಜಗತ್ತಾಗಿ ಕಾಣುವುದು.

೧೩೯. ಅದರಿಂದ, ಸ್ವಪ್ನಪುರದಂತೆ ಕಾಣಿಸುವ ಈ ಜಗತ್ತು ಯಾವುದುಂಟೋ ಅದು ಚಿದಾತ್ಮನೇ ಆದುದರಿಂದ, ಅದನ್ನು ಬಿಟ್ಟು ಬೇರೊಂದು ಇನ್ನು ಯಾವುದು ತಾನೇ ಉಂಟು ?

೧೪೦. ಪರ್ವತಗಳೂ ಚಿತ್ತೇ ! ಜಗತ್ತು ಆಕಾಶವೂ ಎರಡೂ ಚಿನ್ಮಾತ್ರವೇ! ಆತ್ಮನೂ ಚಿತ್ತೇ ! ಜೀವನೂ ಚಿತ್ತೇ ! ಪ್ರಾಣಿಪ್ರಾಣಿಯೂ ಚಿತ್ತೇ !

ಚಿದ್ವ್ಯೋಮಮಾತ್ರಾದಿತರತ್ಸರ್ಗಾದೌ ಸರ್ವವೇದನೇ ।
ಭಿನ್ನಸ್ವರ್ಗೋ ಪುರೇ ವಾಪಿ ಕಿಂ ಸಂಭವತಿ ಕಥ್ಯತಾಂ ॥ ೧೪೧ ॥

ಆಕಾಶಂ ಪರಮಾಕಾಶಂ ಬ್ರಹ್ಮಾಕಾಶಂ ಜಗಚ್ಚಿತಿಃ ।
ಇತಿ ಪರ್ಯಾಯನಾಮಾನಿ ತತ್ರ ಪಾದಪ ವೃಕ್ಷವತ್ ॥ ೧೪೨ ॥

ಏವಂ ದ್ವಾವ ಸ್ವಪ್ನಸಂಕಲ್ಪಮಾಯಾಭಿಃ ಸ್ವನುಭೂಯತೇ ।
ತದಾ ಕಿಲ ಚಿದಾಕಾಶಮೇವ ಭಾತಿ ಜಗತ್ತಯಾ ॥ ೧೪೩ ॥

ಯಥೈತತ್ಸಂವಿದಾಕಾಶಂ ಸ್ವಪ್ನೇ ಭಾತಿ ಜಗದ್ವಪುಃ ।
ತಥೇದಂ ಜಾಗ್ರದಾಖ್ಯೇಪಿ ಸ್ವಪ್ನೇ ಭಾತಿ ತದೇವ ನಃ ॥ ೧೪೪ ॥

ಯಥಾ ಸ್ವಪ್ನಪುರೇ ಚಿತ್ತಂ ವರ್ಜಯಿತ್ವೇತರತ್ಕ್ವಚಿತ್ ।
ನ ಕಿಂಚಿತ್ಸಂಭವತ್ಯೇವಂ ಜಾಗ್ರತ್ಯಪಿ ಮಹಾಚಿತಃ ॥ ೧೪೫ ॥

---

೧೪೧. ಎಲ್ಲವೂ ಆರಂಭವಾಗುವ ಸೃಷ್ಟಿಯ ಮೊದಲಲ್ಲಿ ಚಿತ್ತಲ್ಲದೇ ಇನ್ನೇನೂ ಇರಲಿಲ್ಲ. ಅದರಿಂದ ಸೃಷ್ಟಿಯಾದ ಮೇಲೆ ಬರುವ ಸ್ವರ್ಗದಲ್ಲಾಗಲೀ, ಮರ್ತ್ಯಲೋಕದಲ್ಲಾಗಲೀ, ಪಾತಾಳದಲ್ಲಾಗಲೀ- ಚಿದಾಕಾಶವಲ್ಲದೆ ಇನ್ನೇನು ತಾನೇ ಸಂಭವಿಸೀತು ?

೧೪೨. ಮರವನ್ನು ಪಾದಪ, ವೃಕ್ಷ, ಎಂದು ಬೇರೆ ಬೇರೆ ಹೆಸರುಗಳಿಂದ ಕರೆಯುವಂತೆ, ಆ ಚಿತ್ತನ್ನೇ ಆಕಾಶ ಪರಮಾಕಾಶ, ಬ್ರಹ್ಮಾಕಾಶ, ಜಗತ್ತು, ಚಿತಿ, ಎಂಬ ಪರ್ಯಾಯ ಪದಗಳಿಂದ ಕರೆಯುವರು.

೧೪೩. ಹೀಗೆ ಒಂದೇ ಆಗಿರುವುದೇ ಎರಡಾಗಿ ಕಾಣುವುದು ಸ್ವಪ್ನ ಸಂಕಲ್ಪ ಮಾಯಾ ಇವುಗಳಲ್ಲಿ ಚೆನ್ನಾಗಿ ಅನುಭವವಾಗುವುದು. ಹಾಗೆಯೇ ಚಿದಾಕಾಶವೇ ಜಗದ್ರೂಪವಾಗಿ ತೋರುವುದು.

೧೪೪. ಸಂವಿದಾಕಾಶವೇ ಸ್ವಪ್ನದಲ್ಲಿ ಜಗದ್ರೂಪವಾಗಿ ತೋರುವಂತೆ, ಜಾಗ್ರತ್ತೆಂಬ ಇನ್ನೊಂದು ಸ್ವಪ್ನದಲ್ಲಿಯೂ ಹಾಗೆಯೇ ನಮಗೆ ತೋರುವುದು.

೧೪೫. ಸ್ವಪ್ನ ಪುರದಲ್ಲಿ ಚಿದಾಕಾಶವಲ್ಲದೆ ಇನ್ನೇನೂ ಹೇಗೆ ಇಲ್ಲವೇ ಇಲ್ಲವೋ ಹಾಗೆಯೇ ಜಾಗ್ರತ್ತಿನಲ್ಲಿಯೂ ಮಹಾಚಿತ್ ಅಲ್ಲದೆ ಇನ್ನೇನೂ ಇಲ್ಲ

ಯತೋನ ಸಂಭವತ್ಯನ್ಯಚ್ಚೇತ್ಯಂ ಕಿಂಚಿತ್ತತೋಖಿಲಂ ।
ಚಿತ್ತಂ ಸಂಚೇತ್ಯಮಸ್ಯೇತದಚೇತ್ಯಂ ಸಜ್ಜಗತ್ಸ್ಥಿತಂ ॥ ೧೪೬ ॥

ಪರಮಾಕಾಶಕಲನಂ ತ್ರಿಜಗತ್ಸ್ವಯಮುತ್ಥಿತಂ ।
ಸ್ವಪ್ನವದ್ವಿದ್ಧಿ ಚಿದ್ವ್ಯೋಮ್ನಿ ನ ತ್ವೇತದ್ದ್ವೈತಸಂಸ್ಥಿತಂ ॥ ೧೪೭ ॥

ಯಥಾ ಚಿದ್ವ್ಯೋಮಮಾತ್ರಾತ್ಮ ಸ್ವಪ್ನೇ ಘಟಪಟಾದಿಕಂ ।
ಸರ್ಗಾದಾವೇವ ಸರ್ಗೋಯಂ ತಥಾ ಚಿದ್ವ್ಯೋಮಮಾತ್ರಕಂ ॥ ೧೪೮ ॥

ಶುದ್ಧಸಂವಿತ್ತಿಮಾತ್ರತ್ವಾದೃತೇಽನ್ಯತ್ಸ್ವಪ್ನಪತ್ತನೇ ।
ಯಥಾ ನ ವಿದ್ಯತೇ ಕಿಂಚಿತ್ತಥಾಸ್ಮಿನ್ ಭುವನತ್ರಯೇ ॥ ೧೪೯ ॥

---

೧೪೬. ಚೇತ್ಯವು ಯಾವುದೇ ಆಗಲಿ ಸ್ವತಂತ್ರವಾಗಿ ಸಂಭವಿಸುವುದಿಲ್ಲ. ಆದ್ದರಿಂದ ಸಂಚೇತ್ಯವಾದ ಸಮಸ್ತ ಚಿತ್ತವೂ ಚೇತ್ಯವಲ್ಲದ ಚಿತ್ತಿನಿಂದಲೇ ಬಂದುದು. ಸತ್ಸ್ವರೂಪವಾದ ಈ ಚಿತ್ತೇ ಜಗತ್ಸ್ವರೂಪವಾಗಿ ತೋರುವುದು.

೧೪೭. ಪರಮಾಕಾಶ ಸ್ವರೂಪವಾದ ಬ್ರಹ್ಮದ ಸಂಕಲ್ಪದಿಂದಲೇ ತ್ರಿ ಜಗತ್ತೂ ಆ ಬ್ರಹ್ಮದಿಂದಲೇ, ಚಿದ್ವ್ಯೋಮದಲ್ಲಿಯೇ ಹೊರಬಂತು. ಹಾಗೆ ಬಂದಿರುವುದು ಒಂದು ಕನಸಿನಂತೆ ಎಂದು ತಿಳಿ. ಹೀಗೆ ಜಗತ್ತುಗಳು ಹೊರಬಂದಿದ್ದರೂ ಅವಕ್ಕೆ ಪ್ರತ್ಯೇಕ ಸತ್ತೆಯಿಲ್ಲವಾಗಿ, ಅವು ಬೇರೆಯಾಗಿ ಇವೆ ಎನ್ನಲಾಗುವುದಿಲ್ಲ.

(ಬ್ರಹ್ಮವು "ಬಹುಸ್ಯಾಂ ಪ್ರಜಾಯೇಯ = ನಾನು ಅನೇಕವಾಗಬೇಕು." ಎಂದುಕೊಂಡಿತು. ಅದರಿಂದ ಏಕವು ಅನೇಕವಾಯಿತು ಎಂದು ಶ್ರುತಿ.)

೧೪೮. ಚಿದಾಕಾಶ ಸ್ವರೂಪನಾದ ಆತ್ಮವೇ ಕನಸಿನಲ್ಲಿ ಘಟ, ಪಟ, ಮೊದಲಾದವೆಲ್ಲವೂ ಆಗಿ ತೋರುವಂತೆ, ಸೃಷ್ಟಿಯ ಆದಿಯಲ್ಲಿಯೂ ಈ ಸೃಷ್ಟಿಯೆಲ್ಲವೂ ಚಿದಾಕಾಶದಿಂದಲೇ ಆಯಿತು.

೧೪೯. ಸ್ವಪ್ನದಲ್ಲಿ (ಜನ, ಪ್ರಾಣಿ ಮೊದಲಾದವುಗಳೆಲ್ಲ ತುಂಬಿರುವ) ಪಟ್ಟಣವೊಂದು ಕಂಡು ಬಂದರೂ, ಅದೆಲ್ಲವೂ ಶುದ್ಧ ಸಂವಿತ್ತಲ್ಲದೆ ಇನ್ನೇನೂ

ಯಾಃ ಕಾಶ್ಚನ ದೃಶೋ ಯೇ ಯೇ ಭಾವಾಭಾವಾಸ್ತ್ರಿಕಾಲಗಾಃ ।
ಸದೇಶಕಾಲಚಿತ್ತಾಸ್ತತ್ಸರ್ವಂ ಚಿದ್ವ್ಯೋಮಮಾತ್ರಕಂ । ॥ ೧೫೦ ॥

ಸ ಏಷ ದೇವಃ ಕಥಿತೋ ಯಃ ಪರಃ ಪರಮಾರ್ಥತಃ ।
ಯಸ್ತ್ವಂ ಸೋಽಹಮಶೇಷಂ ವಾ ಜಗದೇವ ಚ ಯೋಽಖಿಲಃ ॥ ೧೫೧ ॥

ಸರ್ವಸ್ಯ ವಸ್ತುಜಾತಸ್ಯ ಜಗತೋಽನ್ಯಸ್ಯ ತೇ ಮಮ ।
ದೇಹೋ ಹಿ ಚೇತನಾಕಾಶಂ ಪರಮಾತ್ಮೈವ ನೇತರತ್ ॥ ೧೫೨ ॥

ಹೇಗೆ ಅಲ್ಲವೇ ಅಲ್ಲವೋ ಹಾಗೆಯೇ ನಾನಾವಿಧವಾಗಿ ಕಾಣುತ್ತಿರುವ ಈ ಭುವನ ತ್ರಯದಲ್ಲಿಯೂ ಶುದ್ಧ ಸಂವಿತ್ತು ಒಂದೇ ಅಲ್ಲದೆ ಇನ್ನೇನೂ ಇಲ್ಲ.

೧೫೦. ಜಗತ್ತಾಗಿ ಕಾಣುವ ದೃಶ್ಯಗಳು ಯಾವ ಯಾವವುಂಟೋ, ಕಾಲ ತ್ರಯ ಸಂಬಂಧವಾಗಿ ಕಾಣುವ ಭಾವ-ಅಭಾವಗಳು ಯಾವವುಂಟೋ, ಅವೆಲ್ಲವೂ ದೇಶ ಕಾಲ ಎಂಬ ಪರಿಚ್ಛೇದವನ್ನು ಒಪ್ಪಿಕೊಂಡು ಚಿತ್ತವಾಗಿರುವ ಚಿದ್ವ್ಯೋಮ ಮಾತ್ರವೆಂದು ತಿಳಿ.

೧೫೧. (ಆದರಿಂದ ನಾನು ಮೊದಲೆ ಹೇಳಿದಂತೆ) ಪರಮಾರ್ಥ ದೃಷ್ಟಿ ಯಿಂದ ನೋಡಿದಾಗ ಯಾರು ಎಲ್ಲದಕ್ಕಿಂತ ಶ್ರೇಷ್ಠನೊ ಅವನೇ ದೇವನು. ನೀನು ಯಾರೋ ಅವನೇ ನಾನು. ಯಾರು ಎಲ್ಲವೂ ಆಗಿರುವನೋ ಅವನೇ ಜಗತ್ತೂ ಆಗಿರುವನು.

೧೫೨. ಸಮಸ್ತವಾದ ಪದಾರ್ಥ ಪದಾರ್ಥಗಳ, ಈ ಜಗತ್ತಿನ, ಅವನ, ನಿನ್ನ, ನನ್ನ ದೇಹವೆಂಬುದು ಯಾವುದುಂಟೋ ಅದು ಚೇತನಾಕಾಶವೇ ಹೊರತು ಇನ್ನು ಏನೂ ಅಲ್ಲ. ಆ ಚೇತನಾಕಾಶವೇ ಪರಮಾತ್ಮನು. ಇನ್ನು ಬೇರೆ ಯಾವುದೂ ಇಲ್ಲವೇ ಇಲ್ಲ.

ಸಂಕಲ್ಪನೇ ಸ್ವಪ್ನಪುರೇ ಶರೀರಂ ಚಿದ್ವ್ಯೋಮತೋನ್ಯನ್ನ ಯಥಾಸ್ತಿ ಕಿಂಚಿತ್ ।
ತಥೇಹ ಸರ್ಗೇ ಪ್ರಥಮೈಕಸರ್ಗಾನ್ಮನೇ ಪ್ರಭೃತ್ಯಸ್ತಿ ನ ರೂಪಮನ್ಯತ್ ॥ ೧೫೩ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ "ಜಗತಃ ಪರಮಾತ್ಮಮಯತ್ವವರ್ಣನಂ" ನಾಮ
ಏಕೋನತ್ರಿಂಶಃ ಸರ್ಗಃ

---

೧೫೩. ಸಂಕಲ್ಪದಲ್ಲಿಯೂ, ಸ್ವಪ್ನಪುರದಲ್ಲಿಯೂ, ಶರೀರವಾಗಿ ಕಾಣುವುದು ಯಾವುದುಂಟೋ ಅದು ಚಿದ್ವ್ಯೋಮವೇ ಹೊರತು ಇನ್ನೇನೂ ಅಲ್ಲ. ಹಾಗೆಯೇ ಸೃಷ್ಟಿಯಲ್ಲಿಯೂ ಮೊದಲನೆಯ ಹಿರಣ್ಯಗರ್ಭನ ಸೃಷ್ಟಿಯಿಂದ ಹಿಡಿದು ಇನ್ನೊಂದು ಬೇರೆಯಾದುದು ಯಾವುದೂ ಇಲ್ಲ.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ನಿರ್ವಾಣ
ಪ್ರಕರಣದಲ್ಲಿ "ಜಗತ್ಪರಮಾತ್ಮಮಯತ್ವವರ್ಣನ" ಎಂಬ
ಇಪ್ಪತ್ತೊಂಭತ್ತನೆಯ ಸರ್ಗವು.

ತ್ರಿಂಶಃ ಸರ್ಗಃ

ಶ್ರೀ ಈಶ್ವರ ಉವಾಚ :—

ಏವಂ ಸರ್ವಮಿದಂ ವಿಶ್ವಂ ಪರಮಾತ್ಮೈವ ಕೇವಲಂ ।
ಬ್ರಹ್ಮೈವ ಪರಮಾಕಾಶಮೇಷ ದೇವಃ ಪರಃ ಸ್ಮೃತಃ ॥ ೧ ॥

ತದೇತತ್ಪೂಜನಂ ಶ್ರೇಯಸ್ತಸ್ಮಾತ್ಸರ್ವಮವಾಪ್ಯತೇ ।
ತದೇವ ಸರ್ವಭೂಃ ಸರ್ವಮಿದಂ ತಸ್ಮಿನ್ವ್ಯವಸ್ಥಿತಂ ॥ ೨ ॥

ಅಕೃತ್ರಿಮಮನಾದ್ಯಂತಮದ್ವಿತೀಯಮ ಖಂಡಿತಂ ।
ಅಬಹಿಃ ಸಾಧನಾಸಾಧ್ಯಂ ಸುಖಂ ತಸ್ಮಾದವಾಪ್ಯತೇ ॥ ೩ ॥

ಮೂವತ್ತನೆಯ ಸರ್ಗ

ಶ್ರೀ ಈಶ್ವರನು ಹೇಳಿದನು :—

೧. ಪೂರ್ವೋಕ್ತ ಪ್ರಕಾರವಾಗಿ ವಿಶ್ವವೆಲ್ಲವೂ ಕೇವಲ ಪರಮಾತ್ಮನೇ ! ಆ ಪರಮಾತ್ಮನೇ ಬ್ರಹ್ಮವು. ಅದೇ ಪರಮಾಕಾಶವು. ಅದನ್ನೇ ಸರ್ವ ಶ್ರೇಷ್ಠನಾದ ದೇವನೆನ್ನುವರು.

೨. ಅದರಿಂದ, ಈ ಪರದೇವನನ್ನು ಪೂಜಿಸುವುದೇ ಶ್ರೇಯೋ ನಿದಾನವು. ಆದರಿಂದ ಸರ್ವವೂ ಲಭಿಸುವುದು. ಅದೇ ಎಲ್ಲದರ ಉತ್ಪತ್ತಿಗೂ ಕಾರಣವು. ಇರುವುದೆಲ್ಲವೂ ಅದರಲ್ಲಿಯೇ ಇರುವುದು.

೩. ಅದು (ಚಿತ್ತು) ಅಕೃತ್ರಿಮವು (ಯಾರಿಂದಲೂ ಆದುದಲ್ಲ) ಆದಿ-ಅಂತಗಳಿಲ್ಲದುದು. ಅಂತಹುದು ಇನ್ನೊಂದಿಲ್ಲವಾದುದರಿಂದ ಅದು ಅದ್ವಿತೀಯವು. (ಎಲ್ಲವನ್ನೂ ಖಂಡಖಂಡವಾಗಿ ಮಾಡಿ ತೋರಿಸುವ ಕಾಲದೇಶಗಳನ್ನು ಅದು ಮೀರಿದುದು. ಆದರಿಂದ) ಅದು ಅಖಂಡಿತವು. ಅಲ್ಲದೆ ಬಹಿಸ್ಸಾಧನಗಳು ಯಾವುದಕ್ಕೂ ಸಾಧ್ಯವಲ್ಲದುದು. ಅದರಿಂದಲೇ ಸುಖವು ದೊರೆಯುವುದು.

ಪ್ರಬುದ್ಧಸ್ತ್ವಂ ಮುನಿಶ್ರೇಷ್ಠ ತೇನೇದಂ ತವ ಕಥ್ಯತೇ ।
ನಾತಿದೇವಾರ್ಚನೇ ಯೋಗ್ಯಃ ಪುಷ್ಪಧೂಪಚಯೋ ಮಹಾನ್ ॥ ೪ ॥

ಅವ್ಯುತ್ಪನ್ನಧಿಯೋ ಯೇ ಹಿ ಬಾಲಪೇಲವಚೇತಸಃ ।
ಕೃತ್ರಿಮಾರ್ಚಾಮಯಂ ತೇಷಾಂ ದೇವಾರ್ಚನಮುದಾಹೃತಂ ॥ ೫ ॥

ಶಮಬೋಧಾದ್ಯಭಾವೇ ಹಿ ಪುಷ್ಪಾದ್ಯೈರ್ವಾರ್ಚಯಂತಿ ಹಿ ।
ಮಿಥ್ಯೈವ ಕಲ್ಪಿತೈರೇವಮಾಕಾರೇ ಕಲ್ಪಿತಾತ್ಮಕೇ ॥ ೬ ॥

ಸ್ವಸಂಕಲ್ಪಕೃತೈಃ ಕೃತ್ವಾ ಕ್ರಮೈರರ್ಚನಮಾದೃತಾಃ ।
ಬಾಲಾಃ ಸಂತೋಷಮಾಯಾಂತಿ ಪುಷ್ಪಧೂಪಲವಾರ್ಚನೈಃ ॥ ೭ ॥

(ದುಃಖ ಪ್ರತಿಯೋಗಿಯಾದ ಸುಖವೊಂದು; ಸಹಜವಾಗಿರುವ ಆನಂದ ರೂಪವಾದ ಸುಖವೊಂದು. ಇವೆರಡೂ ಸುಖಗಳೇ ಆದರೂ ಇಲ್ಲಿ ಹೇಳಿರುವುದು ಎರಡನೆಯ ದನ್ನೇ! ಮೊದಲನೆಯದು ವಿಕಾರ: ಎರಡನೆಯದು ಸಹಜ.)

೪. ಎಲೈ ಮುನೀಂದ್ರನೇ, ನೀನು ಪ್ರೌಢನು. ಪ್ರಬುದ್ಧನು. ಜ್ಞಾನಿಯು. ಆದರಿಂದ ಇದನ್ನು ನಿನಗೆ ಹೇಳುತ್ತಿರುವೆನು. ಈ ಅತಿ ದೇವನನ್ನು ಪೂಜಿಸುವು ದಕ್ಕೆ ಪುಷ್ಪ ಧೂಪಗಳನ್ನು ಗುಡ್ಡೆಗುಡ್ಡೆಯಾಗಿ ತರಬೇಕಾಗಿಲ್ಲ.

೫. ಪಾಮರರಾಗಿ, ಹುಡುಗರಂತೆ ಎಳೆಯ ಮನಸ್ಸಿನವರು ಯಾರೋ ಅವರಿಗೆ ಕೃತ್ರಿಮ ಪೂಜಾ ಸಾಮಗ್ರಿಗಳಿಂದ ತುಂಬಿರುವ ಈ ಸಗುಣ ಮೂರ್ತಿಗಳ ಆರಾಧನವು.

೬. ಶಮ, ಬೋಧ, ಮೊದಲಾದವು ಇಲ್ಲದಾಗ, ಪುಷ್ಪ ಮೊದಲಾದವು ಗಳಿಂದ ಪೂಜೆಯು ಕರ್ತವ್ಯವು. ಕಲ್ಪಿತವಾದ ಆಕಾರವುಳ್ಳ ದೇವರಿಗೆ ಕಲ್ಪಿತವಾದ ದ್ರವ್ಯಗಳಿಂದಲೇ ಮಾಡುವ ಪೂಜೆಯೂ ಮಿಥ್ಯೆಯೇ!

೭. ತಮ್ಮ ತಮ್ಮ ಸಂಕಲ್ಪಗಳಿಂದಲೇ ಏರ್ಪಡಿಸಿಕೊಂಡಿರುವ ಕ್ರಮ ಗಳಿಂದ ಪುಷ್ಪ ಧೂಪಗಳನ್ನು ಅಷ್ಟಿಷ್ಟು ಒಪ್ಪಿಸಿ ಪೂಜೆ ಮಾಡಿದೆವೆಂದು ಸಂತೋಷ ಪಡುವವರು ಕೇವಲ ಬಾಲಕರೇ ಸರಿ!

ಸ್ವಸಂಕಲ್ಪ ಕೃತೈರರ್ಥೈಃ ಕೃತ್ವಾ ದೇವಾರ್ಚನಂ ಮುಧಾ ।
ಯಥಾ ಕಥಂಚಿತ್ಕಿಂಚಿನ್ಮಿಥ್ಯಾತ್ಮ ಫಲಮಾತ್ರಂ ನಯಂತಿ ತೇ ॥ ೮ ॥

ಪುಷ್ಪಧೂಪಾರ್ಚನಂ ಬ್ರಹ್ಮನ್ಕಲ್ಪಿತಂ ಬಾಲಬುದ್ಧಿಷು ।
ಯತ್ತ್ವಾಸ್ಮದ್ವಿಧದೃಶಾಂ ಯೋಗ್ಯಮರ್ಚನಂ ತದ್ವದಾಮ್ಯಹಂ ॥ ೯ ॥

ಅಸ್ಮದಾದಿಸ್ತ್ವಸೌ ಕಶ್ಚಿದ್ದೇವೋ ಮತಿಮತಾಂ ವರ ।
ದೇವಸ್ತ್ರಿ ಭುವನಾಧಾರಃ ಪರಮಾತ್ಮೈವ ನೇತರತ್ ॥ ೧೦ ॥

ಶಿವಃ ಸರ್ವಪದಾತೀತಃ ಸರ್ವಸಂಕಲ್ಪನಾತಿಗಃ ।
ಸರ್ವ ಸಂಕಲ್ಪವಲಿತೋ ನ ಸರ್ವೋ ನ ಚ ಸರ್ವಕಃ ॥ ೧೧ ॥

---

೮. ಹೀಗೆ ಸ್ವಸಂಕಲ್ಪಗಳಿಂದ, ಯಾವುದೋ ವಿಶಿಷ್ಟವಾದ ಉದ್ದೇಶಕ್ಕಾಗಿ ದೇವಾರ್ಚನವನ್ನು ವ್ಯರ್ಥವಾಗಿ ಮಾಡಿದರೂ ಅದು ಮಿಥ್ಯವಾಗಿರುವ ಯಾವುದಾದರೂ ಒಂದು ಫಲವನ್ನು ಹೇಗೆ ಹೇಗೆಯೋ ಕೊಟ್ಟೇ ಕೊಡುವುದು.

೯. ಪುಷ್ಪ ಧೂಪಗಳಿಂದ ಅರ್ಚನ ಮಾಡುವುದು ಎಂಬುದು ಬಾಲ ಬುದ್ಧಿಗಳಲ್ಲಿ ಕಲ್ಪಿತವಾದುದು. ನಿಮ್ಮಂತಹವರಿಗೆ ಯೋಗ್ಯವಾದುದು ಯಾವುದೋ ಅಂತಹ ಅರ್ಚನವನ್ನು ಹೇಳುವೆನು ಕೇಳು.

೧೦. ಎಲ್ಲರೂ ಪೂಜೆ ಮಾಡುವುದು ಶಿವಾದಿಗಳಾದ ನಮ್ಮನ್ನೇ ಆದರೂ ಎಲೈ ಬುದ್ಧಿವಂತರಲ್ಲಿ ಅಗ್ರಗಣ್ಯನಾದವನೇ, ದೇವನೆಂದರೆ ತ್ರಿಭುವನಗಳಿಗೂ ಆಧಾರನಾದ ಪರಮಾತ್ಮನೇ ಅಲ್ಲದೆ ಇನ್ನು ಯಾರೂ ಅಲ್ಲ.

೧೧. ಬ್ರಹ್ಮವಿಷ್ಣ್ವಾದಿ ಪದಗಳನ್ನೆಲ್ಲ ಮೀರಿ, ಮನಸ್ಸಿಗೂ ಅಗೋಚರನಾಗಿ, ಯಾವ ರೀತಿಯಾದ ಸಂಕಲ್ಪಗಳಿಗೂ ಸಿಕ್ಕದ, ಸರ್ವವೂ ಆಗಿದ್ದ, ಯಾವುದೂ ಅಲ್ಲದ ಶಿವವಾದ ಚಿತ್ತು ಯಾವುದುಂಟೋ ಅದೇ ದೇವನು.

(ಸರ್ವೇಭ್ಯೋ ಬ್ರಹ್ಮವಿಷ್ಣು ರುದ್ರಾದಿ ದೇವೇಭ್ಯೋ ಅಪ್ಯತೀತಃ । ಸಂಕಲ್ಪನಾ ಮನೋವೃತ್ತಯಃ ತದತಿಗಃ । ಯತೋ ವಾಚೋ ನಿವರ್ತಂತೇ ಅಪ್ರಾಪ್ಯ

ದಿಕ್ಕಾಲಾದ್ಯನವಚ್ಛಿನ್ನಃ ಸರ್ವಾರಂಭ ಪ್ರಕಾಶಕೃತ್ ।
ಚಿನ್ಮಾತ್ರಮೂರ್ತಿರಮಲೋ ದೇವ ಇತ್ಯುಚ್ಯತೇ ಮುನೇ ॥ ೧೨ ॥

ಸಂವಿತ್ಸರ್ವಕಲಾತೀತಾ ಸರ್ವಭಾವಾಂತರಸ್ಥಿತಾ ।
ಸರ್ವಸತ್ತಾಪ್ರದಾ ದೇವೀ ಸರ್ವಸತ್ತಾಪಹಾರಿಣೀ ॥ ೧೩ ॥

ಬ್ರಹ್ಮ ಬ್ರಹ್ಮನ್ ಸದಸತೋರ್ಮಧ್ಯಂ ತದ್ದೇವ ಉಚ್ಯತೇ ।
ಪರಮಾತ್ಮಪರಾಭಿಖ್ಯಂ ತತ್ಸದೋಮಿತ್ಯುದಾಹೃತಂ ॥ ೧೪ ॥

ಮನಸಾ ಸಹ ಇತಿಶ್ರುತೇಃ । ಯಸ್ತು ಸರ್ವೈಃ ವಿಷಯ ಭೋಗ ಸಂಕಲ್ಪೈಃ ವಲಿತಃ ವೇಷ್ಟಿತಃ । ಬ್ರಹ್ಮ ವಿಷ್ಣ್ವಾದಿ ಪದರೂಪಃ ಸನ್ ಸಾಧನತೋಽಪಿ ಸರ್ವೋನ ಫಲತೋಽಪಿ ಸರ್ವಂ ಕಂ ಭೋಗ ಸುಖಂ ಯಸ್ಮಿನ್ ತಥಾವಿಧಃ । ಸ್ವಸ್ವ ಕರ್ಮ ವಾಸನಾ ತಾರತಮ್ಯಾನು ಸಾರೇಣೈವ ಭೋಗ ಸಾಮಗ್ರ್ಯಃ ತತ್ಫಲ ಸುಖಲವಸ್ಯ ಚ ತತ್ರಲಾಭಾದಿತ್ಯರ್ಥಃ ॥ –ತಾ. ಪ್ರ.)

(ಇಲ್ಲಿ ಸರ್ವ ಸಂಕಲ್ಪವಲಿತೋನ, ಸರ್ವೋ ನ ಚ ಸರ್ವಕಃ. ಎಂದು ಮಾಡಿಕೊಂಡಿದೆ.)

೧೨. ಎಲೈ ಮುನಿಯೆ, ದಿಕ್ಕು, ಕಾಲ, ಮೊದಲಾದವುಗಳಿಂದ ಅವಚ್ಛಿನ್ನವಲ್ಲದ, ಯಾವ ಕೆಲಸ ಮಾಡಬೇಕಾದರೂ ಅದಕ್ಕೆ ಬೇಕಾದ ಬುದ್ಧಿಯನ್ನು ಕೊಡುವ, ಚಿನ್ಮಾತ್ರ ಸ್ವರೂಪವಾಗಿರುವ ಅಮಲನಾದ ದೇವನೇ ದೇವನು.

೧೩. ಸಂವಿತ್ತು ಸರ್ವ ಸಂಕಲ್ಪಗಳಿಗೂ ಮೀರಿದುದು. ಸರ್ವಭಾವಗಳಿಗೂ ಆಧಾರವಾಗಿರುವುದು. ಎಲ್ಲಕ್ಕೂ ಇರುವುದಕ್ಕೆ ಬೇಕಾದ ಸಾಮರ್ಥ್ಯವನ್ನು ಕೊಡುವುದು. ಎಲ್ಲದರ ಸತ್ವವನ್ನೂ ಅಪಹರಿಸಲೂ ಬಲ್ಲುದು. ಅದರಿಂದ ಈ ಸಂವಿತ್ತೇ ದೈವವು,

೧೪. ಎಲೈ ಬ್ರಹ್ಮನೆ, ಸತ್-ಅಸತ್ ಇವೆರಡಕ್ಕೂ ನಡುವೆ ಬ್ರಹ್ಮವು ಇರುವುದು. ಅದೇ ದೇವನು. ಅದಕ್ಕೆ ಪರಮಾತ್ಮನೆಂಬ ಇನ್ನೊಂದು ಹೆಸರೂ ಉಂಟು. ಅದನ್ನು ತಿಳಿದವರು, ತತ್, ಸತ್, ಓಂ, ಎಂದು ತೋರಿಸುವರು.

ಮಹಾಸತ್ತಾ ಸ್ವಭಾವೇನ ಸರ್ವತ್ರ ಸಮತಾಂ ಗತಂ ।
ಮಹಾಚಿದಿತಿ ಸಂಪ್ರೋಕ್ತಂ ಪರಮಾರ್ಥ ಇತಿ ಶ್ರುತಂ ॥ ೧೫ ॥

ಸ್ಥಿತಂ ಸರ್ವತ್ರ ಸರ್ವಂತು ಲತಾಸ್ವಂತರ್ಯಥಾ ರಸಃ ।
ಸತ್ತಾಸಾಮಾನ್ಯರೂಪೇಣ ಮಹಾಸತ್ತಾತ್ಮನಾಪಿ ಚ ॥ ೧೬ ॥

ಯಚ್ಚಿತ್ತತ್ತ್ವಮರುಂಧತ್ಯಾಃ ಯಚ್ಚಿತ್ತತ್ತ್ವಂ ತವಾನಘ ।
ಯಚ್ಚಿತ್ತತ್ತ್ವಂ ಚ ಪಾರ್ವತ್ಯಾ ಯಚ್ಚಿತ್ತತ್ತ್ವಂ ಗಣೇಷು ಚ ॥ ೧೭ ॥

ಚಿತ್ತತ್ತ್ವಂ ಯನ್ಮಮೇದಂ ಚ ಚಿತ್ತತ್ತ್ವಂ ಯಜ್ಜಗತ್ತ್ರಯೇ ।
ತದ್ದೇವ ಇತಿ ತತ್ತ್ವಜ್ಞಾ ವಿದುರುತ್ತಮಬುದ್ಧಯಃ ॥ ೧೮ ॥

(ಸದಸತ್, ಭಾವಾಭಾವ, ವರ್ತಮಾನ ತದನ್ಯ ಕಾಲಗಳು, ಮೂರ್ತಾಮೂರ್ತಗಳು, ಕಾರಣ ಕಾರ್ಯಗಳು, ವ್ಯಾವಹಾರಿಕ ಪ್ರಾತಿಭಾಸಿಕರು, ಇವರ ನಡುವಿರುವ ಆಂತರಾಳಿಕ ಸಾಕ್ಷಿ ಚಿನ್ಮಾತ್ರರೂಪವಾಗಿರುವ, ಅಥವಾ ಅಧಿಷ್ಠಾನವಾಗಿರುವ ಮಧ್ಯಸ್ಥ (ಬ್ರಹ್ಮ). ಪರಮ ಸೂರ್ಯ ಚಂದ್ರಾಗ್ನಿ ಕರಣಜ್ಯೋತಿಗಳಿಗಿಂತ ಉತ್ಕೃಷ್ಟನಾದ ಆತ್ಮನೇ ಪರ ಪ್ರಕಾಶವು. ಅದು ಎಲ್ಲವನ್ನೂ ಪ್ರಕಾಶಪಡಿಸಬಲ್ಲುದು. ಅಂತಹ ಅಭಿಖ್ಯಾ ಎಂದರೆ ಪ್ರಕಾಶವು ಯಾರಿಗೆ ಇರುವುದೋ ಅದು ತತ್. ಅದನ್ನೇ ಸತ್, ಓಂ, ಎಂಬ ಪದಗಳಿಂದ ಶ್ರುತಿಗಳಲ್ಲಿ ವಿರಾಡಾದಿ ಪಾದತ್ರಯಾತ್ಮಕ ಸರ್ವ ಪ್ರಪಂಚ ವಿಲಾಪನದಿಂದ ಉಳಿಯುವ ಚತುರ್ಥ ಪಾದವು “ಶಿವಮದ್ವೈತಂ ಚತುರ್ಥಂ ಮನ್ಯಂತೇ ಸ ಆತ್ಮಾಸ ವಿಜ್ಞೇಯಃ” ಎಂದು ಉದಾಹರಿಸಿರುವುದು.

೧೫. ಯಾವುದೂ ಇಲ್ಲದಿರುವಾಗ ಮಹಾ ಸತ್ತಾ ಸ್ವಭಾವದಿಂದಲೇ ಇದ್ದು ಸರ್ವಕ್ಕೂ ಆಧಾರವಾಗಿರುವ ಮಹಾ ಚಿತ್ ಎಂದು ಯಾವುದನ್ನು ಹೇಳುವರೋ ಅದೇ ಪರಮಾರ್ಥವು ಎಂದು ಬಲ್ಲವರು ಹೇಳುವರು.

೧೬. ಅದು ಎಲ್ಲೆಲ್ಲಿಯೂ ಇರುವುದು. ಲತೆಗಳ ಒಳಗೆ ರಸವಿರುವಂತೆ ಅದು ಸತ್ತಾಸಾಮಾನ್ಯ ರೂಪದಿಂದ ಇದ್ದರೂ, ಸರ್ವವೂ ತಾನೇ ಆಗಿರುವುದರಿಂದ ಮಹಾ ಸತ್ತಾ ಕೂಡ ಆಗಿರುವುದು.

೧೭-೧೮. ಅರುಂಧತಿಯಲ್ಲಿ ಇರುವ ಚಿತ್ ತತ್ತ್ವವು ಯಾವುದೋ, ವಸಿಷ್ಠ

ಪಾದಪಾಣ್ಯಾದಿಮಾನನ್ಯೋ ಯೋ ವಾ ದೇವಃ ಪ್ರಕಲ್ಪ್ಯತೇ ।
ಸಂವಿನ್ಮಾತ್ರಾದೃತೇ ಬ್ರಹ್ಮನ್ ಕಿಂ ಸಾರಃ ಕಿಲ ಕಥ್ಯತಾಂ ॥ ೧೯ ॥

ಚಿನ್ಮಾತ್ರಮೇವ ಸಂಸಾರಸಾರಃ ಸಕಲಸಾರತಾಂ ।
ಗತಃ ಸ ದೇವಃ ಸರ್ವೋಽಹಂ ತಸ್ಮಾತ್ಸರ್ವಮವಾಪ್ಯತೇ ॥ ೨೦ ॥

ನ ಸ ದೂರೇ ಸ್ಥಿತೋ ಬ್ರಹ್ಮನ್ನ ದುಷ್ಪ್ರಾಪಃ ಸ ಕಸ್ಯಚಿತ್ ।
ಸಂಸ್ಥಿತಃ ಸ ಸದಾ ದೇಹೇ ಸರ್ವತ್ರೈವ ಚ ಖೇ ತಥಾ ॥ ೨೧ ॥

ನಾದ ನಿನ್ನಲ್ಲಿ ಇರುವ ಚಿತ್ ತತ್ತ್ವವು ಯಾವುದೋ, ಎಲೈ ಅನಘನೇ, ಪಾರ್ವತಿಯಲ್ಲಿ ಇರುವ ಚಿತ್ ತತ್ತ್ವವು ಯಾವುದೋ, ಗಣಗಳಲ್ಲಿರುವ ಚಿತ್ ತತ್ತ್ವವು ಯಾವುದೋ, ನನ್ನಲ್ಲಿ ಇರುವ ಚಿತ್ ತತ್ತ್ವವು ಯಾವುದೋ, ಜಗತ್ತ್ರಯದಲ್ಲಿ ಇರುವ ಚಿತ್ ತತ್ತ್ವವು ಯಾವುದೋ, ಅದೇ ದೇವನೆಂದು ಉತ್ತಮ ಬುದ್ಧಿಗಳಾದ ತತ್ತ್ವಜ್ಞರು ಹೇಳುವರು.

೧೯. ಕೈಕಾಲುಗಳಿಂದ ಕೂಡಿರುವ ಮತ್ತೊಬ್ಬ ದೇವನನ್ನು ಕಲ್ಪಿಸಿದರೆ, ಸಂವಿನ್ಮಾತ್ರವಲ್ಲದ ಅದರಲ್ಲಿ ಇನ್ನೇನು ತಾನೇ, ಎಲೈ ಬ್ರಹ್ಮನೇ, ಸಾರವಿರುವುದು ಹೇಳು.

೨೦. ಸಂಸಾರದಲ್ಲಿ ಕೊಂಚವಾದರೂ ಸಾರವಿರುವುದಾದರೆ ಅದು ಚಿತ್ತು ಅಲ್ಲಿರುವುದರಿಂದಲೇ! ಅದರಿಂದ ಸಕಲ ಸಾರಭೂತನಾದವನು ಯಾರೋ ಅವನೇ ಆ ದೇವನು. ಆ ಸರ್ವ ಸ್ವರೂಪನಾದ ದೇವನೇ "ಅಹಂ" ಎಂದುಕೊಂಡು ಇಲ್ಲಿರುವವನು. ಅದರಿಂದ ಅವನನ್ನು ಪೂಜಿಸುವುದರಿಂದ ಎಲ್ಲವೂ ದೊರೆಯುವುದು.

೨೧. ಆ ದೇವನು ದೂರದಲ್ಲಿಲ್ಲ. ಎಲೈ ಬ್ರಹ್ಮನೇ, ಯಾರಿಗೂ ಅವನನ್ನು ಹೊಂದುವುದೂ ಕಷ್ಟವಿಲ್ಲ. ಆ ದೇವನು ಯಾವಾಗಲೂ ದೇಹದಲ್ಲಿ, ಅಷ್ಟೇನು, ಆಕಾಶದಲ್ಲಿ, ಎಲ್ಲೆಲ್ಲೂ, ಇರುವನು.

ಸ ಕರೋತಿ ಸ ಚಾಶ್ನಾತಿ ಸ ಬಿಭರ್ತಿ ಪ್ರಯಾತಿ ಚ ।
ಸ ನಿಃಶ್ವಸತಿ ಸಂವೇತ್ತಾ ಸೋಂಗಾನ್ಯಂಗಾನಿ ವೇತ್ತಿ ಚ ॥ ೨೨ ॥

ಸೋಽಸ್ಯಾಂ ವಿಚಿತ್ರಚೇಷ್ಟಾಯಾಂ ಪ್ರಕಾಶಿನ್ಯಾಂ ಚ ತದ್ವಶಾತ್ ।
ಸತ್ಸ್ವರೂಪ ನಿಬದ್ಧಾಯಾಂ ಪುರ್ಯಾಮಾಸ್ತೇ ಮುನೀಶ್ವರ ॥ ೨೩ ॥

ಶರೀರಾವಸಥಾಯಾಂ ಚ ಚಲಾಯಾಂ ತತ್ಪ್ರಸಾದತಃ ।
ಸೋಽಸ್ಯಾಂ ಗಹನಕೋಶಾಯಾಂ ಹೃದ್ಗುಹಾಯಾಂ ಗುಹೇಶ್ವರಃ ॥ ೨೪ ॥

ಮನಃ ಷಷ್ಠೇಂದ್ರಿಯಾಚಾರ ಸತ್ತಾತೀತಾಮಲಾತ್ಮನಃ ।
ತಸ್ಯ ಸಂವ್ಯವಹಾರಾರ್ಥಂ ಸಂಜ್ಞಾ ಚಿದಿತಿ ಕಲ್ಪಿತಾ ॥ ೨೫ ॥

---

೨೨. ಆತನೇ ಎಲ್ಲವನ್ನೂ ಮಾಡುವನು, ಆತನೇ ಎಲ್ಲವನ್ನೂ ತಿನ್ನ ತಕ್ಕವನು. ಆತನೇ ಎಲ್ಲವನ್ನೂ ಭರಿಸತಕ್ಕವನು, ಹೋಗುವವನೂ ಆತನೇ, ಉಸಿರಾಡುವವನೂ ಆತನೇ, ಆತನೇ ಎಲ್ಲವನ್ನೂ ಅರಿಯುತಕ್ಕವನು. ಅಂಗಾಂಗ ಗಳನ್ನೂ ಕೆಲಸ ಮಾಡಿಸುವವನೂ ಆತನೇ !

೨೩. ಎಲೈ ಮುನೀಂದ್ರನೇ, ವಿಚಿತ್ರ ವ್ಯಾಪಾರಗಳನ್ನು ಮಾಡುವ ಈ ದೇಹಪುರಿಯಲ್ಲಿ ಆತನು ಇರುವುದರಿಂದಲೇ ವ್ಯಾಪಾರಗಳೆಲ್ಲವೂ ನಡೆಯು ತ್ತಿರುವುದು. ಆತನ ಸ್ವರೂಪದಿಂದಲೇ ಇದು ನಿಯತವಾಗಿರುವುದು.
(ಸಏಷ ಇಹ ಪ್ರವಿಷ್ಟ ಆನಖಾಗ್ರೇಭ್ಯಃ—ಶ್ರುತಿ.)

೨೪. ಶರೀರವೆಂಬ ಮಹಾ ಗೃಹವೊಂದುಂಟು. ಅದು ಆತನ ಪ್ರಸಾದ ದಿಂದ ವ್ಯಾಪಾರ ಮಾಡುವುದು. ಶರೀರವೆಂಬ ದೊಡ್ಡ ಕೋಶದಲ್ಲಿ ಹೃದಯವೆಂಬ ಗುಹೆಯಲ್ಲಿ ಆ ಗುಹೇಶ್ವರನು ಇರುವನು.

೨೫. ಮನಸ್ಸೆಂಬ ಆರನೆಯ ಇಂದ್ರಿಯದ ವ್ಯಾಪಾರ, ಸ್ಥಿತಿಗಳಿಗೆ ಅತೀತ ನಾಗಿ, ಮಲರಹಿತನಾಗಿರುವ ಆತ್ಮನಿಗೆ ವ್ಯವಹಾರಾರ್ಥವಾಗಿ ಚಿತ್ತು ಎಂಬ ಸಂಜ್ಞೆಯು ಕಲ್ಪಿತವಾಗಿರುವುದು.

ಸ ಏಷ ಚಿನ್ಮಯಃ ಸೂಕ್ಷ್ಮಃ ಸರ್ವವ್ಯಾಪೀ ನಿರಂಜನಃ ।
ಇಮಂ ಭಾಸ್ವರಮಾಭಾಸಂ ಕರೋತಿ ನ ಕರೋತಿ ಚ ॥ ೨೬ ॥

ಸಾ ಚಿದತ್ಯಂತ ವಿಮಲಾ ಜಗದರ್ಥಂ ಜಗತ್ಕ್ರಿಯಾಂ ।
ಇಮಾಂ ರಂಜಯತಿ ಪ್ರಾಜ್ಞ ರಸೇನೇವ ಮಧುರ್ಲತಾಂ ॥ ೨೭ ॥

ಚಾರವೋ ಯೇ ಚಮತ್ಕಾರಾಶ್ಚಿತಶ್ಚಿತಿ ಯಥಾ ಸ್ಥಿತಂ ।
ಚಮತ್ಕುರ್ವಂತಿ ಕಿಲ ತೇ ತೇನ ಕೇಚಿನ್ನಭೋಽಭಿಧಾಃ ॥ ೨೮ ॥

---

೨೬. ಚಿತ್ ಸ್ವರೂಪನಾದ ಆತ್ಮನು ಸೂಕ್ಷ್ಮನು. ಸರ್ವ ವ್ಯಾಪಿಯು, ಯಾವುದಕ್ಕೂ ಅಂಟದವನು. ಅವನು ಈ ದೃಶ್ಯರೂಪ ದೇಹವನ್ನು ತೋರುವಂತೆಯೂ ತೋರದಿರುವಂತೆಯೂ ಮಾಡುತ್ತಿರುವನು.

(ಭಾಸ್ಯವಾದ ಜಗತ್ತು ಇರುವಾಗ ಮಾಡಿದಂತೆಯೂ, ಅದಿಲ್ಲದಾಗ ಮಾಡದಿರುವಂತೆಯೂ ತೋರುವನು ಎನ್ನಬೇಕು. ತಾ. ಪ್ರ.)

೨೭. ಆ ಚಿತ್ತು ಎಂಬುದು ತಾನು ಅತ್ಯಂತ ವಿಮಲವಾಗಿದ್ದರೂ, ಜಗತ್ತಿನ ಸೃಷ್ಟಿ ಸ್ಥಿತಿ ಲಯ ರೂಪವಾದ ಜಗದ್ವ್ಯಾಪಾರವೆಲ್ಲವನ್ನೂ, ವಸಂತರ್ತುವು ರಸವನ್ನು ಕೊಟ್ಟು ಲತೆಯನ್ನು ಪೋಷಿಸುವಂತೆ, ತಾನು ನಿಂತು ಪೋಷಿಸುವುದು.

೨೮. ಚಿತ್ತು ತಾನು ತನ್ನಂತೆಯೇ ಇದ್ದುಕೊಂಡೂ ತನ್ನಲ್ಲಿಯೇ ತೋರಿಸುವ ಚಮತ್ಕಾರಗಳು ಬಹು ಸೊಗಸಾದವು. ಅವು ಕಾಣಿಸಿಕೊಳ್ಳುವುದೂ ಆ ಚಿತ್ತಿನಿಂದಲೇ. ಆದರಿಂದ ಕೆಲವು ಆಕಾಶವೆಂಬ ಹೆಸರುಳ್ಳವಾಗುವುವು.

(ಚಮತ್ಕಾರಾಃ ಆರೋಪ್ಯೇ ಸತ್ತಾ ಸ್ಫೂರ್ತಿ ಪ್ರಧಾನ ರೂಪಾಃ । ಚಿತಿ ಮಾಯಾಶಬಲೇ ಯತ್ಸ್ಥಿತಂ ಪೂರ್ವ ಕಾಮ ಕರ್ಮ ವಾಸನಾನುಸಾರೇಣ ನಿಯತಂ ಚಮತ್ಕುರ್ವಂತಿ ಆವಿರ್ಭಾವಯಂತಿ । ತಾನ್ ಚಿಚ್ಚಮತ್ಕಾರಾನೇವ ನಾಮ ಕಲ್ಪನಯಾ ವ್ಯಪದಿಶತಿ. -ತಾ. ಪ್ರ.)

ಕೇಚಿಜ್ಜೀವಾಭಿಧಾನಾಶ್ಚ ಕೇಚಿತ್ ಚಿತ್ತಾಭಿಧಾನಕಾಃ ।
ಕೇಚಿತ್ಕಲಾಭಿಧಾನಾಶ್ಚ ಕೇಚಿದ್ದೇಶಾಭಿಧಾನಕಾಃ ॥ ೨೯ ॥

ಕೇಚಿತ್ ಕ್ರಿಯಾಭಿಧಾನಾಶ್ಚ ಕೇಚಿದ್ದ್ರವ್ಯಾಭಿಧಾನಕಾಃ ।
ಕೇಚಿದ್ಭಾವವಿಕಾರಾದಿ ಜಾತ್ಯೌ ಚಿತ್ಯಾಭಿಧಾನಕಾಃ ॥ ೩೦ ॥

ಪ್ರಕಾಶಾಭಿಧಾನಾಃ ಕೇಚಿತ್ಕೇಚಿಚ್ಛೈಲತಮೋಭಿಧಾಃ ।
ಅರ್ಕೇಂದ್ರಾದ್ಯಭಿಧಾಃ ಕೇಚಿತ್ಕೇಚಿದ್ಯಕ್ಷಾಭಿಧಾನಕಾಃ ॥ ೩೧ ॥

೨೯–೩೦. ಆ ಚಮತ್ಕಾರಗಳಲ್ಲಿ ಕೆಲವು ಜೀವವೆಂದೂ, ಚಿತ್ತವೆಂದೂ, ಕಾಲವೆಂದೂ, ದೇಶವೆಂದೂ ಹೆಸರುಳ್ಳವು. ಕೆಲವು ಕ್ರಿಯಾ ಎಂಬ ಹೆಸರಿನವು. ಇನ್ನು ಕೆಲವು ದ್ರವ್ಯ ಎಂಬ ಹೆಸರಿನವು. ಇನ್ನು ಕೆಲವು ಭಾವ ವಿಕಾರಾದಿಗಳು. ಇನ್ನು ಕೆಲವು ಜಾತಿ, ಔಚಿತ್ಯ ಎಂಬ ಹೆಸರಿನವು.

೩೧. ಇನ್ನು ಕೆಲವು ಪ್ರಕಾಶ ಎಂಬ ಹೆಸರಿನವು. ಶೈಲತಮಗಳೆಂದು ಕೆಲವು, ಇನ್ನು ಕೆಲವು ಅರ್ಕ, ಇಂದ್ರ, ಮೊದಲಾದ ಹೆಸರಿನವು. ಯಕ್ಷ ಎಂಬ ಹೆಸರಿನವು ಕೆಲವು.

(ಪರಿಚ್ಛೇದಕೋಪಾಧಿಗಳು, ಪರಿಚ್ಛಿನ್ನಗಳು, ತದ್ವಿಕಾರಗಳು, ಮೂರನ್ನೂ ಇಲ್ಲಿ ಚಿಚ್ಚಮತ್ಕಾರಗಳೆಂದು ಹೇಳಿರುವುದನ್ನು ಗಮನಿಸಿ. ಭಾವ ವಿಕಾರಾದಿಗಳು ಎಂದರೆ "ಜಾಯತೇ, ಅಸ್ತಿ, ವರ್ಧತೇ, ವಿಪರಿಣಮತೇ, ಅಪಕ್ಷೀಯತೇ, ನಶ್ಯತಿ" ಎಂಬ ಷಡ್ವಿಕಾರಗಳು.)

(ಹೀಗೆ ಚಿತ್ತು ತಾನು ಲೋಕವನ್ನು ಸೃಷ್ಟಿಪಡಿಸುವುದಕ್ಕೆ ತಾನು ಭೋಗಿಸ ಬೇಕೆಂಬ ಇಚ್ಛೆಯೇ ಕಾರಣವೋ? ಎಂದರೆ ಹಾಗಲ್ಲ, ಈ ಜಗತ್ಸೃಷ್ಟಿಯು ಚಿತ್ತಿನ ಭೋಗೇಚ್ಛೆಯಿಂದಲ್ಲ: ಅದರ ಸ್ವಭಾವವೇ ಹೀಗೆ. ಎಂಬುದನ್ನು ಮುಂದಿನ ಶ್ಲೋಕದಲ್ಲಿ ಹೇಳಿದೆ. ಅದನ್ನು ಗೌಡಪಾದರೂ ಒಪ್ಪುತ್ತಾರೆಂದೂ ವ್ಯಾಖ್ಯಾನಕಾರರು ಗೌಡ ಪಾದಕಾರಿಕೆಯನ್ನು ಉದಾಹರಿಸಿದ್ದಾರೆ.

ಭೋಗಾರ್ಥಂ ಸೃಷ್ಟಿರಿತ್ಯೇಕೇ ಕ್ರೀಡಾರ್ಥ ಮಿತಿಚಾಪರೇ । ದೇವಸ್ಯೈಷ ಸ್ವಭಾವೋಽಯಮಾಪ್ತ ಕಾಮಸ್ಯಕಾ ಸ್ಪೃಹಾ ॥

ನಿರಿಚ್ಛಸ್ಯ ಸ್ವಭಾವೇನ ವಸಂತೇನ ಯಥಾಂಕುರಃ ।
ತನ್ಯತೇ ತದ್ವದೇವೇಯಂ ಜಗಲ್ಲಕ್ಷ್ಮೀಶ್ಚಿದಾತ್ಮನಾ ॥ ೩೨ ॥

ಚಿದೇವಾಸು ಸಮಗ್ರಾಸು ಸರ್ವದೈವೈಕಿಕೈವ ಹಿ ।
ತ್ರೈಲೋಕ್ಯಾಂಭೋಧಿಸಂಸ್ಥಾಸು ಶರೀರಜಲಜಾಲಿಕಾ ॥ ೩೩ ॥

ಶರೀರಪಂಕಜಭ್ರಾಂತ ಮನೋಭ್ರಮರಸಂಭೃತಾಂ ।
ಆಸ್ವಾದಯತಿ ಸಂಕಲ್ಪಮಧುಸತ್ತಾಂ ಚಿದೀಶ್ವರೀ ॥ ೩೪ ॥

---

೩೨. ಯಾವುದೊಂದು ಇಚ್ಛೆಯೂ ಇಲ್ಲದೆ ವಸಂತ ಋತುವು ಅಂಕುರಗಳನ್ನು ಹುಟ್ಟಿಸುವಂತೆ, ನಿರಿಚ್ಛೆಯೇ ಸ್ವಭಾವವಾಗುಳ್ಳ ಚಿದಾತ್ಮನಿಂದ ಜಗಲ್ಲಕ್ಷ್ಮಿಯು ಜಗತ್ತೆಂಬ ವೈಭವವು ಪ್ರಾದುರ್ಭವಿಸುವುದು.

(ಅಖಂಡವಾದ ಚಿತ್ತು ಖಂಡ ಖಂಡವಾಗುವ ಸ್ವಭಾವವುಳ್ಳುದು. ಅಖಂಡವಾದ ಚಿತ್ತಿನಲ್ಲಿ ಯಾವುದೂ ಈಹಾ ಇಲ್ಲದಿರುವಿಕೆಯೂ ಖಂಡವಾದ ಚಿತ್ತಿನಲ್ಲಿ ಈಹಾ ತೋರುವುದೂ ವಿಚಿತ್ರವೇನೂ ಅಲ್ಲ. ಹಿಂದೆ ಮ್ಯಾಗ್ನೆಟಿಕ್ ರಿಂಗ್‌ನ ಉದಾಹರಣೆ ಕೊಟ್ಟಿದ್ದದನ್ನು ಜ್ಞಾಪಿಸಿಕೊಳ್ಳಿ. ಅಖಂಡವಾದ ಮ್ಯಾಗ್ನೆಟಿಕ್ ರಿಂಗ್‌ನಲ್ಲಿ ತೋರದ ಮ್ಯಾಗ್ನೆಟಿಸಂ ಹೇಗೆ ಮ್ಯಾಗ್ನೆಟ್ಟಿನಲ್ಲಿ ವ್ಯಕ್ತವಾಗುವುದೋ ಹಾಗೆಯೇ ಅಖಂಡವಾದ ಚಿತ್ತು ತನ್ನಿಂದಲೇ ಆದ ಮಾಯೋಪಾಧಿಯನ್ನು ಒಪ್ಪಿಕೊಂಡು ಖಂಡವಾದ ಕೂಡಲೇ ಅದರಲ್ಲಿ ಮಾಯೋಪಾಧಿಕನಾದ ಈಶ್ವರ, ಅವಿದ್ಯೋಪಾಧಿಕನಾದ ಜೀವ ಎಂಬ ಎರಡು ಕೊನೆಗಳು ಕಾಣಿಸಿಕೊಂಡು ಇವರಿಬ್ಬರ ವ್ಯವಹಾರ ರೂಪವಾಗಿ ಈ ಸೃಷ್ಟಿಯೆಲ್ಲವೂ ಭಾಸವಾಗುವುದು.)

೩೩. ತ್ರೈಲೋಕ್ಯವೆಂಬ ಈ ಜಗತ್ಸಮೂಹಗಳ ತಾತ್ವಿಕ ಸ್ಥಿತಿಯೇನು ಎಂದು ವಿಚಾರಮಾಡಿ ನೋಡಿದರೆ, ಸಮುದ್ರವೆಲ್ಲವೂ ಮೊದಲಿಂದ ಕೊನೆಯವರೆಗೂ ಜಲರಾಶಿಯೇ ಆಗಿರುವಂತೆ, ಶರೀರಗಳೆಂಬ ಜಲರಾಶಿಗಳಿಂದ ಕೂಡಿರುವ ಈ ತ್ರೈಲೋಕ್ಯವೆಲ್ಲವೂ ಮೊದಲಿನಿಂದ ಕೊನೆಯವರೆಗೂ ಚಿತ್ ಒಂದೇ ಒಂದು ಅಲ್ಲದೆ ಇನ್ನೇನೂ ಅಲ್ಲವೇ ಅಲ್ಲ.

೩೪. ಶರೀರವೆಂಬ ಕಮಲದಲ್ಲಿ ಸೇರಿಕೊಂಡು, ಇದನ್ನೇ ಸ್ಥಿರವೆಂದು ಭ್ರಾಂತಿಪಟ್ಟುಕೊಂಡಿರುವ ಮನಸ್ಸೆಂಬ ಭ್ರಮರವುಂಟು. ಅದು ತನ್ನ ಸಂಕಲ್ಪ

ಸಸುರಾಸುರಗಂಧರ್ವಂ ಸಶೈಲಾರ್ಣವಕಂ ಜಗತ್ ।
ಚಿತಿ ಸ್ಥಿತಂ ಪ್ರವಹತಿ ಜಲಾವರ್ತೇ ಜಲಂ ಯಥಾ ॥ ೩೫ ॥

ಬಂಧಚಿತ್ತಮಯಾಚಾರ ಚಾರುಚಂಚುರ ಚಕ್ರಿಕಂ ।
ಸಂಸಾರಚಕ್ರಂ ಚಿಚ್ಚಕ್ರೇ ಭ್ರಾಮ್ಯತಿ ಭ್ರಮಭಾಜನಂ ॥ ೩೬ ॥

ಚಿಚ್ಚತುರ್ಭುಜರೂಪೇಣ ಜಘಾನಾಸುರಮಂಡಲಂ ।
ಕಾಲೋ ಜಲದಖಂಡೇನ ಸಾಯುಧೇನ ಯಥಾತಪಂ ॥ ೩೭ ॥

ದಿಂದ ಸಂಪಾದಿಸಿರುವ (ಸಂಸಾರವೆಂಬ) ಮಧುವೊಂದುಂಟು. ಅದನ್ನು ಸರ್ವ ಕಾರಣಳೂ, ಸರ್ವ ಕರ್ತ್ರಿಯೂ ಆದ ಚಿತ್ತೆಂಬ ಈಶ್ವರಿಯು ಆಸ್ವಾದಿಸುತ್ತಿರುವಳು.

೩೫. ಸುರಾಸುರರು, ಗಂಧರ್ವರು, ಶೈಲ ಸಮುದ್ರಗಳು ಉಳ್ಳ ಈ ಜಗತ್ತೆಲ್ಲವೂ, ನೀರಿನ ಸುಳಿಯು ನೀರಿನ ನದಿಯಲ್ಲಿಯೇ ಇರುವಂತೆ, ಚಿತ್ತಿನಲ್ಲಿಯೇ ಸ್ಥಿತಿಯನ್ನು ಹೊಂದಿರುವುದು.

(ಮನಸ್ಸಂಕಲ್ಪದಿಂದ ಆಗಿರುವ ಭೋಕ್ತೃ ಮೊದಲಾದ ತ್ರಿಪುಟಿಯನ್ನು ಕಾಣಿಸುವುದೇ ಭೋಕ್ತೃತ್ವ ಕರ್ತೃತ್ವಗಳ ಆಗುವಿಕೆಯು. ಆ ತ್ರಿಪುಟಿಯೂ ಆ ಚಿತ್ತಿನಿಂದಲೇ ಆದುದು ಎಂದು ತೋರಿಸಲು ೩೪-೩೫ನೆಯ ಶ್ಲೋಕಗಳನ್ನು ಹೇಳಿರುವುದು.)

೩೬. (ಜೀವ-ಜೀವರ) ಸಂಸಾರಗಳು ಎಂಬಿವೆಲ್ಲವೂ ಚಿತ್ತದಿಂದ ಆಗಿರುವ (ಕರ್ತೃತ್ವ ಭೋಕ್ತೃತ್ವ ರೂಪವಾದ) ಚಂಚಲ ವ್ಯವಹಾರಗಳು ಇವೆಲ್ಲವೂ ಬಂಧಕಗಳು ಮತ್ತು ಭ್ರಾಂತಿ ಕಾರಣವಾದವು. ಇವೆಲ್ಲವೂ ಒಂದೇ ಒಂದು ಚಿಚ್ಚಕ್ರದಲ್ಲಿಯೇ ಸುತ್ತುತ್ತಿರುವುದು.

(ವ್ಯಷ್ಟಿ ಜೀವರ ಸಂಸಾರಗಳೆಲ್ಲವೂ ಜೀವ ಸಮಷ್ಟಿ ಸಂಸಾರ ಚಕ್ರವಾದ ಮಾಯಾ ಶಬಲ ಚಿಚ್ಚಕ್ರದಲ್ಲಿ ಭ್ರಮಣ ಮಾಡುತ್ತಿರುವುವು. –ತಾ. ಪ್ರ.)

೩೭. ಕಾಲ ರೂಪವಾದ ವರ್ಷರ್ತುವು ಕಾಮನ ಬಿಲ್ಲನ್ನು ತಳೆದಿರುವ

ಚಿತ್ ತ್ರಿನೇತ್ರತಯಾ ಬ್ರಹ್ಮನ್ವೃಷ ಶೀತಾಂಶು ಚಿಹ್ನಯಾ ।
ಗೌರೀಕಮಲಿನೀ ವಕ್ತ್ರ ಪದ್ಮ ಷಟ್ಪದತಾಂ ಗತಾ　　|| ೩೮ ||

ವಿಷ್ಣೋಃ ಪದ್ಮಾಲಿತಾಮೇತ್ಯ ಚಿದ್ಧ್ಯಾನಾಧೀನ ಮಾನಸಾ ।
ತ್ರಯೀ ನಲಿನ್ಯಾಃ ಸರಸೀಂ ಧತ್ತೇ ಪೈತಾಮಹೀಂ ಸ್ಥಿತಿಂ　　|| ೩೯ ||

ಚಿತೋ ಬ್ರಹ್ಮನ್ವಿಚಿತ್ರಾಣಿ ಶರೀರಾಣೀಹ ಭೂರಿಶಃ ।
ಪತ್ರಾಣೀವ ತರೋರ್ಹೇಮ್ನಿ ಕೇಯೂರಾದಿ ಕ್ರಿಯೇವ ಚ　　|| ೪೦ ||

ಚಿತ್ಸಮಸ್ತ ಸುರಾನೀಕ ಪರಿವಂದಿತಪಾದಯಾ ।
ತ್ರೈಲೋಕ್ಯ ಚೂಡಾಮಣಿತಾಂ ಧತ್ತೇ ವಾಸವಲೀಲಯಾ　　|| ೪೧ ||

ಮೋಡಗಳ ರೂಪವಾಗಿ ಬಿಸಿಲನ್ನು ನಿವಾರಿಸುವಂತೆ, ಚಿತ್ತೇ ಚತುರ್ಭುಜ ಗಳನ್ನು ಧರಿಸಿದ (ವಿಷ್ಣು ರೂಪದಿಂದ) ಅಸುರರ ಗುಂಪುಗಳನ್ನೆಲ್ಲ ಧ್ವಂಸ ಮಾಡಿರುವುದು.

೩೮. ಎಲೈ ಬ್ರಹ್ಮನೆ, ವೃಷಭ ವಾಹನನಾಗಿ, ಚಂದ್ರಶೇಖರನಾಗಿ, ಗೌರೀ ಮುಖ ಕಮಲ ಷಟ್ಪದನಾದ ಶಿವನಾಗಿರುವುದೂ ಈ ಚಿತ್ತೇ!

೩೯. ಮಹಾವಿಷ್ಣುವಿನ ನಾಭೀ ಕಮಲದಲ್ಲಿ ದುಂಬಿಯಂತೆ ಸೇರಿಕೊಂಡು, ಧ್ಯಾನ ಸಮಾಧಿ ಮಗ್ನವಾಗಿ ವೇದ ಸರೋವರ ಸ್ವರೂಪನಾದ ಪಿತಾಮಹನಾಗಿರುವುದೂ ಈ ಚಿತ್ತೇ!

೪೦. ಬ್ರಹ್ಮನೆ, ಈ ಲೋಕದಲ್ಲಿ ಕಾಣುವ ಚಿತ್ರ ವಿಚಿತ್ರವಾದ ಶರೀರ ಗಳೆಲ್ಲವೂ, ಗಿಡದ ಎಲೆಗಳಂತೆ, ಚಿನ್ನದಿಂದ ಆಗುವ ಕೇಯೂರಾದಿ ಆಭರಣಗಳಂತೆ, ಆ ಚಿತ್ತಿನಿಂದಲೇ ಆದವು

೪೧. ಸಮಸ್ತ ಸುರರೂ ಬಂದು ವಂದನ ಮಾಡುವ ಪಾದ ಪೀಠವುಳ್ಳು ದಾಗಿ, ತ್ರೈಲೋಕ್ಯ ಚೂಡಾಮಣಿಯಾದ ಮಹೇಂದ್ರನೆಂಬ ಆಟವನ್ನು ಕಟ್ಟಿರು ವುದೂ ಈ ಚಿತ್ತೇ!

ಚಿತ್ಸುಭಾಸುರತಾವೇತ್ಯ ತ್ರೈಲೋಕ್ಯೋದರಡಂಬರೇ ।
ಪತತ್ಯುದೇತಿ ಸಂಯಾತಿ ಸ್ವಾತ್ಮನ್ಯೇವಾಬ್ಧಿವಾರಿವತ್ ॥ ೪೨ ॥

ಚಿಚ್ಚಂದ್ರಿಕಾ ಚತುರ್ದಿಕ್ಷು ಅವಭಾಸಂ ವಿತನ್ವತೀ ।
ವಿಕಾಸಯತಿ ನಿಃಶೇಷ ಭೂತಸತ್ತಾ ಕುಮುದ್ವತೀಂ ॥ ೪೩ ॥

ಚಿದ್ದರ್ಪಣ ಮಹಾಲಕ್ಷ್ಮೀಸ್ತ್ರಿಜಗತ್ಪ್ರತಿ ಬಿಂಬಿತಂ ।
ಗೃಹ್ಣಾತ್ಯನುಗ್ರಹೇಣಾಂತಃ ಸ್ವಗರ್ಭಮಿವ ಗರ್ಭಿಣೀ ॥ ೪೪ ॥

ಚಿಚ್ಚತುರ್ದಶ ಭೂತಾನಾಂ ಮಂಡಲಾನಿ ಮಹಾಂತಿ ಚ ।
ಭೂತೀಕರೋತಿ ವಾರಿಶ್ರೀಃ ಸಮುದ್ರಸ್ವಮಿವಾಂಬುಧಿಃ ॥ ೪೫ ॥

---

೪೨. ಈ ಬ್ರಹ್ಮಾಂಡದಲ್ಲಿ ಚಿತ್ತೇ ಸೂರ್ಯ ಚಂದ್ರಾದಿ ತೇಜೋಮಂಡಲವಾಗಿ, ಸಮುದ್ರದಲ್ಲಿ ನೀರು ಎದ್ದೆದ್ದು ಬೀಳುವಂತೆ, ತನ್ನಲ್ಲಿಯೇ ತಾನೇ ಮುಳುಗುವುದು : ಉದಯಿಸುವುದು : ಸಂಚರಿಸುವುದು.

೪೩. ಚಿತ್ತೆಂಬ ಈ ಚಂದ್ರಿಕೆಯು ನಾಲ್ಕು ದಿಕ್ಕುಗಳಲ್ಲಿಯೂ ತನ್ನ ಬೆಳಕನ್ನು ಹರಡುತ್ತಾ, ಸಮಸ್ತ ಪ್ರಾಣಿ ಸ್ವರೂಪವಾಗಿರುವ ಕುಮುದಗಳ ಗುಂಪುಗಳನ್ನು ಅರಳಿಸುತ್ತಿರುವುದು.

೪೪. ಗರ್ಭಿಣಿಯಾದವಳು ಗರ್ಭವನ್ನು ಧರಿಸುವಂತೆ, ಚಿತ್ತೆಂಬ ದರ್ಪಣ ಸ್ವರೂಪಳಾದ ಮಹಾಲಕ್ಷ್ಮಿಯು ತನ್ನಲ್ಲಿ ಪ್ರತಿಫಲಿಸಿರುವ ಜಗತ್ತ್ರಯದ ಪ್ರತಿಬಿಂಬವನ್ನು ಧರಿಸುವ ಅನುಗ್ರಹ ಮಾಡುವಳು.

(ಮಹಾಲಕ್ಷ್ಮೀ= ಮಹತೀಲಕ್ಷ್ಮೀಃ ಸ್ವಚ್ಛ ಭಾಸ್ವರತಾಲಕ್ಷಣಾ ಶೋಭಾ ವೈಷ್ಣವೀ ಮಾಯಾವಾ. –ತಾ. ಪ್ರ.)

೪೫. ಜಲ ಶಕ್ತಿಯು ಜಲ ನಿಧಿ ಸ್ವರೂಪವಾದ ಸಮುದ್ರ ಸ್ವರೂಪವನ್ನು ವಹಿಸುವಂತೆ, ಚಿತ್ತೇ ಚತುರ್ದಶ ಭುವನಗಳಲ್ಲಿಯೂ ಇರುವ ಭೂತ ಭೂತಗಳ ಮಹಾ ಮಂಡಲಗಳ ಸ್ವರೂಪವನ್ನು ಧರಿಸುವುದು.

ವಿಚಿತ್ರಾಲೋಕ ಕುಸುಮಾ ಘನಸಂಕಲ್ಪ ಪಲ್ಲವಾ ।
ವ್ಯೋಮಕೇದಾರಿಕಾರೂಢಾ ಸತ್ತೌಘ ಫಲಶಾಲಿನೀ ॥ ೪೬ ॥

ಜೀವಜಾಲರಜಃ ಪುಂಜ ವಾಸನಾರಸ ರಂಜಿತಾ ।
ಸಂವೇದನತ್ವಗ್ವಲಿತಾ ಚಿತ್ತೇಹಾಕಲಿಕಾಕುಲಾ ॥ ೪೭ ॥

ಅತೀತಾಸಂಖ್ಯ ತ್ರಿಜಗತ್ಕೇಸರೋಜ್ಜ್ವಲರೂಪಿಣೀ ।
ಅನಾರತಸ್ಪಂದ ಮಹಾವಿಲಾಸೋಲ್ಲಾಸಹಾಸಿನೀ ॥ ೪೮ ॥

ಸರ್ವರ್ತುಪರ್ವಪರುಷಾ ಜಡಶೈಲಾದಿ ಗುಲ್ಮಕಾ ।
ವಿಗ್ರಹಗ್ರಂಥಿ ವಲಿತಾ ಮೂಲಾಗ್ರಪರಿವರ್ತಿತಾ ॥ ೪೯ ॥

---

೪೬. ಆಕಾಶವೆಂಬ ಗದ್ದೆಯಲ್ಲಿ (ಹಿರಣ್ಯಗರ್ಭನೆಂಬ) ಒಂದು ಲತೆಯು ಹುಟ್ಟಿರುವುದು. ಅದಕ್ಕೆ ಚಿತ್ರ ವಿಚಿತ್ರವಾದ ಲೋಕಲೋಕಗಳೆಂಬ ಕುಸುಮಗಳೂ, ಘನ ಸಂಕಲ್ಪಗಳೆಂಬ ಪಲ್ಲವಗಳೂ, ಸರ್ವ ಪದಾರ್ಥಗಳೆಂಬ ಫಲಗಳೂ ಉಂಟು.

೪೭. ಅದು ಜೀವ ಜೀವರ ಗುಂಪುಗಳೆಂಬ ಪುಷ್ಪ ರಜಗಳ ವಾಸನೆಯಿಂದ ಮನೋಹರವಾಗಿರುವುದು. ಸಂವೇದನಗಳೆಂಬ (ಸವಿಕಲ್ಪಕ ಜ್ಞಾನ) ತೊಗಟೆಯಿಂದ ಕೂಡಿರುವುದು. ಚಿತ್ತವೃತ್ತಿಗಳೆಂಬ ಮೊಗ್ಗುಗಳು ಅದರಲ್ಲಿ ತುಂಬಿರುವುವು.

೪೮. ಆ ಲತೆಯು ಕಳೆದು ಹೋಗಿರುವ ಎಷ್ಟೋ ಜಗತ್ತುಗಳೆಂಬ ಉದುರಿದ ಕೇಸರಗಳಿಂದ ಸೊಗಸಾಗಿರುವುದು. ಒಂದೇಸಮನಾಗಿ ವ್ಯಾಪಾರ ಮಾಡುತ್ತಿರುವುದೆಂಬ ಮಹಾ ವಿಲಾಸದಿಂದ ಸಂತೋಷವಾಗಿ ನಗುನಗುತ್ತಿರುವುದು.

೪೯. ಸರ್ವ ಋತುಗಳಲ್ಲಿಯೂ ಪರ್ವ ಪರುಷವಾಗಿ, ಜಡವಾದ ಶೈಲಾದಿಗಳೆಂಬ ಬುಡದ ಗುಲ್ಮಗಳಿಂದ ಕೂಡಿ, (ಚತುರ್ವಿಧ ಶರೀರಗಳೆಂಬ) ಗಂಟುಗಳಿಂದ ಕೂಡಿ, ಆಮೂಲಾಗ್ರವಾಗಿ ಎಲೆಗಳಿಂದ ತುಂಬಿರುವುದು.

ಚಿಲ್ಲತೇಯಂ ವಿಕಸಿತಾ ಪೇಲವಂ ಸದಸದ್ವಪುಃ । ॥ ೫೦ ॥

ವಿಚಿತ್ರಂ ದೃಶ್ಯ ಕುಸುಮಂ ಪರಾಮರ್ಶಾಸಹಂ ಬಹು ।
ಅನಯೇಹ ಹಿ ಸರ್ವತ್ರ ಚ್ಛಾಯಾಚ್ಛಮಿವ ಜನ್ಯತೇ ।
ಮನ್ಯತೇ ತನ್ಯತೇ ವಸ್ತು ಗೀಯತೇ ಕ್ರಿಯತೇಪಿ ಚ ॥ ೫೧ ॥

ಮಹಾಚಿತಾನಯಾ ನಿತ್ಯಂ ಭಾಸಂತೇ ಭಾಸ್ಕರಾದಯಃ ।
ದೇಹಾಃ ಸ್ವದಂತೇ ಚ ಮಿಥಸ್ತತ್ಸಚ್ಚಿಜ್ಜಡವಿಭ್ರಮೈಃ ॥ ೫೨ ॥

---

೫೦. ಇಂತಹ ಚಿತ್ತೆಂಬ ಲತೆಯಲ್ಲಿ ಸತ್-ಅಸತ್ ಎಂಬ ರೂಪವುಳ್ಳ (ಹೂ ಗೊಂಚಲು) ಮುದ್ದಾಗಿ ಅರಳಿರುವುದು.

೫೧. ಇದರಲ್ಲಿ ದೃಶ್ಯವೆಂಬ ವಿಚಿತ್ರ ಕುಸುಮವು ಜನಿಸುವುದು. ಅದು ಕೊಂಚವಾದರೂ ಪರಾಮರ್ಶವನ್ನು (ಪರೀಕ್ಷೆ) ಸಹಿಸಲಾರದು. ಆ ಚಿಲ್ಲತೆಯ ಬಿಳಿಯ ಬಣ್ಣದ ನೆರಳೋ ಎಂಬಂತೆ ಆ ದೃಶ್ಯ ಕುಸುಮವು ಈ ಬಳ್ಳಿಯಲ್ಲಿ ಎಲ್ಲೆಲ್ಲಿಯೂ ತೋರಿರುವುದು. ಅಭಿಮಾನಕ್ಕೆ ವಿಷಯವಾಗಿರುವುದು. ಅಭಿಮಾನವು ಬಂದುದರಿಂದ ಹರಡುವುದು. ಪ್ರತ್ಯೇಕವಾದ ಅಸ್ತಿತ್ವವುಳ್ಳ ವಸ್ತುವೆಂದು ಹೇಳಿಸಿಕೊಳ್ಳುವುದು. ಹಾಗೆಯೇ ಕಾರ್ಯಗಳನ್ನು ಮಾಡುತ್ತಿರುವುದೆಂದೂ ಗೃಹೀತವಾಗುವುದು.

೫೨. ಈ ಮಹಾ ಚಿತ್ತಿನಿಂದಲೇ, ಭಾಸ್ಕರಾದಿ ದೇಹಗಳೆಲ್ಲವೂ ಹುಟ್ಟುವುವು. ಜಡ, ಚೇತನ ರೂಪವಾಗಿ ತೋರುತ್ತ ವಿಲಾಸ ಮಾಡುತ್ತಿರುವ ಈ ದೇಹಗಳೆಲ್ಲವೂ ಒಂದಕ್ಕೊಂದು ಪ್ರಿಯವಾಗುವುದೂ ಆ ಚಿತ್ತಿನ ಪ್ರಭಾವದಿಂದಲೇ !

ಚಿತಾ ಚಾವರ್ತವರ್ತಿನ್ಯಾ ಸಿದ್ಧಾನ್ಯೇವ ಪ್ರನೃತ್ಯತಿ ।
ಜಗಜ್ಜಾಲರಜೋಲೇಖಾ ತತ್ಸತ್ತಾ ದೃಶ್ಯದೇಹಿನೀ ॥ ೫೩ ॥

ಚಿತ್ಸರ್ವಂ ಜಗದಾರಂಭಮಿಮಂ ಪ್ರಕಟಯತ್ಯಲಂ ।
ತ್ರೈಲೋಕ್ಯದೀಪಕ ಶಿಖಾದೀಪೋ ವರ್ಣಾಶ್ರಯಂ ಯಥಾ ॥ ೫೪ ॥

ಚಿಚ್ಚಂದ್ರಬಿಂಬೇ ವಿಮಲೇ ಶಶವತ್ಪ್ರಾಪ್ಯ ಸಂಗಮಂ ।
ಸರ್ವತ್ರ ಲಕ್ಷ್ಯತಾಮೇತಿ ಪದಾರ್ಥ ಶ್ರೀ ರ್ಜಗದ್ಗತಾ ॥ ೫೫ ॥

ಚಿದ್ರಸಾಯನಸೇಕೇನ ಪದಾರ್ಥಃ ಪಟಲಾವಲೀ ।
ರೂಪಮೇತಿ ಫಲಂ ಚೈವ ಪ್ರಾವೃಟ್ಸಿಕ್ತೇವ ಸಲ್ಲತಾ ॥ ೫೬ ॥

---

೫೩. ಸುಳಿಯಂತೆ ಸುತ್ತುತ್ತಿರುವ ಚಿತ್ತಿನ ದೆಸೆಯಿಂದಲೇ ಹುಟ್ಟಿದ್ದರೂ ದೃಶ್ಯವಾದ ಆಕಾರವುಳ್ಳ ಈ ಜಗಜ್ಜಾಲವೆಂಬ ರಜೋಲೇಖೆಯು ತಾನು ಬೇರೆಯೆಂಬಂತೆ ಕುಣಿಯುವುದು.

೫೪. ಮೂರು ಲೋಕಗಳನ್ನು ಬೆಳಗುವ ದೀಪದಂತಿರುವ ಚಿದಗ್ನಿಯು, ದೀಪವು ರೂಪವಂತವಾಗಿರುವ ದ್ರವ್ಯವನ್ನು ಬೆಳಗುವಂತೆ, ಈ ಜಗತ್ತಿನ ಕಾರ್ಯಗಳನ್ನೆಲ್ಲ ಬೆಳಗಿಸುವುದು.

೫೫. ಈ ಜಗತ್ತೆಂಬ ದೃಶ್ಯ ಜಾಲವು ನಿರ್ಮಲವಾದ ಚಿತ್ತಿನಲ್ಲಿ, ಚಂದ್ರಬಿಂಬದಲ್ಲಿ ಸೇರಿಕೊಂಡಿರುವ ಮೊಲದಂತೆ ಹೇಗೋ ಸೇರಿಕೊಂಡು ಎಲ್ಲೆಲ್ಲಿಯೂ ಕಾಣಿಸುತ್ತಿರುವುದು.

೫೬. ಒಳ್ಳೆಯ ಬಳ್ಳಿಯು ಮಳೆಗಾಲದಲ್ಲಿ ಮಳೆಯಿಂದ ಜೀವಗೊಂಡು, ಚೆನ್ನಾಗಿ ಹರಡಿ ಹಣ್ಣು ಬಿಡುವಂತೆ, ಚಿದ್ರಸಾಯನವನ್ನು ಪಾನಮಾಡಿ ಊರ್ಜಿತವಾಗಿ ಈ ದೃಶ್ಯಜಾಲವೆಲ್ಲವೂ ಹರಡಿರುವುದು.

ಚಿಚ್ಛಾಯಯೈವ ಸರ್ವಸ್ಯ ಜಾಡ್ಯಂ ಸಮ್ಯಗುದೇತಿ ಚ ।
ಸರ್ವಸ್ಯಾಸ್ಯ ಶರೀರಸ್ಯ ಗೃಹಸ್ಯೇವ ತಮಃಸ್ವಿವ ॥ ೫೭ ॥

ಚಿಚ್ಚಮತ್ಕೃತಯೋ ದೇಹೇ ನ ಭವೇಯುರಿಮಾ ಯದಿ ।
ತ್ರೈಲೋಕ್ಯ ದೇಹಾಸ್ತ್ಯಕ್ತ್ವೈವಂ ತೇ ನ ಸ್ಪೃಶೇಯುಃ ಕಿಲಾಕೃತಿಂ ॥ ೫೮ ॥

---

೫೭. ಪ್ರತಿಯೊಂದು ಜಂತುವಿಗೂ ಜಾಡ್ಯವು (ತಮೋಗುಣವು) ಹುಟ್ಟು ವುದೂ ಈ ಚಿತ್ತಿನ ಛಾಯೆಯಿಂದಲೇ! ಕತ್ತಲು ಎಲ್ಲೆಲ್ಲೂ ಹರಡಿರುವಾಗ ಮನೆಯೂ ಕತ್ತಲೇ ಆಗಿರುವಂತೆ, ಚಿತ್ತಿನ ನೆರಳು ಹರಡಿ ಎಲ್ಲಾ ಶರೀರಗಳಿಗೂ ಜಾಡ್ಯವು ಬರುವುದು.

(ಹಿಂದೆ ೫೬ ರಲ್ಲಿ ಚಿದ್ರಸಾಯನವು ಎಲ್ಲ ಪದಾರ್ಥಗಳನ್ನು ವ್ಯಾಪಿಸಿ ಸ್ಫುರಿಸು ವುದು ಎಂದು ಹೇಳಿ ಇಲ್ಲಿ ಜಾಡ್ಯವನ್ನು ಹೇಳಿದರೆ ಹೇಗೆ? ಎಲ್ಲೆಲ್ಲೂ ರಸವಿರು ವಾಗ ಶುಷ್ಕತೆಯೆಲ್ಲಿಂದ ಬರಬೇಕು? ಎಂದರೆ, ಅದು ಬರುವುದು. ಚಿತ್ತಿನ ನೆರಳಿನಿಂದಲೇ! ಪಂಚೀಕರಣದಿಂದ ಆಗುವ ದೇಹದಲ್ಲಿ ಸರ್ವತ್ರ ತೇಜೋ ಧಾತುವು ಇರುವುದರಿಂದ ಅಂತಸ್ತಮವು ಇರುವುದಕ್ಕೆ ಕಾರಣವೇ ಇಲ್ಲವಾದರೂ ಉಳಿದ ಭೂತಗಳ ಭಾಗಗಳು ತೇಜೋಭೂತದ ಪ್ರಕಾಶವನ್ನು ತಡೆಯುವುದರಿಂದ ಬರುವ ಕತ್ತಲಿನಂತೆಯೂ, ಹೊರಗೆ ಬಿಸಿಲು ಕಾಯುತ್ತಿದ್ದರೂ ಒಳಗೆ ಇರುವ ಕತ್ತಲಿನಂತೆಯೂ ಚಿತ್ತಿನ ಛಾಯೆಯಾಗಿಯೇ ತಮಸ್ಸು ಆವಿರ್ಭವಿಸುವುದು. ತಾ. ಪ್ರ.)

೫೮. ಚಿತ್ತಿನ ಕಾರ್ಯಗಳು ಈ ದೇಹದಲ್ಲಿ ಆಗದೆಯೇ ಇದ್ದರೆ, ಈ ತ್ರಿಲೋಕ ದಲ್ಲಿರುವ ದೇಹಗಳು ಒಂದೂ ಹುಟ್ಟುತ್ತಲೇ ಇರಲಿಲ್ಲ.

(ಲೋಕತ್ರಯದಲ್ಲಿಯೂ ಇರುವ ಸಾಕಾರ ಪದಾರ್ಥಗಳೆಲ್ಲವೂ ಛಾಯಾ ಜಾಡ್ಯಗಳು ಇಲ್ಲವಾದರೆ ಆಕೃತಿಯನ್ನೇ ಪಡೆಯುತ್ತಿರಲಿಲ್ಲ. –ತಾ ಪ್ರ.)

ಚಿದಾಕಾಶ ಪ್ರಕಾಶೇಸ್ಮಿನ್ ಸಂಕಲ್ಪ ಶಿಶುಧಾರಿಣೀ ।
ಕ್ರಿಯಾಕುಲವಧೂರ್ದೇಹಗೃಹೇ ಸ್ಫುರತಿ ಚಂಚಲಾ ॥ ೫೯ ॥

ಚಿದಾಲೋಕಂ ವಿನಾ ಕಸ್ಯ ರಸನಾಗ್ರೇ ಸ್ಫುರನ್ನಪಿ ।
ಕಥಂ ಕದಾ ಪ್ರಕಟತಾಮೇತಿ ದೃಷ್ಟಃ ಕ್ವ ವಾ ರಸಃ ॥ ೬೦ ॥

ಶೃಣ್ವಂಗ ಸ್ವಾಂಗಶಾಖೋಪಿ ಕುಂತಲಾಲಿಲತೋಪ್ಯಲಂ ।
ಚಿನ್ಮಜ್ಜನಂ ವಿನಾ ದೇಹವೃಕ್ಷಃ ಕ ಇವ ರಾಜತೇ ॥ ೬೧ ॥

ವರ್ಧತೇ ವಿಲುಠತ್ಯತ್ತಿ ಚಿಚ್ಚರಾಚರ ಕಾರಿಣೀ ।
ಚಿದೇವಾಸ್ತೀತರನ್ನಾಸ್ತಿ ಚಿನ್ಮಾತ್ರಮಿದಮುತ್ಥಿತಂ ॥ ೬೨ ॥

---

೫೯. (ವಿಹಿತ ನಿಷಿದ್ಧ ಕಾರ್ಯಗಳಲ್ಲಿ ಪ್ರವೃತ್ತಿ ನಿವೃತ್ತಿ ರೂಪ) ಕ್ರಿಯಾ ಎಂಬ ಕುಲ ವಧುವು ಈ ಚಿದಾಕಾಶದಲ್ಲಿರುವ ಪ್ರಕಾಶವು ಮೆರೆಯುತ್ತಿರಲು, ಸಂಕಲ್ಪವೆಂಬ ಮಗುವನ್ನು ಎತ್ತಿಕೊಂಡು ಓಡಾಟ ಮಾಡುವಳು.

೬೦. ಈ ಚಿತ್ತಿನ ಪ್ರಕಾಶವೇ ಇಲ್ಲವಾದರೆ, ರಸವು ನಾಲಗೆಯ ಕೊನೆಯಲ್ಲಿಯೇ ಕುಳಿತಿದ್ದರೂ ಯಾರಿಗೆ ತಾನೇ ರುಚಿಯು ತಿಳಿಯುವುದು? ಹೇಗೆ ತಾನೇ ತಿಳಿಯುವುದು? ಯಾವಾಗ ತಾನೇ ತಿಳಿಯುವುದು?

೬೧. ಕರ ಚರಣಾದಿ ಅಂಗೋಪಾಂಗಗಳೇ ಶಾಖೆಗಳಾಗಿ, ಕುರುಳುಗಳೇ ಎಳೆ ಬಳ್ಳಿಗಳಾಗಿರುವ ಈ ದೇಹವೆಂಬ ವೃಕ್ಷವು ಚಿಚ್ಛಕ್ತಿಯ ಮಜ್ಜನವಿಲ್ಲದಿದ್ದರೆ, ಬೆಳೆಯುವುದಾದರೂ ಉಂಟೇನು?

೬೨. (ಆದರಿಂದ) ಚರಾಚರಗಳಿಗೆಲ್ಲ ಮೂಲ ಕಾರಣವಾದ ಈ ಚಿತ್ತೇ (ಬೆಳೆಯುವುದರಲ್ಲೆಲ್ಲಾ) ಬೆಳೆಯುವುದು. (ಒದ್ದಾಡುವುದರಲ್ಲೆಲ್ಲಾ) ಒದ್ದಾಡುವುದು. (ತಿನ್ನುವುದರಲ್ಲೆಲ್ಲಾ) ತಿನ್ನುವುದು. ಇರುವುದೆಲ್ಲಾ ಚಿತ್ತೇ! ಚಿತ್ತಲ್ಲದ ಇನ್ನೇನೂ ಇಲ್ಲವೇ ಇಲ್ಲ. ಜಗತ್ತಾಗಿ ತೋರುವ ಈ ದೃಶ್ಯಜಾಲವೆಲ್ಲವೂ ಚಿನ್ಮಾತ್ರವೇ!

ಶ್ರೀ ವಸಿಷ್ಠ ಉವಾಚ :—
ಇತ್ಯುಕ್ತವಾಂಸ್ತದಾ ತ್ರ್ಯಕ್ಷಃ ಸುಧಾಂಶು ಸ್ವಚ್ಛಯಾ ಗಿರಾ ।
ಪುನಃ ಪೃಷ್ಟೋ ಮಯಾ ರಾಮ ಸುಧಾಂಶುಸ್ವಚ್ಛಯಾ ಗಿರಾ ॥ ೬೩ ॥

ಯದಿ ಸರ್ವಗತಾ ದೇವ ಚಿದಸ್ತ್ಯೇಕಾ ತದಾತ್ಮಕಃ ।
ತದಯಂ ಚಾವನಿಸ್ಫಾರ ಮಯಾಂಧೇವ ನ ಚೇತತಿ ॥ ೬೪ ॥

ಅಯಂ ಚಿತ್ವಾನ್ಸ್ಪರಾ ಭೂತ್ವಾ ಚಿದ್ಧೀನಃ ಸಂಪ್ರತಿ ಸ್ಥಿತಃ ।
ಇತೀಯಂ ಕಲ್ಪನಾಲೋಕೇ ಪ್ರತ್ಯಕ್ಷಾನುಭವಾ ಕಥಂ ॥ ೬೫ ॥

ಶ್ರೀ ಈಶ್ವರ ಉವಾಚ :—
ಶೃಣ್ವೇತದಖಿಲಂ ಬ್ರಹ್ಮನ್ ಯಥಾ ಪೃಷ್ಟಂ ವದಾಮಿ ತೇ ।
ಮಹಾನಯಂ ತ್ವಯಾ ಪ್ರಶ್ನಃ ಕೃತೋ ಬ್ರಹ್ಮವಿದಾಂ ವರ ॥ ೬೬ ॥

ಶ್ರೀ ವಸಿಷ್ಠನು ಹೇಳಿದನು :—

೬೩ ಚಂದ್ರಿಕೆಯಂತೆ ಸ್ವಚ್ಛವಾಗಿರುವ ಮಾತುಗಳಿಂದ ಹೀಗೆ ಹೇಳಿದ ತ್ರಿಣೇತ್ರನನ್ನು ನಾನು ಮತ್ತೆಯೂ ಕೇಳಲು ಆತನು ಮತ್ತೆಯೂ ಬೆಳದಿಂಗಳಂತೆ ಸ್ಪಷ್ಟವಾಗಿರುವ ಮಾತುಗಳಿಂದಲೇ ಹೇಳಿದನು.

೬೪. ಎಲ್ಲೆಲ್ಲಿಯೂ ಇರುವ ಚಿತ್ತಿನಿಂದಲೇ ಎಲ್ಲವೂ ಆಗಿರುವುದು ಎಂದ ಮೇಲೆ, ಈ ದೇಹವೂ ಚಿತ್ತೇ ಆಗಬೇಕು. ಹಾಗೆ ದೇಹದೇಹವೂ ಚಿತ್ತೇ ಆಗಿದ್ದರೆ ಇವು ಮಣ್ಣಿನ ಗೋಡೆಯಂತೆ, ಕುರುಡು ಕುರುಡಾಗಿ ಜಡವಾಗಿ, ಚೇತನ ರಹಿತವಾಗಿರುವುದೇಕೆ ?

೬೫. ಚೇತನದಿಂದ ಕೂಡಿದ್ದ ದೇಹವು ಈಗ ಚೇತನಹೀನವಾದುದೆಂತು ? ಎಂಬ ಸಂಶಯವು ಎಲ್ಲರಿಗೂ ಪ್ರತ್ಯಕ್ಷಸಿದ್ಧವಾಗಿರುವುದಲ್ಲಾ ?

ಶ್ರೀ ಈಶ್ವರನು ಹೇಳಿದನು :—

೬೬. ಬ್ರಹ್ಮವಿದ್ವರನಾದ ಬ್ರಹ್ಮರ್ಷಿಯೆ, ನೀನು ಕೇಳಿದುದು ಮಹಾ ಪ್ರಶ್ನವು. ಇದಕ್ಕೆ ಯಥಾವತ್ತಾಗಿ ಉತ್ತರವನ್ನು ಹೇಳುವೆನು ಕೇಳು.

ಚಿದಸ್ತಿಹಿಶರೀರೇಹ ಸರ್ವಭೂತಮಯಾತ್ಮಿಕಾ ।
ಚಲೋನ್ಮುಖಾತ್ಮಿಕೈಕಾ ತು ನಿರ್ವಿಕಲ್ಪಾ ಪರಾ ಸ್ಮೃತಾ ॥ ೬೭ ॥

ಸಂಕಲ್ಪಬುದ್ಧಾ ಸೈವಾಂತಃ ಸ್ವಯಮನ್ಯೇವ ಸಂಸ್ಥಿತಾ ।
ಸಂಕಲ್ಪಿತೇತರವರಾ ದೌಃಶೀಲ್ಯಂ ಸ್ತ್ರೀ ಯಥಾ ಗತಾ ॥ ೬೮ ॥

ಸ ಏವ ಹಿ ಪುಮಾನ್ಕ್ರೋಪಾದ್ಯಥೇಹಾನ್ಯ ಇವ ಕ್ಷಣಾತ್ ।
ಭವತ್ಯೇವಂ ವಿಕಲ್ಪಾಂಕಾ ಚಿತ್ಸ್ವರೂಪಾನ್ತಾಂ ಗತಾ ॥ ೬೯ ॥

(ಚೇತನವು ಜೀವಾದಿತ್ವವನ್ನು ಪಡೆದುದು ಹೇಗೆ ಎಂದು ಮೊದಲನೆಯ ಪ್ರಶ್ನವು. ಈಗ ಚೇತನವು ಜಡವಾದುದು ಹೇಗೆ ಎಂದು ಎರಡನೆಯ ಪ್ರಶ್ನವು. -ತಾ. ಪ್ರ.)

೬೭. ಶರೀರ ಶರೀರದಲ್ಲಿಯೂ ಸರ್ವ ಭೂತಮಯವಾದ ಚಿತ್ತು ಇದ್ದೇ ಇರುವುದು. ಆ ಚಿತ್ತಿನಲ್ಲಿ ಚಲೋನ್ಮುಖವಾಗಿ ಹೊರಟಿರುವ ಅಂಶವೊಂದು, ನಿರ್ವಿಕಲ್ಪವಾಗಿ ಪರಾತ್ಮಿಕವಾಗಿರುವ ಅಂಶವಿನ್ನೊಂದು ಹೀಗೆ ಎರಡೂ ಸೇರಿರುವುವು.

(ವ್ಯಷ್ಟ್ಯಾತ್ಮಕವಾಗಿ ಆಸಕ್ತ ಸ್ವಭಾವವುಳ್ಳ ವಿಜ್ಞಾನಮಯಶಬ್ದ ವಾಚ್ಯವಾಗಿ ಕರ್ತೃ ಭೋಕ್ತೃ ಸ್ವಭಾವವುಳ್ಳ ಅಂಶವೊಂದು: ಸಮಷ್ಟ್ಯಾತ್ಮಕವಾಗಿ ಕೂಟಸ್ಥವಾಗಿ ನಿರ್ವಿಕಲ್ಪ ಸ್ವಭಾವವುಳ್ಳ ಅಂಶವಿನ್ನೊಂದು. ಒಂದು ಪ್ರತಿಬಿಂಬ ಇನ್ನೊಂದು ಬಿಂಬ. ಈ ಬಿಂಬ ಪ್ರತಿಬಿಂಬವಾಗಿ ದೇಹದಲ್ಲಿರುವುದೇ ಜೀವವೆಂದು ಈಶ್ವರನು ಹೇಳುತ್ತಿದ್ದಾನೆ. -ತಾ. ಪ್ರ.)

೬೮. (ನಿರ್ವಿಕಲ್ಪವಾಗಿದ್ದ) ಆ ಚಿತ್ತು, ಸಂಕಲ್ಪವನ್ನು ಮಾಡಲು ಆರಂಭಿಸುತ್ತಲೂ ತಾನೇ ಬೇರೆಯಿನ್ನೊಂದು ಆದಂತೆ ಪ್ರತ್ಯೇಕವಾಗಿ ತೋರುವುದು. ಪರಪುರುಷನಲ್ಲಿ ಮನಸ್ಸಿಟ್ಟ ಸ್ತ್ರೀಯು ಎರಡು ಭಾಗವಾಗುವಹಾಗೆ ಇದು ಎಂದು ತಿಳಿ.

(ಹಂತಾಹ ಮಿಮಾಸ್ತಿಸ್ರೋ ದೇವತಾ ಅನೇನ ಜೀವೇನ ಆತ್ಮನಾ ಅನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ. ಇತಿಶ್ರುತಿಃ. -ತಾ. ಪ್ರ.)

೬೯. ಮನುಷ್ಯನು ಕೋಪಗೊಂಡಾಗ ಹೇಗೆ ಕ್ರೂರನಾಗಿ ಒಂದೇ ಕ್ಷಣದಲ್ಲಿ

ವಿಕಲ್ಪಕಲ್ಪಿತಾ ಬ್ರಹ್ಮಂಶ್ಚಿತ್ ಸ್ವರೂಪಪರಿಚ್ಯುತಾ ।
ಜಾಡ್ಯಂ ಕ್ರಮಾದ್ಭಾವಯಂತೀ ಪ್ರಯಾತಿ ಕಲನಾಪದಂ ॥ ೭೦ ॥

ಚಿತ್ ಸ್ವಯಂ ಚೇತ್ಯತಾಮೇತಿ ಸಾಕಾಶ ಪರಮಾಣುತಾಂ ।
ಶಬ್ದಬೀಜಾತ್ಮಿಕಾಂ ಪಶ್ಚಾದ್ವಾತತನ್ಮಾತ್ರಗಾಮಿನೀ ॥ ೭೧ ॥

ದೇಶಕಾಲ ವಿಭಾಗಾಂತಾ ತನ್ಮಾತ್ರವಲಿತಾ ಕ್ರಮಾತ್ ।
ಜೀವೋ ಭೂತ್ವಾ ಭವತ್ಯಾಶು ಬುದ್ಧಿಃ ಪಶ್ಚಾದಹಂ ಮನಃ ॥ ೭೨ ॥

ತನ್ನ ಸ್ವಭಾವವನ್ನು ಬಿಟ್ಟು ಅನ್ಯನಂತೆ ವರ್ತಿಸುವನೋ ಹಾಗೆಯೇ ವಿಕಲ್ಪದಿಂದ ಕೂಡಿದ ಚಿತ್ತು ಸ್ವಸ್ವರೂಪದಿಂದ ಭಿನ್ನವಾದ ಇನ್ನೊಂದು ರೂಪವನ್ನು ಹೊಂದುವುದು.

೭೦. ವಿಕಲ್ಪಗಳಿಂದ ಚಿತ್ತಿಗೆ ಸ್ವರೂಪ ಪರಿತ್ಯಾಗವಾಗುವುದು. ಕ್ರಮಕ್ರಮವಾಗಿ ತನ್ನ ಸಂಕಲ್ಪ ಬಲದಿಂದಲೇ ತಾನು ಜಡವೆಂದು ಭಾವಿಸುತ್ತ ಭಾವಿಸುತ್ತ ಜಡವೇ ಆಗುವುದು.

೭೧. ಚಿತ್ತು ತಾನಾಗಿಯೇ, ಪರಪ್ರೇರಣೆಯಿಲ್ಲದೆಯೇ, ಚೇತ್ಯದಶೆಯನ್ನು ಹೊಂದುವುದು: ಇನ್ನೂ ಮುಂದುವರಿದು ಆಕಾಶ ಪರಮಾಣುವಾಗುವುದು: ಶಬ್ದಬೀಜಾತ್ಮಕವಾದ ಆಕಾಶ ಪರಮಾಣುವಿನಿಂದ ವಾಯು ತನ್ಮಾತ್ರೆಯಾಗುವುದು.

೭೨. ತನ್ಮಾತ್ರೆಯಾದಾಗ ದೇಶ, ಕಾಲಗಳಿಂದ ವಿಭಾಗವನ್ನು ಪಡೆಯುವುದು. ಹೀಗೆ ವಿಭಾಗವನ್ನು ಪಡೆದ ಚಿತ್ತು ಜೀವವಾಗಿ, ಬುದ್ಧಿಯಾಗಿ, ಅಹಂಕಾರವಾಗಿ, ಮನಸ್ಸಾಗುವುದು.

(ತಥಾ ಭೂತಾಯಾಃ ತಸ್ಯಾಃ ಪಂಚೀಕರಣ ಪ್ರಯುಕ್ತ ಸ್ಥೂಲಭೂತಾತ್ಮಕ ಸಮಷ್ಟಿ ವ್ಯಷ್ಟಿ ಸ್ಥೂಲದೇಹ ಭಾವಂ ತದಂತರ್ಲಿಂಗದೇಹೇ ಜೀವಭಾವಂ ತತ್ರ ಬುದ್ಧ್ಯಾದಿಭಾವಂ ಚ ದರ್ಶಯತಿ-ದೇಶೇತಿ। ತನ್ಮಾತ್ರೈಃ ಸೂಕ್ಷ್ಮಭೂತೈಃ, ಪಂಚೀಕರಣೇನ, ವಲಿತಾ ಸಂವಲಿತಾ ಸತೀ, ಸಪ್ತದ್ವೀಪ ಚತುರ್ದಶಲೋಕಾತ್ಮಕ ದೇಶವಿಭಾಗಾಂತಾ ನಿಮೇಷಾದಿ ದ್ವಿಪರಾರ್ಧಾವಧಿ ಕಾಲ ವಿಭಾಗಾಂತಾ ಚ

ಮನಸ್ತ್ವಂ ಸಮುಪಾಯಾತಾ ಸಂಸಾರಮವಲಂಬತೇ ।
ಚಂಡಾಲೋಽಸ್ಮೀತಿ ಮನನಾಚ್ಚಂಡಾಲತ್ವಮಿವ ದ್ವಿಜಃ ॥ ೭೩ ॥

ಸಂಕಲ್ಪಿತಾ ಪ್ರಬೋಧೇನ ಜಾಡ್ಯಾ ವಿಶ್ವಪ್ರಬೋಧಿನೀ ।
ಶಬಲಂ ರೂಪಮಾಸಾದ್ಯ ಸಂಕಲ್ಪಾದ್ಯಾತ್ಯನಾರತಂ ॥ ೭೪ ॥

ಕ್ರಮಾದ್ಭವತಿ । ತತಸ್ತತ್ರ ಪ್ರಾಣಧಾರಣಾಜ್ಜೀವೋ ಭೂತ್ವಾ ಬುದ್ಧಿರಹಂಕಾರೋ ಮನಃ ಅರ್ಥಾಚ್ಚಿತ್ತಂ ಚ ಭವತಿ.ಇತ್ಯರ್ಥಃ—ತಾ. ಪ್ರ.)

(ದೇಶ ಕಾಲಗಳೆರಡೂ ಬೇರೆಬೇರೆಯಲ್ಲ. ಒಂದೇ ತತ್ವದ ಎರಡು ಮುಖಗಳು. ಎರಡೂ ಒಟ್ಟಿಗೆ ಕೆಲಸ ಮಾಡುವುವು ಈ ಎರಡರಲ್ಲಿ ಒಂದು ಬಿಟ್ಟರೆ ಇನ್ನೊಂದಿಲ್ಲ.

ಹಿಂದೆ ಉತ್ಪತ್ತಿ ಪ್ರಕರಣದಲ್ಲಿ ಆಕಾಶಜೋಪಾಖ್ಯಾನದಲ್ಲಿ ಹೇಳಿರುವುದನ್ನು ಧ್ಯಾನಿಸಿ ನೋಡಿ.

ಪಂಚೀಕರಣವನ್ನು ತಿಳಿದಲ್ಲದೆ ವೇದಾಂತವು ಹಿಡಿಯುವುದಿಲ್ಲ. ಪಂಚೀಕರಣದ ವಿಚಾರವಾಗಿ ಶಂಕರರೂ ಒಂದು ಗ್ರಂಥವನ್ನು ಬರೆದಿದ್ದಾರೆ. ಅದ್ವೈತಿಗಳಿಗೆ ಪಿಂಡಗ್ರಹನಿವೃತ್ತಿಯೇ ವೇದಾಂತದ ಆರಂಭ. ಪಿಂಡಗ್ರಹ ನಿವೃತ್ತಿಗೆ ಪಂಚೀಕರಣ ಜ್ಞಾನವೇ ಮೂಲ.)

೭೩. ಚಿತ್ತು ಮನಸ್ತ್ವವನ್ನು ಹೊಂದಿದ ಕೂಡಲೇ ಸಂಸಾರವನ್ನು ಅವಲಂಬಿಸುವುದು. ದ್ವಿಜನಾಗಿದ್ದವನು ನಾನು ಚಂಡಾಲನು ಎಂದು ನಂಬುವುದರಿಂದ ಚಂಡಾಲನೇ ಆಗುವನಲ್ಲವೆ! ಹಾಗೆ ಇದು.

೭೪. ಹೀಗೆ ಸಂಕಲ್ಪವನ್ನು ಮಾಡಿದುದರಿಂದ, ಸಂಕಲ್ಪವಶವಾದುದರಿಂದ, ಅಪ್ರಬುದ್ಧವಾಗಿ ಜಡತ್ವವನ್ನೂ, ವಿಶ್ವರೂಪವನ್ನೂ ಹೊಂದಿ ವಿಶ್ವರೂಪವಾಗಿ ಕಾಣಿಸುವುದು. ಅದೇ ಸಂಕಲ್ಪದಿಂದಲೇ ತಾನೇ ಶಬಲಬ್ರಹ್ಮರೂಪವನ್ನು ಹೊಂದಿ ಒಂದೇ ಸಮನಾಗಿ ನಿಲ್ಲದೆ ರೂಪಾಂತರಗಳನ್ನು ಪಡೆಯುತ್ತಲೇ ಇರುವುದು.

ತಾತ್ಪರ್ಯ ಪ್ರಕಾಶಕಾರರ ಅಭಿಪ್ರಾಯ ಹೀಗೆ :—

(ಬ್ರಹ್ಮ ಚಿದೇವ ಅಪ್ರಬೋಧೇನ ಅಜ್ಞಾನೇನ ಶಬಲಂ ರೂಪಮಾಸಾದ್ಯ ದೇಹೇ ಜೀವಾಕಾರೇಣ ಸಂಕಲ್ಪಿತಾ ಸತೀ ತತ್ಪ್ರಯುಕ್ತಜಾಡ್ಯೇನ ಅವಿಶ್ವ ಪ್ರಬೋಧಿನೀ ಅಸರ್ವಜ್ಞಾ ಭೂತ್ವಾ ಪುನಃ ಪುನಃ ಭೋಗಸಂಕಲ್ಪಾದನಾರತಂಯಾತಿ ಸಂಸರತಿ.)

ವೇದಾಂತಿಗಳಲ್ಲಿ ಶಬಲಬ್ರಹ್ಮೋಪಾಸನವೆಂಬ ಒಂದು ಸಂಪ್ರದಾಯವುಂಟು. ಸರ್ವಂ ಖಲ್ವಿದಂ ಬ್ರಹ್ಮ ಎಂಬ ಮಹಾವಾಕ್ಯವನ್ನು ಹಿಡಿದು ಯದ್ಯತ್ ಪಶ್ಯತಿ ನೇತ್ರಾಭ್ಯಾಂ ತತ್ತದಾತ್ಮೇತಿಭಾವಯೇತ್ ಇತ್ಯಾದಿ ಶ್ರುತಿ ವಾಕ್ಯಗಳನ್ನು ಸಮನ್ವಯ ಮಾಡಿ, ವ್ಯಾಪ್ತಿಭಾವವನ್ನು ಸಾಧಿಸುವುದು ಈ ಉಪಾಸನದ ಗುರಿ. ಗೀತೆಯ ೧೮ನೇ ಅಧ್ಯಾಯ ೫೪, ೫೫ನೆಯ ಶ್ಲೋಕಗಳನ್ನು ನೋಡಿ :—

ಬ್ರಹ್ಮಭೂತಃ ಪ್ರಸನ್ನಾತ್ಮಾ ನ ಶೋಚತಿ ನ ಕಾಂಕ್ಷತಿ ।
ಸಮಃ ಸರ್ವೇಷು ಭೂತೇಷು ಮದ್ಭಕ್ತಿಂ ಲಭತೇ ಪರಾಂ ॥
ಭಕ್ತ್ಯಾಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿತತ್ವತಃ ।
ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನಂತರಂ ॥

ಮತ್ತೆ ೪೬ರಲ್ಲಿ,

ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂತತಂ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂವಿಂದತಿ ಮಾನವಃ ॥

ಇದು ಕರ್ಮಕಾಂಡದಲ್ಲಿ ಹೇಳಿರುವ ಗಾಯತ್ರೀ ವಿದ್ಯಾ. ಉಪನಯನ ಕಾಲದಲ್ಲಿ ತನ್ನಲ್ಲಿರುವ "ಆಪೋಜ್ಯೋತಿರಸಾವಮೃತಂಬ್ರಹ್ಮ"ವನ್ನು ಕಂಡು, ಅದರಲ್ಲಿ ಭಕ್ತಿಯನ್ನು ಮಾಡಿ, ಅದು ಸರ್ವಗತವೆಂಬುದನ್ನು ಅನುಭವದಿಂದ ಕಂಡು, ಅದು ಯಾವಾನ್, ಯಶ್ಚ, ಎಂಬುದನ್ನು ತತ್ವತಃ ಅರಿತು, ಅದು ಸರ್ವಭೂತ ಪ್ರವೃತ್ತಿ ಕಾರಣವು, ಅದು ಸರ್ವಮಿದಂ ತತಂ, ಎಂಬುದನ್ನು ಅರಿತು ಸ್ವಕರ್ಮವನ್ನು ಅದಕ್ಕೊಪ್ಪಿಸಿ ಕೃತಾರ್ಥನಾಗುವಿಕೆಯೇ ಗಾಯತ್ರಿಯ ಅರ್ಥವು. ಈ ಅರ್ಥವನ್ನೇ ವೇದಾಂತಿಗಳು ಶಬಲ ಬ್ರಹ್ಮೋಪಾಸನೆಯೆನ್ನುವರು.)

ಅನಂತಸಂಕಲ್ಪಮಯೀ ಜಾಡ್ಯಸಂಕಲ್ಪಪೀವರಾ ।
ಚಿಜ್ಜಾಡ್ಯಾನ್ಮೋಹಮಾಯಾತಿ ಪಯಃ ಪಾಷಾಣತಾಮಿವ ॥ ೭೫ ॥

ತತಶ್ಚಿತ್ತಂ ಮನೋಮೋಹೋ ಮಾಯೇತಿ ವಿಹಿತಾಭಿಧಾ ।
ಜಾಡ್ಯಂ ನಿಪುಣಮಾಶ್ರಿತ್ಯ ಸಂಸಾರೇ ಜಾಯತೇ ಮುನೇ ॥ ೭೬ ॥

ಮೋಹಮಾಂದ್ಯ ಮುಪಾಯಾತಾ ತೃಷ್ಣಾನಿಗಡಪೀಡಿತಾ ।
ಕಾಮಕ್ರೋಧ ಭಯೋಪೇತಾ ಭಾವಾಭಾವಾತಿಪಾತಿನೀ ॥ ೭೭ ॥

ತ್ಯಕ್ತಾನಂತನಿಜಾಭೋಗಾ ವ್ಯವಚ್ಛೇದವಿಕಾರಿಣೀ ।
ದುಃಖದಾವಾನಲಾತಪ್ತಾ ಶೋಕಾಶಿವಕೃಶಾಶಯಾ ॥ ೭೮ ॥

---

೭೫. ನೀರು ಹೆಪ್ಪುಗಟ್ಟಿಕೊಂಡು ಕಲ್ಲಾಗುವಂತೆ, ಚಿತ್ತೇ ಅನಂತ ಸಂಕಲ್ಪ ಮಯಿಯಾದಾಗ, ಜಡಸಂಬಂಧವಾದ ಸಂಕಲ್ಪಗಳನ್ನು ಮಾಡಿದಾಗ, ಜಡವಾಗಿ, ಮೋಹಮಯವಾಗುವುದು.

೭೬. ಅನಂತರ ಚಿತ್ತ, ಮನಸ್ಸು, ಮೋಹ, ಮಾಯಾ, ಎಂಬ ನಾನಾ ವಿಧವಾದ ಹೆಸರುಗಳನ್ನು ಹೊಂದಿ, ಬಲವಾಗಿರುವ ಜಡತ್ವವನ್ನು ಹೊಂದಿ ಸಂಸಾರವನ್ನು ಆರಂಭಿಸುವುದು.

೭೭. ಈ ಮೋಹದಿಂದ ಜಡವಾಗಿ, ತೃಷ್ಣೆಯೆಂಬ ಸಂಕಲೆಯನ್ನು ಹಾಕಿಕೊಂಡು, ಕಾಮ ಕ್ರೋಧ ಭಯಗಳಿಗೆ ಒಳಗಾಗಿ, ವಿಭವ ದಾರಿದ್ರ್ಯಗಳನ್ನು ಅನುಭವಿಸುವುದು.

೭೮. ತನಗೆ ಸಹಜವಾಗಿರುವ ಪ್ರಭಾವಗಳನ್ನೆಲ್ಲ ಬಿಟ್ಟು ದೇಶ ಕಾಲಗಳಿಂದ ತುಂಡುತುಂಡಾಗಿ ವಿಕಾರಗೊಂಡು, ದುಃಖವೆಂಬ ಕಾಳ್ಕಿಚ್ಚಿನಿಂದ ಬೆಂದು, ಶೋಕವೆಂಬ ಅಮಂಗಲವನ್ನು ಅನುಭವಿಸುವ ಕೃಪಣೆಯಾಗುವುದು.

ಇಯಮಸ್ಮೀತಿ ಭಾವೇನ ಶೂನ್ಯೇನ ವಿಕಲೀಕೃತಾ ।
ದೇಹಮಾತ್ರಗೃಹೀತಾಸ್ಥಾ ಪರಂ ದೈನ್ಯಮುಪಾಗತಾ ॥ ೭೯ ॥

ಮಗ್ನಾ ಮೋಹಮಹಾಪಂಕೇ ಜೀರ್ಣೇವ ವನದಂತಿನೀ ।
ಭಾವಾಭಾವಲತಾದೋಲಾ ಪರಿಲೋಲಶರೀರಕಾ ॥ ೮೦ ॥

ಅಸಾರಾಪಾರ ಸಂಸಾರ ವಿಕಾರ ವ್ಯವಹಾರಿಣೀ ।
ತಾಪೋಪತಪ್ತ ಹೃದಯಾ ರಾಗತೇಜೋನು ರಂಜಿತಾ ॥ ೮೧ ॥

ನಿಜಯೂಥಪರಿಭ್ರಷ್ಟಾ ಮೃಗೀವಾವಶತಾಂ ಗತಾ ।
ಆವಿರ್ಭಾವೋದಿತಾಕಾರಾ ತಿರೋಭಾವೇಸ್ತಮಾಗತಾ ॥ ೮೨ ॥

ಸ್ವಸಂಕಲ್ಪೋಪಯಾತಾಸು ಭೀತಾ ಸಂಭ್ರಮದೃಷ್ಟಿಷು ।
ಪಲಾಯತೇ ವಾಪ್ಯನ್ಯಾಸು ವೇತಾಲೇಷ್ವಿವ ಬಾಲಿಕಾ ॥ ೮೩ ॥

---

೭೯. ನಾನು ಇದು (ಇನ್ನು ಯಾವುದೂ ಅಲ್ಲ) ಎಂಬ ವಿಪರೀತ ಭಾವನೆಯಿಂದ ವಿಕಾರಗೊಂಡು, ದೇಹಮಾತ್ರದಲ್ಲಿ ಅಕ್ಕರೆಯುಳ್ಳದಾಗಿ, ಬಹುದೈನ್ಯವನ್ನು ಪಡೆಯುವುದು.

೮೦. ಮೋಹಮಹಾಪಂಕದಲ್ಲಿ ಮುಳುಗಿ, ಕೆಸರಿನಲ್ಲಿ ಸಿಕ್ಕಿಕೊಂಡು ಜೀರ್ಣವಾದ ಕಾಡಿನ ಹೆಣ್ಣಾನೆಯಂತೆ, ಜನ್ಮ ಮೃತ್ಯುಗಳೆಂಬ ಬಳ್ಳಿಯುಯ್ಯಾಲೆಯಲ್ಲಿ ತೂಗುತ್ತಾ ನಾನಾ ದೇಹಗಳನ್ನು ಪಡೆಯುವುದು.

೮೧. ಅಸಾರವಾಗಿ, ಅಪಾರವಾಗಿ, ಇರುವ ಸಂಸಾರವೆಂಬ ವಿಕಾರ ವ್ಯವಹಾರಗಳಲ್ಲಿ ತೊಡಗಿ, ತಾಪತ್ರಯಗಳಿಂದ ನೊಂದು ಬೆಂದು, ಕಾಮ ಕ್ರೋಧಗಳಿಂದ ಒದ್ದಾಡುವುದು.

೮೨. ಗುಂಪಿನಿಂದ ಚೆದುರಿದ ಹೆಣ್ಣು ಹುಲ್ಲೆಯಂತೆ ಭಯಪರವಶವಾಗಿ, ಹುಟ್ಟಿದಾಗ ಪ್ರಕಟವಾಗುತ್ತ, ಸತ್ತಾಗ ಮರೆಯಾಗುತ್ತ ತೊಳಲುವುದು.

೮೩. ತನ್ನ ಸಂಕಲ್ಪ ಬಲದಿಂದಲೇ ಸಂಭವಿಸಿದ ನಾನಾ ಭ್ರಾಂತಿಮಯ ವ್ಯಾಪಾರಗಳಲ್ಲಿ ಸಿಕ್ಕಿಕೊಂಡು ತನಗೆ ತಾನೇ ಹೆದರುತ್ತ, ತಾನಾಗಿ ಕಲ್ಪಿಸಿಕೊಂಡ

ಉಷ್ಟ್ರೀವ ಮಧುರಂ ಬಿಂದುಂ ಮಾಃಭತೇ ಭಾವಿತಂ ಸುಖಂ ।
ಅವಾಂತರಪರಿಭ್ರಷ್ಟಾ ದೋಷಾದ್ದೋಷಂ ಪತತ್ಯಧಃ ॥ ೮೪ ॥

ಪರಂ ವೈಷಮ್ಯಮಾಯಾತಿ ಸಂಕಟಾತ್ಸಂಕಟಂ ಗತಾ ।
ದುಃಖಾದ್ದುಃಖಂ ನಿಪತಿತಾ ವಿಪದೋ ವಿಪದಿ ಸ್ಥಿತಾ ॥ ೮೫ ॥

ನಾನಾನರ್ಥಗಣೋಪೇತಾ ಚೇಷ್ಟಾಪರವಶಾಶಯಾ ।
ಕಷ್ಟಾತ್ಕಷ್ಟಮನುಪ್ರಾಪ್ತಾ ಪರಿತಾಪಾನುತಾಪಿನೀ ॥ ೮೬ ॥

ವೇತಾಲ ಭ್ರಾಂತಿಯಲ್ಲಿ ಸಿಕ್ಕಿ ಒದ್ದಾಡುವ ಹೆಣ್ಣು ಮಗುವಿನಂತೆ, ಇನ್ನು ಕೆಲವು ಸಂದರ್ಭಗಳಲ್ಲಿ ಓಡಿಹೋಗುವುದು.

೮೪. ಬಿಂದು ಮಾತ್ರವಾದ ಮಧುರತೆಯನ್ನು ತಾನೇ ಕಲ್ಪಿಸಿಕೊಂಡು ಮುಳ್ಳುಕಂಟಿಗಳನ್ನು ತಿನ್ನುವ ಹೆಣ್ಣು ಒಂಟೆಯಂತೆ, ವಿಷಯ ವ್ಯಾಪಾರಗಳಲ್ಲಿ ಸುಖವನ್ನು ಹುಡುಕುತ್ತಾ, ಯಾವುದೋ ಒಂದು ಸಣ್ಣ ವಿಷಯದಲ್ಲಿ ಸಿಕ್ಕಿ ಹಾಕಿಕೊಂಡು ಭ್ರಷ್ಟವಾಗಿ ದೋಷವನ್ನು ಹೊಂದಿ ಇನ್ನೂ ದೋಷವ-ತೆಯಾಗಿ ಅಧೋಗತಿಗೆ ಇಳಿಯುವುದು.

(ದೇಶ ಕಾಲಗಳನ್ನೂ ಅಂಗೀಕರಿಸುವುದು ಎಂದರೆ ಊರ್ಧ್ವ, ಅಧೋಗತಿಗಳನ್ನೂ, ಉಚ್ಛ್ರಾಯ ಹೀನ ಸ್ಥಿತಿಗಳನ್ನೂ ಅಂಗೀಕರಿಸಿದಂತೆಯೇ ಆಯಿತು.)

೮೫. ಹೀಗೆ ಸಂಕಟ ಪರಂಪರೆಗಳಲ್ಲಿ ಸಿಕ್ಕಿಕೊಂಡು ಬಹು ಕಷ್ಟಪಡುತ್ತಾ, ಒಂದು ದುಃಖದಿಂದ ತಪ್ಪಿಸಿಕೊಳ್ಳಬೇಕು ಎಂದುಕೊಂಡು ಆ ಪ್ರಯತ್ನದಲ್ಲಿ ಇನ್ನೊಂದು ದುಃಖದಲ್ಲಿ ಬೀಳುತ್ತ, ವಿಪತ್ತಿನಲ್ಲಿ ಮುಳುಗಿ ಹೋಗುವುದು.

೮೬. ನಾನಾ ವಿಧವಾದ ಅನರ್ಥ ಗಣಗಳಿಗೆ ಗುರಿಯಾಗಿ, ಪರವಶವಾಗಿ ವ್ಯಾಪಾರ ಮಾಡುತ್ತ, ಕಷ್ಟದಿಂದ ಕಷ್ಟಕ್ಕೇ ಬೀಳುತ್ತ ಪರಿತಾಪ ಸಂತಾಪ ಅನುತಾಪಗಳಿಂದ ತಪ್ತವಾಗುವುದು.

ಕ್ರಮಾದಾಬದ್ಧವೈದಗ್ಧ್ಯಾತ್ ವೈದಗ್ಧ್ಯಂಗಮುಪಾಗತಾ ।
ವಿಚಿತ್ರಬಂಧ ನಿರ್ಮಾಣ ಪರಾಕ್ರಮಪದಂ ಗತಾ ॥ ೮೭ ॥

ಸರ್ವತಃ ಶಂಕತೇ ಭೀತಾ ಪ್ರಾಣಾತ್ಯಯಮುಪಾಗತಾ ।
ಕ್ಷೀಣತೋಯೇವ ಶಫರೀ ವಿವರ್ತನಪರಾಯಣಾ ॥ ೮೮ ॥

ಬಾಲ್ಯೇ ವಿವಶಸರ್ವಾರ್ಥಾ ಯೌವನೇ ಚಿಂತಯಾ ವೃತಾ ।
ವಾರ್ಧಕೇಽಪ್ಯತಿದುಃಖಾರ್ತಾ ಮೃತಾ ಕರ್ಮವಶೀಕೃತಾ ॥ ೮೯ ॥

---

೮೭. ಹೀಗೆ ಕ್ರಮವಾಗಿ (ಸ್ಥಾವರ, ಜಂಗಮ, ತಿರ್ಯಗಾದಿ ಯೋನಿಗಳಲ್ಲಿ ಪರಿಭ್ರಮಿಸಿ ಮಾನವ ಜನ್ಮಕ್ಕೆ ಬಂದು) ಬುದ್ಧಿಬಲವನ್ನು ಬೆಳೆಸಿಕೊಂಡರೂ, ತನ್ನ ಸಾಹಸದಿಂದಲೇ ಚಿತ್ರವಿಚಿತ್ರಗಳನ್ನೆಲ್ಲ ನಿರ್ಮಾಣ ಮಾಡಿಕೊಂಡು ತನಗೆ ಬಂಧನವಾಗಿರುವ ಸ್ಥಿತಿಯನ್ನು ಏರ್ಪಡಿಸಿಕೊಳ್ಳುವುದು.)

(ಕ್ರಮಾತ್ ಮಾನುಷ್ಯಲಾಭೇ ಪಿ, ಬಾಲ್ಯಾತ್ಪ್ರಭೃತಿ, ವ್ಯವಹಾರ ಕೌಶಲ್ಯಾಭ್ಯಾಸಾತ್ ವೈದಗ್ಧ್ಯಾತ್ ಕೌಶಲಾತ್ ವೈದಗ್ಧ್ಯಂಗಂ. ಕಾವ್ಯನಾಟಕ ತರ್ಕಾದ್ಯಭ್ಯಾಸಂಉಪಗತಾಸತೀ ವಿಚಿತ್ರಸ್ಯ ಸ್ವಬಂಧಸ್ಯ ಧನಗೃಹಕ್ಷೇತ್ರ ಪರಿವಾರಾದೇಃ ನಿರ್ಮಾಣೇ ಯಃ ಪರಾಕ್ರಮಃ ತತ್ಪದಮೇವ ಗತಾ; ನ ಮೋಕ್ಷೋಪಯೋಗಿ ವಿವೇಕಪದಮಿತ್ಯರ್ಥಃ ॥)

೮೮. ಎಲ್ಲೆಲ್ಲಿಯೂ, ಯಾವುದನ್ನು ಕಂಡರೂ ಭಯಪಡುತ್ತ, ಪ್ರಾಣವೇ ಹೋಗುವುದೆಂಬ ಸ್ಥಿತಿಗೆ ಬಂದು, ನೀರು ಒಣಗಿದಾಗ ಒದ್ದಾಡುವ ಹೆಣ್ಣು ಮೀನಿನಂತೆ ಒದ್ದಾಡುವುದು.

೮೯. ಬಾಲ್ಯದಲ್ಲಿ ಯಾವುದೊಂದಕ್ಕೂ ಪರತಂತ್ರವಾಗಿದ್ದು, ಯೌವನದಲ್ಲಿ ಚಿಂತೆಯಿಂದ ಬಳಲುತ್ತಿದ್ದು, ವಾರ್ಧಕದಲ್ಲಿ ಅತಿದುಃಖದಿಂದ ಆರ್ತವಾಗಿದ್ದು, ಕರ್ಮವಶದಿಂದ ಮೃತವಾಗುವುದು.

ಜಾಯತೇ ಸ್ವರ್ಗನಗರೇ ನಾಗೀ ಪಾತಾಲಕೋಟರೇ ।
ಆಸುರೀ ದೈತ್ಯವಿವರೇ ನರಸ್ತ್ರೀ ವಸುಧಾತಲೇ ॥ ೯೦ ॥

ರಾಕ್ಷಸೀ ರಾಕ್ಷಸಾಧಾರೇ ವಾನರೀ ವನಕೋಟರೇ ।
ಸಿಂಹೀ ಗಿರೀಂದ್ರಶಿಖರೇ ಕಿನ್ನರೀ ಕುಲಪರ್ವತೇ ॥ ೯೧ ॥

ವಿದ್ಯಾಧರೀ ದೇವಗಿರೌ ವ್ಯಾಲೀ ಚ ವನಗರ್ತಕೇ ।
ಲತಾ ತರೌ ಖಗೀ ನೀಡೇ ವೀರುತ್ ಸಾನೌ ವನೇ ಮೃಗೀ ॥ ೯೨ ॥

ಶೇತೇ ನಾರಾಯಣೋಂಭೋಧೌ ಧ್ಯಾನೀ ಬ್ರಹ್ಮಪುರೇಬ್ಜಜಃ ।
ಕಾಂತಾಗಶೋ ಹರಃ ಶೈಲೇ ಸ್ವರ್ಗೇ ಸುರವರೋ ಹರಿಃ ॥ ೯೩ ॥

ದಿನಂ ಕರೋತಿ ತೀಕ್ಷ್ಣಾಂಶುರ್ವರ್ಷತ್ಯಂಬುಧರೋ ಜಲಂ ।
ಕರೋತಿ ಶ್ವಸನಂ ಸಂವಿತ್ಸಪರ್ವತ ಮಹೋದಧಿಃ ॥ ೯೪ ॥

೯೦-೯೧-೯೨. ಸ್ವರ್ಗದಲ್ಲಿ ಒಮ್ಮೆ ದೇವತೆಯಾಗಿ, ಪಾತಾಲದಲ್ಲಿ ಒಮ್ಮೆ ನಾಗಿಯಾಗಿ, ದೈತ್ಯಲೋಕದಲ್ಲಿ ಒಮ್ಮೆ ಆಸುರಿಯಾಗಿ, ಭೂಮಂಡಲದಲ್ಲಿ ಮಾನವಿಯಾಗಿ, ರಾಕ್ಷಸ ಲೋಕದಲ್ಲಿ ರಾಕ್ಷಸಿಯಾಗಿ, ಕಾಡಿನ ನಡುವೆ ಕಪಿಯಾಗಿ, ಗಿರಿಶಿಖರದಲ್ಲಿ ಸಿಂಹಿಯಾಗಿ, ಕುಲಪರ್ವತದಲ್ಲಿ ಕಿನ್ನರಿಯಾಗಿ, ದೇವಗಿರಿಯಲ್ಲಿ ವಿದ್ಯಾಧರಿಯಾಗಿ, ವನಮಧ್ಯದಲ್ಲಿ ವ್ಯಾಲಿಯಾಗಿ, ತರುವಿನಲ್ಲಿ ಲತೆಯಾಗಿ, ಗೂಡಿನಲ್ಲಿ ಹಕ್ಕಿಯಾಗಿ, ತಪ್ಪಲಿನಲ್ಲಿ ಹಂಬಾಗಿ, ವನದಲ್ಲಿ ಮೃಗಿಯಾಗಿ ಹುಟ್ಟುರವುದು.

೯೩. ಕ್ಷೀರ ಸಮುದ್ರ ಮಧ್ಯದಲ್ಲಿ ನಾರಾಯಣನಾಗಿ ಯೋಗ ನಿದ್ದೆಯಲ್ಲಿರುವುದು. ಬ್ರಹ್ಮ ಲೋಕದಲ್ಲಿ ಕಮಲ ಸಂಭವನಾಗಿ ಧ್ಯಾನದಲ್ಲಿರುವುದು. ಕೈಲಾಸದಲ್ಲಿ ಕಾಂತಾಲಿಂಗಿತ ಕಾಯವಾಗಿ ಪರಶಿವನಾಗಿರುವುದು. ಸ್ವರ್ಗದಲ್ಲಿ ಇಂದ್ರನಾಗಿ ಭೋಗಪಡುತ್ತಿರುವುದು.

೯೪. ಸಂವಿತ್ ಸ್ವರೂಪವಾಗಿರುವ ಈ ಚಿತ್ತೇ ಸೂರ್ಯನಾಗಿ ದಿನವನ್ನು ಮಾಡುತ್ತ, ಮೇಘವಾಗಿ ವರ್ಷವನ್ನು ಕರೆಯುತ್ತ, ವಾಯುವಾಗಿ ಬೀಸುತ್ತ, ಪರ್ವತ ಮಹೋದಧಿಗಳಾಗಿ (ಕಾಣುತ್ತಿರುವುದು.)

ಋತುಚಕ್ರಂ ಪ್ರವಹತಿ ಸಹಸಾ ಕಾಲಮಂಡಲಂ ।
ದಿನರಾತ್ರಿತಯೋಽಪ್ಯೈತಿ ತೇಜಸ್ತಿಮಿರತಾಂ ಕ್ರಮಾತ್ ॥ ೯೫ ॥

ಕ್ವಚಿದ್ಬೀಜರಸೋಲ್ಲಾಸಾತ್ಕ್ವಚಿತ್ಪಾಷಾಣಮೌನಿನೀ ।
ಕ್ವಚಿನ್ನದೀ ರಸವತೀ ಕ್ವಚಿತ್ಕಮುದವಿಸ್ತೃತಿಃ ॥ ೯೬ ॥

ಕ್ವಚಿತ್ಫಲಾವಲೀಪಕ್ವೈಃ ಕ್ವಚಿತ್ಕಾಷ್ಠಾನಲಾದಿಭಿಃ ।
ಕ್ವಚಿತ್ಶೈತ್ಯ ಹಿಮದ್ವಾರಿ ಕ್ವಚಿತ್ಖಾದಿ ನ ಕಿಂಚನ ॥ ೯೭ ॥

---

೯೫. ತಾನೇ ಬೆಳಕು, ಕತ್ತಲೆಗಳಾಗಿ ದಿನ ರಾತ್ರಿಗಳನ್ನು ಮಾಡುತ್ತ ವಸಂತಾದಿ ಋತುಗಳನ್ನು ಯುಗಮನ್ವಂತರಾದಿ ಕಾಲ ಮಂಡಲವನ್ನು ಸುತ್ತಿಸುತ್ತಿರುವುದು.

೯೬. ಈ ಚಿತ್ತೇ ಕೆಲವೆಡೆಯಲ್ಲಿ ಬೀಜರಸ ರೂಪವಾಗಿ ವೃಕ್ಷಗಳಾಗಿ, ಇನ್ನು ಕೆಲವೆಡೆ ಮೌನವಾಗಿರುವ ಶಿಲಾ ಖಂಡಗಳಾಗಿ, ಮತ್ತೂ ಕೆಲವೆಡೆ ನೀರು ತುಂಬಿರುವ ನದಿಯಾಗಿ, ಇನ್ನು ಕೆಲವೆಡೆ ಕಮಲ ವನಗಳಾಗಿ ಇರುವುದು.

೯೭. ಇನ್ನು ಕೆಲವೆಡೆ ಪಕ್ವವಾದ ಹಣ್ಣುಗಳಾಗಿ ಇನ್ನು ಕೆಲವೆಡೆ ಕಾಷ್ಠ, ಅನಲಾದಿಗಳಾಗಿ, ಇನ್ನು ಕೆಲವೆಡೆ ಹಿಮದಂತೆ ಶೀತವಾಗಿರುವ ನೀರಾಗಿ, ಇನ್ನೂ ಕೆಲವೆಡೆ ಆಕಾಶಾದಿ ಭೂತಗಳಾಗಿ, ಇನ್ನೂ ಕೆಲವೆಡೆ ಏನೂ ಇಲ್ಲದೆ ಇರುವುದು.

ಕ್ವಚಿದುಜ್ಜ್ವಲಿತಾಕಾರಾ ಕ್ವಚಿತ್ಕಷ್ಟಾ ಶಿಲಾ ಕ್ವಚಿತ್ ।
ಕ್ವಚಿನ್ನೀಲಾಥ ಹರಿತಾ ಕ್ವಚಿದಗ್ನಿಃ ಕ್ವಚಿನ್ಮಹೀ ॥ ೯೮ ॥

ಸರ್ವಾತ್ಮತ್ವಾತ್ಸರ್ವಗತ್ವಾತ್ಸರ್ವಶಕ್ತಿತ್ವ ಯೋಗತಃ ।
ಸರ್ವಾತ್ವಾದೇವಂರೂಪೈವ ಖಾದಪ್ಯಚ್ಛೈವ ಸಾ ಪರಾ ॥ ೯೯ ॥

ಚಿಚ್ಚಿನೋತಿ ಯಥಾತ್ಮಾನಂ ಯೇನ ಯತ್ರ ಯದಾ ಯಥಾ ।
ತತ್ತದಾನುಭವತ್ಯಂಬುಸ್ಪಂದಾದ್ವೀಚ್ಯಾದಿತಾಂ ಯಥಾ ॥ ೧೦೦ ॥

---

೯೮. ಒಂದೊಂದೆಡೆ ಮನೋಹರವಾದ ರೂಪವುಳ್ಳದಾಗಿ, ಒಂದೊಂದೆಡೆ ಮುಳ್ಳು ಕಲ್ಲುಗಳಾಗಿ, ಒಂದೊಂದೆಡೆ, ನೀಲಿ, ಹಳದಿ, ಬಣ್ಣಗಳಾಗಿ, ಒಂದೆಡೆ ಬೆಂಕಿಯಾಗಿ ಒಂದೆಡೆ ಭೂಮಿಯಾಗಿ.

೯೯. ಆಕಾಶಕ್ಕಿಂತಲೂ ಸ್ವಚ್ಛವಾಗಿ ಎಲ್ಲದಕ್ಕಿಂತ ಶ್ರೇಷ್ಠವಾದ ಆ ಚಿತ್ತು ಎಲ್ಲವೂ ತಾನೇ ಆದುದರಿಂದ ಎಲ್ಲೆಲ್ಲಿಯೂ ತಾನೇ ಇರುವುದರಿಂದ, ಎಲ್ಲವೂ ಆಗಬಲ್ಲ ಶಕ್ತಿಯಿರುವುದರಿಂದ ತಾನಲ್ಲದೇ ಇನ್ನೊಂದೂ ಇಲ್ಲ ವಾದುದರಿಂದ.

೧೦೦. ಆ ಚಿತ್ತು ಯಾವಾಗ ಯಾವಾಗ ಎಲ್ಲಿ ಏನಾಗಿ ತನ್ನನ್ನು ಭಾವಿಸಿ ಕೊಳ್ಳುವುದೋ ಹಾಗೆ ಹಾಗೆಯೇ, ಒಂದೇ ನೀರು, ಹೊಳೆ, ಅಲೆ, ಆಲಿಕಲ್ಲು ಮುಂತಾದ ನಾನಾ ರೂಪಗಳಾಗಿರುವಂತೆ, ಅದದೇ ರೂಪವಾಗಿ ತನ್ನನ್ನು ತಾನೇ ಅನುಭವಿಸಿಕೊಳ್ಳುವುದು.

ಹಂಸೀ ಕ್ರೌಂಚೀ ಬಕೀ ಕಾಕೀ ಸಾರಸೀ ತುರಗೀ ವೃಕೀ ।
ಬಕೀ ಬಲಾಕಾ ಹರಿಣೀ ವಾನರೀ ಕಿನ್ನರೀ ಶುನೀ ॥ ೧೦೧ ॥

ವಟಿಕಾ ಪಿಂಗಲೀ ಶಾಲೀ ಮಕ್ಷಿಕಾ ಭ್ರಮರೀ ಶುಕೀ ।
ಧೀಃ ಶ್ರೀರ್ಹೀಃ ಪ್ರೀತೀ ರತಿಶ್ಚ ಶಂಬರೀ ಶರ್ವರೀ ಶಶೀ ॥ ೧೦೨ ॥

ಏತಾಸ್ವನ್ಯಾಸು ಚಾನ್ಯಾಸು ಪರಿಭ್ರಮತಿ ಯೋನಿಷು ।
ವಿವರ್ತಮಾನ ಸಂಸಾರೇ ಚಲಾವರ್ತೇ ತೃಣಂ ಯಥಾ ॥ ೧೦೩ ॥

ಬಿಭೇತ್ಯಥ ಸ್ವಸಂಕಲ್ಪಾತ್ಸ್ವ ಶಬ್ದಾದಿವ ಗರ್ದಭೀ ।
ನಾನಯಾ ಸದೃಗನ್ಯಾಸ್ತಿ ಮುಗ್ಧಾ ಬಾಲಾ ಚಲಾಬಲಾ ॥ ೧೦೪ ॥

ಏಷಾ ಸಾ ಕಥಿತಾ ತುಭ್ಯಂ ಜೀವಶಕ್ತಿರ್ಮಹಾಮುನೇ ।
ಪ್ರಾಕೃತಾಚಾರವಿವಶಾ ವರಾಕೀ ಪಶುಧರ್ಮಿಣೀ ॥ ೧೦೫ ॥

೧೦೧-೨-೩. ಜಾತಿ ಜಾತಿಯ ಹಕ್ಕಿಗಳು, ಮೃಗಗಳೂ ಆಗಿ, ಧೀ, ಶ್ರೀ, ಪ್ರೀತಿ, ರತಿ, ಮೊದಲಾದ ದೇವತೆಗಳಾಗಿ, ರಾತ್ರಿಯಾಗಿ, ಚಂದ್ರನಾಗಿ, ಇನ್ನೂ ಎಷ್ಟೆಷ್ಟೋ ಯೋನಿಗಳಲ್ಲಿ ವಿವರ್ತಮಾನವಾದ ಈ ಸಂಸಾರದಲ್ಲಿ, ಸುಳಿಯಲ್ಲಿ ಸುತ್ತುವ ಹುಲ್ಲಿನ ಕಡ್ಡಿಯಂತೆ, ಈ ಚಿತ್ತು ಸುತ್ತುವುದು.

(ವಿವರ್ತವೆಂದರೆ ಒಂದು ವಸ್ತುವು ತನ್ನ ಸ್ವಭಾವವನ್ನು ಬಿಡದೆ ಅನ್ಯ ವಸ್ತುವಿನಂತೆ ತೋರುವುದು.)

೧೦೪. ಈ ಚಿತ್ತು, ತನ್ನ ಕೂಗಿಗೆ ತಾನೇ ಹೆದರಿಕೊಳ್ಳುವ ಕತ್ತೆಯಂತೆ, ತನ್ನ ಸಂಕಲ್ಪ ವಶವಾಗಿ ತಾನೇ ಹೆದರಿಕೊಳ್ಳುವುದು. ಈ ಚಿತ್ತಿಗೆ ಸದೃಶವಾದ ಮುಗ್ಧೆ, ಬಾಲೆ, ಚಂಚಲೆ, ಅಬಲೆ, ಇನ್ನೊಂದಿಲ್ಲ.

೧೦೫. ಹೀಗೆ ಜೀವಶಕ್ತಿ ಸ್ವರೂಪಿಣಿಯಾಗಿ, ಪಾಮರರಂತೆ ಪರವಶವಾದ ಆಚಾರವುಳ್ಳ ಪಶು ಧರ್ಮಿಣಿಯಾದ ಚಿತ್ತನ್ನು ಕುರಿತು, ಎಲೈ ಮಹಾ ಮುನಿಯೆ, ನಿನಗೆ ಹೇಳಿದೆನು.

ಕರ್ಮಾತ್ಮೇತ್ಯಭಿಧಾ ಪ್ರಾಪ್ತಶೋಚ್ಯಾಸ್ಯ ಪರಮಾತ್ಮನಃ ।
ಅನಂತಂ ದುಃಖಬಹುಲಂ ಸ್ವಯಂ ವಿಭ್ರಮಮಾಶ್ರಿತಾ ॥ ೧೦೬ ॥

ಅಸದೇವಾನಯಾಕ್ರಾಂತಂ ವಿನಾಶಿ ಸಹಜಂ ಮಲಂ ।
ತಂಡುಲೇನೇವ ಕಂಚೂಕಮನನ್ಯಯಾವ್ಯವಸ್ಥಿತಂ ॥ ೧೦೭ ॥

ಅನಂತ ವಿಭವಭ್ರಷ್ಟಾ ದೌರ್ಭಾಗ್ಯಪರಿತಾಪಿನೀ ।
ಶೋಚಂತೀ ಪ್ರಾಪ್ಯ ಜೀವತ್ವಂ ಭರ್ತೃಹೀನೇವ ನಾಯಿಕಾ ॥ ೧೦೮ ॥

---

೧೦೬. ಕರ್ಮಾನುರೂಪ ಸ್ವಭಾವವುಳ್ಳವಳಾಗಿ, ಅಯ್ಯೋ ಎಂದು ಕನಿಕರ ಪಡುವಂತಹ ದುಃಖವುಳ್ಳ ಈ ಚಿತ್ತೇ ಪರಮಾತ್ಮನ ವಿವರ್ತ ಸ್ವರೂಪವಾದ ಅನಂತವೂ ದುಃಖಬಹುಲವೂ ಆದ ಈ ಸಂಸಾರವನ್ನು ಆಶ್ರಯಿಸಿರುವುದು. (ಅಥವಾ ಸಂಸಾರಕ್ಕೆ ಆಶ್ರಯವಾಗಿರುವುದು.)

(ಯಥಾಕಾರೀ ಯಥಾಚಾರೀ ತಥಾ ಭವತಿ? ಸಾಧುಕಾರೀ ಸಾಧುರ್ಭವತಿ । ಪಾಪಕಾರೀ ಪಾಪೋಭವತಿ । ಪುಣ್ಯೋ ವೈಪುಣ್ಯೇನ ಕರ್ಮಣಾ ಭವತಿ ಪಾಪಃ ಪಾಪೇನ" ಇತಿ ಶ್ರುತಿಃ. –ತಾ. ಪ್ರ.)

೧೦೭. ಈ ಚಿತ್ತ ತನಗೆ ಸಹಜವಾಗಿದ್ದರೂ ವಿನಾಶಿಯಾದ ಅಸತ್ತೆಂಬ ಮಲವನ್ನು, ಸೊಟ್ಟನ್ನು ಅಕ್ಕಿಯು ತೊಟ್ಟಿರುವಂತೆ. ತಾನಲ್ಲದೆ ಇನ್ನೊಂದಿಲ್ಲ ವೆಂದು ನಂಬಿಸುವ ಅವಿದ್ಯೆಯಿಂದ ಅವ್ಯವಸ್ಥಿತವಾಗಿ ಹೋಗಿ, ಗ್ರಹಿಸಿತು. (ಅನನ್ಯಯಾ ಸ್ವಾತಿರಿಕ್ತ ಸತ್ತಾ ಸ್ಫೂರ್ತಿಶೂನ್ಯಯಾ ಅವಿದ್ಯಯಾ ಅವ್ಯವಸ್ಥಿತಂ ಅನಿಯತಂ. –ತಾ. ಪ್ರ.)

೧೦೮. ಹೀಗೆ (ಅವಿದ್ಯಾ ಕಾರಣವಾಗಿ ಅಸತ್ತೆಂಬ ಮಲವನ್ನು ಗ್ರಹಿಸಿದ) ಚಿತ್ತ, ಅನಂತ ವೈಭವವನ್ನು ಕಳೆದುಕೊಂಡು, ದೌರ್ಭಾಗ್ಯದಿಂದ ಪರಿತಪಿಸುತ್ತಿರುವ ಭರ್ತೃಹೀನೆಯಂತೆ, (ತಾನು ಸ್ವಯಂ ಸರ್ವಕ್ಕೂ) ಒಡತಿಯಾಗಿದ್ದರೂ ಜೀವತ್ವವನ್ನು ಹೊಂದಿ ದುಃಖಭಾಗಿನಿಯಾಗುವುದು.

ಜಡಗತೇರವಲೋಕಯ ಶಕ್ತತಾಂ ನಿಜಪದಸ್ಮರಣೇನ ವಿನೇಹ ಚಿತ್ ।
ವ್ರಜತಿ ಕಷ್ಟಮಧಃಪತನಾ ಯಯಾ ಯದರಘಟ್ಟಘಟೀಘನಪೀಠವತ್ ॥ ೧೦೯ ॥

ಇತ್ಯಾರ್ಷೆ ವಾಸಿಷ್ಠರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ " ಶಿವಪೂಜೋಪಾಖ್ಯಾನೇ ಚೇತ್ಯೋನ್ಮುಖಚಿದ್ವಿಚಾರೋ " ನಾಮ ತ್ರಿಂಶಃ ಸರ್ಗಃ

---

೧೦೯. ರಾಮ, ಜಡವಾಗಿರುವ ಅವಿದ್ಯೆಯ (ಸಾಮರ್ಥ್ಯವ)ನ್ನು ಕಂಡವನಾದೆಯಾ? ನೀರೆತ್ತುವ ಯಂತ್ರದ ಮಡಿಕೆಗಳಲ್ಲಿ ಸೇರಿಕೊಂಡ ಆಕಾಶದ ಹಾಗೆ, ತನ್ನ ಸಹಜ ಸ್ವಭಾವವನ್ನು ಮರೆತ ಚಿತ್ತು, ಅಧಃ ಪತನವನ್ನು ಹೊಂದಿ, ಈ ಅವಿದ್ಯೆಗೆ ಸಿಕ್ಕಿ ಕಷ್ಟಪಡುವುದು.

(ನಿಜಸ್ಯ ನಿರತಿಶಯಾನಂದ ಪೂರ್ಣ ಭಾವಸ್ಯ ಘನ ಸಮುದ್ರಾದಿ ಸಕಲ ಜಲೋಪಲಕ್ಷಿತ ಸರ್ವ ಜಗದಂತರ್ಭಾವನ ಸಾಮರ್ಥ್ಯಸ್ಯ ಚ ಸ್ಮರಣೇನವಿನಾ, ದೇಹಮಾತ್ರ ಪರಿಚ್ಛಿನ್ನಾಹಂ, ಘಟೀಮಾತ್ರ ಪರಿಚ್ಛಿನ್ನಾಹಂ ಭೋಗ ನಿಮಿತ್ತ ಪುಣ್ಯವ್ಯಯೇ ಅಲ್ಪ ಜಲಕ್ಷರಣೇ ಚ ಮಮರಿಕ್ತತೈವ ಸಂಪನ್ನೇತಿ ಮನ್ಯಮಾನಾ ಪುನಃ ಪುನಃ ಸ್ವಪತನಾಯ ಅಧೋಽಧೋ ವ್ರಜತಿ ತತ್ಕಷ್ಟಂ ಇತ್ಯರ್ಥ. –ತಾ. ಪ್ರ.)

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ನಿರ್ವಾಣ ಪ್ರಕರಣದಲ್ಲಿ " ಚೇತ್ಯೋನ್ಮುಖ ಚಿದ್ವಿಚಾರ" ಎಂಬ ಮೂವತ್ತನೆಯ ಸರ್ಗವು.

ಏಕತ್ರಿಂಶಃ ಸರ್ಗಃ

ಶ್ರೀ ಈಶ್ವರ ಉವಾಚ :....

ಚಿನ್ನೋತ್ಯಲೀಕಮೇವೈನಂ ಸದುಃಖಾಸ್ಮೀತಿ ಭಾವನಾತ್ ।
ಚಿತ್ಸ್ವಪ್ನಕ್ಷೀಬತಾಮೋಹ ಪತಿತಾ ಸಂಭ್ರಮೇ ಯಥಾ ॥ ೧ ॥

ಅಮೃತಾಪಿ ಮೃತಾಸ್ಮೀತಿ ವಿಪರ್ಯಸ್ತಮತಿರ್ವಧೂಃ ।
ಯಥಾ ರೋದಿತ್ಯನಷ್ಟೈವ ನಷ್ಟಾಸ್ಮೀತಿ ತಥೈವ ಚಿತ್ ॥ ೨ ॥

ಮೂವತ್ತೊಂದನೆಯ ಸರ್ಗ

ಶ್ರೀ ಈಶ್ವರನು ಹೇಳಿದನು :—

ಸ್ವಪ್ನದಲ್ಲಿ ಆಗುವಂತೆ, ಮಧ್ಯಪಾನ ಮಾಡಿದವರಿಗೆ ಆಗುವಂತೆ, ಮೋಹ ಗೊಂಡಾಗ ಆಗುವಂತೆ, ಭ್ರಾಂತಿಪಟ್ಟಾಗ ಆಗುವಂತೆ, ಈ ಚಿತ್ತು 'ದುಃಖವು ನನಗೆ ಬಂದಿದೆ' ಎಂದು ಭಾವನೆ ಮಾಡಿಕೊಳ್ಳುವುದರಿಂದ, ಸರ್ವಥಾ ಅಸತ್ತೇ ಆಗಿರುವ ಸಂಸಾರವನ್ನು ಪಡೆಯುವುದು.

(ಸಂಸಾರವನ್ನು ವೇದಾಂತಿಗಳು ಸರ್ವಥಾ ಅಸತ್ತು ಎನ್ನುವುದಕ್ಕೆ ಕಾರಣ ವಿದು. "ಸಂಸಾರವು ಒಂದು ದೀರ್ಘ ಸ್ವಪ್ನ. ಸ್ವಪ್ನವು ಅನುಭವ ಕಾಲದಲ್ಲಿ ನಿಜವೆಂದು ತೋರಿದರೂ ಎಚ್ಚರವಾದಾಗ ಶುದ್ಧವಾಗಿ ಅಸತ್ತೇ ಆಗಿರುವಂತೆ, ಬ್ರಹ್ಮದರ್ಶನವಾಗಿ ತುರೀಯಾವಸ್ಥೆಯು ಪ್ರಾಪ್ತವಾದಾಗ ಸಂಸಾರವು ಅಸ ತ್ತಾಗುವುದು.)

೨. ತಿಳಿಯದ ಹೆಣ್ಣು, ಬುದ್ಧಿಯಿಲ್ಲದೆಯೇ, ತಾನು ಬದುಕಿಯೇ ಇದ್ದರೂ ಸತ್ತುಹೋದೆನಲ್ಲಾ ಎಂದು ಅಳುವಂತೆ, ಗಟ್ಟಿಯಾಗಿದ್ದರೂ ಹೋಗಿಬಿಟ್ಟೆ ನೆಂದು ಅಳುವಂತೆ, ಚಿತ್ತೂ ಕೂಡ (ಅಸತ್ತನ್ನು ಸತ್ತೆಂದು ಭಾವಿಸಿಕೊಂಡು ದುಃಖಿಸುವುದು.)

ಅಕಾರಣಂ ವಿಪರ್ಯಸ್ತಾ ಮತಿಭ್ರಾಂತಮಪಿ ಸ್ಥಿರಂ ।
ಯಥಾ ಜಗತ್ಪಶ್ಯತೀದಂ ತಥಾಹಂತಾ ಭ್ರಮಾಚ್ಚಿತಿ ॥ ೩ ॥

ಚಿತ್ತಂ ಹಿ ಕಾರಣಂ ತ್ವಸ್ಯಾಃ ಸಂಸಾರಾನುಭವೇ ಚಿತೇಃ ।
ನ ಚ ತತ್ಕಾರಣಂ ಕಿಂಚಿಚ್ಚಿತ್ತಾತ್ತ್ವನ್ಯತ್ವಾತ್ಯಸಂಭವಾತ್ ॥ ೪ ॥

ಏವಂ ಹಿ ಕಾರಣಾಭಾವಾಚ್ಚೇತ್ಯಸ್ಯಾಸಂಭವಾದಿತಿ ।
ನಾಸೌ ಚಿತ್ತಂ ತತಶ್ಚೇತ್ಯಂ ಯತ್ನತಶ್ಚೇತ್ಯತೇ ಯಥಾ ॥ ೫ ॥

---

೩. ಸರಿಯಾಗಿ ಅರಿಯಲಾರದ ಬುದ್ಧಿಯು, ತಿರುಗುತ್ತಿರುವ ಕುಂಬಾರನ ಚಕ್ರವನ್ನು ಸ್ಥಿರವಾಗಿ ನಿಂತಿದೆಯೆಂದುಕೊಳ್ಳುವಂತೆ, ಚಿತ್ತಿನಲ್ಲಿ, ಕಾರಣವಿಲ್ಲದೆಯೇ, ಭ್ರಾಂತಿಯಿಂದ ಈ ಜಗತ್ತು ಸ್ಥಿರವಾಗಿರುವುದೆಂಬ ನಂಬಿಕೆಯೂ, ತಾನು ಬೇರೆ ಎಂಬ ಅಹಂತೆಯೂ (ಚಿತ್ತ) ಸಂಭವಿಸುವುವು.

(ವೇದಾಂತವು ಅರ್ಥವಾಗಬೇಕಾದರೆ ಮೊದಲು ಜಗತ್ಸತ್ಯತ್ವ, ತಾನು ಎಲ್ಲದಕ್ಕಿಂತ ಪ್ರತ್ಯೇಕವಾಗಿ ಇರುವೆನೆಂಬ ಅಹಂತಾ, ಎರಡೂ ಅಳಿಯಬೇಕು.)

೪. ಈ ಚಿತ್ತು ಸಂಸಾರವನ್ನು ಅನುಭವಿಸುವುದಕ್ಕೆ ಈ ಚಿತ್ತವೇ ಕಾರಣವು. ಚಿತ್ತು ಅಲ್ಲದ ಇನ್ನೇನೂ ಇಲ್ಲದೆಯೇ ಇರುವುದರಿಂದ ಅದಕ್ಕೆ ಕಾರಣವು ಇನ್ನೇನೂ ಅಲ್ಲ.

(ಅಭಾವಗಳನ್ನು ಪ್ರಾಗಭಾವ, ಪ್ರಧ್ವಂಸಾಭಾವ, ಅತ್ಯಂತಾಭಾವ, ಎಂದು ಮೂರು ವಿಧವಾಗಿ ಹೇಳುವರು. ಪ್ರಾಗಭಾವ ಎನ್ನುವುದು ಮಡಿಕೆ ಆಗುವುದಕ್ಕೆ ಮೊದಲು ಅದಿರಲಿಲ್ಲ ಎನ್ನುವುದು. ಪ್ರಧ್ವಂಸಾಭಾವ ಎನ್ನುವದು ಮಡಿಕೆಯು ಒಡೆದು ಹೋದಮೇಲೆ ಅದಿಲ್ಲ ಎನ್ನುವದು. ಅತ್ಯಂತಾಭಾವ ಎನ್ನುವದು ಮೊಲದ ಕೊಂಬು, ಬಂಜೆಯ ಮಗ, ಎಂಬಂತೆ ಯಾವಾಗಲೂ ಇಲ್ಲದಿರುವದು. ಇಲ್ಲಿ ಚಿತ್ತಲ್ಲದ ಇನ್ನೇನೂ ಇಲ್ಲದಿರುವುದು ಮಾತ್ರವಲ್ಲ, ಸಂಭವವೂ ಕೂಡ ಅಲ್ಲ ಎಂದು ಹೇಳಿದೆ.)

೫. ಹೀಗೆ ಬೇರೊಂದು ಕಾರಣವು ಇಲ್ಲವಾಗಿ, ಚೇತ್ಯವು (ಜಗತ್ತು) ಸ್ವತಂತ್ರವಾಗಿ ಸಂಭವಿಸುವುದಿಲ್ಲವಾಗಿ, ಚಿತ್ತವೂ ಇಲ್ಲವೇ ಇಲ್ಲವಾಗುವುದು.

ನ ದೃಶ್ಯದರ್ಶನದ್ರಷ್ಟೃರೂಪಂ ಶೈಲವಿವ್ವೋಪಲೇ ।
ನ ಕರ್ತೃಕರ್ಮಕರಣಂ ದೃಶೀಂದಾವಿವ ಕೃಷ್ಣತಾ ॥ ೬ ॥

ನ ಮಾತೃಮೇಯಮಾನಾನಿ ನಭಸೀವ ನವಾಂಕುರಃ ।
ನ ಚಿಚ್ಚೇತನಚೇತ್ಯಾದಿ ನಂದನೇ ಖದಿರೋ ಯಥಾ ॥ ೭ ॥

ಅದರಿಂದ ಚಿತ್ತೇ ತನ್ನ ಸ್ವಯತ್ನದಿಂದಲೇ ಚೇತ್ಯವಾಗಿ ತೋರುವುದು (ಎನ್ನಬೇಕು).

(ಹಿಂದಿನ ಶ್ಲೋಕದಲ್ಲಿ ಚಿತ್ತ ಚೇತ್ಯಗಳೆರಡೂ ಭ್ರಮೆಯಿಂದ ಬಂದವು ಎಂದು ಹೇಳಿದೆ. ಇಲ್ಲಿ ಚೇತ್ಯಕ್ಕೆ ಸ್ವತಂತ್ರವಾದ ಕಾರಣಾಂತರವಿದ್ದು, ತತ್ಕಾರ್ಯವಾಗಿ ಬರುವ ಸಂಭವವೂ ಇಲ್ಲವೆಂದು ಹೇಳಿ, 'ಚೇತ್ಯವು ಚಿತ್ತಾಧೀನವು. ಆ ಚಿತ್ತವು ಅಶುದ್ಧ ಚಿತ್ತು; ಆದುದರಿಂದ ಚಿತ್ತೇ ಸ್ವಯಂ ಮಾಲಿನ್ಯವನ್ನು ಸ್ವಸಂಕಲ್ಪದಿಂದಲೇ ಸಂಪಾದಿಸಿಕೊಂಡು ಚಿತ್ತ ಚೇತ್ಯಗಳಾಗುವುದು' ಎಂದು ಹೇಳಲಾಗಿದೆ).

೬. ಕಲ್ಲಿನಲ್ಲಿ ಎಣ್ಣೆಯು ಹೇಗೆ ಸುತರಾಂ ಇಲ್ಲವೇ ಇಲ್ಲವೋ ಹಾಗೆಯೇ ದೃಶ್ಯ, ದರ್ಶನ ದ್ರಷ್ಟೃಗಳೊಂದೊಂದಕ್ಕೂ ಬೇರೆ ಬೇರೆಯಾದ ರೂಪಗಳು ಇಲ್ಲವೇ ಇಲ್ಲ. ಹಾಗೆಯೇ ಚಂದ್ರನಲ್ಲಿ ಕೃಷ್ಣತೆಯು ಹೇಗೆ ಇಲ್ಲವೋ ಹಾಗೆಯೇ ಕರ್ತೃ ಕರ್ಮ ಕರಣಗಳು ಎಂಬಿವೂ ದೃಕ್ಕೆನ್ನಿಸಿಕೊಳ್ಳುವ ಚಿತ್ತಿನಲ್ಲಿ ಪ್ರತ್ಯೇಕವಾಗಿ ಇಲ್ಲವೇ ಇಲ್ಲ.

೭. ಆಕಾಶದಲ್ಲಿ ಯಾವದೊಂದು ಅಂಕುರವೂ ಇಲ್ಲವೇ ಇಲ್ಲ ಹೇಗೋ ಹಾಗೇ ಪ್ರಮಾತೃ, ಪ್ರಮೇಯ, ಪ್ರಮಾಣಗಳು ಯಾವವೂ ಇಲ್ಲ. ನಂದನವನದಲ್ಲಿ ಕಗ್ಗಲಿ ಗಿಡ ಹೇಗೆ ಇಲ್ಲವೋ ಹಾಗೆಯೇ ಚಿತ್ತ ಚೇತನ ಚೇತ್ಯಾದಿಗಳು ಯಾವುದೂ ಪ್ರತ್ಯೇಕವಾಗಿಲ್ಲ. (ಇರುವುದೆಲ್ಲ ಚಿತ್ತೊಂದೇ!)

ನಾಹಂತ್ವ ತ್ವಂತ್ವ ತತ್ತ್ವಾದಿ ಪರ್ವತತ್ವಮಿವಾಂಬರೇ ।
ಸದೇಹತ್ವಾನ್ಯದೇಹತ್ವೇ ಶಂಖತ್ವಮಿವ ಕಜ್ಜಲೇ ॥ ೮ ॥

ನಾನಾ ನಾನಾ ನ ಚಾಪ್ಯಂತರಣಾವಿವ ಸುಮೇರವಃ ।
ನಚ ಶಬ್ದಾರ್ಥಶಬ್ದ ಶ್ರೀರ್ಮರುಹೋಷರಲತಾ ಯಥಾ ॥ ೯ ॥

ನೇತಿ ನೇತಿ ನ ಚೈವಾರ್ಕಮಂಡಲೇ ರಜನೀ ಯಥಾ ।
ನ ವಸ್ತುತಾವಸ್ತುತೇ ಚ ತುಷಾರೇ ತು ಯಥೋಷ್ಣತಾ ॥ ೧೦ ॥

---

೮. ಆಕಾಶದಲ್ಲಿ ಪರ್ವತಭಾವವು ಹೇಗೆ ಇಲ್ಲವೋ, ಕಾಡಿಗೆಯಲ್ಲಿ ಶಂಖತ್ವವು ಹೇಗೆ ಇಲ್ಲವೋ, ಹಾಗೆಯೇ, ಅಹಂತ್ವ, ತ್ವಂತ್ವ, ತತ್-ತ್ವ ಮೊದಲಾದವೂ ಸದೇಹತ್ವ, ಅನ್ಯದೇಹತ್ವ ಮೊದಲಾದುವೂ (ಚಿತ್ತಿನಲ್ಲಿ ಇಲ್ಲ).

೯. ನಾನಾ (ಜೀವಭೇದಗಳು) ಅನಾನಾ (ಪ್ರತಿ ದೇಹದಲ್ಲಿಯೂ ಇರುವ ಆತ್ಮಗಳೂ ಬೇರೆ ಬೇರೆಯೆಂಬ ಅಧ್ಯಾಸಗಳೂ ?) ಕೂಡ, ಅಣುವಿನಲ್ಲಿ ಸುಮೇರು ಪರ್ವತಗಳು ಹೇಗೆ ಇಲ್ಲವೋ ಹಾಗೆಯೇ, (ಚಿತ್ತಿನಲ್ಲಿ) ಇಲ್ಲ. ಹಾಗೆಯೇ ಶಬ್ದ (ನಾಮ) ಅರ್ಥ (ರೂಪ) ಗಳೆಂಬ ಶಬ್ದವೈಭವವೂ, ಊಷರ ಭೂಮಿಯಲ್ಲಿ ಇಲ್ಲದಿರುವ-ಲತೆಗಳಂತೆ, ಇಲ್ಲ.

೧೦. ಅರ್ಕಮಂಡಲದಲ್ಲಿ ರಾತ್ರಿಯು ಹೇಗೆ ಇಲ್ಲವೋ, ಹಿಮದಲ್ಲಿ ಬಿಸಿಯು ಹೇಗೆ ಇಲ್ಲವೋ ಹಾಗೆಯೇ ವಸ್ತುತಾ, ಅವಸ್ತುತಾ, ಎಂಬಿವೂ ಕೂಡ, ಇಲ್ಲ, ಇಲ್ಲ, ಇಲ್ಲ.

(ಅಥಾತ ಆದೇಶೋ 'ನೇತಿ ನೇತಿ' ಇತ್ಯಾದಯಃ ಶಾಸ್ತ್ರೀಯ ದೃಶ್ಯ ನಿಷೇಧಾ ಅಪಿ ತತ್ವ ಪ್ರದರ್ಶನ ಪರ್ಯಂತಮೇವ। ದೃಷ್ಟೇತು ಚಿತ್ತತ್ವೇ ಪ್ರತಿಯೋಗಿ-ಅಪ್ರಸಿದ್ಧೇಃ ತೇಽಪಿ ನ ಸಂಭವಂತೀತಿ-. ತಾ. ಪ್ರ.)

ನ ಶೂನ್ಯತಾಶೂನ್ಯತೇ ನಾ ಶಿಲಾಕೋಶ ಇವ ದ್ರುಮಃ ।
ಶೂನ್ಯತಾಶೂನ್ಯತಾ ನಾಮ ಮಹತೀ ಖಇವಾಸ್ಥಿತಂ ॥ ೧೧ ॥

ಕೇವಲಂ ಕೇವಲೀಭಾವಸ್ವಚ್ಛತೈವಾವಶಿಷ್ಯತೇ ॥ ೧೨ ॥

ನ ಚಿತ್ತಾತ್ಕಸ್ಯ ಚಿದ್ದೋಷಾಜ್ಜಾತಯೈತದವಾಪ್ಯತೇ ।
ತತ್ಸರ್ವಭಾವನಾಮಾತ್ರೇಣಾನರ್ಥಃ ಪ್ರಕೃತಃ ಸ್ಥಿತಃ ॥ ೧೩ ॥

ತಜ್ಜ್ಞಸ್ಯಭಾವನಾ ಮಾತ್ರೇಣಾನರ್ಥ ಉಪಶಾಮ್ಯತಿ ।
ತಜ್ಜ್ಞಸ್ಯಭಾವನಾ ಮಾತ್ರಾದ್ಧತೇನ್ಯತ್ರೋಪಯುಜ್ಯತೇ ॥ ೧೪ ॥

೧೧-೧೨. ಶಿಲಾಗರ್ಭದಲ್ಲಿ ಮರವು ಹೇಗೆ ಇಲ್ಲವೋ ಹಾಗೆಯೇ ಶೂನ್ಯತೆ, ಅಶೂನ್ಯತೆ, ಎಂಬಿವೂ ಇಲ್ಲ. ಶೂನ್ಯತೆ, ಅಶೂನ್ಯತೆ ಎಂಬಿವು ಆಕಾಶದಲ್ಲಿ ಇರುವ ಮಹತ್ತಾದ ಅನಾಕಾಶತೆಯಂತೆ; (ಇಲ್ಲದಿದ್ದರೂ ಇದ್ದಂತೆ: ಇದ್ದರೂ ಇಲ್ಲದಿದ್ದಂತೆ). ಆದರಿಂದ ಉಳಿಯುವುದು ಕೇವಲವಾದ, ತಾನೇ ತಾನಾದ, ಸ್ವಚ್ಛತೆಯೊಂದೇ !

೧೩. (ಇನ್ನು ಯಾರಾದರೊಬ್ಬರ ಚಿತ್ತದಿಂದ ಹುಟ್ಟಿರುವ ದೋಷದಿಂದ ಚಿತ್ತಿಗೆ ಈ ದುಃಖಗಳು ಸಂಭವಿಸಿರಬಹುದೋ ಎಂದರೆ) ಮತ್ತೆ ಯಾವ ಚಿತ್ತದಿಂದಲೋ ಹುಟ್ಟಿರುಪ ದೋಷಗಳಿಂದ ಚಿತ್ತಿಗೆ ಏನೂ ಬಾಧೆಯುಂಟಾಗುವುದಿಲ್ಲ. ಚಿತ್ತು ತಾನಾಗಿ ಸರ್ವ ಭಾವನೆಗಳನ್ನೂ ಕಲ್ಪಿಸಿಕೊಂಡು ಆದರಿಂದ ಅನರ್ಥಗಳನ್ನು ಕಲ್ಪನೆ ಮಾಡಿಕೊಳ್ಳುವುದು.

(ಚಿದ್ದೋಷಾತ್ ಚಿತೋದೋಷ ಭೂತಾತ್ ಕಸ್ಯ ಹಿರಣ್ಯಗರ್ಭಸ್ಯ ಚಿತ್ತಾನ್ನಿಮಿತ್ತಾತ್ ಜಾತಯಾ ಏತದ್ದುಃಖಮವಾಪ್ಯತೇ ಇತಿ ನ. ಕಿಂತು ತೇನ ಸೃಷ್ಟಾ ಯೇ ದೇಹೇಂದ್ರಿಯ ವಿಷಯಾಃ ತೇಷು ಸರ್ವೇಷು ಅಹಂ ಮಮೇತಿ ಸತ್ಯಾ ಇತಿ ಚ ಭಾವನಾಮಾತ್ರೇಣ ಅಯಂ ಸಂಸಾರ ಲಕ್ಷಣಃ ಅನರ್ಥಃ ಸ್ಥಿತ ಇತ್ಯರ್ಥಃ- ತಾ. ಪ್ರ.)

೧೪. ಹೀಗೆ, ಅನರ್ಥ ಸ್ವರೂಪವಿದು ಎಂದು ತಿಳಿದವರಿಗೂ ಭಾವನಾತ್ಯಾಗ ಮಾಡುವುದರಿಂದಲೇ ಈ ಅನರ್ಥವೆಲ್ಲವೂ ಉಪಶಾಂತವಾಗುವುದು. ತಿಳಿದವರಿಗೂ ಭಾವನಾತ್ಯಾಗವಿಲ್ಲದಿದ್ದರೆ, ಉಪಶಾಂತವಾಗುವುದಿಲ್ಲ

ನ ತೃಣಂ ನ ಚ ತ್ರೈಲೋಕ್ಯಮಿತಿ ಸ್ವಾಯತ್ತತಾತ್ರ ಯಾ ।
ಸ್ವಾಯತ್ತ ಏವ ಚೈಷೋಥೋ ದುಃಸಾಧ್ಯೋ ಭಾವನಾಸ್ಥಿತಃ ॥ ೧೫ ॥

ಯದ್ಯನ್ನ ಸಾಧ್ಯತೇ ಪುಂಸಾ ತತ್ಕಥಂ ಕ್ವೇವ ಲಭ್ಯತೇ । ॥ ೧೬ ॥

ನಿರ್ವಿಕಲ್ಪಾದ್ವಿತೀಯಾ ಚಿದ್ಯಾಸೌ ಸಕಲಗಾ ಸತೀ ।
ಪರಮೈಕಾ ಪರಾ ಸಾಚ್ಛಾ ದೀಪಿಕಾ ತೇಜಸಾಮಪಿ । ॥ ೧೭ ॥

ಸೈಷಾವಭಾಸನಕರೀ ಸರ್ವಗಾ ನಿತ್ಯನಿರ್ಮಲಾ ।
ನಿತ್ಯೋದಿತಾ ನಿರ್ಮನಸ್ಕಾ ನಿರ್ವಿಕಾರಾ ನಿರಂಜನಾ ॥ ೧೮ ॥

---

೧೫. ತೃಣದಂತೆ ಪರಮ ಲಘುವಾದುದೇ ಆಗಲಿ, ತ್ರೈಲೋಕ್ಯದಂತೆ ಗುರುವಾದುದೇ ಆಗಲಿ, ಎರಡೂ ಪ್ರತ್ಯೇಕವಾಗಿಲ್ಲ. ತನ್ನ ಭಾವನೆಯಲ್ಲಿಯೇ ಇರುವುದು. ಹೀಗೆ ಭಾವನೆಯಲ್ಲಿಯೇ ಸ್ಥಿತವಾಗಿರುವುದರಿಂದ, ಇದು ಇಷ್ಟು ದುಸ್ಸಾಧ್ಯವಾಗಿರುವುದು.

೧೬. (ಈ ಭಾವನಾತ್ಯಾಗವು ತಾನಾಗಿಯೇ ಸಿದ್ಧಿಸಲಿ, ಈ ಭಾವನೆಯು ಮಿಕ್ಕ ಎಲ್ಲ ಭಾವನೆಗಳಂತೆ ತಾನೇ ನಿರಸ್ತವಾಗಲಿ ಎಂದರೆ) ಪುರುಷರು ತಾವಾಗಿ ಸಾಧಿಸದ ಪದಾರ್ಥವು ಯಾವುದು ತಾನೇ ಎಲ್ಲಿ ತಾನೇ ಲಭ್ಯವಾಗುವುದು? (ಪ್ರಯತ್ನದಿಂದಲೇ ಭಾವನಾ ತ್ಯಾಗವನ್ನು ಸಾಧಿಸಬೇಕು.)

೧೭–೧೮. ಸಕಲದರಲ್ಲಿಯೂ ತಾನೇ ತಾನಾಗಿರುವ ಯಾವ ಚಿತ್ತು ಉಂಟೋ ಅದು ನಿರ್ವಿಕಲ್ಪವಾಗಿದ್ದಾಗ ಅದ್ವಿತೀಯವು: ಪರಮವು: ತಾನು ಒಂದೇ ಒಂದಾಗಿರುವುದು: ದೀಪಗಳ ಬೆಳಕಿಗಿಂತ ಸ್ವಚ್ಛವಾಗಿರುವುದು: ನಿತ್ಯವಾಗಿ ನಿರ್ಮಲವಾಗಿರುವ ಆ ಚಿತ್ತು ಎಲ್ಲವನ್ನೂ ಬೆಳಗುವುದು: ಯಾವಾಗಲೂ ಉದಯವಾಗಿಯೇ ಇರುವುದು; ಅಸ್ತವಿಲ್ಲದೆಯೇ ಇರುವುದು. ನಿರ್ಮನಸ್ಕ ಎಂದರೆ ಸುಖದುಃಖರೂಪ ಭಾವನೆಯೇ ಇಲ್ಲದಿರುವುದು: ಯಾವ ವಿಕಾರವೂ ಇಲ್ಲದಿರುವುದು. ಯಾವುದರ ಸಂಪರ್ಕವೂ ಇಲ್ಲದಿರುವುದು.

ಘಟೇ ಪಟೇ ವಟೇ ಕುಡ್ಯೇ ಶಕಟೇ ವಾನರೇ ಖರೇ ।
ಅಸುರೇ ಸಾಗರೇ ಭೂತೇ ನರೇ ನಾಗೇ ಚ ಸಂಸ್ಥಿತಾ ॥ ೧೯ ॥

ಸಾಕ್ಷಿವತ್ತಿಷ್ಠತಿ ಸತೀ ಸ್ಪಂದತೇ ನ ಚ ಕುತ್ರಚಿತ್ ।
ದೀಪಃ ಪ್ರಕಾಶನಾಯೇವ ಕರೋತಿ ನ ಪುನಃ ಕ್ರಿಯಾಂ ॥ ೨೦ ॥

ಮಲಿನಾಪ್ಯಮನ್ಯೈಷಾ ಸಾ ವಿಕಲ್ಪಾರ್ಥಾ ವಿಕಲ್ಪಿನೀ ।
ಜಡೇವಾಪ್ಯಜಡಾಭಾಸಾ ನ ಸರ್ವಾ ಸರ್ವಗೈವ ಚ ॥ ೨೧ ॥

ನಿರ್ವಿಕಲ್ಪಾ ಪರಾ ಸೂಕ್ಷ್ಮಾ ಚಿಚ್ಚಿನೋತಿ ಸ್ವಸಂವಿದಂ ।
ವಾತಾವಾತಾಂಗ ಮರ್ಮಾದಿ ಯಥಾ ಯಂತ್ರಾದಿವೇಷ್ಟನೇ ॥ ೨೨ ॥

---

೧೯. ಘಟ, ಪಟ, ವಟ, ಕುಡ್ಯ (ಗೋಡೆ), ಶಕಟ, ವಾನರ, ಗಾರ್ದಭ, ಅಸುರ, ಸಾಗರ, ಭೂತ, ನರ, ನಾಗ, ಎಲ್ಲರಲ್ಲಿಯೂ ಈ ಚಿತ್ತೇ ಸಂಸ್ಥಿತವಾಗಿರುವುದು.

೨೦. ಹಾಗೆ ನಿರ್ವಿಕಲ್ಪವಾಗಿರುವಾಗ ಸಾಕ್ಷಿಯಂತೆ ಇರುವುದು. ಎಲ್ಲಿಯೂ ಯಾವ ವ್ಯಾಪಾರವನ್ನೂ ಮಾಡುವುದಿಲ್ಲ. ದೀಪವು ಕಾರ್ಯಾಂತರವನ್ನು ಮಾಡದೆ ತನ್ನ ಪಾಡಿಗೆ ತಾನು ಬೆಳಗುತ್ತಲೇ ಇದ್ದು ಪದಾರ್ಥ ಪ್ರಕಾಶನ ಮಾಡುವಂತೆ, ಚಿತ್ತು ಸರ್ವಕ್ಕೂ ಸಾಕ್ಷಿಯಾಗಿರುವುದು.

೨೧. ಹೀಗೆ ನಿರ್ಮಲವಾಗಿರುವ ಚಿತ್ತೂ ಕೂಡ ಭಾವನಾ ವಶವಾದಾಗ ಮಲಿನವಾಗುವುದು. ವಿಕಲ್ಪದಿಂದ ಕೂಡಿದಾಗ ಸವಿಕಲ್ಪವಾಗುವುದು : ಚೇತನವಾಗಿ ಬೆಳಗುವುದಾದರೂ ಜಡವಾಗುವುದು : ಸರ್ವ ಸಂಸ್ಥಿತಿಯುಳ್ಳದಾದರೂ ಪರಿಚ್ಛಿನ್ನವಾಗುವುದು.

೨೨. ನಿರ್ವಿಕಲ್ಪವಾಗಿದ್ದರೆ ಎಲ್ಲದಕ್ಕಿಂತ ಉತ್ತಮವಾಗಿ, ಸೂಕ್ಷ್ಮವಾಗಿರುವ ಈ ಚಿತ್ತು ಆತ್ಮಜ್ಞಾನವನ್ನು ಸಂಪಾದಿಸಿಕೊಡುವುದು : ವಾತ (ಪ್ರಾಣವಾಯುವೇ) ಪ್ರಧಾನವಾದ ದೇಹದಲ್ಲಿ ಅವಾತ (ಪ್ರತಿಬಿಂಬ) ವಾಗಿ ಸೇರಿಕೊಂಡಾಗ, ಅಂಗಗಳಲ್ಲಿಯೂ ಮರ್ಮಸ್ಥಾನಗಳಲ್ಲಿಯೂ ಸೇರಿಕೊಂಡು, ವ್ಯಾಪಾರ

ರೂಪಾಲೋಕಮನಸ್ಕಾರಾವಲಿತಾ ಚಿದಬೋಧತಃ ।
ಬೋಧತಶ್ಚೈವ ಭವತಿ ನಿದ್ರಾಂ ಸದಸತೀ ಯುತಃ ॥ ೨೩ ॥

ಸಾ ಪರೈವ ಚಿದತ್ಯಚ್ಛಾ ಚಿಂತಾಮಾಯಾತಿ ಚೇತನಾತ್ ।
ಸಾಧುರೇವ ಯಥಾ ಸಾಧುರ್ಭಾವಿತೈರ್ದುರ್ಜನೈಃ ಸಹಾ ॥ ೨೪ ॥

ಮಾಡುವ ಯಂತ್ರಗಳಿಗೆ ಪ್ರತ್ಯೇಕತ್ವವು ಕಾಣುವಂತೆ, ತಾನು ಪ್ರತ್ಯೇಕವೆಂದು ತೋರಿಸಿಕೊಳ್ಳುವುದು.

೨೩. ಆಗ, ಹಾಗೆ ದೇಹಗತವಾದ ಆ ಚಿತ್ತು, ಬೋಧ (ಎಚ್ಚರ) ವಿರುವವನಿಗೆ ಹೊರಗೂ, ಬೋಧವಿಲ್ಲದವನಿಗೆ (ನಿದ್ದೆ ಮಾಡುವನಿಗೆ) (ಸ್ವಪ್ನ ಸುಷುಪ್ತಿಗಳಲ್ಲಿ) ರೂಪಾಲೋಕ ಮನಸ್ಕಾರ ಕ್ರಿಯೆಗಳನ್ನು ಮಾಡಿಸುತ್ತಾ, ಇರುವುದು. ಸುಷುಪ್ತಿಯಲ್ಲಿ ಇದ್ದರೂ ಇಲ್ಲದಂತೆ.

(ಅತಏವ ಜಾಗ್ರತಃ ಪುರುಷಸ್ಯ ಚಿತ್ ಬಹೀರೂಪಾದ್ಯಾಲೋಕನೈಃ ಅಂತಃ ಮನಸ್ಕಾರೈಶ್ಚ ವಲಿತಾ ಸತೀ ಬೋಧತೋ ಬೋಧಪಕ್ಷೇ ಭವತಿ । ನಿದ್ರಾಂಯತಃ ಗಚ್ಛತಸ್ತು ಸ್ವಪ್ನೇವಾಸನಾಮಯ ರೂಪಾಲೋಕ ಮನಸ್ಕಾರಾವಲಿತಾ ಸತೀ ಅಂತರ್ಬೋಧತೋ ಬಹಿಸ್ತ್ವಬೋಧತ ಇತಿ ಪಕ್ಷದ್ವಯೇಽಪಿ ಭವತಿ । ಸುಷುಪ್ತೌತು, ಅಜ್ಞಾನ ಮಾತ್ರ ಸಾಕ್ಷಿತ್ವಾತ್ ನಕಿಂಚಿದವೇದಿಷಂ ಇತಿ ಉತ್ಥಿತಸ್ಯ ಪರಾಮರ್ಶಾಚ್ಚ ಸದಸತೀ ಸತ್ಯಪಿ ಅಸತ್ಪ್ರಾಯಾ ಅಬೋಧಪಕ್ಷ ಏವ ಭವತೀತ್ಯರ್ಥಃ —ತಾ. ಪ್ರ.

೨೪. ಆ ಚಿತ್ತು ಎಲ್ಲದಕ್ಕಿಂತ ಹೆಚ್ಚಿನದು. ಬಹು ಸ್ವಚ್ಛವಾಗಿರುವದು. ಆದರೂ ಸಾಧುವಾಗಿರುವವನು ಮನಸ್ಸಿನಲ್ಲಿ ದುರ್ಜನ ಸಾಧಾರಣವಾದ ವಾಸನಗಳನ್ನು ಚಿಂತನ ಮಾಡುವುದರಿಂದ ಹೇಗೆ ಅಸಾಧುವೇ ಆಗುವನೋ ಹಾಗೆಯೇ ಚಿತ್ತೂ ಚೇತನ (ಚೇತ್ಯ) ಸಂಬಂಧ ಪಡೆಯೋಣದರಿಂದ, ಅಸಾಧುವೇ ಆಗುವುದು.

ಮಲೇನ ಸ್ವರ್ಣಮಾಯಾತಿ ತಾಮ್ರತಾಂ ಮಲಮಾರ್ಜನಾತ್ ।
ಪುನಃ ಕನಕತಾಮೇತಿ ಯಥಾ ಚಿತ್ಪರಮಾ ತಥಾ || ೨೫ ||

---

೨೫. ಚಿನ್ನವು ಮಲಸಂಗದಿಂದ ತಾಮ್ರವಾಗುವುದು. ಮಲವನ್ನು ಕಳೆದುದೇ ಆದರೆ ಮತ್ತೆ ಚಿನ್ನವಾಗುವುದು. ಅದರಂತೆಯೇ ಅತ್ಯಂತ ಶ್ರೇಷ್ಠವಾದ ಚಿತ್ತೂ ಕೂಡ (ಚೈತ್ಯಭಾವ ಕಲ್ಪನೆಯಿಂದ) ಚಿಂತಾಕುಲವಾಗುವುದು.

(ಭರತಖಂಡದಲ್ಲಿ ಸ್ವರ್ಣವಿದ್ಯೆಯನ್ನು ಪಡೆದು ಸಿದ್ಧರಾದವರು ಎಷ್ಟೋ ಸಹಸ್ರಮಂದಿ ಇದ್ದಾರೆ: ಈ ಸ್ವರ್ಣಸಿದ್ಧಿಯು ಮಣಿಮಂತ್ರ ಮೂಲಿಕೆಗಳಿಂದ ಆಗುವುದು. ಆದರೆ "ಈ ಸಿದ್ಧಿಯನ್ನು ಪಡೆದವರು ಅಕಾರ್ಯಗಳಿಗೆ ಆ ಸಿದ್ಧಿಯನ್ನು ಉಪಯೋಗಿಸಬಾರದು. ಆದರಿಂದ ಹಣವನ್ನು ಕೂಡಿಡಬಾರದು" ಎಂದು ನಿಯಮವುಂಟು. ಈ ನಿಯಮಭ್ರಷ್ಟರಾಗಿ ದುಃಖಗೊಂಡಿರುವವರೂ ಅನೇಕರುಂಟು. ಈಚೆಗೆ ಸೈನ್ಸ್ ಕೂಡ ಚಿನ್ನವನ್ನು ಮಾಡುವುದು ಸಾಧ್ಯ ಎಂಬ ಸಿದ್ಧಾಂತಕ್ಕೆ ಬಂದಿದೆ. ಈಗಿನ ಕೆಮಿಸ್ಟ್ರಿಯೆಲ್ಲವೂ ಆಲ್ಕೆಮಿ (ಸ್ವರ್ಣವಿದ್ಯೆ) ಯನ್ನು ಸಾಧಿಸಬೇಕೆಂದು ಹೊರಟವರಿಂದಲೇ ಆರಂಭವಾದುದು.

ನಮ್ಮ ಶಾಸ್ತ್ರಗಳು ಲೋಹಗಳನ್ನೆಲ್ಲ ತೈಜಸ ಎಂದರೆ ತೇಜೋ ಧಾತುವಿನಿಂದ ಹುಟ್ಟಿದವು ಎನ್ನುತ್ತವೆ. ಈಗ ರೇಡಿಯಂ, ಯುರೇನಿಯಂ ಮೊದಲಾದ ಹೊಸ ಲೋಹಗಳು ಬಂದ ಮೇಲೆ, ಲೋಹಗಳು ತೈಜಸವೆನ್ನುವ ವಾದಕ್ಕೆ ಕಳೆ ಬಂದಿದೆ. ಆದರೆ ಪಾಶ್ಚಾತ್ಯ ವಿದ್ಯಾಸಂಪನ್ನರಾದ ಭಾರತೀಯರು ಈ ತತ್ವವನ್ನು ಇನ್ನು ಗ್ರಹಣ ಮಾಡಿಲ್ಲವಾಗಿ ಪುರಸ್ಕರಿಸಿ ಮುಂಡಿಸಿಲ್ಲ.

ತಾಮ್ರದಲ್ಲಿರುವ ಕಂಚುಕ ದೋಷವು ಕಳೆದಂತೆಲ್ಲ ಅದು ರಜತಸ್ವರ್ಣ ಹೇಮ ಮೊದಲಾದ ಲೋಹಗಳಾಗುವುವು ಇದೇ ತತ್ವವು ಜೀವನು ತನ್ನ ಕಂಚುಕ ದೋಷವನ್ನು ಕಳೆದುಕೊಂಡಂತೆಲ್ಲ ದೇವ ಬ್ರಾಹ್ಮಣ ಬ್ರಹ್ಮವಿತ್ ಮೊದಲಾದ ಅವಸ್ಥೆಗಳನ್ನು ಹೊಂದಿ ಸಂಪೂರ್ಣವಾಗಿ ಕಂಚುಕ ದೋಷರಹಿತನಾದಾಗ, ಅವಿದ್ಯಾ ನಿವೃತ್ತಿಯನ್ನು ಹೊಂದಿ ಬ್ರಹ್ಮವಾಗುವನು. ಎಂದು ಸ್ವರ್ಣವಿದ್ಯೆಗೂ ಬ್ರಹ್ಮವಿದ್ಯೆಗೂ ಸಮನ್ವಯವು.

ಸ್ವಾರೋಪಶಾಂತ್ಯಾ ಸ್ವಾದರ್ಶೋ ಯಥೈತಿ ಪ್ರತಿವಾಸ್ಥಿತಿಂ ।
ತಥಾ ಸರ್ಗಮಿವಾಗವ್ಯ ಬೋಧಾತ್ಸ್ವಂ ಯಾತಿ ತತ್ಪದಂ ॥ ೨೬ ॥

ಅಭಾವವೇದನಾದಸ್ಯಾಃ ಸಂಸಾರಃ ಸಂಪ್ರವರ್ತತೇ ।
ಸ್ವಭಾವವೇದನಾದೇಷ ತ್ವಸದೇವೋಪಶಾಮ್ಯತಿ ॥ ೨೭ ॥

ಯದಾ ಚಿತ್ತ್ವಚ್ಛಿನೋತ್ಯಂತರನ್ಯತಾಮಸತೀಂ ತದಾ ।
ಅಹಂತಾಮಿವ ಸಂಪ್ರಾಪ್ಯ ನಶ್ಯತೀವಾಪ್ಯನಾಶಿನೀ ॥ ೨೮ ॥

ಈಷತ್ಸ್ಪಂದಾದಧೋಯಾತಿ ಭೃಗುಪ್ರಾಂತಾತ್ತರೋಃ ಫಲಂ ।
ಯಥಾ ತಥೈವ ಸಂವಿತ್ತೇರಧಃ ಪಾತೋ ಮಹಾನಿವ ॥ ೨೯ ॥

ಹೀಗೆಯೇ ಪ್ರತಿಯೊಂದು ರಹಸ್ಯವಿದ್ಯೆಗೂ ಸಮನ್ವಯವಾಗುವುದೆಂದೇ ಬ್ರಹ್ಮವಿದ್ಯೆಯ ಶ್ರೇಷ್ಠತ್ವವು.

೨೬. ತನ್ನ ಮೇಲೆ ಕುಳಿತಿರುವ ಧೂಳನ್ನು ಒರೆಸಿದರೆ, ಕನ್ನಡಿಯು ಪ್ರತಿಬಿಂಬವನ್ನು ತೋರಿಸುವ ಸ್ಥಿತಿಯನ್ನು ಪಡೆಯುವುದು. ಹಾಗೆಯೇ ಸೃಷ್ಟಿಗೆ ಬಂದಂತಿದ್ದರೂ ಈ ಚಿತ್ತು ಬೋಧ (ಆತ್ಮಜ್ಞಾನ) ದಿಂದ ತತ್ಪದವನ್ನು ಹೊಂದುವುದು.

೨೭. ಅಸತ್ ಜ್ಞಾನದಿಂದ ಈ ಚಿತ್ತು ಸಂಸಾರಕ್ಕೆ ಕಾರಣವಾಗುವುದು. ಸಹಜವಾದ ಆತ್ಮಜ್ಞಾನದಿಂದ, ಚಿತ್ತಿಗೆ ಸಂಸಾರವು ಶಾಂತವಾಗುವುದು.

೨೮. ಚಿತ್ತು ಯಾವಾಗ, ಸಾಕ್ಷಾತ್ ಸೂಕ್ಷ್ಮವಾದ ಅಹಂತೆಯನ್ನು ಹೊಂದುವುದೋ ಆಗ, ಅಸತ್ ಸ್ಥಿತಿಯನ್ನು ತಾನು ಹೊಂದಿದೆನೆಂದುಕೊಂಡು, ತಾನು ಅವಿನಾಶಿನಿಯಾಗಿದ್ದರೂ ನಾಶ ಹೊಂದಿದೆನು ಎಂದುಕೊಳ್ಳುವುದು.

೨೯. ಕಿಬ್ಬರಿಯ ಮಗ್ಗುಲಲ್ಲಿರುವ ಮರದ ಮೇಲಿನ ಹಣ್ಣು ಕೊಂಚ ಜಾರಿದರೂ ಕೆಳಗೆ ಬಿದ್ದು ಹೋಗುವಂತೆ, ಸಂವಿತ್ತು ಕೂಡ ಈಷತ್ ಸ್ಪಂದನದಿಂದಲೇ ಮಹತ್ತರವಾದ ಅಧಃಪಾತವನ್ನು ಹೊಂದುವುದು.

ರೂಪಾದೀನಾಂ ತು ಸತ್ತೈಷಾ ಚಿತ ಏವಾವುಲೈವ ಚಿತ್ ।
ದ್ವಿತ್ವೈಕತ್ವೇ ತ್ವಬೋಧೋತ್ಥೇ ಬೋಧೇನ ವಿಲಯಂ ಗತೇ ॥ ೩೦ ॥

ಸತ್ತಾ ಮಾತ್ರೇಣ ಚಿತ್ತಸ್ಯ ಬೋಧಶ್ಚಿತ್ತೇಂದ್ರಿಯಾದಿಷು ।
ಆಲೋಕಸತ್ತಾ ಮಾತ್ರೇಣ ವ್ಯವಹಾರಃ ಕ್ರಿಯಾಸ್ವಿವ ॥ ೩೧ ॥

ವಾತಾತ್ಮನೀನಿಕಾಸ್ಪಂದಸ್ತದ್ದೀಪ್ತಿ ದೃಷ್ಟಿರುಚ್ಯತೇ ।
ತದ್ವ್ಯಾಪ್ಯವತಿ ತದ್ರೂಪರೂಪ ಬೋಧಸ್ತು ಚಿತ್ಪರಾ ॥ ೩೨ ॥

---

೩೦. ರೂಪಾದಿಗಳೆಲ್ಲ ಇರುವುದೇ ಈ ಚಿತ್ತಿನಿಂದ. ಆದರೂ ಚಿತ್ತು ಮಾತ್ರ ನಿರ್ಮಲವಾಗಿಯೇ ಇರುವುದು. ದ್ವಿತ್ವ, ಏಕತ್ವ, ಮೊದಲಾದ ಭೇದಾ ಭೇದ ಜ್ಞಾನಗಳೆಲ್ಲ ಅಬೋಧದಿಂದ ಬಂದವು. ಬೋಧಪ್ರಾಪ್ತಿಯಾಗುತ್ತಲೂ ವಿಲಯವನ್ನು ಹೊಂದುವುವು.

೩೧. ಈ ಚಿತ್ತಿನ ಬಲದಿಂದಲೇ ಚಿತ್ತ, ಇಂದ್ರಿಯ, ಮೊದಲಾದವು, ದೀಪವು ಬೆಳಗುತ್ತಿರುವಾಗ ನಡೆಯುವ ಕ್ರಿಯಾ ವ್ಯವಹಾರಗಳಂತೆ, ಬೋಧವನ್ನು ಪಡೆಯುವುವು.

೩೨. ಚಿತ್ಸತ್ತೆಯಿಂದಲೇ ಇಂದ್ರಿಯಾದಿಗಳ ವ್ಯಾಪಾರವೆಂದು ಹೇಳಿ, ಇನ್ನು ಪ್ರತ್ಯೇಕವಾಗಿ ಒಂದೊಂದು ಇಂದ್ರಿಯ ವ್ಯಾಪಾರವನ್ನೂ ವರ್ಣಿಸುತ್ತಾರೆ) ಚಿತ್ಸನ್ನಿಧಾನದಿಂದ ಪ್ರೇರಿತವಾದ ದೇಹಗತವಾದ ವ್ಯಾನ ವಾಯುವು ಸಂಚಾರ ಮಾಡುವುದರಿಂದ ಕಣ್ಣು, ಕಣ್ಣಿನ ಪಾಪಗಳು ಅಲ್ಲಾಡುವುದು. ಆಗ ಅಲ್ಲಿರುವ ತೈಜಸಾಂಶವಾದ ಚಕ್ಷುರಿಂದ್ರಿಯದ ವ್ಯಾಪಾರವಾಗುವುದು. ಆ ವ್ಯಾಪಾರದಿಂದ ಹೊರಗೆ ಹೊರಟು ಬಾಹ್ಯವಸ್ತು ರೂಪವಾಗಿ ಪರಿಣತವಾದ ಚಿತ್ತವೃತ್ತಿಯಿಂದ ರೂಪ ಬೋಧವುಂಟಾಗುವುದು. ಆ ಬೋಧವು ಚಿತ್ತೇ ಹೊರತು ಬೇರೆಯಲ್ಲ.

(ಮೋಡದಲ್ಲಿರುವ ನೀರು ಮಳೆಯಾಗಿ ಕೆಳಕ್ಕಿಳಿದು ಕೆರೆ ಕಟ್ಟೆಗಳಾಗಿ, ನದಿಯಾಗಿ, ಕಾಲುವೆಯಾಗಿ, ಹರಿದರೂ ಅದು ನೀರೇ ಆಗಿರುವಂತೆ, ಚಿತ್ತೇ ಪಂಚಭೂತವಾಗಿ, ತದ್ವಿಕಾರವಾಗಿ, ತದ್ವ್ಯಾಪಾರವಾಗಿ, ತೋರುತ್ತಿದ್ದರೂ ಅವೆಲ್ಲವೂ ಚಿತ್ತೇ)

ತ್ವಜ್ಮಾರುತೌ ಜಡೌ ತುಚ್ಛೌ ತತ್ಸಂಗಃಸ್ಪರ್ಶ ಉಚ್ಯತೇ ।
ಮನನಂ ಸ್ಪರ್ಶಸಂವಿತ್ತಿಸ್ತತ್ಸಂವಿತ್ತಿಸ್ತು ಚಿತ್ಪರಾ ॥ ೩೩ ॥

ಗಂಧತನ್ಮಾತ್ರ ಪವನಸಂಬಂಧೋ ಗಂಧಸಂವಿದಃ ।
ಆಸಾಂ ತು ಮನಸಾ ಹೀನಂ ವೇದನಂ ಪರಮೈವ ಚಿತ್ ॥ ೩೪ ॥

ಶಬ್ದತನ್ಮಾತ್ರ ಶ್ರವಣ ವಾತಸಂಗಾನ್ಮನೋವಿನಾ ।
ಸುಷುಪ್ತಸದೃಶೀ ಸಂವಿತ್ಪರಮಾ ಚಿದುದಾಹೃತಾ ॥ ೩೫ ॥

ಕ್ರಿಯೋನ್ಮುಖತ್ವಂ ಸಂಕಲ್ಪಾತ್ಸಂಕಲ್ಪೋ ಮನನಕ್ರಮಃ ।
ಮನನಂ ಚಿತ್ತಕಾಲುಷ್ಯಂ ಆತ್ಮಾ ಚಿನ್ನಿರ್ಮಲಾ ಭವೇತ್ ॥ ೩೬ ॥

---

೩೩. (ಇದರಂತೆಯೇ ಸ್ಪರ್ಶನ ತ್ರಿಪುಟಿಯೂ ಸಹ) ಚರ್ಮ, ವಾಯು, ಇವೆರಡೂ ಜಡಗಳು, ಹೇಯುಗಳು. ಇವುಗಳ ಸಂಗವನ್ನೇ ಸ್ಪರ್ಶವೆನ್ನುವರು. ಆ ಸ್ಪರ್ಶವು ಮನಸ್ಸಿಗೆ ಬಂದು ನಿಂತರೆ, ಅದು ಸ್ಪರ್ಶ ಸಂವಿತ್ತಿಯು. ಅದರಿಂದ ಆ ಸಂವಿತ್ತೇ ಪರವಾದ ಚಿತ್ತು.

೩೪. ಗಂಧತನ್ಮಾತ್ರವೂ ದೇಹಗತ ವಾಯುವೂ ಒಂದಕ್ಕೊಂದು ಸೇರಿ, ಮನಸ್ಸಿನಲ್ಲಿ ವಿದಿತವಾದರೆ ಅದು ಗಂಧಸಂವಿತ್ತು ಎನ್ನಿಸಿಕೊಳ್ಳುವುದು. ಈ ನಾನಾ ಸಂವಿತ್ತುಗಳಲ್ಲಿ ಮನಸ್ಸಿನ ಸೇರುವಿಕೆಯಿರುವುದರಿಂದ ರೂಪ ಸಂವಿತ್ತು, ಸ್ಪರ್ಶಸಂವಿತ್ತು, ಗಂಧಸಂವಿತ್ತು, ಮೊದಲಾದವು ಬೇರೆಬೇರೆಯಾಗಿರುವಂತೆ ತೋರಿದರೂ ನಿಜವಾಗಿ ಇವು ಒಂದೇ! ಪ್ರತ್ಯೇಕ ಮಾಡಿ ತೋರಿಸುವ ಮನಸ್ಸನ್ನು ಬಿಟ್ಟು ನೋಡಿದರೆ ಇವೆಲ್ಲವೂ ಪರಾ ಚಿತ್ತೇ!

೩೫. ಶಬ್ದತನ್ಮಾತ್ರವೂ ಶ್ರವಣೇಂದ್ರಿಯಗತ ವಾಯುವೂ ಸೇರಿದಾಗ, ಆ ಸಂಬಂಧವನ್ನು ಗುರುತಿಸಲು ಮನಸ್ಸು ಅಲ್ಲಿ ಇರದಿದ್ದರೆ, ಸುಷುಪ್ತ ವ್ಯಾಪಾರದಂತೆ ಇದ್ದು ಇಲ್ಲದಿರುವ ಆ ಸಂವಿತ್ತು ಯಾವುದುಂಟೋ ಅದೇ ಪರಮ ಚಿತ್ತು ಎಂದು ಹೇಳುವರು.

೩೬. ಸಂಕಲ್ಪದಿಂದ ವ್ಯಾಪಾರದ ಆರಂಭವು, ಮನನ ಮಾಡುವುದರಿಂದ, ಎಂದರೆ ವಿಷಯವನ್ನು ಮನಸ್ಸು ಧ್ಯಾನ ಮಾಡುವುದರಿಂದ, ಸಂಕಲ್ಪವು. ಚಿತ್ತು

ಚಿತ್ಪ್ರಕಾಶಾತ್ಮಿಕಾ ನಿತ್ಯಾ ಸ್ವಾತ್ಮನ್ಯೇವಾವಸಂಸ್ಥಿತಾ ।
ಇದಮಂತರ್ಜಗದ್ಧತ್ತೇ ಸನ್ನಿವೇಶಂ ಯಥಾ ಶಿಲಾ ॥ ೩೭ ॥

ಅದ್ವಿತೀಯಾ ದಧಾನೇದಂ ವಿಕಾರಾದಿ ವಿವರ್ಜಿತಂ ।
ನಾಸ್ತಮೇತಿ ನಚೋದೇತಿ ಸ್ಪಂದತೇ ನೋ ನ ವರ್ಧತೇ ॥ ೩೮ ॥

ಸಂಕಲ್ಪಾಜ್ಜೀವತಾಮೇತ್ಯ ನಿಃಸಂಕಲ್ಪಾತ್ಮನಾತ್ಮನಾ ।
ಚಿಜ್ಜಡಂ ನೋ ಜಡಂ ಭಾವಂ ಭಾವಯಂತೀ ಸ್ವಸಂಸ್ಥಿತಾ ॥ ೩೯ ॥

ಮಲಿನವಾಗಿ ಕಲುಷಿತವಾದಾಗಲೇ ಮನನವು. ಅಂತಹ ಕಾಲುಷ್ಯವಿಲ್ಲದ ಚಿತ್ತೇ ನಿರ್ಮಲವು, ಅದೇ ಆತ್ಮವು.

೩೭. ಚಿತ್ತು ಯಾವಾಗಲೂ ಇರುವುದರಿಂದ ನಿತ್ಯವು. ಅದು ಪ್ರಕಾಶ ರೂಪವು. ಅದು ತನ್ನಲ್ಲಿಯೇ ಇರುವುದು. (ಬೇರೆ ಯಾವುದನ್ನು ಆಶ್ರಯಿಸ ಬೇಕಾಗಿಲ್ಲ.) ಸ್ಫಟಿಕ ಶಿಲೆಯು ತನ್ನ ಪಾಡಿಗೆ ತಾನು ಇದ್ದುಕೊಂಡು ಇರುತ್ತ ಸುತ್ತಮುತ್ತಲು ಇರುವುದನ್ನೆಲ್ಲ ತನ್ನಲ್ಲಿ ಪ್ರತಿಬಿಂಬವಾಗಿ ಗ್ರಹಣ ಮಾಡುವಂತೆ, ಆಧಾರಾಂತರವಿಲ್ಲದೆ ತನ್ನಲ್ಲಿ ತಾನಾಗಿರುವ ಚಿತ್ತು ಈ ದೃಶ್ಯ ಜಗತ್ತನ್ನು ಪ್ರತಿಬಿಂಬ ವಾಗಿ ಗ್ರಹಣ ಮಾಡುವುದು.

೩೮. ಹೀಗೆ ಈ ಜಗತ್ತನ್ನು ಪ್ರತಿಬಿಂಬವಾಗಿ ಗ್ರಹಣ ಮಾಡಿದ್ದರೂ ಅದ್ವಿತೀಯವಾಗಿರುವ ಈ ಚಿತ್ತು ವಿಕಾರಾದಿಗಳೇನೂ ಇಲ್ಲದೆಯೇ ಇರುವುದು: ಅಸ್ತವೂ, ಉದಯವೂ ಇಲ್ಲದೆಯೇ ಇರುವುದು: ವ್ಯಾಪಾರವೂ ಇಲ್ಲದೆ, ಹಾನಿ ವೃದ್ಧಿಗಳೂ ಇಲ್ಲದೆ ಇರುವುದು.

೩೯. ಚಿತ್ತು ಸಂಕಲ್ಪ ಮಾಡಿದಾಗ ಜೀವನಾಗುವುದು: ಆ ಸಂಕಲ್ಪ ತ್ಯಾಗಮಾಡಿ ನಿಸ್ಸಂಕಲ್ಪವಾಗಿ ತಾನೇ ತಾನಾದಾಗ ಚಿತ್ತೇ ಆಗುವುದು. ಆದರಿಂದ ಚಿತ್ತು ಜಡವಲ್ಲ. ತಾನು ಜಡವೆಂದುಕೊಂಡು ಜಡ ಭಾವವನ್ನು ಧ್ಯಾನಿಸಿದಾಗ ಜಡವಾಗುವುದು.

ರಥಸ್ತ್ವಸ್ಯಾಶ್ಚಿತೇರ್ಜೀವೋ ಜೀವಸ್ಯಾಹಂಕೃತೀ ರಥಃ ।
ಅಹಂಕೃತೇ ರಥೋ ಬುದ್ಧಿಃ ತತೋ ಬುದ್ಧೇರ್ಮನೋ ರಥಃ ॥ ೪೦ ॥

ಮನಸಸ್ತು ರಥಃ ಪ್ರಾಣಃ ಪ್ರಾಣಸ್ಯಾಕ್ಷಗಣೋ ರಥಃ ।
ಅಕ್ಷೌಘಸ್ಯ ರಥೋ ದೇಹೋ ದೇಹಸ್ಯ ಸ್ಪಂದನೋ ರಥಃ ॥ ೪೧ ॥

ಸ್ಪಂದನಂ ಕರ್ಮಸಂಸಾರೇ ಜರಾಮರಣಪಂಜರಂ ।
ಏವಂ ಪ್ರವರ್ತಿತಂ ಚಕ್ರಮಿದಮಾದಿ ವಿಭೂತಿಜಂ ॥ ೪೨ ॥

ಪ್ರತಿಭಾಸತ ಏವಾತ್ಮನ್ಯ ಸತ್ಸ್ವಪ್ನ ಇವಾತತಃ ।
ಮನಾಗಪಿ ನ ಸತ್ಯಾತ್ಮ ಮೃಗತೃಷ್ಣಾಂಬುವತ್ಸ್ಥಿತಂ ॥ ೪೩ ॥

೪೦–೪೧. ಈ ಚಿತ್ತಿಗೆ ಜೀವನು ರಥವು. ಜೀವನಿಗೆ ಅಹಂಕಾರವು ರಥವು. ಅಹಂಕಾರಕ್ಕೆ ಬುದ್ಧಿಯು ರಥವು. ಬುದ್ಧಿಗೆ ಮನಸ್ಸು ರಥವು. ಮನಸ್ಸಿಗೆ ರಥವು ಪ್ರಾಣವು. ಪ್ರಾಣಕ್ಕೆ ಇಂದ್ರಿಯಗಳು ರಥವು. ಇಂದ್ರಿಯಗಳಿಗೆ ದೇಹವು ರಥವು. ದೇಹಕ್ಕೆ ಕರ್ಮೇಂದ್ರಿಯಗಳು ರಥವು.

೪೨. ಈ ಕರ್ಮೇಂದ್ರಿಯಗಳು ಕರ್ಮವೆಂಬ ಸಂಸಾರದಲ್ಲಿ ಜರಾಮರಣಗಳೆಂಬ ಪಂಜರದಲ್ಲಿ ಸಿಕ್ಕಿಕೊಂಡಿರುವುವು. ಈಶ್ವರನ ಮಾಯಾ ಪ್ರಭಾವದಿಂದ ಹುಟ್ಟಿದ ಈ ಚಕ್ರವು ಹೀಗೆ ನಡೆದುಕೊಂಡು ಹೋಗುತ್ತಿರುವುದು.

೪೩. ಈ ಸಂಸಾರ ಚಕ್ರವು ವಿಸ್ತಾರವಾದ ಸ್ವಪ್ನದಂತೆ ಅಸತ್ತಾಗಿದ್ದರೂ ತನ್ನಲ್ಲಿಯೇ ಪ್ರತಿಭಾಸವಾಗುವುದು. ಎಂದಿಗೂ ಇದು ಸತ್ಯವಲ್ಲ. ಇದು ಮರೀಚಿಕೆಯಲ್ಲಿ ಕಾಣುವ ನೀರಿನಂತೆ ಕೇವಲ ಅಸತ್ತಾದುದು.

ರಥಸ್ತ್ವತ್ರ ಸ್ಮೃತಃ ಪ್ರಾಣಃ ಕಲ್ಪನಾಯಾ ಮುನೀಶ್ವರ ।
ಯತ್ರ ಪ್ರಾಣಮರುತ್ತತ್ರ ಮನನಂ ಪರಿತಿಷ್ಠತಿ ॥ ೪೪ ॥

ಆಲೋಕಶ್ರೀಃ ಸ್ಥಿತಾ ಯತ್ರ ರೂಪಂ ತತ್ರೈವ ರಾಜತೇ ।
ಪ್ರಾಣೋ ಬಲೀ ಸ್ಥಿತೋ ಯತ್ರ ತದೇವ ಪರಿವೇಪತಿ ॥ ೪೫ ॥

ಯತ್ರ್ಯಯಾತಿ ವನಂ ವಾತ್ಯಾ ತದೇವ ಪರಿಘೂರ್ಣತೇ ।
ಮನಸ್ಯಾಕಾಶಸಂಲೀನೇ ನ ಪ್ರಾಣಃ ಪರಿವೇಪತಿ ॥ ೪೬ ॥

ತೇಜಸ್ಯಸತ್ತಾಮಾಯಾತೇ ನ ರೂಪಮಿವ ರಾಜತೇ ।
ಪ್ರಾಣೇ ಪ್ರಶಾಂತೇ ಮರುತಿ ಮನೋಂತರ್ನ ಮನಾಗಪಿ ॥ ೪೭ ॥

---

೪೪. (೪೦ನೆಯ ಶ್ಲೋಕದಲ್ಲಿ ಹೇಳಿರುವ ಅರ್ಥವನ್ನು ಇನ್ನೂ ಸ್ಪಷ್ಟವಾಗಿ ಹೇಳುತ್ತಾರೆ). ಕಲ್ಪನಾರೂಪವಾದ ಮನಸ್ಸಿಗೆ ಪ್ರಾಣವೇ ರಥವೆಂದು ಹೇಳಿದೆ ನಲ್ಲವೆ, ಎಲೈ ಮುನೀಂದ್ರನೆ, ಎಲ್ಲಿ ಪ್ರಾಣವಾಯುವು ಇರುವುದೋ ಅಲ್ಲಿ ಮನೋ ವ್ಯಾಪಾರವಿದ್ದೇ ಇರುವುದೆಂದು ತಿಳಿ.

೪೫. ಕಾಣುವ ಕಣ್ಣು ಎಲ್ಲಿ ಇರುವುದೋ ಅಲ್ಲಿ ರೂಪವೂ ಇದ್ದೇ ಇರುವುದು. ಪ್ರಾಣವು ಬಲಿಷ್ಠವಾದುದು. ಅದರ ಚಲನದಿಂದಲೇ ರೂಪವು ಕಾಣಿಸುವುದು.

೪೬. ಗಾಳಿಯು ಕಾಡಿನಲ್ಲಿ ಬೀಸಿದಾಗ ಮೊರೆಯುವುದು. (ಅದರಂತೆ ಪ್ರಾಣ ವ್ಯಾಪಾರದಿಂದ ಮನೋವ್ಯಾಪಾರವೂ ನಡೆಯುವುದು.) ಮನಸ್ಸು ಹೃದಯ ದಲ್ಲಿ ಇರುವ ಆಕಾಶದಲ್ಲಿ ಲೀನವಾದರೆ, ಪ್ರಾಣದ ಚಲನೆಯು ನಿಲ್ಲುವುದು. (ಆಗ ಮನೋವ್ಯಾಪಾರವೂ ನಡೆಯುವುದಿಲ್ಲ)

೪೭. ದೀಪವು ಆರಿಹೋದರೆ ಕಣ್ಣು ಕಾಣಿಸದೆ ಹೋಗುವುದು. ಅದ ರಂತೆಯೇ ಪ್ರಾಣವು ನಿಶ್ಚಲವಾಗಿ ಪ್ರಶಾಂತವಾದರೆ, ಆಗ ಮನಃ ಕ್ರಿಯೆಯಾದ-ಮನನವೂ ನಿಂತು ಹೋಗುವುದು.

ವಾತ್ಯಾಯಾ ಮುಪಶಾಂತಾಯಾಂ ರಜೋ ನ ಪರಿಕಂಪತೇ ।
ಯತ್ರ ಪ್ರಾಣೋ ಮರುದ್ಯಾತಿ ಮನಸ್ತತ್ರೈವ ತಿಷ್ಠತಿ ॥ ೪೮ ॥

ಯತ್ರ ಯತ್ರಾನುಸರತಿ ರಥಸ್ತತ್ರೈವ ಸಾರಥಿಃ ।
ಪ್ರಾಣ ಸಂಪ್ರೇರಿತಂ ಚಿತ್ತಂ ಯಾತಿ ದೇಶಾಂತರೇ ಕ್ಷಣಾತ್ ॥ ೪೯ ॥

ಕ್ಷೇಪಣೋನ್ಮುಕ್ತ ಪಾಷಾಣ ಇವ ತತ್ರಾನ್ಯಥಾ ಕ್ಷಯೀ । ॥ ೫೦ ॥

ಯತ್ರ ಪುಷ್ಪಂ ತತ್ರ ಗಂಧೋ ಯತ್ರಾಗ್ನಿಸ್ತತ್ರ ಸೋಷ್ಣತಾ
ಯತ್ರ ಪ್ರಾಣೋ ಮರುದ್ಯಾತಿ ಯತ್ರೇಂದುಸ್ತತ್ರ ತಚ್ಛವಿಃ । ॥ ೫೧ ॥

---

೪೮. ಪ್ರಾಣ ವಾಯುವು ಎಲ್ಲೆಲ್ಲಿ ಹೋಗುವುದೋ ಮನಸ್ಸೂ ಅಲ್ಲಲ್ಲಿ ಹೋಗುವುದು. ಬೀಸುವ ಗಾಳಿಯು ನಿಂತುಹೋದರೆ ಧೂಳು ಏಳುವುದೇನು?

೪೯-೫೦. ರಥವು ಹೋದಹೋದಲ್ಲಿ (ಅಗತಿಕವಾಗಿ) ಹೋಗಲೇ ಹೋಗುವ ಸಾರಥಿಯಂತೆ, ಪ್ರಾಣದಿಂದ ಪ್ರೇರಿತವಾದ ಚಿತ್ತವು ಕವಣೆಯಿಂದ ಎಸೆದ ಕಲ್ಲಿನಂತೆ ಒಂದೇ ಕ್ಷಣದಲ್ಲಿ ದೇಶಾಂತರಗಳಿಗೆ ಓಡಿಬಿಡುಪುದು. ಪ್ರಾಣವು ಪ್ರೇರಿಸದಿದ್ದರೆ, ಮನಸ್ಸು ನಾಶವಾಗುವುದು

೫೧. ಹೂವಿದ್ದ ಕಡೆ ಅದರ ಕಂಪಿರುವಂತೆ, ಬೆಂಕಿಯಿದ್ದೆಡೆ ಬಿಸಿಯಿರುವಂತೆ, ಚಂದ್ರನಿದ್ದ ಕಡೆ ಚಂದ್ರಿಕೆಯಿರುವಂತೆ, ಪ್ರಾಣ ವಾಯುವು ಇದ್ದಕಡೆ ವ್ಯಾಪಾರ ಮಾಡುವ ಮನಸ್ಸೂ ಇರುವುದು.

(ಇಂದುಶ್ಚಂದ್ರ ಸ್ತದಂಶ ಭೂತಂ ಮನಶ್ಚ । ಛವಿಶ್ಚಂದ್ರಿಕಾ ಮನೋವೃತ್ತಯಶ್ಚ ॥ –ತಾ. ಪ್ರ.)

ಸಂವಿತ್ತಿಃ ಪವನಸ್ಪಂದಾನ್ನಾಡೀಸಂಸ್ಪರ್ಶನಶ್ಚ ಸಃ
ಸಂವಿತ್ತಿಸ್ಫಾರತಾ ಚಿತ್ತಂ ಮನಸ್ತತ್ಪ್ರಾಣ ಕೋಟರೇ । ॥ ೫೨ ॥

ಸರ್ವತ್ರ ವಿದ್ಯತೇ ಸಂವಿದ್ವ್ಯೋಮವತ್ಸ್ವಚ್ಛಾ ಜಡಾಜಡೇ
ಕ್ಷುಭ್ಯಂತೀವ ತು ಸಾ ಪ್ರಾಣಸ್ಪಂದಾದಿತ್ಯನುಭೂಯತೇ । ॥ ೫೩ ॥

ಸತ್ತಾಮಾತ್ರ ಸ್ವರೂಪೇಣ ಜಡೇಷು ಸಮವಸ್ಥಿತಾ
ಪ್ರಾಣಸಂಬೋಧಿತಾ ವೇತ್ತಿ ವೇದನಾತ್ಮತಯಾ ಜಡೇ । ॥ ೫೪ ॥

---

೫೨. ಇಂದ್ರಿಯ ಮನಸ್ಸಂಸರ್ಗರೂಪವಾದ ಸಂವಿತ್ತು ಎಂಬುವುದು ವಾಯು ವ್ಯಾಪಾರ ಕಾರಣವು. ಆ ವಾಯು ವ್ಯಾಪಾರವು ನಾಡೀ ಸಂಸ್ಪರ್ಶನ (ಚಲನ) ಗಳಿಂದ ಆಗುವುದು. ಆ ಸಂವಿತ್ತಿನ ಪ್ರಕಟ ಸ್ವರೂಪವೇ ಚಿತ್ತವು. ಅದೇ ಮನಸ್ಸು. ಆ ಮನಸ್ಸು ಪ್ರಾಣವೆಂಬ ಕೋಟರದಲ್ಲಿ ಇರುವುದು.

(ಸರ್ವಾಂಗೇಷು ಅನ್ನರಸ ಪ್ರವೇಶಾರ್ಥಂ ಸರ್ವನಾಡೀ ಸಂಸ್ಪರ್ಶನಶ್ಚ-ತಾ. ಪ್ರ.)

೫೩. ಆಕಾಶದಂತೆ ಸ್ವಚ್ಛವಾದ ಚಿತ್ತು ಜಡ-ಅಜಡಗಳಲ್ಲೆಲ್ಲ ಇದ್ದೇ ಇರುವುದು. ಪ್ರಾಣ ವ್ಯಾಪಾರದಿಂದ ಅದು ಕ್ಷೋಭಗೊಂಡಂತಾಗಿ ವಿಕಾರಗಳನ್ನು ಅನುಭವಿಸುವುದು.

೫೪. ಈ ಚಿತ್ತು ಜಡ ಪದಾರ್ಥಗಳಲ್ಲಿ ಸತ್ತಾಮಾತ್ರವಾಗಿ ಇರುವುದು. ಪ್ರಾಣವು ಅಲ್ಲಿ ಬಂದು ಸೇರಿದರೆ ಜಡದಲ್ಲಿದ್ದ ಚಿತ್ತು ಸಂವೇದನ ಸ್ವರೂಪವಾಗಿ ತನ್ನನ್ನು ತಾನೇ ತಿಳಿದುಕೊಳ್ಳುವುದು.

ನಾನಾಸ್ಫಾರ ಸಮುಲ್ಲಾಸೈರ್ಯಃ ಪೂರ್ವಂ ಪರಿವಲ್ಗತಿ
ಪ್ರಾಣೇಽಸ್ತಂ ತೇ ತ್ವಮನಸಃ ಸ ಏವಾಶು ನ ವೇಪತಿ । ॥ ೫೫ ॥

ಪುರ್ಯಷ್ಟಕೇ ಚಿತ್ಪರಮಾ ಖೇ ಮುನೇ ಪ್ರತಿಬಿಂಬತಿ
ಆದರ್ಶ ಏವ ಪ್ರತಿಮಾ ದೃಶ್ಯತೇ ನೋಪಲಾದಿಷು । ॥ ೫೬ ॥

ಮನಃ ಪುರ್ಯಷ್ಟಕಂ ವಿದ್ಧಿ ಸರ್ವ ಕಾರ್ಯೈಕ ಕಾರಣಂ ।
ತದೇವ ಭೇದೈಃ ಕಥಿತಮನ್ಯೈಃ ಸ್ವಾಶಯಕಲ್ಪಿತೈಃ ॥ ೫೭ ॥

---

೫೫. ನಾನಾ ರೂಪವಾಗಿರುವ ಮೆರೆಯುತ್ತಿದ್ದ ಚಿತ್ತೇ, ಪ್ರಾಣವು ಅಸ್ತವಾಗಿ, ಮನೋನಾಶವಾಗಲು, ತಾನು ನಿಶ್ಚಲವಾಗುವುದು.

೫೬. ಕಲ್ಲುಗಳಲ್ಲಿ ಪ್ರತಿಫಲಿಸದೆ, ಪ್ರತಿಮೆಯು ಕನ್ನಡಿಯಲ್ಲಿ ಮಾತ್ರ ಚೆನ್ನಾಗಿ ಕಾಣಿಸುವಂತೆ, ಪರಮವಾದ ಆ ಚಿತ್ತು ಪುರ್ಯಷ್ಟಕ ಸ್ವರೂಪವಾದ ಆಕಾಶದಲ್ಲಿ ಪ್ರತಿಬಿಂಬಿಸುವುದು.

೫೭. ಮನಸ್ಸು ಎಂಬುದೇ ಪುರ್ಯಷ್ಟಕವು. ಅದೇ ಸರ್ವಕಾರ್ಯಗಳಿಗೂ ಏಕೈಕಕಾರಣವು. ಅದನ್ನೇ ಒಬ್ಬೊಬ್ಬರೂ ತಮ್ಮ ತಮ್ಮ ಕಲ್ಪನೆಗೆ ಅನುಸಾರವಾಗಿ ಬೇರೆ ಬೇರೆ ಹೆಸರುಗಳಿಂದ ಕರೆದಿರುವರು.

(ಭೂತಾಂತಃಕರಣ ಜ್ಞಾನಕರ್ಮೇಂದ್ರಿಯಸಮನ್ವಿತಂ । ಅವಿದ್ಯಾ ಕಾಮ ಕರ್ಮಾಢ್ಯಂ ಲಿಂಗಂ ಪುರ್ಯಷ್ಟಕಂ ವಿದುಃ । ಅನ್ಯೈರಾಚಾರ್ಯೈಃ ಸ್ವಾಶಯ ಕಲ್ಪಿತೈಃ ಶಿಷ್ಯಬೋಧನೋಪಾಯೈಃ– ತಾ. ಪ್ರ.)

ಯಸ್ಮಾದುದೇತಿ ಕಲನಾಕುಲ ದೃಶ್ಯ ಜಾಲಂ ।
ಯತ್ತತ್ರ ಚ ಸ್ಥಿತವದಿತ್ಯನುಭೂತ ಮುಚ್ಚೈಃ ।
ಯಸ್ಮಾನ್ಮನೋ ವಿಪರಿವರ್ತತಿ ದೇಹ ದೃಷ್ಟ್ಯಾ ।
ಸರ್ವಂ ತು ತತ್ಪರಮವಸ್ತ್ವಿತಿ ವಿದ್ಧಿ ವಿಶ್ವಂ ॥ ೫೮ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ "ಮನಃ ಪ್ರತಿಪಾದನಂ" ನಾಮ್ಯೈಕ ತ್ರಿಂಶಃ ಸರ್ಗಃ

೫೮. ಸಂಕಲ್ಪಮಯವಾದ ಈ ದೃಶ್ಯಜಾಲವೆಲ್ಲವೂ ಯಾವದರಿಂದ ಹುಟ್ಟುವುದೋ, ಯಾವದು ಈ ದೃಶ್ಯಜಾಲವೆಲ್ಲವೂ ಇರುವುದೆಂಬ ಅನುಭವವನ್ನು ಪಡೆಯುವುದೋ, ದೇಹವೇ ತಾನೆಂದುಕೊಂಡು ವಿಪರೀತ ಜ್ಞಾನವನ್ನು ಪಡೆದು ಭ್ರಾಂತಿಪಡಲು ಕಾರಣವು ಯಾವದೋ ಅದೆಲ್ಲವೂ ಆ ಪರಮವಸ್ತುವೇ! ಅದೇ ಈ ವಿಶ್ವವಾಗಿ ಇರುವುದು. (ವಿಶ್ವವೆಲ್ಲವೂ ಬ್ರಹ್ಮವೇ!)

(ಇದಾನೀಂ ಜೀವ, ತದುಪಾಧಿ, ತದ್ಭೋಗ್ಯ ಲಕ್ಷಣಸ್ಯ ವಿಶ್ವಸ್ಯ ಉತ್ಪತ್ತಿ ಸ್ಥಿತಿ ಲಯೇಷು ಚಿದೇಕರಸ ಸನ್ಮಾತ್ರ ಬ್ರಹ್ಮಾಧೀನತ್ವಾತ್ ಪರಮಾರ್ಥತಃ ಬ್ರಹ್ಮೈವ ತದಿತಿ ಅನುಭಾವಯನ್ ಉಪಸಂಹರತಿ– ತಾ. ಪ್ರ.)

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಮನಃ ಪ್ರತಿಪಾದನಂ" ಎಂಬ
ಮೂವತ್ತೊಂದನೆಯ ಸರ್ಗವು.

ದ್ವಾತ್ರಿಂಶಃ ಸರ್ಗಃ

ಶ್ರೀ ಈಶ್ವರ ಉವಾಚ :—

ಮುನೇ ಶೃಣು ಕಥಂ ಕಾರ್ಯಕಾರಿಣೀ ಸ್ಪಂದಶಾಲಿನೀ ।
ಚರಂತೀ ಚ ತನುಂ ಪುಂಸಾಮುಪೈತಿ ಪರಮಾಭಿಧಾಂ ॥ ೧ ॥

ಪ್ರಾಕ್ತನೈಸ್ತೈರ್ನಿಹತ್ಯೇವ ಸ್ವಮನೋಮನನೇಹಿತೈಃ ।
ಕರ್ಮಪ್ರಾತೈರ್ವಿಚಿತ್ರೇಹೈಃ ಪರಿಪೀವರತಾಂ ಗತೈಃ ॥ ೨ ॥

ಮನಸ್ತಯಾ ಗತಾ ಶಕ್ತಿಃ ಸಜ್ಜಡೇವಾಗತಾ ಚಿತೇಃ ।
ಸಾ ಸ್ಫುರತ್ಯನಯಾ ಬ್ರಹ್ಮನ್ನ ಚಿತಾ ಶಕ್ತಿ ಭೂತಯಾ ॥ ೩ ॥

ಅಸ್ಯಾಃ ಪ್ರಸಾದಾದಿಹ ಸಾ ಚಿತ್ಕಲಂಕವಶೀ ಮುನೇ ।
ಜಗದ್ಗಂಧರ್ವನಗರಂ ಕರೋತಿ ನ ಕರೋತಿ ಚ ॥ ೪ ॥

ಮೂವತ್ತೆರಡನೆಯ ಸರ್ಗ

ಶ್ರೀ ಈಶ್ವರನು ಹೇಳಿದನು :—

ಎಲೈ ಮುನೀಂದ್ರನೆ, ಕಾರ್ಯಕಾರಣಗಳೆರಡೂ ತಾನೇ ಆಗಿರುವ ಈ ಪರಮ ಚಿತ್ತು ಪುರ್ಯಷ್ಟಕ ರೂಪ ದೇಹ ದೇಹಾಂತರಗಳಲ್ಲಿ ವ್ಯಾಪಾರ ಮಾಡುತ್ತ ಯಾವ ರೀತಿಯಾಗಿ ನಾನಾ ನಾಮರೂಪಾತ್ಮಕವಾಗಿ ತೋರುವ ಸಂಸಾರವೆನ್ನಿಸಿಕೊಳ್ಳುವುದೋ ಅದನ್ನು ಹೇಳುವೆನು ಕೇಳು.

೨–೩. ಆ ಬ್ರಹ್ಮಶಕ್ತಿಯೇ, ಬಹುಕಾಲದಿಂದ ರೂಢವಾಗಿರುವ ಕರ್ಮಜಾಲಗಳಿಂದಲೂ, ನಾನಾ ರೂಪವಾದ ಕಾಮಗಳಿಂದಲೂ ಬಹು ಬಲವಾಗಿ ಬೆಳೆದಿರುವ ವಾಸನೆಗಳಿಂದ ತನ್ನ ಸ್ವರೂಪವನ್ನು ಮರೆತುಕೊಂಡು, ಮನಸ್ಸಾಗಿ, ತಾನು ಸತ್ಸ್ವರೂಪವಾದರೂ ಜಡವೆಂದುಕೊಂಡು ಈ ಸಂಸಾರರೂಪವಾಗಿ ಕಾಣುವುದು.

೪. ಈ ಮಾಯಾಶಕ್ತಿಯ ಪ್ರಸಾದದಿಂದಲೇ ಈ ಚಿಚ್ಛಕ್ತಿಯು ಕಳಂಕ

ಚಿತ್ತಾದ್ಯಸತ್ತಯಾ ದೇಹೋ ಮೂಕಸ್ತಿಷ್ಠತಿ ಕುಡ್ಯವತ್ ।
ತತ್ಸತ್ತಯಾತು ಸ್ಫುರತಿ ನಭಃ ಸಂಪ್ರೇರಿತಾಶ್ಮವತ್ ॥ ೫ ॥

ಯಥಾ ಸ್ಫುರತ್ಯತಿ ಜಡಮಯೋಽಯಸ್ಕಾಂತ ಸಂನಿಧೌ ।
ತಥಾ ಸ್ಫುರತಿ ಜೀವೋಽಯಂ ಸತಿ ಸರ್ವಗತೇ ಪರೇ ॥ ೬ ॥

ಸರ್ವಸ್ಥಯಾತ್ಮ ಶಕ್ತ್ಯೇವ ಜೀವ ಏಷ ಸ್ಫುರತ್ಯಲಂ ।
ಮುಕುರೋ ಬಿಂಬಮಾದತ್ತೇ ದ್ರವ್ಯಾತ್ಮನ್ಯ ಸ್ಥಿತಾದಪಿ ॥ ೭ ॥

ವನ್ನು ಪಡೆಯುವುದು. ಈ ಜಗತ್ತೆಂಬ ಗಂಧರ್ವನಗರವನ್ನು ಮಾಡುವುದು: ಅಳಿಸುವುದು.

೫. ಚಿತ್ತಾದಿಗಳು ಇಲ್ಲದಿದ್ದರೆ ದೇಹವು ಮೂಕವಾಗಿ ಗೋಡೆಯಂತೆ ಬಿದ್ದಿರುವುದು. ಅದು ಇದ್ದರೆ, ನಭಸ್ಸಂಪ್ರೇರಿತವಾದ ಅಶ್ಮದಂತೆ ಕಾಣಿಸುವುದು.

(ನಭಸ್ಸಂಪ್ರೇರಿತಾಶ್ಮವತ್ ಎಂದರೆ ಆಕಾಶದಲ್ಲಿ ಎಸೆದ ಕಲ್ಲಿನ ಹಾಗೆ ಎಂದು ಅರ್ಥ ಮಾಡಬಹುದು ಹಿಂದಿನ ಸರ್ಗದಲ್ಲಿ ಶ್ಲೋಕ ೪೮ರಲ್ಲಿ ಇದೇ ಅರ್ಥ ಪ್ರಕಾರಾಂತರವಾಗಿ ಬಂದಿದೆ)

೬ ಸರ್ವಗತವಾದ ಪರಬ್ರಹ್ಮದ ಸನ್ನಿಧಾನವು ಇರಲಾಗಿ, ಅತಿ ಜಡವಾದ ಕಬ್ಬಿಣವು ಆಯಸ್ಕಾಂತದ ಸನ್ನಿಧಿಯಲ್ಲಿ ವ್ಯಾಪಾರ ಮಾಡುವಂತೆ, ಜೀವನು ವ್ಯಾಪಾರ ಮಾಡುವನು.

(ಜೀವಸ್ಯ ಪ್ರಾಣಕರ್ಮೇಂದ್ರಿಯ ವ್ಯಾಪಾರೇಷು ಬ್ರಹ್ಮ ಸನ್ನಿಧಿಮಾತ್ರೇಣ ಸಾಧಾರಣಂ ನಿಮಿತ್ತಂ ಇತಿ. -ತಾ. ಪ್ರ.)

೭. ಸರ್ವದರಲ್ಲಿಯೂ ಇರುವ ಆತ್ಮಶಕ್ತಿಯಿಂದಲೇ ಈ ಜೀವನು ವ್ಯಾಪಾರ ಮಾಡಬಲ್ಲವನಾಗಿರುವುದು. ಅದ್ರವ್ಯವಾದ ಬ್ರಹ್ಮವಸ್ತುವನ್ನು ಅಂತಃಕರಣವು ಕನ್ನಡಿಯ ಹಾಗೆ ಪ್ರತಿಬಿಂಬಿಸುವುದು. ಅದೇ ಜೀವವು.

ಪ್ರವಿಸ್ಮೃತ ಸ್ವಭಾವತ್ವಾಜ್ಜೀವೋಽಯಂ ಜಡತಾಂ ಗತಃ ।
ಮೋಹಾದ್ವಿಸ್ಮೃತಭಾವತ್ವಾ ಚ್ಛೂದ್ರತಾಮಿವ ಸದ್ದ್ವಿಜಃ ॥ ೮ ॥

ಪ್ರವಿಸ್ಮೃತ ಸ್ವಭಾವಾ ಹಿ ಚಿಚ್ಚಿತ್ತತ್ವ ಮುಪಾಗತಾ ।
ಮೋಹಾಪಹತ ಚಿತ್ತತ್ವಾತ್ಸ ಮಹಾನಿವ ದೀನತಾಂ ॥ ೯ ॥

(ಉತ್ತರಾರ್ಧದಲ್ಲಿ ಗ್ರಂಥಪಾತವಾಗಿರಬೇಕು. ತಾತ್ಪರ್ಯ ಪ್ರಕಾಶಕಾರರೂ ಈ ಅಂಶವನ್ನು ಗ್ರಹಿಸಿ ಅಲ್ಲಿ ಅರ್ಥಪೂರ್ಣ ಮಾಡಿದ್ದಾರೆ. "ಬುದ್ಧಿ ಮೊದಲಾದ ಜ್ಞಾನೇಂದ್ರಿಯಗಳಲ್ಲಿ ಪ್ರತಿಬಿಂಬವು ಬರಲು ಅಸಾಧಾರಣ ನಿಮಿತ್ತವನ್ನು ಹೇಳುತ್ತಾರೆ. ಸರ್ವಸ್ಥಯಾ ಇತ್ಯಾದಿಯಾಗಿ. ಆತ್ಮರೂಪವಾದ ಚಿಚ್ಛಕ್ತಿಯಿಂದಲೇ ಜೀವನು ವ್ಯಾಪಾರ ಮಾಡಿ ತನ್ನನ್ನೂ ಇತರರನ್ನೂ ತಿಳಿದುಕೊಳ್ಳಲು ಸಮರ್ಥನಾಗುತ್ತಾನೆ. ಆದರೆ, ಭೌತಿಕವಾಗಿ ಜೀವೋಪಾಧಿಯಾಗಿರುವ (ಅಂತಃಕರಣವು) ಅದ್ರವ್ಯ ಸ್ವಭಾವವಾದ ಬ್ರಹ್ಮದ ಪ್ರತಿಬಿಂಬವನ್ನು ಗ್ರಹಿಸುವುದು ಹೇಗೆ? ಒಂದು ದ್ರವ್ಯದಲ್ಲಿ ದ್ರವ್ಯಾಂತರದ ಪ್ರತಿಬಿಂಬವು ಕಾಣಿಸುವುದು ಸಾಧ್ಯ. ಅಲ್ಲವೆ? ಎಂದರೆ : ಬ್ರಹ್ಮವಸ್ತುವು ದ್ರವ್ಯ ಸ್ವಭಾವವಾದ ಗುಣ ಜಾತಿ ಕ್ರಿಯಾದಿಗಳಿಲ್ಲವಾದುದೇ ಆದರೂ ಅದರ ಪ್ರತಿಬಿಂಬವು ಬರುತ್ತದೆಯಾಗಿ ದ್ರವ್ಯದಿಂದಲೇ ಪ್ರತಿಬಿಂಬ ಬರಬೇಕು ಎಂಬ ನಿಯಮವಿಲ್ಲ."

ಹಿಂದೆ ಇದೇ ಅರ್ಥವನ್ನು ಅಯಸ್ಕಾಂತ ಚಕ್ರ (ಮ್ಯಾಗ್ನೆಟಿಕ್ ರಿಂಗ್) ದ ಉದಾಹರಣ ಕೊಟ್ಟು ವಿವರಿಸಲಾಗಿದೆ. ಹೀಗೆ ಅಖಂಡವು ಖಂಡವಾಗಿ ಉಪಾಧಿಸ್ಥವಾಗುವುದೇ ಮಾಯೆ. ಇದನ್ನೇ ಗೀತೆಯಲ್ಲಿ ಭಗವಂತನು "ಸಂಭವಾಮಿ ಆತ್ಮಮಾಯಯಾ" ಎಂದು ಹೇಳಿದ್ದಾನೆ. ಬ್ರಹ್ಮವು ಜೀವವಾಗುವುದು ಮಾಯೆಯಿಂದ: ಮಾಯೆಯು ಬಂದಮೇಲೆ, ಮಾಯಾ ಕಾರ್ಯವಾಗಿ ಹುಟ್ಟಿದ ಬುದ್ಧಿಯು ಅದನ್ನು ತಿಳಿಯಲು ಸಾಧ್ಯವಿಲ್ಲ.)

೮. ಸ್ವಭಾವವನ್ನು ಮರೆತುಕೊಂಡು ಈ ಜೀವನು ಜಡನಾದನು (ಅಲ್ಪನಾದನು.) ಸತ್ಕುಲ ಪ್ರಸೂತನೂ, ಸಂಸ್ಕಾರ ಸಂಪನ್ನನೂ ಆದ ಬ್ರಾಹ್ಮಣನು; ಮೋಹದಿಂದಲೂ, ವಿಸ್ಮರಣದಿಂದಲೂ ಶೂದ್ರನಾಗುವ ಹಾಗೆ ಈ ಬ್ರಹ್ಮವೂ ಮಾಯೋಪಾಧಿಯಲ್ಲಿ ಸಿಕ್ಕಿ ಜೀವನಾಗುವನು.

೯. ಚಿತ್ತು ತನ್ನ ಸಹಜ ಭಾವವನ್ನು ಮರೆತುಕೊಂಡೇ ಚಿತ್ತವಾಯಿತು.

ಜಡಯಾಽವಶಯಾ ದೇಹೋ ವಾತಶಕ್ತಿ ಸಮಾನಯಾ ।
ಸಂಚಾಲ್ಯತೇ ತದನಯಾ ವಾರೀವ ವೀಚಿಮಾಲಯಾ ॥ ೧೦ ॥

ಕರ್ಮಾತ್ಮನಾ ವರಾಕೇಣ ಜೀವೇನ ಮನಸಾಽಮುನಾ ।
ಚಾಲ್ಯಂತೇ ದೇಹಯಂತ್ರಾಣಿ ಪಾಷಾಣಾ ಇವ ವಾಯುನಾ ॥ ೧೧ ॥

ಶರೀರಶಕಟಾನಾಂ ಹಿ ಕರ್ಷಣೇ ಪರಮಾತ್ಮನಾ ।
ಮನಃ ಪ್ರಾಣೋದಯೌ ಬ್ರಹ್ಮನ್ಕೃತೌ ಕರ್ಮಕೃತೌ ದೃಢೌ ॥ ೧೨ ॥

ಮಹಾಪುರುಷನೂ ಮೋಹಕ್ಕೆ ಸಿಕ್ಕಿಕೊಂಡು ದೈನ್ಯವನ್ನು ಪಡೆಯುವಂತೆ ಚಿತ್ತು ಚಿತ್ತವಾಗಿ ಶೋಕ ಮೋಹಗಳನ್ನು ಪಡೆಯುವುದು.

೧೦. ಹಾಗೆ ಚಿತ್ತವಾಗಿ ಜಡವಾದ ಚಿಚ್ಛಕ್ತಿಯೇ ಮುಂದೆ ಪ್ರಾಣವಾಗಿ ತಾನೂ ಅವಶವಾಗಿ, ತರಂಗಮಾಲೆಗಳು ನೀರನ್ನು ಅಲ್ಲಾಡಿಸುವಂತೆ ದೇಹವನ್ನು ತನ್ನ ಚಲನಗಳಿಂದ ವ್ಯಾಪಾರ ಮಾಡಿಸುವುದು.

೧೧. ಕಲ್ಲುಗಳು (ಗಾಳಿಗೆ ಅಲ್ಲಾಡುವವು ಅಲ್ಲವಾದರೂ ದೋಣಿಯಲ್ಲಿ ಇಟ್ಟರೆ ಹೇಗೆ) ಗಾಳಿಗೆ ಸಿಕ್ಕಿ ಅದು ಹೋದ ಕಡೆಗೆ ಹೋಗುವುವೋ ಅಂತೆಯೇ ಕರ್ಮವೆಂಬ ಪಾಶಕ್ಕೆ ಸಿಕ್ಕಿ ಮನನಶೀಲವಾದ ಮನಸ್ಸಿಗೆ ವಶನಾಗಿ ದೀನನಾದ ಜೀವನು ದೇಹಯಂತ್ರಗಳನ್ನು ವ್ಯಾಪಾರ ಮಾಡಿಸುವನು.

೧೨. ಎಲೈ ಬ್ರಹ್ಮನೆ, ಶರೀರವೆಂಬ ರಥವನ್ನು ಎಳೆದುಕೊಂಡು ಹೋಗಲು ಮನಸ್ಸು ಪ್ರಾಣಗಳೆಂಬ ಇಬ್ಬರು ದೃಢರಾದ ಆಳುಗಳನ್ನು (ಎತ್ತುಗಳನ್ನು) ಪರಮಾತ್ಮನು ನಿರ್ಮಿಸಿರುವನು.

ಚಿಜ್ಜಡಂ ತೂರರೀಕೃತ್ಯ ರೂಪಂ ಜೀವತ್ವಮೇತ್ಯ ಚ ।
ಮನೋರಥ ಮುಪಾರುಹ್ಯ ವಹತ್ಪ್ರಾಣ ತುರಂಗಮಂ ॥ ೧೩ ॥

ಕ್ವಚಿಜ್ಜಾತ ಪದಾರ್ಥತ್ವಂ ಕ್ವಚಿನ್ನಷ್ಟ ಪದಾರ್ಥತಾಂ ।
ಕ್ವಚಿದ್ಬಹು ಪದಾರ್ಥತ್ವಂ ಕ್ವಚಿದೇಕ ಪದಾರ್ಥತಾಂ ॥ ೧೪ ॥

ಗತೇವ ಭಿನ್ನೇವಾಸ್ತ್ಯೇವ ಮತ್ಯಜಂತೀ ನಿಜಂ ಪದಂ ।
ಜಲತೇವ ತರಂಗತ್ವಂ ಸೈವಾಸದಸದೋದಿತಾ ॥ ೧೫ ॥

೧೩-೧೪-೧೫. ಜಡ ಚೇತನಗೆಳೆಂಬ ವ್ಯವಹಾರವನ್ನು ಅಂಗೀಕರಿಸಿಕೊಂಡು, ಜೀವತ್ವವೆಂಬ ರೂಪವನ್ನು ಹೊಂದಿ, ಪ್ರಾಣವೆಂಬ ಕುದುರೆಯು ಕಟ್ಟಿರುವ ಮನಸ್ಸೆಂಬ ರಥವನ್ನು ಏರಿ, "ಕೆಲವೆಡೆ ಪದಾರ್ಥಗಳು ಉದಯವಾಯಿತು, ಇನ್ನು ಕೆಲವೆಡೆ ಪದಾರ್ಥಗಳು ನಷ್ಟವಾಯಿತು, ಎಂಬ, ಇನ್ನೊಂದೆಡೆ ಬಹು ಪದಾರ್ಥಗಳಾಯಿತು, ಇನ್ನೊಂದೆಡೆ ತಾನು ಒಂದೇ ಆಗಿ ಉಳಿಯಿತು'' ಎಂಬ ನಾನಾ ಭಾವಗಳನ್ನು ತೋರಿ ಒಂದೆಡೆ ಹೋಗಿಯೇ ಹೋಯಿತೋ ಎಂಬಂತೆ, ಇನ್ನೊಂದೆಡೆ ನಾನಾ ರೂಪ ಒಡೆದು ಹೋಯಿತೋ ಎಂಬಂತೆ, ಜಲಶಕ್ತಿಯು ತರಂಗಗಳಾಗಿ ಸತ್ ಅಸತ್ ರೂಪಗಳನ್ನು ತೋರುವಂತೆ, ಈ ಚಿತ್ತು ತನ್ನ ಸ್ವಭಾವವನ್ನು ಬಿಡದೆಯೇ, ಮೆರೆಯುತ್ತಿರುವುದು.

(ಚಿತ್ತೇ ಚೇತನ ಜಡರೂಪವಾಗಿ ಕಾಣಿಸುವುದು. ಚೇತನ ಜಡಗಳೆಂಬ ಭಿನ್ನಭಿನ್ನ ರೂಪಗಳಿಂದ ಕಾಣಿಸಿಕೊಂಡರೂ ಮೊದಲಿನ ಚಿತ್ಸ್ವರೂಪಕ್ಕೆ ಹಾನಿಯಿಲ್ಲದಿರುವುದು.)

(ತಾತ್ಪರ್ಯ ಪ್ರಕಾಶಕಾರರು ಜಾತಪದಾರ್ಥತ್ವಂ ಎಂಬುದನ್ನು ಜಾಗ್ರತ್ತೆಂದೂ ನಷ್ಟಪದಾರ್ಥತ್ವಂ ಎಂಬುದನ್ನು ಸ್ವಪ್ನವೆಂದೂ ಏಕಪದಾರ್ಥತಾ ಎಂಬುದನ್ನು ಅವಿದ್ಯೈಕ ಪದಾರ್ಥವಾದ ಸುಷುಪ್ತಿಯೆಂದೂ ಅರ್ಥ ಮಾಡಿದ್ದಾರೆ.)

ಉಪಜೀವ್ಯಾತ್ಮನೋ ರೂಪಂ ಪರಂ ಸ್ಫುರತಿ ವೃತ್ತಿಷು ।
ಆಲೋಕಮುಪಜೀವ್ಯೇವಂ ರೂಪಶ್ರೀರ್ದೃಶ್ಯಗಾ ಯಥಾ ॥ ೧೬ ॥

ಪರಮಾತ್ಮನಿ ಚಿತ್ತತ್ತ್ವೇ ಸ್ಥಿತೇ ಸತಿ ನಿರಾಮಯೇ ।
ಜೀವೋ ಜೀವತಿ ಸಾಲೋಕಂ ದೀಪೇ ಸತಿ ಗೃಹಂ ಯಥಾ ॥ ೧೭ ॥

ಆಧಯೋ ವ್ಯಾಧಯಶ್ಚೈವ ಪ್ರಯಾಂತ್ಯಸ್ಯ ಪ್ರಪೀನತಾಂ ।
ಅಪಾಮಿವ ತರಂಗತ್ವಂ ವೀಚಿತ್ವಸ್ಯೇವ ಫೇನತಾ ॥ ೧೮ ॥

---

೧೬. ಆತ್ಮನಲ್ಲಿ ಅಧ್ಯಾಸಬಲದಿಂದ ಕಲ್ಪಿತವಾದ ಜೀವರೂಪವು ಆತ್ಮನಿಂದಲೇ ಬದುಕಿ, ನಾನಾವಿಧ ಇಂದ್ರಿಯ ವೃತ್ತಿಗಳಲ್ಲಿ ತನ್ನ ರೂಪವನ್ನೇ ತೋರಿಸಿಕೊಳ್ಳುತ್ತ, ತನ್ನನ್ನೇ ತಾನೇ ವಿಷಯವಾಗಿ ಕಾಣುತ್ತ, ಈ ಜಗದ್ರೂಪವಾಗಿ ಹರಡಿರುವುದು. (ದೃಕ್ ·ದೃಶ್ಯಗಳೆರಡೂ ಆತ್ಮನಲ್ಲಿಯೇ ಅಧ್ಯಸ್ತವಾದುದರಿಂದ ಆತ್ಮಭಿನ್ನವಾದ ಇನ್ನು ಯಾವುದೂ ಇಲ್ಲವೇ ಇಲ್ಲವೆಂದು ಭಾವ.)

೧೭. ದೀಪವು ಬೆಳಗುವಾಗ ಮನೆಯೆಲ್ಲವೂ ಬೆಳಗಿ ಗೋಚರವಾಗುವಂತೆ ಪರಮಾತ್ಮ ಸ್ವರೂಪವಾದ ಚಿತ್ತು ತಾನು ನಿರಾಮಯವಾಗಿದ್ದರೂ ಚಿತ್ತತ್ವವನ್ನು ಅವಲಂಬಿಸಿ ಉಳಿತಿರುವವರೆಗೂ ಜೀವವು ಜೀವಿಸಿರುವುದು.

(ಇದುವರೆಗೂ ಚಿತ್ತು ಜೀವನಾಗಿ ದೇಹ ಪಡೆದು ವ್ಯಾಪಾರ ಮಾಡುವುದನ್ನು ಕುರಿತು ಹೇಳಿ, ಇನ್ನು ಮುಂದೆ ದೇಹದಿಂದ ದೇಹಾಂತರಕ್ಕೆ ಹೋಗುವ ಕ್ರಮವನ್ನು ಹೇಳುತ್ತಾರೆ. ತಾ. ಪ್ರ.)

೧೮. ನೀರೇ ತರಂಗಗಳಾಗುವಂತೆ, ತರಂಗಗಳಿಂದಲೇ ನೊರೆಯು ಹುಟ್ಟುವಂತೆ, ಈ ಜೀವನ (ಮನನ ಬಲದಿಂದಲೇ) ಆಧಿಗಳೂ ವ್ಯಾಧಿಗಳೂ ಬಲವಾಗುವುವು.

ಆದಿವ್ಯಾಧಿಭಿರಾಕೀರ್ಣ ಶರೀರಾಂಭೋಜಷಟ್ಪದಃ ।
ಜೀವೋ ವೈಷಮ್ಯಮಾಯಾತಿ ತರಂಗತ್ವೇ ಯಥಾಪಯಃ ॥ ೧೯ ॥
ಚಿಚ್ಛಕ್ತಿಃ ಸರ್ವಶಕ್ತಿತ್ವಾನ್ನಾಹಂ ಚಿದಿತಿ ಭಾವನಾತ್ ।
ಅತ್ರ ಸೈವೈತಿ ವೈವಶ್ಯಂ ಸೂರ್ಯೋ ದೀಪ್ತೈರಿವಾಂಬುದೈಃ ॥ ೨೦ ॥

(ದೇಹವು ಪಂಚಭೂತಗಳಿಂದ ಆದುದು. ಪಂಚಭೂತಗಳೆಲ್ಲವೂ ಆಕಾಶಭೂತವೊಂದೇ ಒಂದರ ಖಂಡಗಳು ಮತ್ತು ವಿಕಾರಗಳು. ಆಕಾಶದ ದಶಮಾಂಶ ವಾಯು, ಅದರ ದಶಮಾಂಶ ತೇಜಸ್ಸು, ಅದರ ದಶಮಾಂಶ ಜಲ, ಅದರ ದಶಮಾಂಶ ಪೃಥ್ವಿ. ಇವೈದೂ ಪಂಚೀಕರಣವಾಗಿ ಜ್ಞಾತೃವಿನಿಂದ ಹಿಡಿದು ಕರ್ಮೇಂದ್ರಿಯಗಳವರೆಗಿನ ಎಲ್ಲವನ್ನೂ ಕಟ್ಟಿರುವುವು. ದಪ್ಪ ಬುಡವುಳ್ಳ ಮಹಾವೃಕ್ಷವು ಚಿಗುರಿಟ್ಟು ಎಲೆ ಬಿಟ್ಟಾಗ ಆ ಎಲೆಗಳು ಅಲ್ಲಾಡುವಷ್ಟು ಹಗುರ ವಾಗುವ ಹಾಗೆ, ಜೀವತ್ವವನ್ನು ಪಡೆದು ಬಂದ ಮೇಲೆ ಬ್ರಹ್ಮವು ಶೋಕ ಮೋಹ ಗಳನ್ನು ಅನುಭವಿಸುವುದು. ಎಲೆಯಿಂದ ರೆಂಬೆ, ರೆಂಬೆಯಿಂದ ಕೊಂಬೆ, ಕೊಂಬೆಯಿಂದ ಬುಡದ ಕಡೆಗೆ ಬಂದರೆ ಮರದಲ್ಲಿ ಅಲ್ಲಾಡುವುದು ಹೇಗೆ ಕಡಿಮೆ ಯಾಗಿ ಭೂಮಿಯಲ್ಲಿರುವ ಬೇರುಗಳಲ್ಲಿ ಇಲ್ಲವೇ ಇಲ್ಲವಾಗುವುದೋ ಹಾಗೇ ಜೀವನಿಗೆ ಶೋಕ ಮೋಹಗಳು ರಜಸ್ತಮೋಗುಣಗಳಲ್ಲಿ ತಾವೇ ತಾವಾಗಿದ್ದರೂ ಸತ್ವಗುಣದ ಆಧಿಕ್ಯದಲ್ಲಿಯೇ ಇಲ್ಲವಾಗುವುವು. ಅಲ್ಲಿಂದಾಚೆಗೆ ಹೋದರಂತೂ ಅದರ ಪ್ರಸ್ತಾಪವೇ ಇಲ್ಲ. ಅದರಿಂದ ಶೋಕಮೋಹಗಳು ದೇಹಿಗೆ ಸಹಜಸಿದ್ಧ ವಾದವು: ಅವು ದೇಹಿಯ ಮನನದಿಂದ ಪೀನವಾಗಿ, ಅಮನನದಿಂದ ಕ್ಷೀಣವಾಗುವುವು.)

೧೯. ತರಂಗರೂಪವಾಗಿ ಮಾರ್ಪಟ್ಟ ಜಲವು ಸ್ಥಿರವಾಗದೆ ಚಲವಾಗು ವಂತೆ, ಆಧಿ ವ್ಯಾಧಿಗಳಿಂದ ತುಂಬಿರುವ ಶರೀರವೆಂಬ ಕಮಲದಲ್ಲಿರುವ ದುಂಬಿ ಯಾದ ಜೀವನೂ ವಿಷಮನಾಗುವನು.

೨೦. ಚಿತ್ತಿಗೆ ಸರ್ವಶಕ್ತಿಗಳೂ ಉಂಟು: ಅದರಿಂದ ನಾನು ಚಿತ್ತಲ್ಲ ಎಂದು ಭಾವಿಸುವುದರಿಂದ, ಸೂರ್ಯನು ತನ್ನಿಂದಲೇ ಆದ ಮೇಘಗಳಿಂದ ತಿರಸ್ಕೃತ ನಾಗುವಂತೆ, ತನ್ನ ಬಲದಿಂದಲೇ ತಾನೂ ತಿರಸ್ಕೃತನಾಗುವುದು.

ವೈವಶ್ಯಾಚ್ಛ್ಯವತೀ ಮೌಢ್ಯಾನ್ನ ವಿಂದತ್ಯಾತ್ಮ ಸಂವಿದಂ ।
ಘನಜಾಡ್ಯ ಪರಾಭೂತಃ ಸ್ವಾಂಗಾವದಲನಂ ಯಥಾ ॥ ೨೧ ॥

ಪ್ರಾಪ್ಯ ಚಾಪ್ಯನುಸಂಧಾನಮುಸ್ಯಾ ಮೋಹೋ ವಿನಶ್ಯತಿ ।
ಘನಮೋಹರತೋ ಜಂತುಃ ಸ್ವಕಾರ್ಯಸ್ಮರಣಂ ಯಥಾ ॥ ೨೨ ॥

ಯದಾಂಗ ಸಂವಿದಾಂ ವಾತಸ್ಪಂದಶಕ್ತಿಃ ಪ್ರಮೋಷತಃ ।
ನ ಕರೋತ್ಯನುಸಂಧಾನಂ ಕುಷ್ಠೀ ಸ್ಪಂದೈಷಣಂ ಯಥಾ ॥ ೨೩ ॥

(ಯಥಾ ಸೂರ್ಯೋ ದೀಪ್ತೈಃ ಸ್ವಪ್ರಕಾಶಿತೈರೇವ ಅಂಬುದೈಃ ಮೇಘೈಃ ತಿರೋಧಾನ, ಮ್ಲಾನಿ, ಖಂಡಿತತ್ವಾದಿ ವೈವಶ್ಯಂ ದ್ರಷ್ಟೃದೃಷ್ಟ್ಯಾ ಏತಿ ತದ್ವತ್.– ತಾ. ಪ್ರ.)

೨೧. ಬಲವಾದ ಸುರಾಪಾನಗಳಿಂದ ಮೈಮರೆತವರು ಕೈಕಾಲುಗಳನ್ನು ಕತ್ತರಿಸಿದರೂ ತಿಳಿಯದಿರುವಂತೆ, ಚಿತ್ತು ತನ್ನ ಶಕ್ತಿಯ ಬಲದಿಂದಲೇ ವಿವಶವೂ ಮೂಢವೂ ಆಗಿ ಕೆಳಕ್ಕೆ ಬೀಳುವುದನ್ನೂ ತಾನು ತನ್ನನ್ನು ಮರೆತಿರುವೆನೆಂಬುದನ್ನೂ ತಿಳಿಯದಿರುವುದು.

೨೨. ಬಲವಾದ ಪಾನಮತ್ತತೆಯು ಇಳಿದ ಮೇಲೆ ಮನುಷ್ಯನು ತನ್ನ ಪೂರ್ವ ಸ್ಮರಣವನ್ನು ಹೊಂದುವಂತೆ ಚಿತ್ತು ಆತ್ಮಾನುಸಂಧಾನ ಮಾಡಿದರೆ ಈ ಮೋಹವು ನಾಶವಾಗುವುದು.

೨೩. (ಇನ್ನು ದೇಹತ್ಯಾಗ ಪ್ರಕಾರವನ್ನು ಹೇಳುತ್ತಾರೆ) ಕುಷ್ಠರೋಗದವನು (ರೋಗದಿಂದ ಕರಗಿ ಬಿದ್ದು ಹೋದ ತನ್ನ ಅಂಗಗಳಿಂದ) ವ್ಯಾಪಾರವನ್ನು ಮಾಡಲೂ ಯೋಚಿಸದಿರುವಂತೆ, ಪ್ರಾಣಶಕ್ತಿಯು ಪ್ರಮೋಷಕ್ಕೆ ಸಿಕ್ಕಿ ಅಂಗ ವ್ಯಾಪಾರಗಳನ್ನು ಮಾಡದೆ ಹೋಗುವುದೋ–ಆಗ

(ಪ್ರಮೋಷವೆಂದರೆ ಇಂದ್ರಿಯಗಳ ವ್ಯಾಪಾರವನ್ನು ನಿಲ್ಲಿಸುವ ಶಕ್ತಿ)

ಅಸಂವಿತ್ಸ್ಪಂದತೋ ದೇಹೇ ಪದ್ಮಪತ್ರಂ ಹೃದಿಸ್ಥಿತಂ ।
ನ ಸ್ಫುರತ್ಯಪರಾಮೃಷ್ಟಂ ದಾರುಪತ್ರಂ ಯಥಾ ಬಹಿಃ ॥ ೨೪ ॥

ನಿಃಸ್ಪಂದೇ ಪದ್ಮಪತ್ರೇಽಂತಃ ಪ್ರಾಣಾಃ ಶಾಂತಿಂ ಪ್ರಯಾಂತ್ಯಮೀ ।
ತಾಲವೃಂತೇ ಯಥಾಽಸ್ಪಂದೇ ಬಹಿಃ ಪವನಶಕ್ತಯಃ ॥ ೨೫ ॥

ಪ್ರಾಣೇ ಶಾಂತೇತರಸ್ಪರ್ಶೇ ಜೀವೋ ನಿಷ್ಪೂರ್ಣಮೂಕತಾಂ ।
ಯಾತಿ ಶಾಂತೇ ನಭೋ ವಾಯೌ ನ ದೃಶ್ಯತ್ವಂ ಯಥಾ ರಜಃ ॥ ೨೬ ॥

---

೨೪. (ಯಜ್ಞಮಂಟಪದಲ್ಲಿದ್ದರೂ ದಾರುಪಾತ್ರೆಗಳು ಋತ್ವಿಕ್ಕರು ಇಲ್ಲದಿದ್ದರೆ ಹೇಗೆ ಇದ್ದ ಕಡೆಯೇ ಇರುವುವೋ ಹಾಗೆಯೇ) ದೇಹದಲ್ಲಿ ಹೃದಯಸ್ಥಾನದಲ್ಲಿರುವ ಪದ್ಮಪತ್ರವು ಪ್ರಾಣವ್ಯಾಪಾರವು ನಿಲ್ಲುತ್ತಲೂ ತಾನೂ ವ್ಯಾಪಾರವನ್ನು ನಿಲ್ಲಿಸಿಬಿಡುವುದು.

(ಭುಶುಂಡೋಪಾಖ್ಯಾನ-ಸರ್ಗ ೨೪ ನೋಡಿ. ಅಲ್ಲಿಯೇ ಸರ್ಗ ೨೫-ಶ್ಲೋ-೨೪ರ ಮೇಲಿನ ವ್ಯಾಖ್ಯೆಯಲ್ಲಿ ತಾತ್ಪರ್ಯ ಪ್ರಕಾಶಕಾರರು ಹೇಳಿರುವ "ಇಂದ್ರಿಯಾಣಾಂ ವಿಷಯ ಪ್ರವೇಶೋಪಸರ್ಪಣಂ ಸ್ಪಂದಃ ತದುಪಭೋಗಶ್ಚ ಆನಂದಃ" ಎಂಬ ವಾಕ್ಯವನ್ನು ಚಿಂತಿಸಿ, ಸ್ಪಂದಪ್ರತಿಯೋಗಿಯು ಪ್ರಮೋಷ.)

೨೫. ಹೃತ್ಪದ್ಮವು ವ್ಯಾಪಾರವನ್ನು ಮಾಡದೆ ಹೋಗಲು, ಈ ಪ್ರಾಣಗಳೆಲ್ಲವೂ ಶಾಂತವಾಗುವುವು. ಬೀಸಣಿಗೆಯಿದ್ದರೂ ಬೀಸದಿದ್ದರೆ ಗಾಳಿಯು ಬರುವುದುಂಟೇನು ?

(ಪ್ರಾಣಾಃ ಎಂದು ಬಹುವಚನವನ್ನು ಹೇಳಿದ್ದರೂ ಪ್ರಾಣವು ಐದು ವಿಧವಾಗಿ ವ್ಯಾಪಾರ ಮಾಡಿ ಭಿನ್ನನಾಮಗಳನ್ನು ಪಡೆದಿದ್ದರೂ, ಪ್ರಾಣವು ಒಂದೇ ಒಂದು ; ಬೇರೆ ಬೇರೆಯಲ್ಲ. ಇದೇ ಪ್ರಕರಣ ಸರ್ಗ ೨೪-ಶ್ಲೋಕ ೨೫-೨೬.)

(ಬ್ರಹ್ಮಸೂತ್ರ-ಶಾಂಕರಭಾಷ್ಯ-ಅಧ್ಯಾಯ-೩ ಪಾದ ೧ ನೋಡಿ.)

೨೬. ಬಿರುಗಾಳಿಯು ಬೀಸುತ್ತಿದ್ದು ನಿಂತು ಹೋಗಲು, ಎದ್ದಿದ್ದ ಧೂಳೆಲ್ಲವೂ ಅಡಗಿ ಹೋಗುವಂತೆ, ಪ್ರಾಣವು ಶಾಂತವಾಗಲು ಜೀವನು ಸಂಪೂರ್ಣವಾಗಿ ಮೂಕನಾಗುವನು.

ವಿರಜಂ ವಿಗತಾಧಾರಂ ಮನೋ ಹಿ ಶಿಷ್ಯತೇ ಮುನೇ ।
ಶಿಷ್ಟತ್ಯಾತ್ಮಪದಂ ಲಬ್ಧ್ವಾ ಜಲಾದಿತರುಬೀಜವತ್ ॥ ೨೭ ॥

ಇತಿ ವೈಕಲ್ಪಮಾಯಾತೈಃ ಕಾರಣೌಘೈಃ ಸಮಂತತಃ ।
ಪುರ್ಯಷ್ಟಕೇ ಶಮಂ ಯಾತೇ ದೇಹಃ ಪತತಿ ನಿಶ್ಚಲಃ ॥ ೨೮ ॥

ಚಿಚ್ಚೇತ್ಯ ಚೇತನಾನ್ಮೋಹಾತ್ಸ್ಪಂದಮಾಯಾಂತಿ ವಾಸನಾಃ ।
ತದೀರಿತಾ ಸ್ಮರತ್ಯಂತರನ್ಯದ್ವಿಸ್ಮರತಿ ಸ್ವಯಂ ॥ ೨೯ ॥

(ರೂಪೋಪಾಧಿವಿಲಯಾನ್ನಿರರ್ಗಲಂ ಪೂರ್ಣಃ, ನಾಮೋಪಾಧಿ ವಿಲಯಾತ್ ಮೂಕಶ್ಚಯಃ ಕಾರಣಾತ್ಮಾ ತದ್ಭಾವಂ ಯಾತಿ. ತಾ. ಪ್ರ)

೨೭. ವಿರಜವೂ, ಆಧಾರರಹಿತವೂ ಆಗಿ ಮನಸ್ಸು, ನೀರಲ್ಲಿ ಮುಳುಗಿರುವ ಬೀಜದಂತೆ, ಆತ್ಮಪದಡಲ್ಲಿ ನಿಲ್ಲುವುದು.

(ರಜೋಗುಣ ಪ್ರಧಾನ ಸ್ವಾಧಾರ ಪ್ರಾಣ-ಉಪರಮಾದೇವ ವಿರಜಂ, ವಿಗತಾಧಾರಂ ಚ, ಮನೋಽಪಿ ಸಹೈವ ಪ್ರಾಣೇನ ಕಾರಣಾತ್ಮಪದಂ ಲಬ್ಧ್ವಾ ತದ್ಭಾವೇನೈವ ಶಿಷ್ಯತಿ. ತಾ. ಪ್ರ.)

೨೮. ಹೀಗೆ ದೇಹದ ಇರುವಿಕೆಗೆ ಕಾರಣಗಳಾದ ಮನಃ ಪ್ರಾಣಗಳು ಸಂಪೂರ್ಣವಾಗಿ ವಿಕಲವಾಗಿ ಹೋಗಲು, ಪುರ್ಯಷ್ಟಕವು ಶಾಂತವಾಗಲು, ದೇಹವು ಚಲನವಿಲ್ಲದೆ ಬಿದ್ದು ಹೋಗುವುದು.

೨೯. ಚಿತ್ತು ಮತ್ತೆ ಚೇತ್ಯ ಚೇತನ ಭಾವವನ್ನು ಹೊಂದಿ ಮೋಹಗೊಳ್ಳುತ್ತಲೂ ವಾಸನೆಗಳೆಲ್ಲವೂ ವ್ಯಾಪಾರ ಮಾಡಿಸಲು ಆರಂಭಿಸುವುವು. ಆ ವಾಸನೆಗಳಿಂದ ಪ್ರೇರಿತವಾಗಿ, (ತನ್ನ ಪೂರ್ವಸ್ಥಿತಿಯನ್ನು ಚಿತ್ತು) ನೆನೆದು ಕೊಳ್ಳುವುದು : ಮಿಕ್ಕೆಲ್ಲುದನ್ನೂ ಮರೆಯುವುದು.

(ಪೂರ್ವಸ್ಥಿತಿ= ಭೋಕ್ತೃ ಭೋಗ್ಯ ಸ್ಥಿತಿ)

ಹೃತ್ಪದ್ಮಪತ್ರಸ್ಫುರಣಾತ್ಸ್ಫುಟಂ ಪುರ್ಯಷ್ಟಕಂ ಭವೇತ್ ।
ಹೃತ್ಪದ್ಮಯಂತ್ರೇ ವಹನಾದ್ರುದ್ಧೇ ಪುರ್ಯಷ್ಟಕಂ ಕ್ಷಯಿ ॥ ೩೦ ॥

ದೇಹೇ ಪುರ್ಯಷ್ಟಕಂ ಯಾವದಸ್ತಿ ತಾವತ್ಸ ಜೀವತಿ ।
ಶಾಂತೇ ಪುರ್ಯಷ್ಟಕೇ ದೇಹೋ ಮೃತ ಇತ್ಯುಚ್ಯತೇ ದ್ವಿಜ ॥ ೩೧ ॥

ವಿರುದ್ಧಮಲ ಸಂಬೋಧಾಚ್ಛೇದಭೇದ ದಶಾವಶಾತ್ ।
ನ ಪ್ರಸ್ಫುರತಿ ಹೃತ್ಪದ್ಮಯಂತ್ರಮಭ್ಯಂತರೇ ಯದಾ ॥ ೩೨ ॥

ತದಾ ಪುರ್ಯಷ್ಟಕಂ ಶಾಂತಿಮುಪೈತಿ ಗಗನೇ ಶನೈಃ ।
ಸಂರೋಧಿತೇ ವಾತಯಂತ್ರೇ ಯಥಾ ಪವನ ಸಂತತಿಃ ॥ ೩೩ ॥

---

೩೦. ಹೃತ್ಪದ್ಮಪತ್ರವು ಸ್ಫುರಣವಾಗುತ್ತಲೂ ಪುರ್ಯಷ್ಟಕವು ಸ್ಫುಟವಾಗುವುದು. ಹೃತ್ಪದ್ಮಯಂತ್ರವು ಕೆಲಸಮಾಡದಂತೆ ನಿರುದ್ಧವಾದರೆ ಪುರ್ಯಷ್ಟಕವು ಕ್ಷಯವಾಗುವುದು.

(ಭೂತಾಂತಃಕರಣ ಪ್ರಾಣ ಜ್ಞಾನಕರ್ಮೇಂದ್ರಿಯೈರ್ಯುತಂ । ಅವಿದ್ಯಾ ಕಾಮುಕರ್ಮಾಖ್ಯಂ ಲಿಂಗಂ ಪುರ್ಯಷ್ಟಕಂ ವಿದುಃ ॥.)

೩೧. ಎಲೈ ಬ್ರಾಹ್ಮಣನೆ, ಈ ಪುರ್ಯಷ್ಟಕವು ದೇಹದಲ್ಲಿ ಇರುವ ವರೆಗೂ ಪ್ರಾಣಿಯು ಬದುಕಿರುವುದು. ಈ ಪುರ್ಯಷ್ಟಕವು ಶಾಂತವಾಗಲು ದೇಹವು ಮೃತವಾಗುವುದು.

೩೨-೩೩. (ವಾತಪಿತ್ತ ಕಫಗಳು, ರಾಗದ್ವೇಷಾದಿಗಳು) ಎಂಬ ಮಲಗಳು ಪ್ರಕೋಪದಿಂದಲೂ, (ಶಸ್ತ್ರಾದಿಗಳಿಂದ ಆದ) ಛೇದಭೇದಗಳಿಂದಲೂ, ವಯಃ ಪರಿಣಾಮ ರೂಪವಾದ ವಾರ್ಧಕ್ಯಾದಿ ದಶೆಗಳಿಂದಲೂ, ದೇಹದಲ್ಲಿರುವ ಹೃತ್ಪದ್ಮಯಂತ್ರವು, ವ್ಯಾಪಾರ ವರ್ಜಿತವಾಗಲು, ವಾತ ಯಂತ್ರವನ್ನು ನಿಲ್ಲಿಸಲು ಗಾಳಿಯು ಅಡಗಿ ಹೋಗುವಂತೆ, ಪುರ್ಯಷ್ಟಕವೂ ಶಾಂತವಾಗುವುದು.

ಸ್ವಸಂವಿತ್ತಿವಶಾಜ್ಜೀವೋ ವೈವಶ್ಯಮುಪಗಚ್ಛತಿ ।
ಪದ್ಮಯಂತ್ರಂ ಶರೀರಸ್ಥಂ ಪ್ರವಾಹಂ ಯಾತಿ ನಿತ್ಯದಾ ॥ ೩೪ ॥

ವಾಸನಾ ವಿಮಲಾ ಯೇಷಾಂ ಹೃದಯಾನ್ನಾಪಸರ್ಪತಿ ।
ಸ್ಥಿರೈಕರೂಪ ಜೀವಾಸ್ತೇ ಜೀವನ್ಮುಕ್ತಾಶ್ಚಿರಾಯುಷಃ ॥ ೩೫ ॥

ಸಂರುದ್ಧೇ ಪದ್ಮಯಂತ್ರೇ ಹಿ ಪ್ರಾಣೇ ಶಾಂತಿ ಮುಪಾಗತೇ ।
ದೇಹಃ ಪತತ್ಯಧೈರ್ಯೋಽಯಂ ಕಾಷ್ಠಲೋಷ್ಟಸಮಃ ಕ್ಷಿತೌ ॥ ೩೬ ॥

ಯಥೈವ ವ್ಯೋಮಮರುತಿ ಲೀನಂ ಪುರ್ಯಷ್ಟಕಂ ಭವೇತ್ ।
ತಥೈವ ತತ್ರೈವ ತದಾ ಲಯಮೇತಿ ಮನೋ ಮುನೇ ॥ ೩೭ ॥

(ವಾತಯಂತ್ರೇ ವ್ಯಜನಾದೌ– ತಾ. ಪ್ರ. ವಾತಯಂತ್ರ ಎಂಬುದನ್ನು ಬೀಸಣಿಗೆ ಎನ್ನುವುದಕ್ಕಿಂತ ತಿದಿ ಎಂದರೆ ಚೆನ್ನ, ಘಟೀ ಯಂತ್ರದಂತೆ ಇನ್ನು ಯಾವುದಾದರೂ ವಾತಯಂತ್ರವಿತ್ತೋ ?.)

೩೪. ಜೀವನು ಸ್ವಸಂಕಲ್ಪಬದ್ಧನಾಗಿ ವಿವಶನಾಗುವನು. (ಹೃತ್) ಪದ್ಮ ಯಂತ್ರವು ಶರೀರದಲ್ಲಿ ಯಾವಾಗಲೂ ಕೆಲಸ ಮಾಡುತ್ತಲೇ ಇರುವುದು.

೩೫. ಯಾರ ಮನಸ್ಸಿನಲ್ಲಿ ನಿರ್ಮಲವಾದ ವಾಸನೆಯು ನೆಲೆಯಾಗಿರುವುದೋ ಅಂಥವರು ಸ್ಥಿರವಾಗಿ ಏಕರೂಪ ಜೀವರಾಗಿ, ಜೀವನ್ಮುಕ್ತರಾಗಿ, ಬಹು ಕಾಲ ಬದುಕುವರು.

೩೬. ಪದ್ಮ ಯಂತ್ರವನ್ನು ತಡೆದು ಅದರ ವ್ಯಾಪಾರವನ್ನು ನಿಲ್ಲಿಸುವುದೇ ಆದರೆ, ಪ್ರಾಣವು ಶಾಂತವಾಗುವುದು. ಹಾಗೆ ಪ್ರಾಣವು ಶಾಂತವಾಗಲು, ದೇಹವು ಕಾಷ್ಠದಂತೆ ಮಣ್ಣಿನ ಮುದ್ದೆಯಂತೆ, ನೆಲದಲ್ಲಿ ಬಿದ್ದುಹೋಗುವುದು.

೩೭. ಆಕಾಶದಲ್ಲಿರುವ ಗಾಳಿಯಲ್ಲಿ ಪುರ್ಯಷ್ಟಕವು ಲೀನವಾಗಲು, ಆಕೂಡಲೇ ಅಲ್ಲಿಯೇ, ಹಾಗೆಯೇ ಮನಸ್ಸೂ ಲಯವಾಗುವುದು.

ಸುಚಿರಾಭ್ಯಸ್ತಭಾವಂ ತು ವಾಸನಾಖಚಿತಂ ಮನಃ ।
ಯತ್ರ ತತ್ರ ಭ್ರಮತ್ಸ್ವರ್ಗ ನರಕಾದಿ ಪ್ರಪಶ್ಯತಿ ॥ ೩೮ ॥

ಶರೀರಂ ಶವತಾಮೇತಿ ಮನೋ ಮಾರುತವರ್ಜಿತಂ ।
ಗತೇ ಗೃಹಜನೇ ದೂರಂ ಗೃಹಂ ಸಂಶೂನ್ಯತಾಮಿವ ॥ ೩೯ ॥

ಸರ್ವಗಾ ಚಿಚ್ಚೇತನತೋ ಜೀವೀಭೂಯ ಮನಃ ಸ್ಥಿತಾ ।
ಪುರ್ಯಷ್ಟಕವಪುರ್ಭೂತ್ವಾ ಸಾತಿವಾಹಿಕದೇಹಿನೀ ॥ ೪೦ ॥

---

೩೮. ಬಹುಕಾಲದಿಂದ ಅಭ್ಯಾಸ ಮಾಡಿಕೊಂಡಿರುವ ತನ್ನ ತನ್ನ ಭಾವಾನುಗುಣವಾಗಿ ಮನಸ್ಸಿನ ವಾಸನೆಯು ದೃಢವಾಗಿರುವುದು. ಆ ದೃಢ ವಾಸನಾನುಸಾರವಾಗಿ ಜೀವವು ಅಲ್ಲಿ ಇಲ್ಲಿ ಅಲೆಯುತ್ತ ಸ್ವರ್ಗ ನರಕಾದಿಗಳನ್ನು ಕಾಣುವುದು.

(ಹಿಂದಿನ ಶ್ಲೋಕದಲ್ಲಿ ಮನಃ ಲಯಮೇತಿ ಎಂದು ಹೇಳಿ ಇಲ್ಲಿ ಮತ್ತೆ ಮನಃ ಪ್ರಪಶ್ಯತಿ ಎಂದು ಹೇಳಿರುವುದರಿಂದ ಅಲ್ಲಿ ಮನಸ್ಸು ಲಯವಾಗುವುದು ಎಂದು ಹೇಳಿ ಎರಡನೆಯ ಶ್ಲೋಕದಲ್ಲಿ ಜೀವನು ನೋಡುವನು ಎಂದು ಹೇಳಿದೆ.)

"ಏವಂ ಲೀನಸ್ಯ ಮನಸಃ ಪುನಃ ಸ್ವರ್ಗನರಕಾದಿ ಭೋಜಕಾದೃಷ್ಟ ಪ್ರಬೋಧಿತಸ್ಯ ಹಾರ್ದಾಕಾಶೇ ಏವ ಚಕ್ಷುಷೋ ವಾ ಮೂರ್ಧ್ನೋ ವಾ ಅನ್ಯೇಭ್ಯೋ ವಾ ಶರೀರ ದೇಶೇಭ್ಯೋ ನಿರ್ಗಮನ ಯಮಲೋಕಾದಿ ಗಮನ ಸ್ವರ್ಗ ನರಕ ಭೋಗಾದಿಕಂ ಸ್ವಸಂಕಲ್ಪೇನೈವನತು ಬಹಿಃ ಸ್ವರ್ಗಾದಯೋ ನಾಮಾನ್ಯೇ ಸಂಶೀತ್ಯಾಶಯೇನಾಹ." ತಾ. ಪ್ರ.)

(ಹಿಂದೆ ಲೀಲೋಪಾಖ್ಯಾನದಲ್ಲಿ ಹೇಳಿರುವುದನ್ನು ಸ್ಮರಿಸಿಕೊಳ್ಳಿ.)

೩೯. ಮನೆಯವರೆಲ್ಲರೂ ಹೊರಟು ಹೋಗಿರುವಾಗ ಮನೆಯು ಹೇಗೆ ಶೂನ್ಯವಾಗಿರುವುದೋ ಹಾಗೆಯೇ ಮನಃ ಪ್ರಾಣಗಳು ಇಲ್ಲದ ದೇಹವು ಹೆಣವಾಗುವುದು.

೪೦. ಸರ್ವಗತವಾಗಿರುವ ಚಿತ್ತು ಚೇತನ ಸ್ವರೂಪವಾಗಿ, ಜೀವನಾಗಿ ಮನಸ್ಸನ್ನು ಪಡೆಯುವುದು. ಪುರ್ಯಷ್ಟಕವನ್ನು ಕಟ್ಟಿಕೊಂಡು ಮತ್ತೆ ದೇಹಿಯಾಗುವುದು, ಅದರಲ್ಲಿ ಆತಿವಾಹಿಕ ದೇಹವನ್ನೂ ಪಡೆಯುವುದು.

ತನ್ಮಾತ್ರಪಂಚಕಂ ಚಿತ್ತಂ ಕ್ರೋಡೀಕೃತ್ಯ ವ್ಯವಸ್ಥಿತಾ ।
ಸ್ವಪ್ನಭ್ರಮವದಾಕಾರಂ ಭಾವಾತ್ಸ್ಥೂಲಂ ಪ್ರಪಶ್ಯತಿ ॥ ೪೧ ॥

ದೃಢಭಾವನಯಾ ಪಶ್ಚಾತ್ತತ್ರೈವ ರಸಶಾಲಿನೀ ।
ಆತಿವಾಹಿಕ ದೇಹತ್ವಂ ವಿಸ್ಮರತ್ಯಖಿಲಂ ಕ್ಷಣಾತ್ ॥ ೪೨ ॥

ಅಸತ್ಯೇವ ಶರೀರೇಸ್ಮಿನ್ ಕೃತಕೃತ್ರಿಮಭಾವನಾ ।
ನಯತ್ಯಸತ್ಯ ಸತ್ಯತ್ವಂ ಸತ್ಯಂ ಚಾಸತ್ಯತಾಮಪಿ ॥ ೪೩ ॥

("ಅನೇನ ಜೀವೇನಾತ್ಮನಾನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ" ಇತಿ ಶ್ರುತಿಃ. –ತಾ. ಪ್ರ.)

೪೧. ಆ ಚಿತ್ತು ಹಾಗೆ ಮನಸ್ಸು, ಆತಿವಾಹಿಕದೇಹವನ್ನು ಪಡೆದುಕೊಂಡು, ತನ್ಮಾತ್ರ ಪಂಚಕಗಳ ಸಂಘಾತ ರೂಪವಾಗಿರುವ ಚಿತ್ತವನ್ನು ಸಂಕಲ್ಪದಿಂದಲೇ ಕಟ್ಟಿಕೊಂಡು, ಸ್ವಪ್ನ, ಭ್ರಾಂತಿ, ಇವುಗಳಂತಿರುವ ಭಾವದಿಂದಲೇ ಸ್ಥೂಲ ದೇಹವನ್ನೂ ಕಟ್ಟಿಕೊಳ್ಳುವುದು.

(ತನ್ಮಾತ್ರಾಣಿ ಸೂಕ್ಷ್ಮಭೂತಾನಿ, ತೇಷಾಂ ಪಂಚಾನಾಂ ಸಂಘಾತಾತ್ಮಕಂ ಚಿತ್ತಂ, ಆತಿವಾಹಿಕ ದೇಹಾಖ್ಯಂ, ಪುರ್ಯಷ್ಟಕಂ. –ತಾ. ಪ್ರ.)

೪೨ ಆ ಭಾವನೆಯು ದೃಢವಾಗುತ್ತಾ ಬಂದಹಾಗೆಲ್ಲ ಆತಿವಾಹಿಕ ದೇಹವೂ ಬಲವಾಗುತ್ತ ಬರುವುದು. ಆತಿವಾಹಿಕ ದೇಹವು ಬಲವಾಗುತ್ತಲೂ ಮಿಕ್ಕೆಲ್ಲವನ್ನೂ ಮರೆತುಬಿಡುವುದು.

(ರಸಶಾಲಿನೀ-ಅಹಂತಾ ಶಕ್ತಿಮತೀ.)

೪೩. ಹೀಗೆ ಇದುವರೆಗೆ ಇರದಿದ್ದ ಶರೀರವನ್ನು ಕಟ್ಟಿಕೊಂಡು ಅದರಲ್ಲಿ (ತಾನೆಂಬ ಭ್ರಾಂತಿರೂಪವಾದ) ಕೃತ್ರಿಮ ಭಾವನೆಯನ್ನು ಹೊಂದುವುದು. ಆಗ ಅಸತ್ತಾದ ಜಗತ್ತನ್ನು ಸತ್ಯವೆಂದೂ, ಸತ್ಯವಾದ ಬ್ರಹ್ಮವನ್ನು ಅಸತ್ಯವೆಂದೂ ಭಾವಿಸುವುದು.

ಸರ್ವಗಾ ಹಿ ಚಿದಂಶೇನ ಜೀವೀಭೂಯಾಭವನ್ಮನಃ ।
ಮನಃ ಪುರ್ಯಷ್ಟಕ ರಥಮಾಕ್ರಾಮತಿ ತತೋ ಜಗತ್ ॥ ೪೪ ॥

ಪುರ್ಯಷ್ಟಕಂ ಪ್ರಾಣಮಯಂ ದೇಹಮುತ್ಥಾಪಯತ್ಯಲಂ ।
ಹೃತ್ಸ್ಪಂದಿವೇತಾಲ ಇವ ಜೀವತೀತ್ಯುಚ್ಯತೇ ತದಾ ॥ ೪೫ ॥

ಕ್ಷೀಣೇ ಪುರ್ಯಷ್ಟಕೇ ಚಿತ್ತಂ ಯದಾ ವ್ಯೋಮನಿ ಲೀಯತೇ ।
ತದಾ ಸ್ಫುರತಿ ದೇಹೋಽಯಂ ಮೃತ ಇತ್ಯುಚ್ಯತೇಽಪಿ ಚ ॥ ೪೬ ॥

ಸ್ವಭಾವವಶತೋ ಜೀವೋ ವಿಸ್ಮೃತ್ಯಾ ಶಕ್ತಿಮೃಚ್ಛತಿ ।
ವೈವಶ್ಯಾತ್ಕಾಲ ವಶತಃ ಪರ್ಣಂ ಜರ್ಜರತಾಮಿವ ॥ ೪೭ ॥

---

೪೪. ಸರ್ವಗತವಾದ ಚಿತ್ತೇ ತನ್ನ ಒಂದು ಅಂಶದಿಂದ ಜೀವನಾಗಿ ಮನಸ್ತ್ವವನ್ನು ಪಡೆಯಿತು. ಮನಸ್ಸು ಪುರ್ಯಷ್ಟಕವೆಂಬ ರಥವನ್ನು ಏರುವುದು. ಅನಂತರ ಜಗತ್ತನ್ನು ಸೇರುವುದು.

(ಅಂಶೇನ= ಬುದ್ಧಿಪ್ರತಿಬಿಂಬಿತಾಂಶೇನ –ತಾ. ಪ್ರ.)

೪೫. ಪ್ರಾಣಮಯವಾದ ಪುರ್ಯಷ್ಟಕವು ಯಾವಾಗ ದೇಹವನ್ನೂ, ಹೃದಯ ವ್ಯಾಪಾರವೆಂಬ ಬೇತಾಲನನ್ನೂ ಮುಂದಿಟ್ಟುಕೊಂಡು, ವ್ಯಾಪಾರಮಾಡಿಸುವುದೋ ಆಗ ಆ ದೇಹವು ಬದುಕಿದೆ ಎನ್ನುವರು.

೪೬. ಪುರ್ಯಷ್ಟಕವು ಕ್ಷೀಣವಾಗಿ ಚಿತ್ತವು ಆಕಾಶದಲ್ಲಿ ಲೀನವಾದಾಗ ದೇಹವು ಮೃತವಾಯಿತು ಎನ್ನುವರು.

೪೭. ಜೀವವು (ಚಿತ್ತ) ಸ್ವಭಾವವನ್ನು ಪಡೆದುದರ ಫಲವಾಗಿ ತನ್ನ ಬ್ರಹ್ಮಭಾವವನ್ನು ಮರೆತು ಅಶಕ್ತವಾಗುವುದು. ಹೀಗೆ ಮರೆತುದರಿಂದಲೇ, ಎಲೆಯು ಕಾಲವಶವಾಗಿ ಹಣ್ಣಾಗುವ ಹಾಗೆ ಹಣ್ಣಾಗುವುದು.

ಜೀವಶಕ್ತ್ಯಾ ಪರಾಮೃಷ್ಟೇ ನಿರುದ್ಧೇ ಪದ್ಮಯಂತ್ರಕೇ ।
ಪ್ರಾಣೇ ಸಂರೋಧಮಾಯಾತೇ ಮ್ರಿಯತೇ ಮಾನವೋ ಮುನೇ || ೪೮ ||

ಯಥಾ ಜಾತಾನಿ ಜಾತಾನಿ ಚಾನ್ಯಾನ್ಯನ್ಯಾನಿ ಕಾಲತಃ ।
ವೃಕ್ಷಾತ್ಪರ್ಣಾನಿ ಶೀರ್ಯನ್ತೇ ಶರೀರಾಣಿ ತಥಾ ನೃಣಾಂ || ೪೯ ||

ಜಾಯಂತೇ ಚ ಮ್ರಿಯಂತೇ ಚ ಶರೀರಾಣಿ ಶರೀರಿಣಾಂ ।
ಪಾದಪಾನಾಂ ಚ ಪರ್ಣಾನಿ ಕಾ ತತ್ರ ಪರಿದೇವನಾ || ೫೦ ||

ಚಿದಂಬುಧೌ ಸ್ಫುರಂತ್ಯೇತಾ ದೇಹಬುದ್ಬುದ ಪಂಕ್ತಯಃ ।
ಇತಶ್ಚಾನ್ಯಾ ಇತಶ್ಚಾನ್ಯಾ ಏತಾಸ್ವಾಸ್ಥಾ ನ ಧೀಮತಃ || ೫೧ ||

ಸರ್ವಗಾಪಿ ಚಿದೇತಸ್ಮಿಂಶ್ಚೇತಸಿ ಪ್ರತಿಬಿಂಬತಿ ।
ಪದಾರ್ಥಮಂತರಾದತ್ತೇ ನಾನ್ಯೋಹಿ ಮುಕುರಾದೃತೇ || ೫೨ ||

---

೪೮. ತನ್ನ ಸ್ವಸ್ವರೂಪವನ್ನು ಮರೆತ ಚಿಚ್ಛಕ್ತಿಯು ಜೀವಶಕ್ತಿಯಾದಾಗ ಪದ್ಮಯಂತ್ರವು ನಿರುದ್ಧವಾಗಿ ಪ್ರಾಣವು ಶಾಂತವಾಗಲು, ಮಾನವನು ಮರಣವನ್ನು ಹೊಂದುವನು.

೪೯. ಕಾಲಕಾಲದಲ್ಲಿ ಮರದಲ್ಲಿ ಹುಟ್ಟುವ, ಹುಟ್ಟಿದ್ದ, ಎಲೆಗಳೆಲ್ಲವೂ ಹೇಗೆ ಜೀರ್ಣವಾಗಿ ಹಣ್ಣಾಗುವುವೋ ಹಾಗೆಯೇ ಮನುಷ್ಯರ ಶರೀರಗಳೂ ನಾಶವಾಗುವುವು.

೫೦. ಮರಗಳ ಎಲೆಗಳೂ ಹುಟ್ಟಿ ಹುಟ್ಟಿ ಉದುರುವುವು. ಮನುಷ್ಯರ ಶರೀರಗಳೂ ಹಾಗೆಯೇ ಹುಟ್ಟುವುವು: ಸಾಯುವುವು. ಇದಕ್ಕಾಗಿ ಅಳಬೇಕಾದುದೇನು ?

೫೧. ಚಿತ್ತೆಂಬ ಸಮುದ್ರದಲ್ಲಿ ದೇಹಪರಂಪರೆಗಳೆಂಬ ಗುಳ್ಳೆಗಳು ಸಾಲು ಸಾಲಾಗಿ ಏಳುತ್ತಿರುವುವು. ಅಲ್ಲಷ್ಟು, ಇಲ್ಲಷ್ಟು, ಏಳುತ್ತಲೇ ಇರುವ ಗುಳ್ಳೆಗಳಲ್ಲಿ ಧೀಮಂತನಾದವನಿಗೆ ಆಸ್ಥೆಯಿರುವುದಿಲ್ಲ.

೫೨. ಚಿತ್ತು ಎಲ್ಲೆಲ್ಲಿಯೂ ಇರುವುದು. ಆದರೂ ಬುದ್ಧಿಯಲ್ಲಿ ಪ್ರತಿಬಿಂಬಿಸಿ ಜೀವನಾಗುವುದು. ಪ್ರತಿಬಿಂಬವು ಬೇರೊಂದು ಪದಾರ್ಥದಂತೆ

ಚಿದಮಲನಭಸಿ ಪ್ರಯತ್ನರೂಪಾಃ ಪರಿವಿತತೇ ತದತನ್ಮಯಾಃ ಸ್ಫುರಂತಿ ।
ಕಲಕಲಮುಖರಾಃ ಸ್ಫುಟಾಭಿರಾಮಾ ವಿವಿಧಶರೀರ ವಿಮೋಹತಾಪನಾಯ ॥ ೫೩ ॥

ಇತ್ಯಾರ್ಷೆ ವಾಸಿಷ್ಠರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ "ದೇಹಪಾತವಿಚಾರೋ" ನಾಮ ದ್ವಾತ್ರಿಂಶಃ ಸರ್ಗಃ.

ತೋರಿದರೂ ಅದು ಎಂದಿಗೂ ಬೇರೆಯಲ್ಲ ಕನ್ನಡಿಯಲ್ಲಿ ತೋರಿದ ಪ್ರತಿಬಿಂಬವು ಕನ್ನಡಿಗಿಂತ ಬೇರೆಯೇನು ?

೫೩. ಎಲ್ಲೆಲ್ಲಿಯೂ ತುಂಬಿ ತಾನೇ ತಾನಾಗಿ ಪರಿಪೂರ್ಣವಾಗಿರುವ ಚಿತ್ತೆಂಬ ನಿರ್ಮಲಾಕಾಶದಲ್ಲಿ ಪೂರ್ವಜನ್ಮಗಳ ಶುಭಾಶುಭ ಕರ್ಮಗಳ ಪರಿಣಾಮ ರೂಪವಾದ ಜೀವ ಜಗತ್ತುಗಳು ಎದ್ದೆದ್ದು ಕಾಣುವುವು. ಅವುಗಳಲ್ಲೆಲ್ಲಾ ಸುಖ ದುಃಖ ಫಲಾನುಭವದಿಂದ ಪ್ರಕಟವಾಗುವ ನಗು ಅಳುಗಳು, ತಾವೇ ತಾವಾಗಿ ತುಂಬಿರುವುವು. ಆಪಾತ ರಮಣೀಯಗಳಾಗಿ ತೋರುವ ನಾನಾವಿಧ ಶರೀರ ಜನನ ಮರಣಾದಿ ಭ್ರಾಂತಿಗಳಿಂದ ಆತ್ಮನನ್ನು ಮೋಹಗೊಳಿಸಿ ಸಂತಾಪ ಪಡಿಸುತ್ತಿರುವುವು.

(ಪ್ರಯತ್ನರೂಪಾಃ ಪೂರ್ವತನ ಸ್ವೀಯ ಶುಭಾಶುಭ ಪ್ರಯತ್ನ ಪರಿಣತಿ ರೂಪಾಃ । ತತ್, ಅತತ್, ಮಯಾಃ-ಚಿತ್, ಅಚಿತ್ ಪ್ರಚುರಜೀವ ಜಗದ್ರೂಪಾಃ ಕಲ್ಪನಾಃ । ಕಲಕಲ ಮುಖರಾಃ ಸುಖದುಃಖ ಫಲಭೋಗೇ ಹಾಸ್ಯರೋದನಾದಿ ಕಲಕಲೈಃ ಕೋಲಾಹಲೈಃ ಮುಖರಾಃ । ಸ್ಫುಟಾಭಿರಾಮಾಃ ಆಪಾತ ರಮಣೀಯಾಃ । ವಿವಿಧೈಶ್ಶರೀರೈಃ ಜನನಮರಣಾದಿ ಭ್ರಾಂತ್ಯಾ ಆತ್ಮವಿಮೋಹತಾಪನಾಯ ಸ್ಫುರಂತಿ ಪ್ರತಿಭಾಸಂತೇ- ತಾ. ಪ್ರ.)

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ನಿರ್ವಾಣ ಪ್ರಕರಣದಲ್ಲಿ "ದೇಹಪಾತ ವಿಚಾರವೆಂಬ" ಮೂವತ್ತೆರಡನೆಯ ಸರ್ಗ.

ತ್ರಯಸ್ತ್ರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಚಂದ್ರಾರ್ಧಶೇಖರಧರ ಚಿತ್ತತ್ವಸ್ಯ ಮಹಾತ್ಮನಃ ।
ಅನಂತಸ್ಯೈಕರೂಪಸ್ಯ ದ್ವಿತ್ವಂ ಕಥ ಮುಪಾಗತಂ ॥ ೧ ॥

ಕಥಂ ಚ ತನ್ಮಹಾದೇವ ರೂಢಂ ಪರ್ಯಾಯ ಸಂಕುಲಂ ।
ಭವೇದ್ದುಃಖೋಪಘಾತಾಯ ಪ್ರಜ್ಞಯಾ ವಿನಿವಾರಿತಂ ॥ ೨ ॥

ಮೂವತ್ತಮೂರನೆಯ ಸರ್ಗ

ಶ್ರೀ ವಸಿಷ್ಠನು ಹೇಳಿದನು :—

೧. ಚಂದ್ರಾರ್ಧವನ್ನು ಮುಡಿದಿರುವ ಮಹಾದೇವನೆ, ಚಿತ್ ತತ್ತ್ವವು ಬಲು ದೊಡ್ಡದು. ಅನಂತವೂ ಏಕರೂಪವೂ ಆದುದು. ಒಂದೇ ಒಂದಾಗಿದ್ದ ಅದು ಹೇಗೆ ಎರಡಾಯಿತು ?

(ಅನಂತಸ್ಯ= ದಿಕ್ಕಾಲವಸ್ತುಕೃತಪರಿಚ್ಛೇದ ಶೂನ್ಯಸ್ಯ । ಏಕರೂಪಸ್ಯ= ಸಜಾತೀಯ ವಿಜಾತೀಯ ಸ್ವಗತಭೇದಶೂನ್ಯಸ್ಯ । ....ಸಜಾತೀಯ ಜೀವರೂಪಂ ವಿಜಾತೀಯ ಜಗದ್ರೂಪಂ ಚ ದ್ವಿತ್ವಂ ಕಥಮುಪಾಗತಂ । (ಕಿಂ ಸ್ವತಃ ಉತ ಪರತಃ । ನಾದ್ಯಃ, ಅವಿಕಾರತ್ವಾದನವಯವತ್ವಾಚ್ಚ । ನಾಪಿ ದ್ವಿತೀಯಃ, ದ್ವಿತೀಯಸ್ಯೈವ ಅಪ್ರಸಿದ್ಧೇರಿತಿಭಾವಃ— ತಾ. ಪ್ರ.)

೨. ಹೀಗೆ ನಾನಾ ವಿಧವಾದ ಬಂಧನಗಳಿಂದ ದೃಢವಾಗಿ ಜೀವಭಾವ ಬದ್ಧವಾಗಿರುವ ಚಿತ್ತು ಪ್ರಜ್ಞೆಯನ್ನು ಪಡೆದ ಮಾತ್ರದಿಂದಲೇ ಮತ್ತೆ ದುಃಖ ಗಳನ್ನೆಲ್ಲ ಕಳೆದುಕೊಳ್ಳುವುದಾದರೂ ಹೇಗೆ ?

ಶ್ರೀ ಈಶ್ವರ ಉವಾಚ :—

ಸರ್ವಶಕ್ತಿ ಹಿ ತದ್ಬ್ರಹ್ಮ ಸದೇಕಂ ವಿದ್ಯತೇ ಯದಾ ।
ತದಾ ನಿರ್ಮೂಲ ಏವಾಯಂ ದ್ವಿತ್ವೈಕತ್ವಕಲೋದಯಃ ॥ ೩ ॥

ಸತಿ ದ್ವಿತ್ವೇ ಕಿಲೈಕಂ ಸ್ಯಾತ್ಸತ್ಯೇಕತ್ವೇ ದ್ವಿರೂಪತಾ ।
ಕಲೇ ದ್ವೇ ಅಪಿ ಚಿದ್ರೂಪೇ ಚಿದ್ರೂಪತ್ವಾತ್ತದಪ್ಯಸತ್ ॥ ೪ ॥

ಏಕಾಭಾವಾದಭಾವೋತ್ರ ಏಕತ್ವದ್ವಿತ್ವಯೋರ್ದ್ವಯೋಃ ।
ಏಕಂ ವಿನಾ ನ ದ್ವಿತೀಯಂ ನ ದ್ವಿತೀಯಂ ವಿನೈಕತಾ ॥ ೫ ॥

ಕಾರ್ಯಕಾರಣಯೋರೇಕಸಾರತ್ವಾ ದೇಕರೂಪತಾ ।
ಫಲಾಂತಸ್ಯಾಪಿ ಬೀಜಾದೇರ್ವಿಕಾರಾದಿಹ ಕಲ್ಪನಾ ॥ ೬ ॥

ಶ್ರೀ ಈಶ್ವರನು ಹೇಳಿದನು :—

೩. ಸರ್ವಶಕ್ತಿಮತ್ತಾದ ಆ ಬ್ರಹ್ಮವು (ಒಂದೇ) ಸತ್ಸ್ವರೂಪವು. ಅದೊಂದೇ ಒಂದಾಗಿರುವವರೆಗೆ ದ್ವಿತ್ವ, ಏಕತ್ವ, ಎಂಬ ಭಾವನೆಗಳಿಗೆ ಕಾರಣವೇ ಇರುವುದಿಲ್ಲ.

೪. ಎರಡನೆಯದು ಇದ್ದರೆ ತಾನೇ ಮೊದಲನೆಯದು ಬರುವುದು ? ಒಂದು ಎನ್ನಿಸಿಕೊಳ್ಳುವುದು (ಪ್ರತ್ಯೇಕವಾಗಿ ಒಂದು) ಇದ್ದರೆ ಎರಡನೆಯದೂ ಒಂದು ಬಂದೀತು. ಒಂದರಲ್ಲೇ ಚಿದಂಶಗಳಾದ ಎರಡು ಇವೆ ಎಂದರೆ, ಎರಡೂ ಚಿದ್ರೂಪ ಎನ್ನುವುದರಿಂದಲೇ ಅಂಶಗಳೆರಡು ಎಂಬುದು ಅಸಿದ್ಧವಾಗುವುದು.

೫. ಒಂದು ಎನ್ನುವುದೂ ಕೂಡ ಪ್ರತ್ಯೇಕವಾಗಿರದಿರಲು ಏಕತ್ವ, ದ್ವಿತ್ವ, ಎರಡಕ್ಕೂ ಅಭಾವವು ಬಂತು. ಏಕವೇ ಇಲ್ಲದಿರಲು ದ್ವಿತೀಯವೆನ್ನುವುದೇನನ್ನು ? ದ್ವಿತೀಯವಿಲ್ಲದಿರಲು ಏಕತ್ವವೆಲ್ಲಿಯದು ?

೬. ಕಾರ್ಯಕಾರಣಗಳೆರಡೂ ಏಕಸಾರಗಳು ಆದರಿಂದ ಅವುಗಳಿಗೆ ಏಕರೂಪತೆಯು. ಫಲವೇ ಕೊನೆಯಾಗುಳ್ಳ ಬೀಜ ಮೊದಲಾದವುಗಳಲ್ಲಿ ವಿಕಾರವಾಗುವುದರಿಂದ ಅಲ್ಲಿ ಬೇರೆಬೇರೆಯೆನ್ನಲು ಕಲ್ಪನೆಗೆ ಅವಕಾಶವುಂಟು.

ಚಿತ್ತ್ವಂ ಚೇತ್ಯವಿಕಲ್ಪೇನ ಸ್ವಯಂ ಸ್ಫುರತಿ ತನ್ಮಯಂ ।
ವಿಕಾರಾದಿ ತದೇವಾಂತಸ್ತತ್ಸಾರತ್ವಾನ್ನ ಭಿದ್ಯತೇ ॥ ೭ ॥

ವಿಕಾರಾದಿವಿಕಲ್ಪೋಽಯಂ ತತ ಉತ್ಥಾಯ ವಸ್ತುಷು ।
ಯಾತಿ ಸಾರ್ಥಕತಾಂ ನಾನಾಕಾರ್ಯಕಾರಣತಾದಿಭಿಃ ॥ ೮ ॥

ತರಂಗಾಃ ಸಲಿಲೇ ಯೇಽಪಿ ತೋಯೇ ಶೈಲಸ್ಯ ತೇ ಸಮಾಃ ।
ಶಶಶೃಂಗಸಮಃ ಸೋಽಪಿ ಯಸ್ಯ ಸತ್ಯಃ ಶಶಾಂಕುರಃ ॥ ೯ ॥

---

೭. ಚಿತ್ತ್ವವೇ ಚೇತ್ಯವೆಂಬ ವಿಕಲ್ಪವಾಗಿ ಸ್ಫುರಿಸುವುದು. ಚಿನ್ಮಯವಾಗಿರುವ ವಿಕಾರಗಳೆಲ್ಲವೂ ಆ ಚಿತ್ತಿನಲ್ಲಿಯೇ ಆಗುವುವು. ಹೀಗೆ ಅವೆಲ್ಲವೂ ಚಿತ್ಕಾರ್ಯಗಳೇ ಆದುದರಿಂದ ಅವು ಬೇರೆಯಲ್ಲ.

೮. ವಿಕಾರಾದಿ ವಿಕಲ್ಪವೇ ಆ ಚಿತ್ತಿನಿಂದ ಹುಟ್ಟಿ ವಸ್ತು ರೂಪವನ್ನು ಹೊಂದಿ, ಕಾರ್ಯಕಾರಣಗಳೆಂಬ ನಾನಾ ರೂಪಗಳನ್ನು ಹೊಂದಿ ಭೋಗ ಸಾಧನವಾಗುವುದು.

(ವಿಕಾರಾದಿ-ಅಯಂಷಡ್ಭಾವವಿಕಾರಲಕ್ಷಣಃ ; ತದಾಶ್ರಯ ಘಟಾದಿಲಕ್ಷಣಶ್ಚ ವಿಕಲ್ಪಃ. —ತಾ. ಪ್ರ.)

೯. ಯಾವನಿಗೆ ಮೊಲಗಳು ಕಚ್ಚಿ ಎಸೆಯುವ ಮೊಳಕೆಗಳೂ ಬಹ್ಮವೇ ಎಂದು ದೃಢವಾಗಿ ನಂಬಿಕೆಯಿರುವುದೋ ಅವನಿಗೆ, ನೀರಿನಲ್ಲಿ ಕಾಣುವ ಅಲೆಗಳೂ, ಪರ್ವತದ ಮೇಲೆ ಇರುವಂತೆ ಕಾಣುವ ನೀರಿನಲ್ಲಿ ತೋರುವ ಅಲೆಗಳೂ ಒಂದೇ ಆಗಿ ಆ ಪರ್ವತವೂ ಶಶಶೃಂಗದಂತೆಯೇ ಆಗಿ ತೋರುವುದು.

(ಇಲ್ಲಿ ನೀರಿನಲ್ಲಿ ಕಾಣುವ ಅಲೆಗಳು ವ್ಯಾವಹಾರಿಕ ಸತ್ಯವಾದರೂ ಪಾರಮಾರ್ಥಿಕ ಸತ್ಯವಲ್ಲ. ಪರ್ವತದ ಮೇಲೆ ಇರುವಂತೆ ಕಾಣುವ ನೀರಿನಲ್ಲಿ ತೋರುವ ಅಲೆಗಳು ಸ್ವಪ್ನದಂತೆ ಪ್ರಾತಿಭಾಸಿಕ ಸತ್ಯವಾದರೂ ವ್ಯಾವಹಾರಿಕ ಸತ್ಯವಲ್ಲ. ಬ್ರಹ್ಮವೊಂದೇ ಸತ್ಯ, ಮಿಕ್ಕದೆಲ್ಲವೂ ಮಿಥ್ಯಾ ಎಂಬ ಸಮ್ಯಗ್ಜ್ಞಾನವುಳ್ಳವನಿಗೆ ವ್ಯಾವಹಾ

ವಸ್ತುಬೋಧೋತ್ರ ಸಂಧತ್ತೇ ತತ್ರಾಲಂ ವಾಗ್ವಿಕಲ್ಪನೈಃ ।
ವ್ಯವಚ್ಛೇದಾದಿ ದುಶ್ಛೇದ್ಯಂ ವಚೋ ವಾಚ್ಯಾತ್ಕಿಲ ದ್ವಿಜ ॥ ೧೦ ॥

ಬ್ರಹ್ಮಣಃ ಸರ್ವಶಕ್ತಿತ್ವಂ ತತ್ತ್ವತೋ ನ ವಿಭಿದ್ಯತೇ ।
ತರಂಗಕಣಕಲ್ಲೋಲಜಲೌಘ ಇವ ವಾರಿಣಃ ॥ ೧೧ ॥

ಪುಷ್ಪಪಲ್ಲವಪತ್ರಾದಿ ಲತಾಯಾ ನೇತರದ್ಯಥಾ ।
ದ್ವಿತ್ವೈಕತ್ವಜಗತ್ತ್ವಾದಿ ತ್ವಂತ್ವಾಹಂತ್ವಂ ತಥಾ ಚಿತೇಃ ॥ ೧೨ ॥

ರಿಕ ಸತ್ಯವಾದರೂ ಪ್ರಾಗಭಾವ ಪ್ರಧ್ವಂಸಾಭಾವಗಳನ್ನುಳ್ಳ ಪರ್ವತವೂ ಅತ್ಯಂತಾಭಾವವಾದ ಶಶಶೃಂಗದಂತೆಯೇ ನಿಸ್ಸಾರವಾದುದು ಎಂದು ಭಾವ)

೧೦. ಅದು, ಇದು; ಎಂದು ವಾಕ್ಕಿನಿಂದ ಹೇಳುವಾಗ ಬೇರೆ ಬೇರೆಯಾಗಿ ತೋರುವ ಪದಾರ್ಥಗಳು ಬ್ರಹ್ಮವಸ್ತು ಬೋಧವಾದಾಗ ಒಂದೇ ಆಗಿ ತೋರುವುವು. ಆ ವಸ್ತುಬೋಧವು ಆಗಿದ್ದಾಗ ಅವೆಲ್ಲವೂ ಒಂದೇ ಎಂಬುದನ್ನು ಸಾವಿರಮಾತುಗಳಿಂದ ಹೇಳಿದರೂ ತಿಳಿಯುವುದಿಲ್ಲ.

೧೧. ಅಲೆಗಳು ತುಂತುರುಗಳು, ಸಣ್ಣ ಸಣ್ಣ ಅಲೆಗಳು, ಪ್ರವಾಹ, ಎಂದು ನಾನಾ ರೂಪವಾಗಿದ್ದರೂ ಅದೆಲ್ಲವೂ ನೀರೇ ಆಗಿರುವಂತೆ, ಸರ್ವಶಕ್ತಿ ಸಹಿತವಾದ ಬ್ರಹ್ಮದಲ್ಲಿ ನಾನಾಕಾರದ ದೃಶ್ಯವು ಕಂಡರೂ ಅದೆಲ್ಲಕ್ಕೂ ಆಶ್ರಯವಾದ ಬ್ರಹ್ಮವೊಂದೇ ಆದುದರಿಂದ ಅವೆಲ್ಲ ಬೇರೆ ಬೇರೆಯಲ್ಲ.

೧೨. ಪುಷ್ಪ, ಪಲ್ಲವ, ಪತ್ರ, ಇವೆಲ್ಲವೂ ಲತೆಯದೇ ಹೊರತು ಹೇಗೆ ಬೇರೆಯಲ್ಲವೋ ಹಾಗೆಯೇ ದ್ವಿತ್ವ, ಏಕತ್ವ, ಜಗತ್ತ್ವ, ತ್ವಂತ್ವ, ಅಹಂತ್ವ, ಮೊದಲಾದವೆಲ್ಲ ಚಿತ್ತಿನದೇ !

ದೇಶಕಾಲವಿಕಾರಾದಿಃ ಕೃತೋ ಭೇದಶ್ಚಿತಸ್ತು ಯಃ ।
ತಚ್ಚಿದೇತದಸತ್ಪ್ರೋಕ್ತಂ ನ ಪ್ರಶ್ನೋsತ್ರ ತವೋಚಿತಃ ॥ ೧೩ ॥

ದೇಶಕಾಲಕ್ರಿಯಾಸತ್ತಾನಿಯತ್ಯಾದ್ಯಾಶ್ಚ ಶಕ್ತಯಃ ।
ಚಿದಾತ್ಮಿಕಾ ಏವ ಚಿತಃ ಸತ್ವಾತ್ಸಂಪತಿತಾಃ ಸ್ವತಃ ॥ ೧೪ ॥

ಚಿತ್ತತ್ತ್ವಂ ಚಿತ್ತಚೇತ್ಯೇಹಾ ಚಿದ್ಬ್ರಹ್ಮಾದ್ಯಭಿಧಾ ಸ್ಮೃತಾ ।
ಯಥಾ ವೀಚ್ಯಾದ್ಯಭಿಧಾರ್ಹಂ ಸ್ಥಿತಮಂಬುತರಂಗಕಂ ॥ ೧೫ ॥

ಅಸಂಭವತ್ತರಂಗಸ್ಯ ಚಿದ್ವಿಲಾಸಮಹಾಂಬುಧೇಃ ।
ತರಂಗತ್ವಮಿವ ಯತ್ತತ್ತತ್ತಾವಚ್ಚೇತ್ಯಸಂಗಿತಾ ॥ ೧೬ ॥

---

೧೩. ದೇಶಕಾಲಗಳಿಂದ ಆದ ವಿಕಾರಗಳು, ಚಿತ್ತಿನಲ್ಲಿಯೇ ಕಾಣುವ ಭೇದಗಳು, ಆದರಿಂದ ಎಲ್ಲವೂ ಚಿತ್ತಿನ ಸತ್ತ್ವದಿಂದಲೇ ಹುಟ್ಟಿಬಂದವು.

೧೪. ದೇಶ, ಕಾಲ, ಕ್ರಿಯಾ, ಸತ್ತಾ, ನಿಯತಿ, ಮೊದಲಾದ ಶಕ್ತಿಗಳು ಎಲ್ಲವೂ ಚಿದಾತ್ಮಕಗಳೇ, ಎಲ್ಲವೂ ಚಿತ್ತಿನ ಸತ್ತ್ವದಿಂದಲೇ ಹುಟ್ಟಿಬಂದವು.

೧೫. ಚಿತ್ತವಾಗಿ. ಚೇತ್ಯವಾಗಿ, ಚೇತ್ಯವನ್ನು ಬಯಸುವ ಚಿತ್ತದ ಹಂಬಲಾಗಿ ತೋರಿಸಿಕೊಳ್ಳುವುದೂ ಚಿತ್ತೇ; ನೀರಿನ ಅಲೆಯು, ವೀಚಿ ಮೊದಲಾದ ಹೆಸರುಗಳನ್ನು ಹೊಂದುವಂತೆ, ಈ ಚಿತ್ತ, ಚೇತ್ಯ, ಈಹಾಗಳೆಂದೂ ಚಿತ್ತು, ಬ್ರಹ್ಮ, ಎಂದೂ ನಾನಾ ನಾಮಗಳಿಂದ ಶಾಸ್ತ್ರದಲ್ಲಿ ಹೇಳಿಸಿಕೊಳ್ಳುವುದೂ ಚಿತ್ತೇ!

(ಚಿತ್ತಂ, ಚೇತ್ಯಂ, ತದೀಹಾಶ್ಚತೇಷಾಂ ಸಮಾಹಾರಃ ಚಿತ್ತ ಚೇತ್ಯೇಹಾ ರೂಪಪ್ರಪಂಚ ಚಿತ್ತತ್ತ್ವಮೇವಃ ಏವಂ ಬ್ರಹ್ಮಾದಿ ಸ್ತಂಬ ಪರ್ಯಂತಾ ಅಭಿಧಾ ನಾಮ ಪ್ರಪಂಚೋsಪಿ ಚಿದೇವ ಸ್ಮೃತಾ ತಾ. ಪ್ರ.

೧೬. ಚಿದ್ವಿಲಾಸಮಹಾಂಬುಧಿಯಲ್ಲಿ ತರಂಗವೇಳುವುದೇ ಅಸಂಭವವು. ಅಲ್ಲಿ ತರಂಗವೆದ್ದಹಾಗೆ ತೋರುವಿಕೆಯು ಯಾವುದುಂಟೋ ಅದೇ ಚೇತ್ಯಸಂಬಂಧವು.

ತದೇತತ್ಪರಮಂ ಬ್ರಹ್ಮ ಸತ್ಯೇಶ್ವರಶಿವಾದಿಭಿಃ ।
ಶೂನ್ಯೈಕಪರಮಾತ್ಮಾದಿನಾಮಭಿಃ ಪರಿಗೀಯತೇ ॥ ೧೭ ॥

ಏವಂ ರೂಪಪದಾತೀತಂ ಯದ್ರೂಪಂ ಪರಮಾತ್ಮನಃ ।
ಯತ್ತು ನಾಮಾಹಮಮಲಂ ವಿಷಯೋ ನ ಗಿರಾಂ ಚ ಯತ್ ॥ ೧೮ ॥

ಯದಿದಂ ದೃಶ್ಯತೇ ತಸ್ಯಾಸ್ತಲ್ಲತಾಯಾ ಮಹಾಚಿತೇಃ ।
ಫಲಪಲ್ಲವಪುಷ್ಪಾದಿ ನ ಭಿನ್ನಂ ತನ್ಮಯಂ ಯತಃ ॥ ೧೯ ॥

ಮಹಾವಿದ್ಯೋಪನಯನಾಚ್ಚಿದ್ಭವತ್ಯಭಿಧಾ ಸತೀ ।
ಸಾ ಜೀವತ್ವೇನ ಬಾಹ್ಯತ್ವಂ ತದಾ ದ್ವೀನ್ದ್ವಿವ ಪಶ್ಯತಿ ॥ ೨೦ ॥

---

೧೭. ಇಂತಹ ನಿರ್ವಿಕಾರ ಬ್ರಹ್ಮವೇ ಸತ್ಯ, ಈಶ್ವರ, ಶಿವ, ಶೂನ್ಯ, ಏಕ, ಪರಮಾತ್ಮ, ಮುಂತಾದ ನಾಮಗಳಿಂದ ಹೊಗಳಿಸಿಕೊಳ್ಳುವುದು.

(ಶೂನ್ಯ ಪದೇನ ಅಸದ್ವಾ ಇದಮಗ್ರ ಆಸೀತ್ ಇತಿ ಶೃತಿಸ್ಥ ಮಸತ್ಪದಂ ಲಕ್ಷ್ಯತೇ ತಾ. ಪ್ರ.)

೧೮. ಹೀಗೆ (ಇಂದ್ರಿಯಾ ಗೋಚರವಾದ) ರೂಪವಲ್ಲದ ಪರಮಾತ್ಮನ ರೂಪವು ಯಾವುದುಂಟೋ, ಯಾವುದು ಅಹಂಪದ ವಾಚ್ಯವಾಗಿರುವುದೋ, ಯಾವುದು ವಾಕ್ಕಿಗೆ ವಿಷಯವಲ್ಲವೋ, ಅದೆಲ್ಲವೂ ಆ ಮಹಾಚಿತ್ತಿನದೇ !

೧೯. ದೃಶ್ಯಜಾಲವೆಲ್ಲವೂ ಆ ಚಿತ್ತಿನದೇ ! ಅದೇ ಲತೆಯ ಫಲಪತ್ರ ಪುಷ್ಪಾದಿ ಗಳಂತಿರುವ ಇದೆಲ್ಲವೂ ಚಿನ್ಮಯಗಳೇ ; ಆದುದರಿಂದ ಬೇರೆಯಲ್ಲ.

(ಬ್ರಹ್ಮ, ಜೀವ, ಜಗತ್ತುಗಳೆಲ್ಲವೂ ಚಿತ್ತೇ ಎಂದು ಭಾವ)

೨೦. ಯಾವಾಗ ಚಿತ್ತು ಮಹಾ-ಅವಿದ್ಯೆಯನ್ನು ಅಂಗೀಕರಿಸುವುದೋ ಆಗ ಅದು ಅಭಿಧಾ ಆಗುವುದು ಅಭಿಧಾ ಆಗಿ ಜೀವತ್ವದಿಂದ ಬೇರೆಯಾದಂತಾಗಿ ದ್ವಿಚಂದ್ರರನ್ನು ಕಾಣುವಂತೆ ಜಗತ್ತನ್ನು ನೋಡುವುದು.

ಸ್ವಯಮನ್ಯೈವಮಸ್ಮೀತಿ ಭಾವಯಿತ್ವಾ ಸ್ವಭಾವತಃ ।
ಅನ್ಯತಾಮಿವ ಸಂಯಾತಿ ಸ್ವವಿಕಲ್ಪಾತ್ಮಿಕಾಂ ಸ್ವತಃ ॥ ೨೧ ॥

ಅಕಲಂಕೇನ ರೂಪೇಣ ರೂಪಂ ಯತ್ಸಕಲಂಕವತ್ ।
ಸಂಸಾರಸರಿತಂ ಪ್ರಾಪ್ಯ ಚೇತನೇನೈವ ಚೇತತಿ ॥ ೨೨ ॥

ಚಿದ್ವಪುಃ ಸ್ವಯಮೇತೇನ ಹ್ಯೇಕತಾಮೇತಿ ಜೀವತಾಂ ।
ಚಿತ್ತತ್ತ್ವಸ್ಯಾವಭಾಸೇನ ಜೀವೋ ಜೀವತಿ ತನ್ಮಯಃ ॥ ೨೩ ॥

ಆತಿವಾಹಿಕದೇಹೋಪಿ ಜೀವತಾಂ ಸಮುಪಾಗತಃ ।
ಭಾವನಾಪಂಚಕಂ ಭೂತ್ವಾ ದ್ರವ್ಯಮಸ್ಮೀತಿ ವೇತ್ತ್ಯಲಂ ॥ ೨೪ ॥

---

೨೧. ತನ್ನ ಪಾಡಿಗೆ ತಾನೇ ಈ ಚಿತ್ತು ತಾನು ಬೇರೆ ಎಂದುಕೊಂಡು ತನ್ನ ವಿಕಲ್ಪಡಿಂದಲೇ ತಾನು ಬೇರೆಯಾದಂತಾಗುವುದು.

೨೨. ಚಿತ್ತು ಸ್ವಭಾವದಿಂದ ಅಕಲಂಕವಾದುದು. ಆದರೂ ತಾನು ಸಕಲಂಕವಾದಂತೆ ಭಾವಿಸಿಕೊಂಡು ಸಂಸಾರ ಪ್ರವಾಹದಲ್ಲಿ ಬಿದ್ದು ಪುರ್ಯಷ್ಟಕದಲ್ಲಿ ಸಿಕ್ಕಿಕೊಂಡು ಪರಪ್ರಚೋದಿತನಂತೆ (ಔಪಾಧಿಕ ಚೇತನೇನೈವ ಚೇತತಿ, ನ ನಿಷ್ಕಲಂಕಚೇತನೇನ ಇತ್ಯರ್ಥಃ. —ತಾ. ಪ್ರ.)

೨೩. ತಾನು ಚಿಚ್ಛರೀರಿಯಾಗಿದ್ದರೂ ಈ ಪುರ್ಯಷ್ಟಕದಲ್ಲಿ ಸಿಕ್ಕಿಕೊಂಡು ಚಿತ್ತತ್ತ್ವದ ಬೆಳಕಿನಿಂದಲೇ ಬಾಳುವ ಜೀವನಾಗಿ, ಚಿನ್ಮಯನಾಗಿ ಜೀವಿಸುವನು.

೨೪. ಹೀಗೆ ಆತಿವಾಹಿಕ ದೇಹನಾದ ಈ ಜೀವನು ಜೀವತ್ವವನ್ನು ಪಡೆದ ಕಾರಣದಿಂದಲೇ ತಾನು ಪ್ರತ್ಯೇಕನು ಭಿನ್ನನು ಎಂಬ ಭ್ರಾಂತಿಗೆ ಒಳಗಾಗಿ, ಭೂತ, ಪಂಚಕಗಳಿಂದ ಆದ ಸ್ಥೂಲ ದೇಹವನ್ನು ಪಡೆದು, ಇದೇ ನಾನು, ಈ ದೇಹವೇ ನಾನು, ಎಂದುಕೊಳ್ಳುವನು.

(ಭಾವನಾ ಪಂಚಕಂ ಪಾಂಚಭೌತಿಕ ಸ್ಥೂಲದೇಹ ಸಂಸ್ಕಾರಾತ್ಮಕಂ ಭೂತ್ವಾ ದೇಹಲಾಭಾಯ ವ್ರೀಹಿಯವತಿಲಮಾಷಾದಿ ದ್ರವ್ಯಮಹಂ ಸಂಪನ್ನ ಮಸ್ಮೀತಿವೇತ್ತಿ ತ ಇಹ ವ್ರೀಹಿಯವತಿಲಮಾಷಾ ಇತಿ ಜಾಯಂತೇ ಇತಿ ಶ್ರುತೇರಿತ್ಯರ್ಥಃ ಶ್ರುತೌ

ತದ್ದ್ರವ್ಯಂ ಪ್ರಾಣಿನಾ ಭುಕ್ತಮಾಶು ಗಚ್ಛತಿ ವೀರ್ಯತಾಂ ।
ತತೋಽಹಂ ಪ್ರಾಣವಾನ್ಜಾತೋ ವೇತ್ತೀತ್ಯನುಭವಾತ್ಮಕಂ ॥ ೨೫ ॥

ಅಹಂತಾದಿಕ್ರಮೇಣಾಶು ಪಂಚಕಾನುಭವಭ್ರಮಾತ್ ।
ಸ್ಥಾವರಂ ಜಗಮಂ ಸರ್ವಂ ವೇತ್ತಿ ತತ್ತದ್ಭವತ್ಯಲಂ ॥ ೨೬ ॥

ಕಾಕತಾಲೀಯಯೋಗೇನ ದೃಢಾಭ್ಯಾಸಕ್ಷಯೇಣ ಚ ।
ವಾಸನಾಂತರಸಂಶ್ಲೇಷಾತ್ಸೂಕ್ಷ್ಮಾಕಾರಮುಜ್ಝತಿ ॥ ೨೭ ॥

ಇತಿ ಶಬ್ದೋ ಭಾವಿದೇಹಾನುಕೂಲ ದ್ರವ್ಯಮಾತ್ರೋಪಲಕ್ಷಣಾರ್ಥಃ ತೇನ ಸ್ಥಾವರ ಸ್ವೇದಜಾದಿ ದೇಹ ಪ್ರಾಪ್ತಿಸ್ಥಲೇ ತತ್ತದ್ಬೀಜಾನುಕೂಲ ಜಲಾದಿ ದ್ರವ್ಯ ಭಾವೋಽಪ್ಯಸ್ಯ ಭವತೀತಿದ್ಯೋತನಾಯ ದ್ರವ್ಯಮಸ್ಮೀತಿ ವೇತ್ತೀತಿ ಸಾಮಾನ್ಯೋಕ್ತಿಃ ತಾ. ಪ್ರ.)

೨೫. (ಹೀಗೆ ಆತಿವಾಹಿಕ ದೇಹಿಯಾಗಿದ್ದವನು ಸ್ಥೂಲ ದೇಹವನ್ನು ಪಡೆದು ಅನ್ನ ಸ್ವರೂಪನಾಗಿ ಅನ್ನಾದರಾದ) ಪ್ರಾಣಿಗಳಿಗೆ ಆಹಾರವಾಗಿ, ಆ ಪ್ರಾಣಿಗಳ ವೀರ್ಯವಾಗುವನು. ಅನಂತರ ನಾನು ಪ್ರಾಣವನ್ನು ಪಡೆದೆನು ಎಂದು ಅನುಭವ ಪುರಸ್ಸರವಾಗಿ ತಿಳದುಕೊಳ್ಳುವನು.

೨೬. (ಅನುಭವವೇ ಸ್ವರೂಪವಾಗುಳ್ಳ ಈ ಬ್ರಹ್ಮ ಶಕ್ತಿಯು ಹೀಗೆ ಜೀವ ಭಾವಾಪನ್ನವಾಗಿ) ಅಹಂತಾದಿ ಕ್ರಮದಿಂದ ಪಂಚ ಭೂತಗಳ ಪಂಚೀ ಕರಣದಿಂದ ಆಗಿರುವ ಸ್ಥಾವರ ಜಂಗಮಾತ್ಮಕಗಳಾದ ಸರ್ವ ದೇಹಗಳನ್ನು ಬಾಹ್ಯ ದೃಷ್ಟಿಯಿಂದ ನೋಡುತ್ತ ಆ ವಾಸನಾಬಲದಿಂದಲೇ ತಾನು ಪ್ರತ್ಯೇಕನೆನ್ನುಕೊಳ್ಳುವನು.

೨೭. ಕಾಕತಾಲೀಯ ಯೋಗದಿಂದಲೂ, ಪೂರ್ವದೇಹತ್ಯಾಗವಾದಾಗ ಆ ದೇಹದಲ್ಲಿದ್ದ ದೇಹೋಽಹಂ ಭಾವವು ಕ್ಷಯವಾಗುವುದರಿಂದಲೂ, ಮತ್ತೊಂದು ದೇಹವುಂಟಾದಾಗ ವಾಸನಾಂತರಯೋಗವಾಗುವುದರಿಂದಲೂ ಹಿಂದಿನ ವಾಸನೆಯು

ದ್ವಿತ್ವಸ್ವಸಂವಿದಾ ದ್ವಿತ್ವಮೇಕಸ್ಯೈವ ಪ್ರವರ್ತತೇ ।
ಪುಂಸೋ ವೇತಾಲಸಂಕಲ್ಪಾದ್ವೇತಾಲ ಇವ ಭಾಸುರಃ ॥ ೨೮ ॥

ಅದ್ವಿತ್ವವೇದನಾದ್ದ್ವಿತ್ವಮಾತ್ಮನೋಽಪಿ ನಿವರ್ತತೇ ।
ನ ಕರೋಮೀತಿ ಸಂಕಲ್ಪಾತ್ಪುರುಷಸ್ಯೇವ ಕರ್ತೃತಾ ॥ ೨೯ ॥

ದ್ವಿತ್ವಸಂಕಲ್ಪತೋ ದ್ವಿತ್ವಮೇಕಸ್ಯೇವ ಪ್ರವರ್ತತೇ ।
ಅದ್ವಿತ್ವಸಂವಿದಾ ದ್ವಿತ್ವಮನೇಕಸ್ಯಾಪಿ ನಶ್ಯತಿ ॥ ೩೦ ॥

ಪರಮಾತ್ಮತಯಾ ದ್ವಿತ್ವಂ ನ ಕಿಲಾತ್ಮನಿ ವಿದ್ಯತೇ ।
ಅವಿಕಾರಾದಿಮತ್ತ್ವೇನ ಸರ್ವಗತ್ವೇನ ಸರ್ವದಾ ॥ ೩೧ ॥

ಕ್ಷಯವಾಗಿ, ಯಾವ ದೇಹವು ಬರುವುದೋ ಅದೇ ತಾನೆಂಬ ಭಾವನೆಯು ಬರುವುದು.

೨೮. ಮನುಷ್ಯನು ಭೇತಾಳನನ್ನು ಕಂಡೆನೆಂದು ಭಾವಿಸಿಕೊಂಡಾಗ ಅವನಿಗೆ ಬೇತಾಲದರ್ಶನವಾಗುವಂತೆ ತಾನು ಒಂದೇ ಆಗಿದ್ದರೂ ಅನೇಕವೆಂದುಕೊಳ್ಳುವುದರಿಂದ ಅನೇಕನೇ ಆಗುವನು.

೨೯. ಅನೇಕತ್ವವು ಇಲ್ಲವೆಂದು ಭಾವಿಸುವುದರಿಂದ ತನ್ನಲ್ಲಿರುವ ಅನೇಕತ್ವ ಭಾವನೆಯು ನಾಶವಾಗುವುದು. ನಾನು ಮಾಡುವವನಲ್ಲವೆಂಬ ಸಂಕಲ್ಪದಿಂದ ಪುರುಷನ ಕರ್ತೃತ್ವವೂ ನಾಶವಾಗುವುದು.

೩೦. ಏಕಕ್ಕೂ ಅನೇಕತ್ವ ಭಾವನೆಯು ಬರುವುದು ಹಾಗೆಂದು ಸಂಕಲ್ಪ ಮಾಡುವುದರಿಂದ ಅನೇಕತ್ವವಿಲ್ಲವೆಂಬ ಜ್ಞಾನವು ದೃಢವಾದರೆ ಅನೇಕತ್ವವು ನಾಶವಾಗುವುದು.

೩೧. ಆತ್ಮನು ವಿಕಾರಾದಿ ರಹಿತನು ಸರ್ವಗತನು. ಶಾಶ್ವತನು ಅದರಿಂದ ಪರಮಾತ್ಮದೃಷ್ಟಿಯಿಂದ ಆತ್ಮನಲ್ಲಿ ದ್ವಿತ್ವವು ಇಲ್ಲ.

ಯಸ್ಸ್ವಸಂಕಲ್ಪರಚಿತಮಸಂಕಲ್ಪಕ್ಷಯಂ ಹಿ ತತ್ ।
ಯಥಾ ಮುನೇ ಮನೋರಾಜ್ಯಂ ಗಂಧರ್ವನಗರಂ ಯಥಾ ॥ ೩೨ ॥

ತಥಾ ಸಂಕಲ್ಪನೇ ಕ್ಲೇಶೋ ನ ಸಂಕಲ್ಪವಿನಾಶನೇ ।
ಸಂಕಲ್ಪಯಕ್ಷ್ಮೋ ಗಂಧರ್ವಪುರ್ಯಾಃ ಸೃಷ್ಟೌ ನತು ಕ್ಷಯೇ ॥ ೩೩ ॥

ಪುಷ್ಟಸಂಕಲ್ಪಮಾತ್ರೇಣ ಯದಿದಂ ದುಃಖಮಾಗತಂ ।
ತದಸಂಕಲ್ಪಮಾತ್ರೇಣ ಕ್ಷಯಿ ಕಾತ್ರ ಕದರ್ಥತಾ ॥ ೩೪ ॥

ಯತ್ಕಿಂಚಿದಪಿ ಸಂಕಲ್ಪ್ಯ ನರೋ ದುಃಖೇ ನಿಮಜ್ಜತಿ ।
ನ ಕಿಂಚದಪಿ ಸಂಕಲ್ಪ್ಯ ಸುಖಮವ್ಯಯಮಶ್ನುತೇ ॥ ೩೫ ॥

ಸಂಕಲ್ಪವ್ಯಾಲನಿರ್ಮುಕ್ತಾ ನ ಯದಾ ತವ ಚೇತನಾ ।
ನ ತದಾ ನಂದನೋದ್ಯಾನೇ ತ್ವಮುಚ್ಚೈಃ ಪರಿರಾಜಸೇ ॥ ೩೬ ॥

೩೨–೩೩. ಮುನೀಂದ್ರನೇ, ಮನೋರಾಜ್ಯ ಗಂಧರ್ವನಗರ, ಇವುಗಳಂತೆ, ಯಾವುದು ಸ್ವಸಂಕಲ್ಪದಿಂದ ರಚಿತವಾದುದೋ ಅದು ಅಂತಹ ಸಂಕಲ್ಪವು ಇಲ್ಲದಾಗ ಕ್ಷಯವಾಗಿಯೇ ಆಗುವುದು ಹಾಗೆಯೇ ಮನೋರಾಜ್ಯ, ಗಂಧರ್ವನಗರ, ಮೊದಲಾದವುಗಳನ್ನು ಸಂಕಲ್ಪಿಸಿದಾಗ ಎಂದರೆ ಸಂಕಲ್ಪದಿಂದ ರಚಿಸಿದಾಗ ಅವುಗಳಿಂದ ಮನಸ್ಸಿಗೆ ಕ್ಲೇಶವಾಗುವುದು. ಅವುಗಳನ್ನು ರಚಿಸಬೇಕೆಂಬ ಸಂಕಲ್ಪವೇ ಇಲ್ಲದಾಗ ಆ ಕ್ಲೇಶವೂ ಬರುವುದಿಲ್ಲ. ಗಂಧರ್ವಪುರಿಯನ್ನು ಸೃಷ್ಟಿಸಿದಾಗ ಸಂಕಲ್ಪ ಯಕ್ಷನ ಕಾಟವುಂಟಲ್ಲದೆ, ಗಂಧರ್ವಪುರಿಯು ನಾಶವಾದಾಗ ಆ ಕಾಟವಿಲ್ಲ.

೩೪ ಸಂಕಲ್ಪವು ಪುಷ್ಟಿಯಾಗಿ ಬೆಳೆದಾಗ ಪ್ರಾಪ್ತವಾದ ದುಃಖವು ಆ ಸಂಕಲ್ಪವು ಕ್ಷೀಣವಾದಾಗ ತಾನು ಕ್ಷಯವಾಗುವುದು; ಹೀಗಿರಲು ದುಃಖವೆಲ್ಲಿಯದು?

೩೫. ಮನುಷ್ಯನು ಏನಾದರೂ ಒಂದನ್ನು ಮಾಡಬೇಕೆಂದು ಸಂಕಲ್ಪ ಮಾಡಿಕೊಂಡು ದುಃಖದಲ್ಲಿ ಮುಳುಗುವನು. ಅಂತಹ ಸಂಕಲ್ಪವನ್ನೇ ಮಾಡದಿದ್ದರೆ, ಶಾಶ್ವತವಾದ ಸುಖವನ್ನು ಹೊಂದುವನು.

೩೬. ನಿನ್ನ ಚೇತನವು ಸಂಕಲ್ಪವೆಂಬ ಮಹಾವ್ಯಾಲದಿಂದ ನಿರ್ಮುಕ್ತವಾಗದಿರಲು ನಿನಗೆ ನಂದನೋದ್ಯಾನದಲ್ಲಿದ್ದರೂ ಸುಖವೆಲ್ಲಿಯದು?

ಸ್ವವಿವೇಕಾನಿಲೈಃ ಕೃತ್ವಾ ಸಂಕಲ್ಪಜಲದಕ್ಷಯಂ ।
ಪರಾಂ ನಿರ್ಮಲತಾಮೇಹಿ ಶರದೀವ ನಭೋಂತರಂ ॥ ೩೭ ॥

ಸಂಕಲ್ಪಸರಿತಂ ಮತ್ತಾಂ ಮಣಿಮಂತ್ರೇಣ ಶೋಷಯ ।
ತತ್ರೋಹ್ಯಮಾನಮಾತ್ಮಾನಂ ಸಮಾಶ್ವಾಸ್ಯ ಭವಾಮನಾಃ ॥ ೩೮ ॥

ಸಂಕಲ್ಪಾನಿಲನಿರ್ಧೂತಂ ಭ್ರಾಂತಂ ಪರ್ಣತೃಣಾಂಶವತ್ ।
ಭೂತಾಕಾಶೇ ಚಿದಾತ್ಮಾನಮವಲಂಬ್ಯ ವಿಲೋಕಯ ॥ ೩೯ ॥

ಸ್ವಸಂಕಲ್ಪನ ಕಾಲುಷ್ಯಂ ವಿನಿವಾರ್ಯಾತ್ಮನಾತ್ಮನಃ ।
ಪರಂ ಪ್ರಸಾದಮಾಸಾದ್ಯ ಪರಮಾನಂದವಾನ್ ಭವ ॥ ೪೦ ॥

ಸರ್ವಶಕ್ತಿಮಯೋ ಹ್ಯಾತ್ಮಾ ಯದ್ಯಥಾ ಭಾವಯತ್ಯಲಂ ।
ತತ್ತಥಾ ಪಶ್ಯತಿ ತದಾ ಸ್ವಸಂಕಲ್ಪ ವಿಜೃಂಭಿತಂ ॥ ೪೧ ॥

---

೩೭. ಶರತ್ಕಾಲದಲ್ಲಿ ಆಕಾಶವು ಮೋಡಗಳನ್ನೆಲ್ಲ ಕಳೆದುಕೊಂಡು ಉತ್ತಮವಾದ ಸ್ವಚ್ಛತೆಯನ್ನು ಪಡೆದುಕೊಳ್ಳುವಂತೆ, ಆತ್ಮ ವಿವೇಕವೆಂಬ ಗಾಳಿಯಿಂದ ಸಂಕಲ್ಪಗಳೆಂಬ ಮೋಡಗಳನ್ನೆಲ್ಲ ಹಾರಿಸಿಬಿಟ್ಟು ನೀನೂ ಸ್ವಚ್ಛನಾಗು.

೩೮. ಉಬ್ಬಿ ಹರಿಯುತ್ತಿರುವ ಸಂಕಲ್ಪ ನದಿಯನ್ನು ಮಣಿ ಮಂತ್ರ ಮೊದಲಾದವುಗಳಿಂದ ಬತ್ತಿಹೋಗುವ ಹಾಗೆ ಮಾಡು; ಅದರಲ್ಲ ಕೊಚ್ಚಿ ಹೋಗುತ್ತಿರುವ ಆತ್ಮನನ್ನು ಹಿಡಿದು ನಿಲ್ಲಿಸಿಕೊಂಡು ಅಮನಸ್ಕನಾಗು.

೩೯. ಈ ಭೂತಾಕಾಶದಲ್ಲಿ ಗಾಳಿಗೆ ಸಿಕ್ಕಿ ಒದ್ದಾಡುವ ಹುಲ್ಲು ತರಗು ಚೂರುಗಳಂತೆ, ಸಂಕಲ್ಪವೆಂಬ ಮಹಾವಾತಕ್ಕೆ ಸಿಕ್ಕಿ ಭ್ರಾಂತನಾಗಿ ಹೋಗಿರುವ ಚಿದಾತ್ಮನನ್ನು ತಡೆದು ನಿಲ್ಲಿಸಿಕೊಂಡು ನೋಡು.

೪೦. ನಿನ್ನಲ್ಲಿ ನಿನ್ನ ಸಂಕಲ್ಪದಿಂದಲೇ ಉಂಟಾಗಿರುವ ಈ ಕಾಲುಷ್ಯವನ್ನು ನೀನೇ ನಿನ್ನ ಪ್ರಯತ್ನದಿಂದಲೇ ನಿವಾರಿಸಿಕೊಂಡು ಉತ್ತಮವಾದ ಚಿತ್ತ ಪ್ರಸಾದವನ್ನು ಹೊಂದಿ ಪರಮಾನಂದವನ್ನು ಪಡೆದುಕೋ.

೪೧. ಆತ್ಮನು ಸರ್ವ ಶಕ್ತಿಮಯನು. ಅದರಿಂದ ಅವನು ಹೇಗೆ ಭಾವಿಸಿದರೆ

ಸಂಕಲ್ಪಮಾತ್ರಮೇವೇದಂ ಜಗನ್ಮಿಥ್ಯಾಸಮುತ್ಥಿತಂ ।
ಅಸಂಕಲ್ಪನ ಮಾತ್ರೇಣ ಬ್ರಹ್ಮನ್ ಕ್ವಾಪಿ ವಿಲೀಯತೇ ॥ ೪೨ ॥

ಸಂಕಲ್ಪವಾತನಲಿತಂ ಜನ್ಮಜಾಲಕದಂಬಕಂ ।
ಅಸಂಕಲ್ಪಾನಿಲಸ್ಪರ್ಶಾದ್ವಿಶ್ರಾಮ್ಯತಿ ಪರೇ ಪದೇ ॥ ೪೩ ॥

ತೃಷ್ಣಾಕರಂಜಲತಿಕಾಮಿಮಾಂ ರೂಢಿಮುಪಾಗತಾಂ ।
ಸಂಕಲ್ಪ ಮೂಲೋದ್ಧರಣಾತ್ಪರಿಶೋಷವತೀಂ ಕುರು ॥ ೪೪ ॥

ಪ್ರತಿಭಾಸಸಮುತ್ಥಾನಂ ಪ್ರತಿಭಾಸ ಪರಿಕ್ಷಯಂ ।
ಯಥಾ ಗಂಧರ್ವನಗರಂ ತಥಾ ಸಂಸೃತಿವಿಭ್ರಮಃ ॥ ೪೫ ॥

ಅದರಂತೆಯೇ ಅವನ ಕಣ್ಣಿಗೆ ಕಾಣುವುದು. ಹಾಗೆ ಕಾಣುವುದು ಎನ್ನುವುದು ಅವನ ಸಂಕಲ್ಪದಿಂದಲೇ ಆದುದು.

೪೨. ಸಂಕಲ್ಪ ಮಾತ್ರದಿಂದ ಹುಟ್ಟಿರುವ ಈ ಜಗತ್ತು ಹುಟ್ಟಿರುವುದೇ ಮಿಥ್ಯೆ. ಇದಕ್ಕೆ ಕಾರಣವಾದ ಆ ಸಂಕಲ್ಪವು ನಾಶವಾದರೆ, ಈ ಜಗತ್ತೂ ಎಲ್ಲಿಯೋ ಅಡಗಿ ಹೋಗುವುದು.

೪೩. ಸಂಕಲ್ಪವೆಂಬ ಗಾಳಿಯು ಹೊಡೆದುಕೊಂಡು ಬಂದು ಒಟ್ಟಿರುವ ಈ ಜನ್ಮ ಪರಂಪರೆಯೆಂಬ ಮೋಡಗಳ ಒಡ್ಡು ಅಸಂಕಲ್ಪವೆಂಬ ಗಾಳಿಯು ಬೀಸಿದರೆ ಆ ಬ್ರಹ್ಮದಲ್ಲಿಯೇ ಮರೆಯಾಗುವುದು.

೪೪. ತೃಷ್ಣಾ ಎಂಬ ಈ ಮುಳ್ಳು ಕೂಡಿದ ಬಳ್ಳಿಯು ಚೆನ್ನಾಗಿ ಬಲಿತು ಬೆಳೆದು ನಿಂತಿರುವುದು. ಇದಕ್ಕೆ ಸಂಕಲ್ಪವೇ ಬುಡವು ; ಆ ಬುಡವನ್ನು ಕಿತ್ತಿಸೆದು ಈ ಲತೆಯು ಒಣಗಿ ಹೋಗುವಂತೆ ಮಾಡು.

೪೫. ಪ್ರತಿಭಾಸದಿಂದ ಹುಟ್ಟಿ ಪ್ರತಿಭಾಸದಿಂದಲೇ ನಾಶವಾಗುವ ಗಂಧರ್ವ ನಗರದಂತೆಯೇ ಈ ಸಂಸಾರ ಭ್ರಮವೂ ಕೂಡ ಸೃಷ್ಟಿಯಾಗುವುದೂ ನಾಶವಾಗುವುದೂ ಕೂಡ ಪ್ರಾತಿ ಭಾಸಿಕವೇ ಎಂದರೆ ಕನಸಿನಂತೆಯೇ ?

ಪ್ರಭುರಸ್ಮೀತಿ ವಿಸ್ಮೃತ್ಯ ತಾವಚ್ಛೋಚತಿ ಭೂಮಿಪಃ ।
ಭೂಮಿಪೋಽಸ್ಮೀತಿ ಸಂಜಾತಾ ಯಾವನ್ನಾಸ್ಯ ಹೃದಿ ಸ್ಮೃತಿಃ ॥ ೪೬ ॥

ನಾಸ್ಯ ತಜ್ಜಾತಯಾ ಬ್ರಹ್ಮನ್ ಪ್ರಾಕ್ಸ್ಮೃತಿ ವರ್ತಮಾನಯಾ ।
ಶರದೇವೋಪಗತಯಾ ಪ್ರಾವೃಡ್ ಜಾಡ್ಯಾಪಹಾರಿಣೀ ॥ ೪೭ ॥

ಘನ ಪ್ರವಾಹಯಾ ಕಸ್ಮಾಚ್ಚಿತ್ತೇಹಾ ಸೈವ ವರ್ಧತೇ ।
ಯ ಏವೋಚ್ಚೈಃಸ್ವರಸ್ತಂತ್ರ್ಯಾಃ ಸ ಏವಾಕ್ರಾಮತಿ ಶ್ರುತಿಂ ॥ ೪೮ ॥

ಅಹಮೇಕೋಽಹಮಾತ್ಮಾಸ್ಮೀತ್ಯೇಕಾಂ ಭಾವಯ ಭಾವನಾಂ ।
ತಯಾ ಭಾವನಯಾ ಯುಕ್ತಃ ಸ ಏವ ತ್ವಂ ಭವಸ್ಯಲಂ ॥ ೪೯ ॥

---

೪೬. ಅರಸನಾಗಿರುವವನು ತಾನು ಪ್ರಭುವೆಂಬುದನ್ನು ಮರೆತು ಅಳುತ್ತಿದ್ದರೆ, ಆ ಅಳುವು ಅವನಿಗೆ ತಾನು ಭೂಮಿಪತಿಯೆಂಬ ಸ್ಮೃತಿಯು ಬರುವವರೆಗೆ ಹೋಗುವುದೆಂತು?

(ನಷ್ಟೋ ಮೋಹಸ್ಸ್ಮೃತಿರ್ಲಬ್ಧಾ ಗೀತಾ)

೪೭. ಮೊದಲು ಬಂದ ಮಳೆಗಾಲದ ಮೋಡಗಳು, ವರ್ತಮಾನ ಕಾಲದಲ್ಲಿ ಬಂದ ಶರತ್ತಿನಿಂದ ಚದುರಿ ಹೋಗಲು ಮಳೆಗಾಲದ ಕತ್ತಲೇನಾದರೂ ಮತ್ತೆ ಕಾಣಿಸಿಕೊಳ್ಳಬಲ್ಲುದೆ? ಹಾಗೆಯೇ ಎಲೈ ಬ್ರಾಹ್ಮಣನೆ, ಬಹುಕಾಲದಿಂದಲೂ ಆಶ್ರಯಿಸಿಕೊಂಡು ಬಂದಿದ್ದರೂ ಸಂಸಾರವಾಸನೆಯು, ಬ್ರಹ್ಮಾಹಂಭಾವನಾ ರೂಪವಾದ ವಾಸನೆಯನ್ನು ತಿರಸ್ಕರಿಸಲಾರದು

೪೮. ಸಂಸಾರವಾಸನೆ ಬ್ರಹ್ಮವಾಸನೆ ಎರಡೂ ಇರುವ ಹೃದಯದಲ್ಲಿ, ಯಾವುದಕ್ಕೆ ಹೆಚ್ಚು ಬಲವು ದೊರೆಯುವುದೋ ಅದೇ ಬಲವಾಗುವುದು ; ಎರಡು ತಂತಿಗಳನ್ನು ಏಕಕಾಲದಲ್ಲಿ ಮೀಟಿದರೆ ಯಾವುದರ ಶಬ್ದವು ತೀವ್ರವಾಗಿರುವುದೋ ಅದೇ ಕಿವಿಗೆ ಮೊದಲು ಕೇಳಿಸುವುದಲ್ಲವೇ?

೪೯. ಅಹಮೇಕಃ, ಅಹಮಾತ್ಮಾಸ್ಮಿ, ಎಂಬ ಒಂದೇ ಭಾವನೆಯನ್ನೇ ಬಲವಾಗಿ ಹಿಡಿ. ಆ ಭಾವನೆಯನ್ನು ಬೆಳೆಸಿಕೊಂಡರೆ, ನೀನೂ ಅದೇ ಆಗುವೆ.

(ಸೇಯಮಹಂ ಬ್ರಹ್ಮಾಸ್ಮೀತಿ ಸ್ಮೃತಿರೇವ ಅವಿಚ್ಛೇದೇನ ಸಂತತಾ ಮುಖ್ಯಾ ಮಮ ಮಾನಸ ಪೂಜಾ ನ ಬಾಹ್ಯಾ ಇತ್ಯಾಶಯೇನ ಆಹ– ಅಹಮಿತಿ, ಏಕಃ ಅದ್ವಿ

ಏವಂ ಹ್ಯಸಂಭವದಿದಂತ್ವ ವಿರಾಗಭಾಸ್ವ।
ತ್ತತ್ಸತ್ತ್ವ ಮುತ್ತಮ ಪದಂ ಪರಮೇಕದೇವಃ ॥
ಪೂಜಾಸು ಪೂಜಕ ಸುಪೂಜನ ಪೂಜ್ಯರೂಪಂ।
ಕಿಂಚಿನ್ನ ಕಿಂಚಿದಿವ ಚಿತ್ತಪದೈಕ ಮೂರ್ತಿಃ ॥ ೫೦ ॥

ಇತ್ಯಾರ್ಷೆ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ "ದ್ವೈತೈಕ್ಯ ಪ್ರತಿಪಾದನಂ" ನಾಮ ತ್ರಯಸ್ತ್ರಿಂಶಃ ಸರ್ಗಃ

ತೀಯ ಏವ ಅಹಂ ಶಿವೋ ದೇವಃ ಸಚ ಅಹಂ, ತ್ವದಹಂಕಾರೋಪಲಕ್ಷಿತ ಆತ್ಮಾ ನಿತ್ಯಾಪರೋಕ್ಷ ಚಿದೇಕರಸೋಽಸ್ಮಿ ಇತ್ಯೇತಾಂ ಅವಿಚ್ಛಿನ್ನಾಂ ಭಾವನಾಂ ಸ್ಮೃತಿ ಧಾರಾಂಭಾವಯ. ತಯಾ ಏವಂ ರೂಪಯಾ ದೇವಪೂಜಾಭಾವನಯಾ ಯುಕ್ತಃ ಸ ಶಿವಏ ವಏತ್ವಂ ಅಲಂ ನಿತರಾಂ ಭವಸಿ ; ನಾನ್ಯಯಾ ಪೂಜಯಾ ಇತ್ಯರ್ಥಃ. ತಾ. ಪ್ರ.)

೫೦. (ಇದುವರೆಗೂ ಹೇಳಿರುವ ಬಾಹ್ಯಪೂಜನವು ನಿನ್ನಂತಹವರಿಗೆ ಸಾಧ್ಯವೇ ಇಲ್ಲ. ಅದು ಕೇವಲ ಬಾಹ್ಯ ಫಲಾಪೇಕ್ಷೆ ಇರುವವರಿಗೆ ಮಾತ್ರ ಎಂಬ ಅರ್ಥವನ್ನು ಮತ್ತೆ ದೃಢೀಕರಿಸಿ, ಈ ಸರ್ಗವನ್ನು ಉಪಸಂಹಾರ ಮಾಡುತ್ತಾನೆ.)

ಹೀಗೆ, ಈ ಬಾಹ್ಯಪೂಜನವು ಕೇವಲ ಅಸಂಭವವೇ ಸರಿ. ಅದು ವೈರಾಗ್ಯ ವಿಲ್ಲದವರಿಗೆ ಮಾತ್ರ ಉಂಟು. ನಿನ್ನಂತಹವರಿಗೆ ಬೇಕಾದುದು ನಿರತಿಶಯವಾದ ಮೋಕ್ಷವು. ಅದು ಏಕದೇವನಾದ ಪರವಸ್ತುವನ್ನು ಪೂಜಿಸುವುದರಿಂದಲೇ ಲಭ್ಯವು. ಆದರಿಂದ, ಪೂಜಕ, ಪೂಜನ, ಪೂಜ್ಯ, ರೂಪಗಳಿಂದ ಪೂಜೆಗಳಲ್ಲಿ ಕಾಣಿಸುವುದು ಯಾವುದು ಉಂಟೋ ಅದೊಂದೂ ಪ್ರತ್ಯೇಕವಾಗಿಲ್ಲ. ಅದೆಲ್ಲವೂ ಚಿತ್ತದಲ್ಲಿರುವ ಚಿತ್ಸ್ವರೂಪವಾದ ಮೂರ್ತಿಯೊಂದೇ !

(ಪೂಜಾಸು ಪೂಜಕ ಸುಪೂಜನಪೂಜ್ಯರೂಪಂ)

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ದ್ವೈತೈಕ್ಯ ಪ್ರತಿಪಾದನ"ವೆಂಬ
ಮೂವತ್ತ ಮೂರನೆಯ ಸರ್ಗವು.

ಚತುಸ್ತ್ರಿಂಶಃ ಸರ್ಗಃ

ಶ್ರೀ ಈಶ್ವರ ಉವಾಚ :—

ಇತ್ಥಂ ಸ್ಥಿತಮಿದಂ ವಿಶ್ವಂ ಸದಸದ್ದೇವರೂಪಿ ಚ ।
ದ್ವೈತೈಕ್ಯಪದನಿರ್ಮುಕ್ತಂ ಯುಕ್ತಂ ದ್ವೈತೈಕ್ಯಮಪ್ಯತಃ ॥ ೧ ॥

ಚಿತೇಃ ಕಲಂಕವೈರೂಪ್ಯಮಿತಿ ಸಂಸಾರತಾಂ ಗತಂ ।
ಅಕಲಂಕಮಸಂಸಾರಿ ತಚ್ಚಾಭಿನ್ನಾದ್ವಯಾತ್ಮಕಂ ॥ ೨ ॥

ಮೂವತ್ತ ನಾಲ್ಕನೆಯ ಸರ್ಗವು

ಶ್ರೀ ಈಶ್ವರನು ಹೇಳಿದನು :—

೧. ಹೀಗೆ ಈ ವಿಶ್ವವು ಸತ್, ಅಸತ್, ಆಗಿ ದೇವರೂಪವಾಗಿಯೂ ಇರುವುದು. ಇದು ದ್ವೈತ, ಐಕ್ಯ, ಎಂಬ ಪದಗಳ ಅರ್ಥವಿಲ್ಲಿ ಹೊಂದುವುದಿಲ್ಲ. ಆದರೂ ವ್ಯವಹಾರಕ್ಕಾಗಿ ದ್ವೈತ, ಐಕ್ಯ, ಎನ್ನಿಸಿಕೊಳ್ಳುವುದಕ್ಕೂ ಯೋಗ್ಯವಾಗಿರುವುದು.

(ಜ್ಞಾನ ಕಾಲದಲ್ಲಿ ಬಾಧಿತವಾಗುವುದರಿಂದ ಅಸತ್, ಅಧಿಷ್ಠಾನ ರೂಪದಿಂದ ಬ್ರಹ್ಮವೇ ಆದ ಕಾರಣ ಇದು ಯಾವಾಗಲೂ ಸತ್, ಸದ್ರೂಪದಿಂದ ದ್ವೈತವೂ ಐಕ್ಯವೂ ಅಲ್ಲದಿದ್ದರೂ ಅಸದ್ರೂಪದಿಂದ ದ್ವೈತವಾಗಿ ಐಕ್ಯವಾಗಿ ಕಾಣುವುದು.)

೨. ಚಿತ್ತಿನ ಮೋಹದಿಂದ ಇದು ವಿರೂಪವಾಗಿ (ತನ್ನ ಪೂರ್ವಸ್ಥಿತಿಯನ್ನು ಬಿಟ್ಟು) ಸಂಸಾರ ರೂಪವಾಗಿರುವುದು. ಕಲಂಕರೂಪವಾದ ಆ ಮೋಹವು ನಿವಾರಿತವಾದರೆ ಅದೇ ಚಿತ್ತೇ ಅಸಂಸಾರಿಯಾಗುವುದು. ಆಗ ಅದು ಅಭಿನ್ನವೂ ಅದ್ವಯಾತ್ಮಕವೂ ಆಗುವುದು.

ಇಯಮಸ್ಮೀತಿ ಸಂಪ್ರಾಪ್ತಕಲಂಕಾ ಚಿನ್ನಿ ಬಧ್ಯತೇ ।
ಏತಾಮೇವ ಕಲಾಂ ಬುದ್ಧ್ವಾ ಸ್ವಕಾಭಿನ್ನಾಂ ವಿಮುಚ್ಯತೇ ॥ ೩ ॥

ಚಿದರ್ಥಾಕಾರತಾಭಾವಾ ದ್ದ್ವೈತ್ವಾತ್ಸತ್ವಂ ಸಮುಜ್ಝತಿ ।
ಸುಖಾದಿಮಿಲತಾಂ ಧತ್ತೆ ನ ಸತ್ಯಾಂ ಸದಿತಿ ಕ್ಷಣಾತ್ ॥ ೪ ॥

ಶುದ್ಧಾ ನಿರಂಶಾ ಸತ್ಯಾ ವಾ ಸತ್ಯಾ ವೇತ್ಯೇವಮಾದಿಭಿಃ ।
ವಿಮುಕ್ತಾನಾಮ ಶಬ್ದಾರ್ಥೈಃ ಸರ್ವೈಃ ಸರ್ವಾತ್ಮಿಕೇವಖಂ ॥ ೫ ॥

ಸರ್ವಂ ನಿರುಪಮಂ ಶಾಂತಂ ಮನಸ್ಯೈತತ್ತ್ರಿಮಾರ್ಗಗಂ ।
ಬ್ರಹ್ಮೇದಂ ಬೃಂಹಿತಂ ಬ್ರಹ್ಮ ಶಕ್ತ್ಯೈಕಾಶ ವಿಕಾಸಯಾ ॥ ೬ ॥

---

೩. ನಾನು ಇಂಥದು ಆಗಿರುವೆನು ಎಂಬುದೇ ಮೋಹವು. ಈ ಮೋಹವನ್ನು ಒಪ್ಪಿಕೊಂಡ ಚಿತ್ತು ಬದ್ಧವಾಗುವುದು. ಇದು ನನಗಿಂತ ಬೇರೆಯಲ್ಲ ಎಂಬುದನ್ನು ಅರಿತುಕೊಂಡ ಕೂಡಲೇ ಅದು ಮುಕ್ತವಾಗುವುದು.

೪. ಚಿತ್ತು ತನ್ನನ್ನು ಅರ್ಥಾಕಾರವಾಗಿ (ಎಂದರೆ ಇಂದ್ರಿಯಾದಿ ಗೋಚರವಾಗಿರುವ ವಿಷಯಾಕಾರವಾಗಿ) ಭಾವಿಸುವುದರಿಂದ ದ್ವೈತವನ್ನು ಪಡೆದು ತನ್ನ ಮೂಲ ರೂಪವಾದ ಸತ್ತ್ವಸ್ವರೂಪವನ್ನು ಬಿಡವುದು. ಮತ್ತು ಸುಖದುಃಖಾದಿಗಳೇ ತನ್ನ ಸುಖ ದುಃಖಗಳು ಎಂದು ಕೊಳ್ಳುವುದು. (ಹೀಗೆ ಕೇವಲ ಭಾವನಾಮಾತ್ರದಿಂದ ಪ್ರಾಪ್ತವಾಗಿರುವ) ಸ್ಥಿತಿಯನ್ನೇ ಸತ್ಯವೆಂದುಕೊಳ್ಳುವುದು. ಇದಿಷ್ಟೂ ಒಂದೇ ಕ್ಷಣದಲ್ಲಿ ಆಗಿ ಹೋಗುವುದು. (ಇದೇ ಸಕಲಂಕ ಸ್ಥಿತಿಯು.)

೫. (ಇಂತಹ ಕಲಂಕವನ್ನು ಪಡೆಯದಿರುವ ಚಿತ್ತಾದರೋ ಸಹಜವಾಗಿ) ಶುದ್ಧವು ನಿರಂಶವು (ಎಂದರೆ ಯಾವ ರೀತಿಯಲ್ಲೂ ಭಾಗಗಳಿಗೆ ಒಳಪಟ್ಟದಲ್ಲ) ಸತ್ಯ, ಅಸತ್ಯ, ಎಂಬ ನಾಮ ರೂಪಗಳಿಂದ ಸರ್ವಥಾ ಬಿಡಲ್ಪಟ್ಟುದು. ಅದು ಸರ್ವಾತ್ಮಕವು ಎಂದರೆ ಅದರಲ್ಲಿಯೇ ಎಲ್ಲವೂ ಇರುವುದು. ಆದರೂ ಅದು ಆಕಾಶದಂತೆ ನಿರಂಜನವು, ಅಖಂಡವು.

೬. ಇರುವುದೆಲ್ಲವೂ ನಿರುಪಮವೂ ಶಾಂತವೂ ಆದ ಬ್ರಹ್ಮವೇ. ಬ್ರಹ್ಮವು ಆಕಾಶದಂತೆ ಹರಡಿಕೊಳ್ಳುವ ತನ್ನ ಶಕ್ತಿಯಿಂದಲೇ ಬೆಳೆದು ಮನಸಾ ಕಲ್ಪಿತ

ಮನಸಾ ಮನಸಿ ಚ್ಛಿನ್ನೇ ಸ್ವೇಂದ್ರಿಯಾವಯಮಾತ್ಮನಿ ।
ಸತ್ಯಾಲೋಕಾ ಜ್ಜಗಜ್ಜಾಲೇ ಪ್ರಚ್ಛನ್ನೇ ವಿಲಯಂ ಗತೇ ॥ ೭ ॥

ಭಿದ್ಯತೇ ಶೀರ್ಣಸಂಶಾರ ಕಲನಾ ಕಲ್ಪನಾತ್ಮಿಕಾ ।
ಭೃಷ್ಟಬೀಜೋಪಮಾ ಸತ್ತಾ ಜೀವಸ್ಯ ಇತಿ ನಾಮಿಕಾ ॥ ೮ ॥

ವಾಗಿರುವ ಸೃಷ್ಟಿ ಸ್ಥಿತಿಲಯ, ಅಧ್ಯಾತ್ಮ ಅಧಿಭೂತ ಅಧಿದೈವ, ಜಾಗ್ರತ್ ಸ್ವಪ್ನ ಸುಷುಪ್ತಿ. ಎಂಬ ಮೂರು ಮೂರು ವರ್ಗಗಳಾಗಿ ಕಾಣುತ್ತಿರುವುದು.

೭-೮. ಪ್ರಚ್ಛನ್ನ ನಾಗಿ ಗುಪ್ತನಾಗಿರುವ ಆತ್ಮನಲ್ಲಿ ಸತ್ಯ ಸಾಕ್ಷಾತ್ಕಾರವಾದಾಗ ಮನಸ್ಸೆಂಬ ಕರಣದಿಂದ, ಮನಸ್ಸೆಂಬ ಅಧಿಷ್ಠಾನದಲ್ಲಿ, ಜಗಜ್ಜಾಲವೆಲ್ಲವೂ ಭಿನ್ನ ವಾಗಿ ವಿಲಯವಾಗಲು, ತನ್ನದೆಂದು ಕೊಂಡಿದ್ದ ಇಂದ್ರಿಯಗಳೆಲ್ಲವೂ ಲಯವಾಗಿ ಹೋಗಲು, ಸಂಕಲ್ಪ ಮಾತ್ರದಿಂದ ಸಂಭೂತವಾದಂತೆಯೂ ಸತ್ಯದಂತೆಯೂ ತೋರುತ್ತಿದ್ದ ಸಂಸಾರ ಕಲನೆಯೆಲ್ಲವೂ ಪರಿಹಾರವಾಗುವುದು. ಆಗ ಜೀವನಿಗೆ ಇತಿನಾಮಿಕಾ ಎಂಬ ಮೊದಲನೆಯ ಭೂಮಿಕೆಯು ಪ್ರಾಪ್ತವಾಗುವುದು. ಆಗ ಸಂಸಾರಕಾರಣವಾದ ಕರ್ಮವು ಹುರಿದ ಬೀಜದಂತಾಗುವುದು.

ಇತಿನಾಮಿಕಾ ಜುಷ್ಟಂ ಯದಾ ಪಶ್ಯತಿ ಅನ್ಯಮೀಶಂ ಅಸ್ಯ ಮಹಿಮಾನಮಿತಿ ವೀತ ಶೋಕಃ ಇತಿ ಶ್ವೇತಾಶ್ವತರ, ಕಾಠಕ, ಶ್ರುತ್ಯೋಃ ಛಾಂದೋಗ್ಯೇ ಸ್ವಪಿತಿ ನಾಮ ನಿರ್ವಚನೇ ಸ್ವಂ ಅಪಿ ಇತೀತಿ ವಿಭಾಗೇಚ ಇತಿ ಪದೇನ ವ್ಯವಹೃತತ್ವಾತ್ ಇತಿನಾಮಿಕಾ ಇತ್ಯರ್ಥಃ ಯದ್ಯಪಿ ಅಜ್ಞಸುಷುಪ್ತಾವಪಿ ಸ್ವಪಿತಿ ನಾಮಾಸ್ತಿ, ತಥಾಪಿ, ತತ್ತ್ವ ಬೋಧೇನ ಅಜ್ಞಾನ ಲಿಂಗಾದಿ ಬಾಧಾತ್ ಯಸ್ಯಃ ಉಪಾಧೇಃ ಯಸ್ಯಾಂ ಅವಿದ್ಯಾಯಾಂ ಲಯಃ ತಯೋರಭಾವಾತ್ ಅಪ್ಯಯ ಬೋಧಕ ಅಪಿ ಶಬ್ದಸ್ಯ ನಿವೃತ್ತೌ ಸ್ವರೂಪ ಪ್ರಾಪ್ತ್ಯರ್ಥಕ ಇತಿ ಶಬ್ದ ಏವ ಅವಶಿಷ್ಟಃ ತನ್ನಾಮಸಂಪ ದ್ಯತ ಇತಿಭಾವಃ - ತಾ. ಪ್ರ.)

(ಮೂಲದಲ್ಲಿ ಸ್ವೇಂದ್ರಿಯಾವಯ ಮಾತ್ಮನಿ ಎಂಬುದನ್ನು ಸ್ವೇಂದ್ರಿಯಾಪ್ಯ ಯಮಾತ್ಮನಿ ಎಂದು ಮಾಡಿಕೊಂಡಿದೆ. ಆದರೂ ಸುಖವಾಗಿಲ್ಲ.)

ಪಶ್ಯಂತೀ ನಾಮ ಕಲಿತೋತ್ಸೃಜಂತೀ ಚೇತ್ಯಚರ್ವಣಾಂ ।
ಮನೋಮೋಹಾಭ್ರನಿರ್ಮುಕ್ತಾ ಶರದಾಕಾಶ ಕೋಶವತ್ ॥ ೯ ॥

ಶುದ್ಧಾ ಚಿದ್ಭಾವಮಾತ್ರಸ್ಥಾ ಚೇತ್ಯಚಿಚ್ಚಾಪಲಂ ಗತಾ ।
ಸಮಸ್ತಸಾಮಾನ್ಯವತೀ ಭವತೀರ್ಣಭವಾರ್ಣವಾ ॥ ೧೦ ॥

ಅಪುನರ್ಭವ ಸೌಷುಪ್ತ ಪದಪಾಂಡಿತ್ಯ ಪೀವರೀ ।
ಪರಮಾಸಾದ್ಯ ವಿಶ್ರಾಂತಾ ವಿತತೇ ಪದೇ ॥ ೧೧ ॥

೯-೧೦. (ಹೀಗೆ ದೃಶ್ಯವೆಲ್ಲವೂ ಬಾಧಿತವಾಗಲು ಅಪರೋಕ್ಷದೃಕ್ಕಾಗಿ ಮಾತ್ರ ಉಳಿಯುವುದರಿಂದ, ಈ ಅವಸ್ಥೆ (ಭೂಮಿಕೆಗೆ)ಪಶ್ಯಂತಿ ಎಂದೂ ಹೆಸರುಂಟು ಎಂಬುದನ್ನು ಕೇಳಲಾಗುವುದು.) ಚೇತ್ಯವೆಂದರೆ ವಿಷಯ ಜಾತಗಳನ್ನು ಪದೇ ಪದೇ ಚರ್ವಿಸುವುದನ್ನು ಸಂಪೂರ್ಣವಾಗಿ ಬಿಟ್ಟು ಮನಸ್ಸಿನ ಮೋಹವೆಂಬ ಮೋಡ ದಿಂದ ಸಂಪೂರ್ಣವಾಗಿ ಮುಕ್ತವಾಗಿ, ಶರದೃತುವಿನ ಆಕಾಶದಂತೆ ಶುದ್ಧವಾಗಿ, ಚಿತ್ಸ್ವಭಾವದಲ್ಲಿ ನಿಂತಿರುವ, ಹಿಂದಿನ ಚಪಲ ಸ್ವಭಾವವನ್ನೆಲ್ಲ ಬಿಟ್ಟಿರುವ ಸಮಸ್ತ ಪದಾರ್ಥ ಜಾತಕ್ಕೂ ಸತ್ತಾ ಸಾಮಾನ್ಯವಾಗಿರುವ, ಜೀವದಶೆ ಯಲ್ಲಿದ್ದರೂ ಭವಸಾಗರವನ್ನು ದಾಟಿರುವ ಚಿತ್ತಿಗೆ ಪಶ್ಯಂತೀ ಎಂಬ ಹೆಸರೂ ಉಂಟು.

೧೧. ಆಗ ಚಿತ್ತು ಮತ್ತೆ ಜನ್ಮವಿಲ್ಲವೆಂಬ ಸುಷುಪ್ತಿಯನ್ನು ಪಡೆದು ಪ್ರಜ್ಞಾನ ಘನವಾಗಿರುವುದು. ಪರವಸ್ತುವಿನ ದರ್ಶನದಿಂದ ಶಾಂತಿಯನ್ನು ಪಡೆಯುವುದು. ಪರವಸ್ತುವಿನಲ್ಲೇ ಶಾಂತವಾಗಿರುವುದು.

(ಸೌಷುಪ್ತಂ ಇತಿ ಪದಸ್ಯ ಸುಷ್ಠು ನಿರತಿಶಯಾನಂದಾತ್ಮಕಂ ಸುಪ್ತಂ ಸ್ವಲಾಭ ರೂಪ ಮಿತಿ ಛಾಂದೋಗ್ಯಕೃತ ವ್ಯುತ್ಪತ್ತ್ಯನುರೂಪಂ । ಯತ್ಪಾಂಡಿತ್ಯಂಚ ಪಂಡಾ ಶಾಸ್ತ್ರ ಜನ್ಯಂಜ್ಞಾನಂ ತಾಂ ಇತಃ ಪ್ರಾಪ್ತಃ ಪಂಡಿತಃ ತಸ್ಯಭಾವಃ ಪಾಂಡಿತ್ಯಂ ಯಶ್ಚಶ್ರೋತ್ರಿಯೋಽವೃಜಿನೋಽಕಾಮಹತಃ ಇತಿ ಶ್ರುತ್ಯಾ ಪ್ರದರ್ಶಿತ ಲಕ್ಷಣ ವಿದ್ವ ದನುಭವಸಿದ್ಧಂ ಸ ಯೋ ಮನುಷ್ಯಾಣಾಂ ರಾದ್ಧಃ ಇತ್ಯಾದಿನಾ ಮಾನುಷಾನಂದಾದಿ ಹೈರಣ್ಯ ಗರ್ಭಾನಂದಾಂತ ಶತ ಶತ ಗುಣೋತ್ತರೋತ್ತರೋತ್ಕೃಷ್ಟ ವಿಷಯಾನಂದ ಶೀಕರ ಮಹಾರ್ಣವಾಯಿತತ್ವೇನ ಶ್ರುತಿ ದರ್ಶಿತಂ ನಿರತಿಶಯಾನಂದರೂಪಂ ತೇನ ಪೀವರೀ ಅತಿಮಹತೀ) ಅಥವಾ ಸೌಷುಪ್ತ ಪದಸ್ಯ ಸೌಷುಪ್ತ ಸ್ಥಾನಸ್ಯ ಯತ್

ಏತತ್ತೇ ಮನಸಿ ಕ್ಷೀಣೇ ಪ್ರಥಮಂ ಕಥಿತಂ ಪದಂ ।
ದ್ವಿತೀಯಂ ಶೃಣು ವಿಪ್ರೇಂದ್ರ ಶಕ್ತೇರಸ್ಯಾಃ ಸುಪಾವನಂ ॥ ೧೨ ॥

ಏಷ್ವೈವ ಮನಸೋನ್ಮುಕ್ತಾ ಚಿಚ್ಛಕ್ತಿಃ ಶಾಂತಿಶಾಲಿನೀ ।
ಸರ್ವಜ್ಯೋತಿಸ್ತಮೋಮುಕ್ತಾ ವಿತತಾಕಾಶ ಸುಂದರೀ ॥ ೧೩ ॥

ಘನಸೌಷುಪ್ತಲೇಖಾವಚ್ಛಿಲಾಂತಃ ಸನ್ನಿವೇಶವತ್ ।
ಸೈಂಧವಾಂತಸ್ಥರಸವದ್ವಾತಾಂತಃ ಸ್ಪಂದಶಕ್ತಿವತ್ ॥ ೧೪ ॥

ಪಾಂಡಿತ್ಯಂ ನಿರಸ್ತಸ್ವಾವಿದ್ಯಾಮೌರ್ಖ್ಯ ಚಿದೇಕಘನ ಪೂರ್ಣಾನಂದ ಸ್ವ ಪ್ರಕಾಶ ಸ್ವರೂಪಂ ತೇನ ಪೀವರೀ ಅತಏವ ಭಾಗತ್ಯಾಗಲಕ್ಷಣಯಾ ಮಹಾ ಸುಪ್ತಪದ ನಾಮಿಕಾಪಿ ಸಾ ಇತಿಭಾವಃ ತಾ ಪ್ರ.)

೧೨. ಮನಸ್ಸು ಕ್ಷೀಣವಾಗಲು ಪ್ರಾಪ್ತವಾಗುವ ಮೊದಲನೆಯ ಅವಸ್ಥೆಯನ್ನು ಕುರಿತು ಹೇಳಿಯಾಯಿತು. ಈ ಚಿಚ್ಛಕ್ತಿಯ ಎರಡನೆಯ ಭೂಮಿಕೆಯು ಇನ್ನೂ ಪಾವನವಾದುದು. ಅದನ್ನು ಹೇಳುವೆನು ಕೇಳು.

೧೩. ಹೀಗೆ ಮನೋವ್ಯಾಪಾರ ರೂಪ ಮೋಹದಿಂದ ನಿರ್ಮುಕ್ತವಾದ ಚಿಚ್ಛಕ್ತಿಯು ಶಾಂತಿವತಿಯಾಗುವಳು. ಸರ್ವ ಜ್ಯೋತಿಗಳಿಗಿಂತಲೂ ತಮಸ್ಸುಗಳಿಗಿಂತಲೂ ಆಚೆ ಇರುವಳಾಗಿ, ವಿಸ್ತಾರವಾದ ಆಕಾಶದಂತೆ ಶುದ್ಧ ಸೌಂದರ್ಯವುಳ್ಳವಳಾಗುವಳು.

(ಜ್ಯೋತಿರ್ಭಿಃ ಸೂರ್ಯ ಚಂದ್ರಾಗ್ನಿವಾಕ್ಕಾರಣರೂಪೈಃ, ತಮೋಭಿಃ ಅಂಧಕಾರಾಜ್ಞಾನತತ್ಕಾರ್ಯೈಶ್ಚ)

೧೪. ಘನವಾಗಿರುವ ಸುಷುಪ್ತಿಯ ರೇಖೆಯಂತೆ, ಶಿಲೆಯೊಳಗಿರುವಂತಹ ಸನ್ನಿವೇಶದಂತೆ, ಉಪ್ಪಿನೊಳಗಿರುವ ರಸದಂತೆ, ಗಾಳಿಯೊಳಗಿರುವ ಸ್ಪಂದ ಶಕ್ತಿಯಂತೆ, ಇರುವ ಈ ಚಿಚ್ಛಕ್ತಿಯು.

ಕಾಲೇನ ಯತ್ರ ತತ್ರೈವ ಪರಾಂ ಪರಿಣತಿಂ ಯದಾ ।
ಶೂನ್ಯಶಕ್ತಿರಿವಾಕಾಶೇ ಪರಮಾಕಾಶಗಾ ತದಾ ॥ ೧೫ ॥

ಚೇತ್ಯಾಂಶೋನ್ಮುಖತಾಂ ನೂನಂ ತ್ಯಜತ್ಯಂಬ್ವಿವ ಚಾಪಲಂ ।
ವಾತಲೇಖೇವ ಚಲನಂ ಪುಷ್ಪಲೇಖೇವ ಸೌರಭಂ ॥ ೧೬ ॥

ಕಾಲತಾಕಾಶತೆ ತ್ಯಕ್ತ್ವಾ ಸಕಲೇ ಸಕಲಾಕಲಾ ।
ನ ಜಡಾ ನಾಜಡಾ ಸ್ಫಾರಾ ಧತ್ತೇಸತ್ತಾಮನಾಮಿಕಾಂ ॥ ೧೭ ॥

---

೧೫. (ವಿಷಯವನ್ನುತ್ಯಜಿಸಿ ತನ್ನಲ್ಲಿ ತಾನು ಐಕ್ಯವಾಗುವ) ಕಾಲವು ಬರಲು, ಎಲ್ಲಿತ್ತೋ ಅಲ್ಲಿಯೇ, ಪರಮಾಕಾಶದಲ್ಲಿರುವ ಶೂನ್ಯ ಶಕ್ತಿಯು ಆಕಾಶದ ದಲ್ಲಿಯೇ ಲೀನವಾಗುವಂತೆ ಯಾರೂ ಅರಿಯಲಾರದ ತೆರದಲ್ಲಿ ಲೀನವಾಗಿ ಹೋಗು ವುದು. ಆಗ.

೧೬. ಚಾಪಲ್ಯವನ್ನು ಬಿಟ್ಟ ನೀರಿನಂತೆ, ಚಲನವನ್ನು ಬಿಟ್ಟ ಗಾಳಿಯ ಸುಳಿಯಂತೆ, ಸೌರಭವನ್ನು ಬಿಟ್ಟ ಹೂವಿನಂತೆ, ವಿಷಯ ಮುಖವಾಗಿರುವಿಕೆಯನ್ನು ಸಂಪೂರ್ಣವಾಗಿ ಬಿಡುವುದು.

೧೭. ಆಗ, ಕಾಲ, ಆಕಾಶ, ಇವೆರಡೂ ಇಲ್ಲವಾಗುವುವು. ಚಿಚ್ಛಕ್ತಿ ಯಲ್ಲಿ ತೋರಿದ್ದ ಸಕಲ ವ್ಯಾಪಾರಗಳೂ ವಸ್ತುಗಳೂ ಶೂನ್ಯವಾಗುವುವು. ಆಗ ಸರ್ವ ವ್ಯಾಪಾರಗಳಿಗೂ ವಸ್ತುಗಳಿಗೂ ಅಧಿಷ್ಠಾನವಾಗಿದ್ದ, ಯಾವದೊಂದು ಹೆಸರೂಸಲ್ಲದ, ಜಡವೂಅಲ್ಲದ ಅಜಡವೂಅಲ್ಲದ, ಆ ಸತ್ತಾಸಾಮಾನ್ಯರೂಪವಾದ ಶಕ್ತಿಯುತಾನೇ ತಾನಾಗುವುದು.

(ಕ್ರಿಯಾ ಹಿಕಾಲಸ್ಯಕಲಾ । ಪರಿಚ್ಛಿನ್ನಂ ಅವಕಾಶ ಸಾಪೇಕ್ಷ್ಯಂ ವಸ್ತು ಆಕಾಶಸ್ಯಕಲಾ । ತಾಭ್ಯಾಂಸಕಲೇ ಕಾಲತಾಕಾಶತೇ । ತಾ. ಪ್ರ)

ದಿಕ್ಕಾಲಾದ್ಯನವಚ್ಛಿನ್ನ ಮಹಾಸತ್ತಾಪದಂ ಗತಾಂ ।
ತುರ್ಯತುರ್ಯಾಂಶಕಲಿತಾಮಕಲಂಕಾಮನಾಮಯಾಂ ॥ ೧೮ ॥

ಕಾಂಚಿದೇವ ವಿಶಾಲಾಕ್ಷ ಸಾಕ್ಷಿವತ್ ಸಮ ।
ಸರ್ವತಃ ಸರ್ವದಾ ಸರ್ವಪ್ರಕಾಶಸ್ವಾದುತತ್ಪರಾಂ ॥ ೧೯ ॥

ಏಷಾ ದ್ವಿತೀಯಾ ಪದತಾ ಕಥಿತಾ ತವ ಸುವ್ರತ ।
ತೃತೀಯಂ ಶೃಣು ವಕ್ಷ್ಯಾಮಿ ಪದಂ ಪದವಿದಾಂ ವರ ॥ ೨೦ ॥

---

೧೮. ದಿಕ್ಕು (ಆಕಾಶ,) ಕಾಲ, ಮೊದಲಾದವುಗಳಿಂದ ತುಂಡು ತುಂಡಾಗದ ಮಹಾಸತ್ತಾ ಪದವಿಯನ್ನು ಹೊಂದಿದ ಆ ಚಿಚ್ಛಕ್ತಿಯು, (ಜಾಗ್ರತ್ ಸ್ವಪ್ನ ಸುಷುಪ್ತಿಗಳನ್ನು ಮೀರಿದ) ತುರ್ಯವೆಂಬ ಅವಸ್ಥೆಯಲ್ಲಿ (ವಿರಾಟ್, ಹಿರಣ್ಯಗರ್ಭ, ಅವ್ಯಾಕೃತಗಳೆಂಬ) ತುರ್ಯ ಪುರುಷರ ಅಂಶವುಳ್ಳದ್ದಾಗಿ, ಯಾವದೊಂದು ಮೋಹವೂ ಇಲ್ಲದೆ ಶುದ್ಧವಾಗಿ, ಯಾವದೊಂದು ಕುಂದು ಕೊರತೆಯೂ ಇಲ್ಲದೆ ಅನಾಮಯವಾಗಿ ಆಗುವುದು.

(ದಿಕ್ಕಾಲಾದಿ= ಇಲ್ಲಿರುವ ಆದಿಶಬ್ದದಿಂದ ಕಾರ್ಯಕಾರಣತಾ ಪರಂಪರೆಯು ಸೂಚಿತವಾಗುವುದು. ದಿಕ್ಕು (ಆಕಾಶ) ಕಾಲ, ಇವುಗಳಿಂದ ಪರಿಚ್ಛೇದವು ಪ್ರಾಪ್ತವಾಗುತ್ತಿದ್ದ ಹಾಗೆಯೇ ಕಾರ್ಯ ಕಾರಣ ಭಾವವು ಬರುವುದು.)

೧೯. ಎಲೈ ವಿಶಾಲಾಕ್ಷನೆ, ಆಗ, ಸಾಕ್ಷಿಯಂತೆ ಸಮವಾಗಿರುವ ಸ್ಥಿತಿಯನ್ನು ಪಡೆದು, ಸರ್ವರೀತಿಯಿಂದಲೂ ಸರ್ವಕಾಲದಲ್ಲಿಯೂ ಸರ್ವಕ್ಕಿಂತ ಪ್ರಕಾಶವೂ ಆನಂದವೂ ಆದ ಆ ಒಂದು ಸ್ಥಿತಿಯನ್ನು (ಚಿಚ್ಛಕ್ತಿಯು ಪಡೆಯುವುದು.)

೨೦ ಇದೇ (ತುರ್ಯವೆಂಬ) ಎರಡನೆಯ ಭೂಮಿಕೆಯು. ಎಲೈ ಸುವ್ರತನೆ, ಇದನ್ನು ನಿನಗೆ ಹೇಳಿದೆನು. ಇನ್ನು ಮೂರನೆಯ ಭೂಮಿಕೆಯನ್ನು ಕುರಿತು ಹೇಳುವೆನು. ಭೂಮಿಕಾಜ್ಞಾನ ಸಂಪನ್ನನಾದ ರಾಮನೆ, ಕೇಳು.

ಏಷಾ ದೃಕ್ ಚೇತ್ಯವಲನಾದನಾವಾರ್ಥಪದಂ ಗತಾ ।
ಬ್ರಹ್ಮಾತ್ಮೇತ್ಯಾದಿ ಶಬ್ದಾರ್ಥಾದತೀತೋದೇತಿ ಕೇವಲಾ ॥ ೨೧ ॥

ಸ್ಥೈರ್ಯೇಣ ಕಾಲತಃ ಸ್ವಸ್ಥಾ ನಿಷ್ಕಲಂಕಾ ಪರಾತ್ಮನಾ ।
ತುರ್ಯಾತೀತಾದಿನಾಮತ್ವಾದಪಿ ಯಾತಿ ಪರಂ ಪದಂ ॥ ೨೨ ॥

ಸಾ ಪರಾ ಪರಮಾ ಕಾಷ್ಠಾ ಪ್ರಧಾನಂ ಶಿವಭಾವತಃ ।
ಚಿತ್ಯೇಕಾ ನಿರವಚ್ಛೇದಾ ತೃತೀಯಾ ಪಾವನೀ ಸ್ಥಿತಿಃ ॥ ೨೩ ॥

---

೨೧. (ಈ ಮೂರನೆಯ ಭೂಮಿಕೆಯಲ್ಲಿ) ಇದು ದೃಕ್ಕು ಇದು ಚೇತ್ಯವೆಂಬ ಎರಡೂ ಇಲ್ಲವಾಗಿ ಅಖಂಡ ಬ್ರಹ್ಮಾಕಾರವೃತ್ತಿಯೇ ಇದ್ದು ಬಿಡುವುದು. ಅದರಿಂದ, ಗ್ರಾಹ್ಯ ಗ್ರಾಹಕ ಭಾವವೇ ಇಲ್ಲದೇ ಹೋಗುವುದರಿಂದ ಬ್ರಹ್ಮ, ಆತ್ಮ, ಮೊದಲಾದ ಶಬ್ದಗಳೂ ಅರ್ಥಗಳೂ ಅಲ್ಲಿ ಅನ್ವಯಿಸುವುದಿಲ್ಲವಾದ್ದರಿಂದ, ಭೂಮಿಕೆಯು ಕೇವಲ ವಾಗಿರುವುದು.

(ಸಂಪ್ರಜ್ಞಾತ ಸಮಾಧಿಗಮ್ಯಾ ಏವ ಪೂರ್ವಾಭೂಮಿಕಾ ಇಯಂತು ಅಸಂಪ್ರಜ್ಞಾತ ಸಮಾಧಿ ಪ್ರತಿಷ್ಠಾಗಮ್ಯಾ ಇತಿವಿಶೇಷಃ ತಾ. ಪ್ರ.)

೨೨. ಸ್ಥಿರವಾಗಿ (ಯಾವುದೊಂದು ವಿಕಾರವೂ ಇಲ್ಲದೆ,) ಕಾಲದ ಅಂಕೆಗೆ ಒಳಪಡದೆ ತನ್ನ ಪಾಡಿಗೆ ತಾನಾಗಿ, ಯಾವರೀತಿಯ ಕಲಂಕವೂ ಇಲ್ಲದೆ, ತುರೀಯ ಕ್ಕಿಂತಲೂ ಅತೀತವಾದ ಸ್ಥಿತಿಯಾಗಿ ತಮಸ್ಸಿಗಿಂತ ಆಚೆಯ ಆತ್ಮ ಸ್ವರೂಪವಾಗಿ, ಪರಮಪುರುಷಾರ್ಥ ಸ್ವರೂಪವಾಗಿರುವುದು.

೨೩. ಪಾವನವಾದ ಈ ಮೂರನೆಯ ಭೂಮಿಕೆಯು, ಎಲ್ಲದಕ್ಕಿಂತ ಹೆಚ್ಚಿನ ದೆಂದು ಪರಾ ಎನ್ನಿಸಿಕೊಳ್ಳುವುದು. ಇದಕ್ಕಿಂತ ಉತ್ತಮವಾದುದಿನ್ನಿಲ್ಲ ಎಂದು ಪರಮಾ ಎನ್ನಿಸಿಕೊಳ್ಳುವುದು. ಇದೇ ಕೊನೆಯದು ಎಂದು ಕಾಷ್ಠಾ ಎನ್ನಿಸಿಕೊಳ್ಳು ವುದು, ಶಿವಭಾವವು ತಾನೇತಾನಾಗಿರುವುದು. ಯಾವುದೊಂದು ರೀತಿಯ ಅವಚ್ಛೇ ದವೂ ಇಲ್ಲದೆ, ಚಿತ್ತಿನಲ್ಲಿ ತಾನೇ ತಾನಾಗಿರುವುದು.

ಚಿರಮಸ್ಯಾಂ ಪ್ರತಿಷ್ಠಾಯಾಂ ಸರ್ವಾಧ್ವಾ ಧ್ವಗದೂರಗಾ ।
ಸಾ ಮಮಾಪ್ಯಂಗ ವಚಸಾಂ ನ ಸಮಾಯಾತಿ ಗೋಚರಂ ॥ ೨೪ ॥

ತ್ರಿಮಾರ್ಗಕಲನಾತೀತಮಿತಿ ತೇ ಕಥಿತಂ ಮುನೇ ।
ತಿಷ್ಠ ತಸ್ಮಿನ್ ಪದೇ ನಿತ್ಯಮಿತಿ ದೇವಃ ಸನಾತನಃ ॥ ೨೫ ॥

ಏತನ್ಮಯಮಿದಂ ವಿಶ್ವಂ ಮುನೇ ತನ್ಮಯವೇದನಾತ್ ।
ಸತ್ಯಸಂವೇದನಾನ್ನೇದಂ ನಚ ನೇದಂ ಮುನೀಶ್ವರ ॥ ೨೬ ॥

---

೨೪. ಈ ಭೂಮಿಕೆಯಲ್ಲಿ ದೀರ್ಘಕಾಲ ನಿಲ್ಲುವುದರಿಂದ ಶೈವ ಸಿದ್ಧಾಂತದಲ್ಲಿ ಹೇಳುವ ಷಡಧ್ವಗಳಿಗೂ ಶ್ರುತಿ ಪ್ರಸಿದ್ಧಗಳಾದ ಧೂಮಾರ್ಚಿರಾದಿ ಮಾರ್ಗಗಳಿಗೂ ದೊರಕದ ಉತ್ತಮಸ್ಥಿತಿಯುದೊರೆಯುವುದು ಅದನ್ನು ವರ್ಣಿಸಲು ನನಗೂ ಕಷ್ಟವು

೨೫. ಜಾಗ್ರದಾದ್ಯವಸ್ಥೆಗಳನ್ನೂ ಅವನ್ನು ಮೀರಿದ ತುರೀಯಾವಸ್ಥೆಯನ್ನೂ ಮೀರಿದ ಅವಸ್ಥೆಯಿದೆಂದು ಎಲೈಮುನಿಯೆ, ಇದನ್ನು ಕುರಿತು ನಿನಗೆ ಹೇಳಿದೆನು ಇದೇ ದೇವನೆಂಬುದು. ಇದು ಸನಾತನವು. ಇದರಲ್ಲಿ ಯಾವಾಗಲೂ ಇರುವನಾಗು.

೨೬. ವಿಶ್ವಕ್ಕೆ ವಿಶ್ವವೇ (ಈ ತುರ್ಯಾವಸ್ಥಾಗೋಚರವಾದ ಬ್ರಹ್ಮದಿಂದ ತುಂಬಿಹೋಗಿರುವುದು. ಎಲೈ ಮುನೀಂದ್ರ, ಅದು ಎಲ್ಲೆಲ್ಲಿಯೂ ತುಂಬಿರುವುದೆಂದು ಅನುಭವವಾಗುವುದರಿಂದಲೂ ಆ ಅನುಭವವು ಸತ್ಯವಾಗಿರುವುದರಿಂದಲೂ, ಇದನ್ನು ಹೌದು ಎಂದಾಗಲೀ, ಅಲ್ಲವೆಂದಾಗಲೀ ವಿಕಲ್ಪ ಮಾಡುವುದು ಸಾಧ್ಯವಿಲ್ಲವಾದ್ದರಿಂದಲೂ, ವಿಶ್ವಕ್ಕೆ ವಿಶ್ವವೇ ಅದು (ಎಂದು ತಿಳಿದುಕೊ).

ನೇದಂ ಪ್ರವರ್ತತೇ ಕಿಂಚಿನ್ನೇದಂ ಕಿಂಚಿನ್ನಿವರ್ತತೇ ।
ಶಾಂತಂ ಸಮಸಮಾಭಾಸಂ ಪ್ರಥತೇ ಸ್ವಸ್ಯ ಕೋಶವತ್ ॥ ೨೭ ॥

ಅದ್ವೈತೈಕ್ಯಾದ ಸಂಕ್ಷೋಭಾದ್ಘನ ಚೇತನಯಾ ತಯಾ ।
ಅವಿಕಾರಾದಿಮತ್ತ್ವಾಚ್ಚ ನಿತ್ಯಾನಿತ್ಯತಯಾ ಚಿರಂ ॥ ೨೮ ॥

---

೨೭. ಈ ವಿಶ್ವರೂಪನಾದ ದೇವನು ಯಾವುದಕ್ಕೂ ಪ್ರವರ್ತಕನಾಗುವುದಿಲ್ಲ ; ಯಾವುದಕ್ಕೂ ನಿವರ್ತಕನಾಗುವುದಿಲ್ಲ. ಶಾಂತವಾಗಿ, ಸರ್ವತ್ರ ಒಂದೇ ರೀತಿಯಾಗಿದ್ದುಕೊಂಡು, ತನ್ನಿಂದ ತಾನೇ ಒಂದು ಚೀಲವನ್ನು ಮಾಡಿಕೊಂಡು ಅದರಲ್ಲಿ ಸೇರಿಕೊಂಡಿರುವಂತೆ ಇರುವನು.

(ಬ್ರಹ್ಮಣಃ ಕೋಶೋಽಸಿ ಮೇಧಯಾ ಪಿಹಿತಃ ಎಂಬ ಶ್ರುತಿ ವಚನವನ್ನು ಗಮನಿಸಿ.)

೨೮. ಈ ವಿಶ್ವರೂಪನಾದ ದೇವನು ಅದ್ವೈತ ಐಕ್ಯನಾಗಿರುವುದರಿಂದಲೂ, ಯಾವರೀತಿಯ ಸಂಕ್ಷೋಭವೂ ಇಲ್ಲದಿರುವುದರಿಂದಲೂ, ಚೈತನ್ಯ ಘನನಾಗಿರುವುದರಿಂದಲೂ, ಯಾವುದೊಂದು ವಿಕಾರವೂ ಇಲ್ಲದಿರುವುದರಿಂದಲೂ ನಿತ್ಯವೂ ಹೌದು ಅನಿತ್ಯವೂ ಹೌದು ಎಂಬಂತೆ ಇದ್ದುಕೊಂಡು ಸ್ಥಿರವಾಗಿರುವನು.

ಅದ್ವೈತೈಕ್ಯ ಎರಡನೆಯದು ಯಾವುದೂ ಇಲ್ಲವೇ ಇಲ್ಲದೆ ತಾನೇತಾನಾಗಿರುವ ಐಕ್ಯೈಕಭಾವ. ಅಸಂಕ್ಷೋಭ= ಒಂದು ಪಾತ್ರೆಯಲ್ಲಿ ಸಂಪೂರ್ಣವಾಗಿ ನೀರು ತುಂಬಿರುವಾಗ ಅದರಲ್ಲಿರುವ ನೀರು ಹೇಗಾದರೂ ಚಲಿಸಬಲ್ಲುದೇನು ? ಹಾಗೆ ಚಲನರಹಿತವಾಗಿರುವುದು ಅಸಂಕ್ಷೋಭ. ಘನಚೇತನ ಘನೇಽಪಿ ಸೈಂಧವಖಂಡೇ ದ್ರವತ್ವಾದಿ ವಿಕಾರಃ ತದ್ರಸಏವ ದೃಷ್ಟಸ್ತದ್ವತ್ ಎಂದು ತಾತ್ಪರ್ಯ ಪ್ರಕಾಶಕಾರರು. ಇಲ್ಲಿ ಪ್ರಜ್ಞಾನಘನ ಎಂಬಂತೆ ಘನಚೇತನ ಎಂದು ಅರ್ಥಮಾಡಿದೆ. ಅವಿಕಾರಾದಿಮತ್= ಇಲ್ಲಿ ತಾತ್ಪರ್ಯ ಪ್ರಕಾಶಕಾರರು ವಿವರ್ತವಾದವನ್ನು ಚಿಂತಿಸಿದ್ದಾರೆ. ನಿತ್ಯಾನಿತ್ಯತಾ= ಬ್ರಹ್ಮವು ನಿತ್ಯವಾಗಿದ್ದರೂ ಅದರಲ್ಲಿ ಕಾಲಾಕಾಶಾದಿ ಕಾರಣಗಳಿಂದ ಉಂಟಾಗುವ ಜಗದಾದ್ಯನಿತ್ಯತೆಯೂ ಉಂಟು)

ಚಿದ್ಘನತ್ವಾ ಚ್ಛಿಶುಶಿಲಾಕೋಶಾನಾಂ ಜಗತಾಮಪಿ ।
ಮನಾಗಪಿ ನ ಭೇದೋಸ್ತಿ ಸತಾಮಪ್ಯ ಸತಾಮಪಿ ॥ ೨೯ ॥

ಸಮಸ್ತಂ ಸುಶಿವಂ ಶಾಂತಮತೀತಂ ವಾಗ್ವಿಲಾಸತಃ ।
ಓಮಿತ್ಯಸ್ಯ ಚ ತನ್ಮಾತ್ರಾ ತುರ್ಯಾ ಸಾ ಪರಮಾ ಗತಿಃ ॥ ೩೦ ॥

---

೨೯. ಸತ್ಪುರುಷರಾಗಲಿ. ಅಸತ್ಪುರುಷರಾಗಲಿ, ಚಿತ್ತು ತಾನು ಒಂದೇ ಒಂದಾಗಿರುವುದರಿಂದ, ಶಿಶುವಾಗಲಿ, ಶಿಲಾಕೋಶವಾಗಲಿ, ಜಗತ್ತಾಗಲಿ ಯಾವ ಭೇದವೂ ಎಳ್ಳಷ್ಟೂ ಇಲ್ಲ. (ತಾತ್ಪರ್ಯ ಪ್ರಕಾಶಕಾರರು ಹಿಂದೆ ೨೭ರಲ್ಲಿ ಹೇಳಿರುವ ಸಮಸಮಾಭಾಸ ಎಂಬುದನ್ನು ಇಲ್ಲಿ ವಿವರಿಸಿದೆ ಎಂದು ಅಭಿಪ್ರಾಯಪಟ್ಟು, "ಸತಾಂ ಅಸತಾಂ ಅಪಿ ಶಿಶುಕಲ್ಪಿತ ನಭಃಶಿಲಾಕೋಶಾನಾಂ ಜಗತಾಂ ಅಪಿ ಚಿದ್ಘನತ್ವಾನ್ನಮನಾಗಪಿ ಭೇದೋಽಸ್ತೀತಿ ಸಮಸಮಾಭಾಸಮಿತಿ ಸುಷ್ಠೂಕ್ತಂ ॥ ಎಂದಿದ್ದಾರೆ. ಇಲ್ಲಿ, ಚಿದ್ಘನವು ಕಾಲದೇಶಾದಿಗಳಿಂದ ಪರಿಚ್ಛಿನ್ನವಾದಂತಿದ್ದರೂ ಅಧಿಷ್ಠಾನ ಅಥವಾ ಸತ್ತಾದೃಷ್ಟಿಯಿಂದ ಒಂದೇ ಒಂದಾಗಿರುವುದರಿಂದ ಅದರಲ್ಲಿ ಯಾವ ಭೇದವನ್ನೂ ಕಲ್ಪಿಸುವಂತಿಲ್ಲ ಎಂದು ಅರ್ಥ ಮಾಡಿದೆ)

೩೦. ಸಮಸ್ತವೂ ಶಿವವೇ! ಶಾಂತವೇ! ವಾಕ್ಕಿನಿಂದ ವರ್ಣಿಸಲು ಅಸಾಧ್ಯವಾದ ಪ್ರಣವವೇ? ಆ ಪ್ರಣವದ ಸೂಕ್ಷ್ಮವಾದ ತನ್ಮಾತ್ರಾರೂಪವೇ ತುರ್ಯವು, ಅದೇ ಕೊನೆಯ ಸ್ಥಾನವು.

(ಓಮಿತ್ಯಸ್ಯಾಕ್ಷರಸ್ಯ ವಿರಾಡಾದಿಭಿಃ ಆಕಾರಾದಿ ಮಾತ್ರಾಭೇದೇನ ಕಲ್ಪಿತೈಃ ಚತುರ್ಭಿಃಪಾದೈಃ ಪ್ರವಿಭಕ್ತಸ್ಯ ಯಾ ನಾದಬಿಂದುಶಕ್ತಿ ಶಾಂತಾಖ್ಯಾಃ ತಸ್ಯಾ ಅರ್ಧಮಾತ್ರಾಯಾ ಮಾತ್ರಾಸ್ತಾಸು ತುರ್ಯಾ ಶಾಂತಾಖ್ಯಾ ಸಾ ಪರಮಾಗತಿಃ । ತಸ್ಯಾಂ ಹಿ ಓತಾನುಜ್ಞಾತ್ರನುಜ್ಞಾಽವಿಕಲ್ಪಾಖ್ಯಾಸು ಸ್ಥಿತಿಷು ಅವಿಕಲ್ಪಾಖ್ಯಾ ತುರೀಯ ತುರೀಯಾ ತಾಪನೀಯಶ್ರುತೌ ಪರಮಾಗತಿಃ ವ್ಯುತ್ಪಾದಿತಾ ಇತಿ ಭಾವಃ ॥

ಶ್ರೀ ವಾಲ್ಮೀಕಿರುವಾಚ :—

ಇತ್ಯುಕ್ತವಾನಮಲದೃಕ್ಪರಿಣಾಮತೋಽಸ್ಮಿನ್ ।
ಪಾರೇ ಪದೇ ಸಮುಪಶಾಂತರವಾಭಿಧಾನೇ ॥
ತೂಷ್ಣೀಮತಿಷ್ಠದಮುನಾ ಮುನಿನಾ ಚ ಸಾರ್ಧಂ ।
ವಿಶ್ರಾಂತವೃತ್ತಿರಥ ತತ್ರ ಮುಹೂರ್ತಮೀಶಃ ॥ ೩೧ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ "ಶ್ರೀ ಪರಮೇಶ್ವರೋಪದೇಶೋ" ನಾಮ ಚತುಸ್ತ್ರಿಂಶಃ ಸರ್ಗಃ

ಶ್ರೀ ವಾಲ್ಮೀಕಿ ಹೇಳಿದನು :—

೩೧. ಈಶ್ವರನು ವಸಿಷ್ಠ ಮಹರ್ಷಿಗೆ ಹೀಗೆ ಹೇಳಿ, ಆ ಮುನಿಯೊಡನೆಯೂ ತನ್ನ ಪರಿವಾರದೊಡನೆಯೂ ನಿರ್ಮಲವಾದ ದೃಕ್ಕನ್ನು ಅವಲಂಬಿಸಿ (ಭೂಮಾನಂದದಲ್ಲಿ ಚಿದೇಕರಸನಾಗಿ) ಸಂಸಾರದ ಆಚೆಯಿರುವ ಶ್ರೇಷ್ಠವಾದ ತುರೀಯ ತುರೀಯವೆಂಬ ಪದದಲ್ಲಿ, ಎಲ್ಲಿ ಪ್ರಣವದ ಕೊನೆಯದಾದ ಅರ್ಧ ಮಾತ್ರೆಯೂ ವಿಶ್ರಾಂತವಾಗುವುದರಿಂದ ಶಾಂತರವವೆನ್ನಿಸಿಕೊಳ್ಳುವುದೋ ಆ ಪದದಲ್ಲಿ ವೃತ್ತಿಯನ್ನು ತಿರೋಧಾನ ಮಾಡಿ ಒಂದು ಮುಹೂರ್ತಕಾಲ ಸುಮ್ಮನಿದ್ದನು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ನಿರ್ವಾಣ ಪ್ರಕರಣದಲ್ಲಿ "ಶ್ರೀ ಪರಮೇಶ್ವರೋಪದೇಶ" ವೆಂಬ ಮೂವತ್ತನಾಲ್ಕನೆಯ ಸರ್ಗವು.

ಪಂಚತ್ರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ತತೋ ಮುಹೂರ್ತೇನ ಹರೋ ಗೌರೀಕಮಲಿನೀರವಿಃ ।
ಮದ್ಬಿಕಾಸೋನ್ಮುಖಃ ಸ್ವೈರಂ ವಿಕಾಸಂ ಬಹಿರಾದದೇ ॥ ೧ ॥

ದೃಕ್ತ್ರಯೋ ದ್ಯೋತಯಾಮಾಸ ಮುಖಾಕಾಶತಲೋದಿತಃ ।
ಬೋಧಂ ಸಮುದ್ಗಕಾದರ್ಕ ಅಂಶುರಾಶಿರಿವೋದ್ಗತಃ ॥ ೨ ॥

ಶ್ರೀ ಈಶ್ವರ ಉವಾಚ :—

ಮುನೇ ಮನನಮಾಹಾಯ ಸ್ವಸತ್ತೈತಾಶು ನೀಯತಾಂ ।
ತ್ವಮರ್ಥಂ ಮಾಹರಾನರ್ಥಂ ಪವನಃ ಸ್ಪಂದತಾಮಿವ ॥ ೩ ॥

ಮೂವತ್ತೈದನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧. ಅನಂತರ, ಒಂದು ಮುಹೂರ್ತಕಾಲವಾಗುತ್ತಲೂ, ಗೌರೀದೇವಿಯೆಂಬ ಕಮಲಕ್ಕೆ ಸೂರ್ಯನಂತಿರುವ ಪರಮೇಶ್ವರನು ನನ್ನನ್ನು ಪ್ರಬೋಧಗೊಳಿಸಬೇಕೆಂದು ತಾನಾಗಿ ಬಹಿರ್ಮುಖನಾದನು.

೨. ದ್ಯಾವಾ ಪೃಥಿವಿಗಳ ಮಧ್ಯದಲ್ಲಿರುವ ಅಂತರಿಕ್ಷ ಮಂಡಲದಲ್ಲಿ ತೇಜೋರಾಶಿಯಾದ ಸೂರ್ಯನ ಉದಯವಾದಂತೆ, ಆತನ ಮುಖಾಕಾಶದಲ್ಲಿ ಸೂರ್ಯಚಂದ್ರಾಗ್ನಿ ರೂಪಗಳಾದ ಮೂರು ಕಣ್ಣುಗಳೂ ತೆರೆಯಲು, ಆತನು ಮಾಯೆಯಿಂದ ಬಹಿರ್ಮುಖನಾಗಿರುವನೆಂಬುದು ತಿಳಿಯಿತು.

ಶ್ರೀ ಈಶ್ವರನು ಹೇಳಿದನು :—

೩. ಎಲೈ ಮುನೀಂದ್ರನೆ, ನೀನು ಮೊದಲು ಮನನವನ್ನು ಹಿಡಿದು ನಿನ್ನ ಆತ್ಮಸತ್ತಾ ಎಂಬ ಅರ್ಥವನ್ನು ಎಂದರೆ ಗುರಿಯನ್ನು ಸಾಧಿಸು. ಗಾಳಿಯು ತನ್ನ ವ್ಯಾಪಾರದಿಂದ ಆಕಾಶದಲ್ಲಿ ಧೂಳು ಮೊದಲಾದುವುಗಳನ್ನು ಹರಡುವಂತೆ (ನಿನ್ನ ಬಹಿರ್ವ್ಯಾಪಾರದಿಂದ) ಅನರ್ಥಕ್ಕೆ ಮಾತ್ರ ಗುರಿಯಾಗಬೇಡ.

ದ್ರಷ್ಟವ್ಯಮಿಹ ಯತ್ಕಿಂಚಿತ್ತದ್ದೃಷ್ಟಂ ಕಿಂ ಸಮಂ ಭ್ರಮೈಃ ।
ನ ಹಿ ಹೇಯ ಮುಪಾದೇಯಂ ಚೇಹ ಪಶ್ಯಾಮಿ ತದ್ವಿದಃ ॥ ೪ ॥

ಶಾಂತ್ಯಶಾಂತಿಮಯಾನೇತಾನ್ವಿಕಲ್ಪಾನ್ದಲಯನ್ನಸಿಃ ।
ಧೀರೋಽಸಿ ನಾನ್ಯಥಾ ಸ್ಥಿತ್ವಾ ತ್ವಮೇವ ಭವ ಚಾತ್ಮದೃಕ್ ॥ ೫ ॥

ಇಮಾಂ ದೃಶ್ಯದಶಾಮಾಶು ಬಾಹ್ಯಬೋಧಾಯ ವಾ ಪುನಃ ।
ಸಮಾಶ್ರಿತ್ಯ ಮದುಕ್ತಂ ತ್ವಂ ಶೃಣು ತೂಷ್ಣೀಂ ಸ್ಥಿತೇನ ಕಿಂ ॥ ೬ ॥

(ಆತ್ಮದರ್ಶನ ಮಾಡುವುದು ಅರ್ಥ: ಆತ್ಮನನ್ನು ಮರೆತು ಅನಾತ್ಮದಲ್ಲಿ ಆಸಕ್ತನಾಗುವುದು ಅನರ್ಥ.)

೪. ದ್ರಷ್ಟವ್ಯ (ದರ್ಶನ ಯೋಗ್ಯ)ವಾದುದು ಯಾವುದೋ ಅದನ್ನು ನೋಡಿದುದಾಯಿತು. ಇನ್ನು ಈ ಭ್ರಮೆಗಳಿಂದ ಆಗಬೇಕಾದುದೇನು? ಆ ನೋಡಬೇಕಾದುದನ್ನು ನೋಡಿದವರಿಗೆ ಯಾವುದು ಹೇಯ, ಯಾವುದು ಉಪಾದೇಯ ಎಂಬುದನ್ನು ನಾನು ಕಾಣೆನು.

('ಯೇನ ಅಶ್ರುತಂ ಶ್ರುತಂ ಭವತಿ, ಅಮತಂ ಮತಂ, ಅವಿಜ್ಞಾತಂ ವಿಜ್ಞಾತಂ ಭವತಿ' ಇತ್ಯಾದಿ ಶ್ರುತೇಃ ಆತ್ಮದರ್ಶನೇನೈವ ಸರ್ವದ್ರಷ್ಟವ್ಯಾನಾಂ ತತ್ವತೋ ದೃಷ್ಟತ್ವಾತ್ ದೃಷ್ಟೈರದೃಷ್ಟೈರ್ವಾಭ್ರಮೈಃ ಸಮಂ ಸಹ ಕಿಂ ಪ್ರಯೋಜನಂ. –ತಾ. ಪ್ರ.)

೫. ಶಾಂತಿ ಮಯವೂ, ಅಶಾಂತಿ ಮಯವೂ ಆದ ವಿಕಲ್ಪಗಳನ್ನೆಲ್ಲ ಕತ್ತರಿಸಿ ಹಾಕಬಲ್ಲ ಖಡ್ಗವು ನೀನೇ ಆಗಿದ್ದೀಯೆ. ಧೀರನಾದ ನೀನು ಅವುಗಳನ್ನೆಲ್ಲ ಧ್ವಂಸ ಮಾಡಬಲ್ಲೆ. ಆದರಿಂದ ಅನ್ಯಥಾ ಇರದೆ ಆತ್ಮದರ್ಶನ ಸಂಪನ್ನನಾಗು.

(ಚಿತ್ತಾಶ್ವಾಸನ ಹೇತುತ್ವಾತ್ ಶಾಂತಿಮಯಾಃ ತಏವ ವಿಪರೀತಾ ವಿಕ್ಷೇಪ ಹೇತುತ್ವಾದಶಾಂತಿಮಯಾಃ.)

೬. ಹಾಗಲ್ಲದಿದ್ದರೆ, ದೃಶ್ಯದಶೆಯನ್ನು ಕೇವಲ ಬಾಹ್ಯ ವ್ಯಾಪಾರಕ್ಕಾಗಿ ಆಶ್ರಯಿಸಿಕೊಂಡು, ನಾನು ಹೇಳಿರುವುದನ್ನು (ಮನಸ್ಸಿನಲ್ಲಿಟ್ಟುಕೊಂಡು, ಅದನ್ನು ಪಡೆಯಲು) ಯತ್ನಿಸು. ಸುಮ್ಮನಿದ್ದರೇನು ಫಲ?

ಇತ್ಯುಕ್ತ್ವಾ ಬಾಹ್ಯಬೋಧಸ್ತ್ವಂ ಮಾಭವೇತಿ ತ್ರಿಶೂಲಧೃಕ್ । ॥ ೭ ॥

ಪ್ರಾಣೇನೇದಂ ದೇಹಗೇಹಂ ಪರಿಸ್ಫುರತಿ ಯಂತ್ರವತ್ ।
ಪ್ರಾಣಹೀನಂ ಪರಿಸ್ಪಂದಂ ತ್ಯಕ್ತ್ವಾ ತಿಷ್ಠತಿ ಮೂಕವತ್ ॥ ೮ ॥

ಚಾಲನೀ ಪಾವನೀ ಶಕ್ತಿಃ ಶಕ್ತಿಃ ಸಂವೇದಿನೀ ಚಿತಿಃ ।
ಸಾ ಮೂರ್ತಾ ಖಾದಪಿ ಸ್ವಚ್ಛಾ ಸತ್ಸತ್ತೈವಾತ್ರ ಕಾರಣಂ ॥ ೯ ॥

(ತತ್ರ ಚೇತ್ತ್ವಮಸಮರ್ಥಃ ತರ್ಹಿ. ತತ್ಪ್ರಾಪ್ತಯೇ ಕಿಂಚಿತ್ಕಾಲಂ ಶ್ರವಣಾದ್ಯನುಕೂಲಾಂ ಕತಿಪಯಾಮೇವ ಬಾಹ್ಯ ದೃಷ್ಟಿಮವಲಂಬ್ಯ ನಿರಂತರಂ ತತ್ತ್ವಪ್ರಾಪ್ತಯೇ ಯತಸ್ವ. ನ ಕದಾಚಿದಪಿ ಪ್ರಮಾದಾದುಪರಮಸ್ವ-ಇತ್ಯಾಹ, ಇಮಾಮಿತಿ। ಬಾಹ್ಯಬೋಧಾಯ । ಸೂರ್ಯೋ ಯಥಾ ಸರ್ವಲೋಕಸ್ಯ ಚಕ್ಷುರ್ನಲಿಪ್ಯತೇ ಚಾಕ್ಷುಷೈರ್ಬಾಹ್ಯದೋಷೈಃ । ಏಕಸ್ತಥಾ ಸರ್ವ ಭೂತಾಂತರಾತ್ಮಾ ನ ಲಿಪ್ಯತೇ ಲೋಕದುಃಖೇನ ಬಾಹ್ಯಃ । ಇತಿ ಶ್ರುತೌ ॥ ಅಲೇಪಕತ್ವ ಸಮರ್ಥನಾಯ ಸರ್ವ ಪ್ರಪಂಚ ಬಾಹ್ಯತ್ವೇನ ದರ್ಶಿತಸ್ಯ ಆತ್ಮನೋಬೋಧಾಯ ತೂಷ್ಣೀಂ ಆತ್ಮಲಾಭ ಪ್ರಯತ್ನಂ ವಿನಾಸ್ಥಿತೇನ ಅವಸ್ಥಿತೇನ ಕಿಂ । ಕಃ ಪುರುಷಾರ್ಥ ಇತ್ಯರ್ಥಃ ॥ –ತಾ. ಪ್ರ.)

೭. "ಎಂದಿಗೂ ನೀನು ಬಾಹ್ಯಬೋಧನಾಗಬೇಡ." ಎಂದು ತ್ರಿಶೂಲಧಾರಿಯಾದ ಪರಮೇಶ್ವರನು ನನಗೆ ಹೇಳಿ, ಮುಂದೆ ಹೇಳಲಿರುವ ದೇಹಾತ್ಮತಾ ಭ್ರಾಂತಿಯನ್ನು ನಿರಾಸ ಮಾಡುವ ಉಪಾಯವನ್ನು ಹೇಳತೊಡಗಿದನು.

(ಇಲ್ಲಿ ತಾತ್ಪರ್ಯ ಪ್ರಕಾಶಕಾರರು "ವಕ್ಷ್ಯಮಾಣ ದೇಹಾತ್ಮತಾ ಭ್ರಮನಿರಸನೋಪಾಯ ಮಾಹೇತಿ ಪೂರಯಿತ್ವಾ ವ್ಯಾಖ್ಯೇಯಂ। ತ್ರುಟಿತೋವಾ ಗ್ರಂಥೋಽತ್ರಾನ್ವೇಷ್ಯಃ" ಎಂದು ಹೇಳಿರುವುದನ್ನು ಗಮನಿಸಿ.)

೮. ಈ ದೇಹವೆಂಬ ಮನೆಯು ಯಂತ್ರದಂತೆ ಪ್ರಾಣದಿಂದ ಚಲಿಸುತ್ತಿರುವುದು. ಪ್ರಾಣಹೀನವಾದರೋ, ಚಲನವನ್ನು ಬಿಟ್ಟು ಬಿಟ್ಟು, ಶಿಲಾದಿಗಳಂತೆ ಮೌನದಿಂದ ಅಚಲವಾಗಿ ಇರುವುದು.

೯. ಅದು ಮೂರ್ತಿಮತ್ತಾಗಿದ್ದರೂ ಆಕಾಶಕ್ಕಿಂತ ಸ್ವಚ್ಛವಾದುದು. ಸತ್ಸ್ವರೂಪವಾದುದು (ವಿನಾಶವಿಲ್ಲದ್ದು) ಸತ್ತಾ ಸಾಮಾನ್ಯವಾಗಿ (ಸರ್ವಕ್ಕೂ(

ವಿನಶ್ಯತಃ ಪ್ರಾಣದೇಹೌ ವಿಯೋಗಾನ್ಮರುತೋಽಪಿ ಚ ।
ಚಿದಾತ್ಮಾ ಖಾದಪಿ ಸ್ವಚ್ಛೋ ನ ವಿನಶ್ಯತಿ ಕಿಂ ಭ್ರಮೈಃ ॥ ೧೦ ॥

ಮನಃ ಪ್ರಾಣಮಯೇ ದೇಹೇ ಚಿತ್ತತ್ವಂ ಪರಿಜಾಯತೇ ।
ಮುಕುರೇ ಹ್ಯಮಲಾಭಾಸೇ ಪ್ರತಿಬಿಂಬಂ ಪ್ರವರ್ತತೇ ॥ ೧೧ ॥

ಸದಪ್ಯಗ್ರಗತಂ ವಸ್ತು ಪ್ರತಿಬಿಂಬಕ್ರಿಯಾಂ ವಿನಾ ।
ಯಥಾ ನಾಸ್ತಿ ಮಲೋಪೇತೇ ಮುಕುರೇ ಮುನಿನಾಯಕ ।
ತಥಾ ನಾಸ್ತಿ ಗತಪ್ರಾಣೇ ವಿದ್ಯಮಾನೇಽಪಿ ದೇಹಕೇ ॥ ೧೨ ॥

ಕಾರಣವಾಗಿರುವುದು. ಚಿಚ್ಛಕ್ತಿಯು ಪರಮ ಪಾವನವಾದುದು. ಚಲನವನ್ನುಂಟುಮಾಡುವುದು. ಮತ್ತು ಸಂವೇದನವನ್ನುಂಟುಮಾಡುವ ಶಕ್ತಿಯೂ ಆ ಚಿತ್ತೇ.

೧೦. ಪ್ರಾಣದೇಹಗಳು ವಾಯುವಿನಿಂದ ಬಿಡಲ್ಪಟ್ಟರೆ ನಾಶವಾಗುವುವು. ಆಕಾಶಕ್ಕಿಂತ ಸ್ವಚ್ಛವಾಗಿರುವ ಚಿದಾತ್ಮ ಶಕ್ತಿಯಾವುದುಂಟೋ ಅದು ಮಾತ್ರ ನಾಶವಾಗುವುದೇ ಇಲ್ಲ. ಭ್ರಾಂತಿ ಪಡಬೇಡ.

೧೧. ದೇಹವು ಮನಸ್ಸು ಪ್ರಾಣಗಳಿಂದ ಆದುದು. ಆ ದೇಹದಲ್ಲಿ ಚಿತ್ತತ್ತ್ವವು ತೋರಿಕೊಳ್ಳುವುದು. ಸ್ವಚ್ಛವಾಗಿರುವ ಕನ್ನಡಿಯಲ್ಲಿ ಪ್ರತಿಬಿಂಬವು ತೋರುವುದು. (ಅದರಂತೆ)

ಎದುರಿಗಿರುವ ವಸ್ತುವು ಸತ್ಯವಾಗಿದ್ದರೂ, ಪ್ರತಿಬಿಂಬಕ್ರಿಯೆಯಿಲ್ಲದಿರುವುದರಿಂದ ಕೊಳೆ ಹಿಡಿದಿರುವ ಕನ್ನಡಿಯಲ್ಲಿ ಹೇಗೆ ಕಾಣಿಸುವುದಿಲ್ಲವೋ ಹಾಗೆಯೇ ಪ್ರಾಣವಿಲ್ಲದಿದ್ದರೆ ದೇಹವು ಇದ್ದರೂ ಅದರಲ್ಲಿ ಚಿತ್ತಿನ ಪ್ರತಿಬಿಂಬವಿರುವುದಿಲ್ಲ.

(ಸ್ಥೂಲ ದೇಹಮಾತ್ರಸ್ಯತು ನ ಚಿದಭಿವ್ಯಕ್ತಿಸಮರ್ಥತಾ ಮಲಿನತ್ವಾದಿತಿ ದೃಷ್ಟಾಂತೇನ ಉಪಪಾದಯತೀ ಸದ ಪೀತ್ಯಾದಿ ಸಾರ್ಧೇನ. –ತಾ. ಪ್ರ.)

ಸರ್ವಗಾಪಿ ಚಿದುಚ್ಛೂನಬೋಧಾತ್ಸ್ಪಂದಾದಿಕಂ ಪ್ರತಿ ।
ಬೋಧಾತ್ಕಲಂಕ ವಿಮಲಾ ಚಿದೇವ ಪರಮಂ ಶಿವಂ ॥ ೧೩ ॥

ವಿದುರ್ದೇವಂ ತದಾಭಾಸಂ ಸರ್ವಸತ್ತಾಸ್ಪದಂ ತಥಾ ।
ಸ ಹರಿಃ ಸ ಶಿವಃ ಸೋಜಃ ಸ ಬ್ರಹ್ಮಾ ಸ ಸುರೇಶ್ವರಃ ॥ ೧೪ ॥

ಅನಿಲಾನಲಚಂದ್ರಾರ್ಕವಪುಃ ಸ ಪರಮೇಶ್ವರಃ ।
ಸ ಏಷ ಸರ್ವಗೋ ಹ್ಯಾತ್ಮಾ ಚಿತ್ಖನಿಶ್ಚೇತನಃ ಸ್ಮೃತಃ ॥ ೧೫ ॥

ದೇವೇಶೋ ದೇವಭೃದ್ಧಾತಾ ದೇವದೇವೋ ದಿವಸ್ಪತಿಃ ।
ಮಹಾಚಿತಃ ಸಮುಲ್ಲಾಸಃ ಮುಹ್ಯಂತೀಹ ನ ಕೇಚನ ॥ ೧೬ ॥

---

೧೩. ಚಿತ್ತು ಸರ್ವಸ್ಥಲಗಳಲ್ಲಿಯೂ ಇರುವುದಾದರೂ ತಾನು ಯಾರು ಎಂಬುದನ್ನು ಮರೆತಿರುವುದರಿಂದ ಬಾಹ್ಯ ವ್ಯಾಪಾರ ಮಾಡುತ್ತಿರುವುದು. ತಾನು ಯಾರು ಎಂಬುದನ್ನು ತಿಳಿದರೆ ಮಾಯಾಕಲಂಕನಿರ್ಮುಕ್ತವಾಗಿ, ತನ್ನ ಪರಮ ಶಿವಸ್ವರೂಪವನ್ನು ಪಡೆಯುವುದು.

೧೪. ಆಗ ಅದು ದೇವನಾಗುವುದು. ಅದರಿಂದ ಎಲ್ಲವೂ ಬೆಳಗುವುದು. ಸಕಲ ಜಗತ್ತಿನ ಸತ್ತೆಗೂ ಆಸ್ಪದವು ಅದೇ ಹರಿ, ಶಿವ, ಅಜ, ಬ್ರಹ್ಮ, ಸುರೇಶ್ವರ, ಎಲ್ಲವೂ ಅದೇ !

೧೫. ಈ ಚಿತ್ತಿನ ಖನಿಯಾವುದೋ ಅದೇ ಚೇತನವು. ಅದನ್ನೇ ವಾಯು ಅಗ್ನಿ, ಚಂದ್ರ, ಸೂರ್ಯ ಎನ್ನುವರು. ಅದೇ ಪರಮೇಶ್ವರನು. ಅದೇ ಸರ್ವಗನಾದ ಆತ್ಮನು.

(ಚಿತ್ಖನಿಃ = ಸರ್ವ ಚೈತನ್ಯಾಕರಃ ತಾ. ಪ್ರ.)

೧೬. ದೇವೇಶ್ವರನೂ, ದೇವತೆಗಳನ್ನು ಧರಿಸಿರುವವನೂ, ಧಾತೃವೂ, ದೇವದೇವನೂ, ದಿವಸ್ಪತಿಯೂ, ಇವರೆಲ್ಲ ಮಹಾಚಿತ್ತಿನ ವಿಭೂತಿಗಳೇ ! ಇದರಲ್ಲಿ ಯಾರಿಗೂ ಮೋಹವಿಲ್ಲ.

ಯೇ ನಾಮ ತೇ ಜಗತ್ಯೇತೇ ಬ್ರಹ್ಮವಿಷ್ಣುಹರಾದಯಃ ।
ಪರಸ್ಮಾತ್ಪರಿನಿರ್ಯಾತಾ ಬ್ರಹ್ಮವಿಷ್ಣು ಹರಾದಯಃ ॥ ೧೭ ॥

ಕಣಾಸ್ತಪ್ತಾಯಸ ಇವ ವಾರಿಧೇರಿವ ಬಿಂದವಃ ।
ತೇಷ್ವಿವ ಭ್ರಮಭೂತೇಷು ಜಾತೇಷ್ವಿವ ಪರಾತ್ಪದಾತ್ ॥ ೧೮ ॥

ಸ್ಥಿತೇಷು ಭ್ರಮಬೀಜೇಷು ಕಲ್ಪನಾಜಾಲ ಕರ್ತೃಷು ।
ಸಹಸ್ರ ಶತಶಾಖೇಯಮವಿದ್ಯೋದೇತಿ ಪೀವರೀ ॥ ೧೯ ॥

ವೇದವೇದಾರ್ಥವೇದಾದಿ ಜೀವಜಾಲ ಜಟಾವಲೀ ।
ತತಸ್ತಸ್ಯಾ ಆನಂತಾಯಾಃ ಪ್ರಸೃತಾಯಾಃ ಪುನಃಪುನಃ ॥ ೨೦ ॥

ಸಂಪನ್ನದೇಶ ಕಾಲಾಯಾಃ ಕ್ರಮಃ ಸ್ಯಾದ್ವರ್ಣನಾಸು ಕಃ ।
ಬ್ರಹ್ಮವಿಷ್ಣುಹರಾದೀನಾಮತೋಯಂ ಪರಮಃ ಪಿತಾ ॥ ೨೧ ॥

---

೧೭. ಈ ಜಗತ್ತಿನಲ್ಲಿ ಬ್ರಹ್ಮ ವಿಷ್ಣು ಹರ ಮೊದಲಾಗಿ ಪ್ರಸಿದ್ಧರಾಗಿರುವವರೆಲ್ಲ ಆ ಪರಸ್ವರೂಪವಾದ ಚಿತ್ತಿನಿಂದಲೇ ಬ್ರಹ್ಮ ವಿಷ್ಣು ಹರ ಮೊದಲಾದವರಾಗಿರುವರು.

೧೮. ಚೆನ್ನಾಗಿಕಾದ ಕಬ್ಬಿಣದಿಂದ ಹೊರಟ ಕಿಡಿಗಳಂತೆ, ಸಮುದ್ರದಿಂದ ಮೇಲಕ್ಕೆ ಹಾರಿದ ಹನಿಗಳಂತೆ, ಇವರೆಲ್ಲರೂ ಭ್ರಾಂತಿರೂಪವಾದ ಅಜ್ಞಾನ ಕಾರಣ ವಾಗಿ ಆ ಪರಮ ಪದದಿಂದಲೇ ಬಂದವರು.

೧೯. ಹೀಗೆ ಜೀವರು ಭ್ರಾಂತಿಗೊಂಡು ಕಲ್ಪನಾ ಜಾಲಗಳನ್ನು ಕಟ್ಟಿಕೊಂಡು ಇರುವುದರಿಂದಲೇ, ಅವಿದ್ಯೆಯು ಸಹಸ್ರ ಶತ ಶಾಖೆಯಾಗಿ ಬೆಳೆಯುತ್ತಿರುವುದು.

೨೦. ವೇದಗಳೂ, ವೇದಾರ್ಥಗಳೂ, ವೇದಾದಿಗಳೂ, ಜೀವಜೀವರ ಗುಂಪು ಗುಂಪುಗಳೂ, ಅನಂತವಾಗಿ ಹರಡಿಕೊಂಡಿರುವ ಆ ಅವಿದ್ಯೆಯ ವಿಭೂತಿಗಳೇ!

೨೧. ದೇಶ ಕಾಲಗಳು ಅನುಕೂಲವಾಗಿದ್ದರೆ ತಾನೇ ತಾನಾಗಿ ಹರಡುವ ಈ ಅವಿದ್ಯೆಯನ್ನು ವರ್ಣಿಸುವವನಾದರೂ ಉಂಟೇನು? ಅಷ್ಟೇನು? ಹೀಗೆ

ಮೂಲಬೀಜಂ ಮಹಾದೇವಃ ಪಲ್ಲವಾನಾಮಿವ ದ್ರುಮಃ ।
ಸರ್ವಸತ್ತಾಭಿಧಃ ಸರ್ವಃ ಸರ್ವಸಂವೇದನೈಕಕೃತ್ ॥ ೨೨ ॥

ಸರ್ವಸತ್ತಾಪ್ರದೋ ಭಾಸ್ವಾನ್ವಂದ್ಯೋಽಭ್ಯರ್ಚ್ಯಶ್ಚ ತದ್ವಿದಃ ।
ಪ್ರತ್ಯಕ್ಷವಸ್ತು ವಿಷಯಃ ಸರ್ವತ್ರೈವ ಸದೋದಿತಃ ॥ ೨೩ ॥

ಸಂವೇದನಾತ್ಮಕತಯಾ ಗತಯಾ ಸರ್ವಗೋಚರಂ ।
ನ ತಸ್ಯಾಹ್ವಾನಮಂತ್ರಾದಿ ಕಿಂಚಿದೇವೋಪಯುಜ್ಯತೇ ॥ ೨೪ ॥

ಹುಚ್ಚು ಹುಚ್ಚಾಗಿ ಹರಡುವ ಈ ಅವಿದ್ಯೆಯೇ ಬ್ರಹ್ಮ, ವಿಷ್ಣು, ಹರಾದಿಗಳ ಜನಕನು.

೨೨. ಚಿಗುರುಗಳಿಗೆಲ್ಲ ಗಿಡವು ಹೇಗೆ ಮೂಲಾಧಾರವೋ, ಹಾಗೆಯೇ ಮಹಾದೇವನೇ ಇವೆಲ್ಲಕ್ಕೂ ಮೂಲ ಬೀಜವು. ಅದರ ಹೆಸರು ಸರ್ವಸತ್ವವು. ಅದೇ ಸರ್ವವು. ಅದೇ ಸರ್ವ ಸಂವೇದನಗಳಿಗೂ ಕಾರಣವು (ಕರ್ತೃವು.)

(ಮಹತ್ಯಪರಿಚ್ಛಿನ್ನೇ ಆತ್ಮಜ್ಞಾನ ಯೋಗೈಶ್ವರ್ಯೇ ಮಹೀಯತೇ ಪೂಜ್ಯತೇ ಸರ್ವೋತ್ಕರ್ಷೇಣ ವರ್ತತ ಇತಿ ಮಹಾದೇವಃ. -ತಾ. ಪ್ರ.)

೨೩. ಹೀಗೆ ಎಲ್ಲದಕ್ಕೂ ಕಾರಣವಾಗಿ, ಸ್ವಯಂ ಪ್ರಕಾಶನಾಗಿರುವ ಆ ದೇವನು ಆತನನ್ನು ಬಲ್ಲವರ ಪ್ರತಿಯೊಂದು ಇಂದ್ರಿಯಕ್ಕೂ ಗೋಚರನಾಗಿ, ಯಾವಾಗಲೂ ಅಸ್ತವಿಲ್ಲದೆ ಎಲ್ಲೆಲ್ಲಿಯೂ ಬೆಳಗುತ್ತಿರುವನು. ಈ ದೇವನು ವಂದ್ಯನು. ಈತನನ್ನು ಎಲ್ಲರೂ ಅಭ್ಯರ್ಚನ ಮಾಡಬೇಕು.

(ಪ್ರತ್ಯಕ್ಷಂ ಪ್ರತೀಂದ್ರಿಯಂ ಪ್ರತಿವಸ್ತು ಚ ಸ್ಫುರದ್ರೂಪತ್ವಾತ್ ಸ ಏವ ವಿಷಯೋಽನಾನ್ಯಃ ॥ -ತಾ. ಪ್ರ.)

೨೪. ಹೀಗೆ ಇರುವ ಆ ಚಿತ್ಸ್ವರೂಪನಾದ ದೇವನು ಸಂವೇದನ ಸ್ವರೂಪನಾಗಿ ಸರ್ವ (ಇಂದ್ರಿಯ) ಗೋಚರನಾಗಿರುವುದರಿಂದ, ಆತನಿಗೆ ಆಹ್ವಾನ, ಮಂತ್ರ, ಮೊದಲಾದವು ಯಾವವೂ ಬೇಕಿಲ್ಲ. (ಸಂನಿಧಾನಾರ್ಥಂ ಆಹ್ವಾನಂ, ಪ್ರಕಾಶನಾರ್ಥಂ ಮಂತ್ರಾಃ ಉಪಯುಜ್ಯಂತೇ, ಸರ್ವಗತೇ, ಸದಾ ಸ್ಫೂರ್ತಿರೂಪೇ,

ನಿತ್ಯಾಹೂತಃ ಸ ಸರ್ವಸ್ಥೋ ಲಭ್ಯತೇ ಸರ್ವತಃ ಸ್ವಚಿತ್ ।
ಯಾಂ ಯಾಂ ವಸ್ತುದೃಶಾಂ ಯಾತಿ ತತ ಏವ ಮುನೇ ಶಿವಂ ॥ ೨೫ ॥

ಸ್ವರೂಪಂ ಸಮವಾಪ್ನೋತಿ ರೂಪಾಲೋಕಮನೋದೃಶಾಂ ।
ಆದ್ಯಂ ಪೂಜ್ಯಂ ನಮಸ್ಕಾರ್ಯಂ ಸ್ತುತ್ಯಮರ್ಘ್ಯಂ ಸುರೇಶ್ವರಂ ॥ ೨೬ ॥

ಏನಂ ತಂ ವಿದ್ಧಿ ವೇದ್ಯಾನಾಂ ಸೀಮಾಂತಂ ಮಹತಾಮಪಿ ।
ಏತಮಾತ್ಮಾನಮಾಲೋಕ್ಯ ಜರಾಶೋಕ ಭಯಾಪಹಂ ॥ ೨೭ ॥

ತು ತಸ್ಮಿನ್ ನ ಆಹ್ವಾನ ಮಂತ್ರಯೋಃ ಪ್ರಯೋಜನಮಸ್ತೀತಿ ಭಾವಃ. ಆದಿ ಪದಾತ್ ಪ್ರತಿಷ್ಠಾಪನ, ಅವಗುಂಠನ, ಅವರೋಧನಾದಿ ಪರಿಗ್ರಹಃ ॥ –ತಾ. ಪ್ರ)

೨೫. ಈ ದೇವನು ಯಾವಾಗಲೂ ಸನ್ನಿಹಿತನಾಗಿಯೇ ಇರುವುದರಿಂದ ನಿತ್ಯಾಹೂತನು. ಆದರಿಂದ ಎಲ್ಲ ಕಡೆಯೂ ಇರುವನು. ಎಲ್ಲೆಲ್ಲಿಯೂ ಸಿಕ್ಕುವನು. ಆತ್ಮ ಚಿಚ್ಛಕ್ತಿಯು ಯಾವ ಯಾವ ವಸ್ತು ದಶೆಯನ್ನು ಹೊಂದುವುದೋ ಅಲ್ಲಲ್ಲಿ ಆದದೇ ರೂಪವಾಗಿಯೇ, ಮುನೀಂದ್ರನೇ, ಶಿವವಾದ ಚಿತ್ತು ಲಭಿಸುವುದು.

೨೬. ರೂಪವನ್ನು ನೋಡಬೇಕೆಂಬ ಮನಸ್ಸಿನ ಬಯಕೆಯುಂಟಾಗುತ್ತಿದ್ದ ಹಾಗೆಯೇ, ತನ್ನ ರೂಪವೇ, ಆ ರೂಪವಾಗಿ, ಆ ಬಯಕೆಯಾಗಿ, ನೋಡುವ ಮನಸ್ಸಾಗಿ ಕಾಣುವುದು. ಅಧರಿಂದ, ಇವೆಲ್ಲಕ್ಕೂ ಮೊದಲನೆಯವನಾದ ಸುರೇಶ್ವರನಾದ ಚಿತ್ಸ್ವರೂಪವನ್ನು ಪೂಜಿಸಬೇಕು. ನಮಸ್ಕರಿಸಬೇಕು.

೨೭. ವೇದ್ಯವು ಯಾವಯಾವದುಂಟೋ, ಅವೆಷ್ಟು ದೊಡ್ಡವುಗಳೇ ಆದರೂ, ಆವುಗಳ ಆಚೆಗೆ ಇರುವವನು ಈ ದೇವನು. ಈ ಆತ್ಮನನ್ನು ಆಲೋಕನ ಮಾಡುವುದರಿಂದ ಜರಾಶೋಕ ಭಯುಗಳೆಲ್ಲವೂ ನಿರ್ಮೂಲವಾಗುವುವು. ಚೆನ್ನಾಗಿ ಹುರಿದ ಬೀಜವು ಹೇಗೆ ಮತ್ತೆ ಹುಟ್ಟುವುದಿಲ್ಲವೋ ಹಾಗೆಯೇ ಜಂತುವೂ ಮತ್ತೆ ಹುಟ್ಟುವುದಿಲ್ಲ

ಸಂಭೃಷ್ಟ ಬೀಜವಜ್ಜಂತುರ್ನ ಭೂಯಃ ಪರಿರೋಹತಿ ।
ಸಕಲ ಜಂತುಷು ಯತ್ತ್ವಭಯಪ್ರದಂ ವಿದಿತಮಾದ್ಯಮುಪಾಸ್ಯಮಯತ್ನತಃ ।
ತ್ವಮಜಮಾತ್ಮಗತಂ ಪರಮಂ ಪದಂ ಭವಸಿ ಕಿಂ ಪರಿಮುಹ್ಯಸಿ ದೃಷ್ಟಿಷು ॥ ೨೮ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ "ಮಹಾದೇವಸ್ಯ ಪೂಜ್ಯಸೀಮಾಂತತತ್ತ್ವಕಥನಂ" ನಾಮ
ಪಂಚತ್ರಿಂಶಃ ಸರ್ಗಃ

---

೨೮. ಪ್ರತಿಯೊಂದು ಪ್ರಾಣಿಯಲ್ಲಿಯೂ ಗೋಚರವಾಗಿರುವ, ಎಲ್ಲರಿಗೂ ಅಭಯವನ್ನುಂಟುಮಾಡುವ (ಯಾವುದನ್ನು ಕಂಡರೆ ಭಯವೆನ್ನುವುದೇ ಇಲ್ಲವಾಗುವುದೋ), ಎಲ್ಲದಕ್ಕಿಂತಲೂ ಮೊದಲನೆಯದಾದ, (ಯಾವುದರಿಂದ ಎಲ್ಲವೂ ಹುಟ್ಟಿದವೋ) ಏನೂ ಕಷ್ಟವಿಲ್ಲದೆ ಸಹಜವಾಗಿ ಯಾವುದನ್ನು ಉಪಾಸನ ಮಾಡಬಹುದೋ, ಅಜವೂ, ನಿನ್ನಲ್ಲಿಯೇ ಇರುವುದೂ ಆದ ಪರಮ ಪದವು ನೀನೇ ಆಗಬಲ್ಲೆ : ಹೀಗಿರಲು, ಭೇದ ದೃಷ್ಟಿಗಳಲ್ಲಿ ಸಿಕ್ಕಿಕೊಂಡು ಏಕೆ ಭ್ರಾಂತಿ ಪಡುವೆ ?

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಮಹಾದೇವ ಪೂಜ್ಯಸೀಮಾಂತತತ್ತ್ವ ಕಥನ" ಎಂಬ
ಮೂವತ್ತೈದನೆಯ ಸರ್ಗವು.

ಷಟ್‌ತ್ರಿಂಶಃ ಸರ್ಗಃ

ಶ್ರೀ ಈಶ್ವರ ಉವಾಚ:—

ತತಶ್ಚಿದ್ರೂಪಮೇವೈಕಂ ಸರ್ವಸತ್ತ್ವಾಂತರಾಸ್ಥಿತಂ ।
ಸ್ವಾನುಭೂತಿಮಯಂ ಶುದ್ಧಂ ದೇವಂ ರುದ್ರೇಶ್ವರಂ ವಿದುಃ ॥ ೧ ॥

ಬೀಜಂ ಸಮಸ್ತಬೀಜಾನಾಂ ಸಾರಂ ಸಂಸಾರಸಂತತೇಃ ।
ಕರ್ಮಣಾಂ ಪರಮಂ ಕರ್ಮ ಚಿದ್ಧಾತುಂ ವಿದ್ಧಿ ನಿರ್ಮಲಂ ॥ ೨ ॥

ಮೂವತ್ತಾರನೆಯ ಸರ್ಗವು

ಶ್ರೀ ಈಶ್ವರನು ಹೇಳಿದನು:—

೧. ಆದರಿಂದ, ಒಂದೇ ಒಂದು ಚಿದ್ರೂಪವೇ ಎಲ್ಲಾ ಪ್ರಾಣಿಗಳಾಗಿ ಇರುವುದು. ಅದು ಕೇವಲ ಸ್ವಾನುಭೂತಿ ಮಯವಾಗಿರುವುದು. (ಅದು ಏಕೈಕವಾಗಿ ಇನ್ನೊಂದರ ಸಂಪರ್ಕವೇ ಇಲ್ಲದ್ದು ಆದ್ದರಿಂದ) ಶುದ್ಧವು. (ಪ್ರಕಾಶ ಮಯವಾಗಿ ಇವೆಲ್ಲವನ್ನೂ ಬೆಳಗುವುದರಿಂದ) ದೇವನು. ಅದನ್ನು ರುದ್ರನೆಂದೂ, ಈಶ್ವರನೆಂದೂ ಬಲ್ಲವರು ತಿಳಿದಿರುವರು.

(ಸಂಸಾರ ರುಜಂ ದ್ರಾವಯತೀತಿ ರುದ್ರಃ । ಸ ಚಾಸೌ ಈಷ್ಟೇ ಸರ್ವಸ್ಯ ಜಗತ ಇತೀಶ್ವರಃ ಸ್ವಾಮೀ ತಂ ವಿದುಃ ಬ್ರಹ್ಮವಿದಃ । ತಥಾ ಚ ಶ್ರುತಿಃ. "ಸ ದೃಷ್ಟೋ ಮೃಡಯಾತಿನಃ । ಧ್ರುವಾ ಅಸ್ಮಿನ್ ಗೋಪತೌ ಸ್ಯಾತ" ಇತಿ.–ತಾ.ಪ್ರ)

೨. ಆ ಚಿತ್ತು ಯಾವುದುಂಟೋ ಅದು ಸಮಸ್ತ ಬೀಜ (ಕಾರಣ) ಗಳಿಗೂ ಬೀಜವು: ಸಂಸಾರ ಸಂತತಿಯ ಸಾರವು ಕರ್ಮಗಳಲ್ಲೆಲ್ಲಾ ಶ್ರೇಷ್ಠ ತಮವಾದ ಕರ್ಮವು. ಇದು ಧಾತು (ಎಲ್ಲಕ್ಕೂ ಮೂಲವು) ನಿರ್ಮಲವಾದುದು ಎಂದು ತಿಳಿ.

(ಚಿದ್ಧಾತುಂ–ಚಿತ್ಸಾರಂ. —ತಾ. ಪ್ರ.)

ಕಾರಣಂ ಕಾರಣೌಘಾನಾಮಕಾರಣಮನಾವಿಲಂ ।
ಭಾವನಂ ಭಾವನೌಘಾನಾಮಭಾವ್ಯಮಭವಾತ್ಮಕಃ ॥ ೩ ॥

ಚೇತನಂ ಚೇತನೌಘಾನಾಂ ಚೇತನಾತ್ಮನಿ ಚೇತನಂ ।
ಸ್ವಂ ಚೇತ್ಯಚೇತನಂ ಚೇತ್ಯಪರಮಂ ಭೂರಿಭಾವನಂ ॥ ೪ ॥

ಆಲೋಕಾಲೋಕಮಮಲ ಮನಾಲೋಕ್ಯಮಲೋಕಜಂ ।
ಆಲೋಕಂ ಜೀಜಬೀಜೌಘಂ ಚಿಧ್ಘನಂ ವಿಮಲಂ ವಿದುಃ ॥ ೫ ॥

---

೩. ಕಾರಣಗಳ ಸಮೂಹಗಳಿಗೆಲ್ಲ ಇದೇ ಕಾರಣವು. ಆದರೂ ತಾನು ಯಾವ ಕಾರಣದಿಂದಲೂ ಹುಟ್ಟಿದುದಲ್ಲ. ತನ್ನಲ್ಲಿ ಯಾವ ಕಳಂಕವೂ ಇಲ್ಲದುದು. ಭಾವ (ಸ್ಥಿತಿ) ವೆಂದು ಯಾವಯಾವದುಂಟೋ ಅವೆಲ್ಲವೂ ಇದರಿಂದಲೇ ಇರತಕ್ಕುದು ಭಾವನಾಮಾತ್ರಕ್ಕೆ ಗೋಚರವಾಗದುದು. ಜನ್ಮಾದಿಗಳು ಯಾವವೂ ಇಲ್ಲದುದು.

೪. ಚೇತನ (ಸರ್ವಬುದ್ಧಿ ವೃತ್ತಿ)ಗಳಿಗೆಲ್ಲ ಇದೇ ಚೇತನವು (ಪ್ರಕಾಶಕವು) ಚೇತನಾತ್ಮ (ಜೀವ)ನಲ್ಲಿ ಚೇತನವಾಗಿ ಕುಳಿತಿರುವುದೂ ಇದೇ ! ಚೇತ್ಯ (ದೃಶ್ಯ) ಗಳಿಗೆಲ್ಲ ಚೇತನವಾಗಿರುವುದೂ ಚೇತ್ಯಗಳಿಗೆ ಅಧಿಷ್ಠಾನತತ್ತ್ವವಾಗಿರುವುದೂ, ಬಹು ರೂಪವಾಗಿ ಕಾಣಿಸುವುದೂ ಇದೇ !

(ಸ್ವಂ ಪ್ರತ್ಯಗ್ಭೂತಂ ಚೇತ್ಯಾನಾಂ ಬಾಹ್ಯವೇದ್ಯಾ ನಾಮಪಿ ಚೇತನಂ ಬುದ್ಧಿ ವೃತ್ತಿ ವ್ಯಾಪ್ತಿಕೃತಾಭಿವ್ಯಕ್ತ್ಯಾ ಪ್ರಥಯಿತಾರಂ ॥ ಚೇತ್ಯಾನಾಂ ಪರಮಂ ಅಧಿಷ್ಠಾನ ತತ್ತ್ವ ಭೂತಂ । ಭೂರಿ ಭಾವನಂ ಆತ್ಮಾನಮೇವ ಮಾಯಯಾ ಬಹುತ್ವೇನ ಭಾವಿತವಂತಂ. —ತಾ. ಪ್ರ.)

೫. ಇಂದ್ರಿಯಗಳಿಗೆಲ್ಲ ಪ್ರಕಾಶಕನು. ಇಂದ್ರಿಯಾದಿಗಳು ಯಾವುದಕ್ಕೂ ಗೋಚರನಲ್ಲದವನು. ಅಲೌಕಿಕವಾದುದು. ಪ್ರಕಾಶ ರೂಪವಾದುದು. ಬೀಜ ಬೀಜಗಳನ್ನೆಲ್ಲ ತನ್ನಲ್ಲಿಯೇ ಉಳ್ಳುದು ಆದರೂ ಕೇವಲ ಚಿತ್ತೇ ಆಗಿರತಕ್ಕುದು. ವಿಮಲವಾದುದು ಎಂದು ತಿಳಿದವರು ಬಲ್ಲರು.

(ತಚ್ಛುಭ್ರಂ ಜ್ಯೋತಿಷಾಂ ಜ್ಯೋತಿಃ ಇತಿ ಶ್ರುತೇಃ. —ತಾ. ಪ್ರ.)

ಅಸತ್ಯಂ ಸನ್ಮಯಂ ಶಾಂತಂ ಸತ್ಯಾಸತ್ಯವಿವರ್ಜಿತಂ ।
ಮಹಾಸತ್ತಾದಿಸತ್ತಾಂತೇ ಚಿನ್ಮಾತ್ರಂ ವಿದ್ಧಿ ನೇತರತ್ ॥ ೬ ॥

ಸ್ವಯಂ ಭವತಿ ರಾಗಾತ್ಮಾ ರಂಜಕೋ ರಂಜನಂ ರಜಃ ।
ಸ್ವಯಮಾಕಾಶಮಪ್ಯಾಶು ಕುಡ್ಯಂ ಭವತಿ ಮಂಡಿತಂ ॥ ೭ ॥

---

೬. (ನಾವು ಸತ್ಯವೆಂದುಕೊಂಡಿರುವ ಪೃಥಿವ್ಯಾದಿ ಪಂಚಭೂತಗಳು ಒಂದೂ ಅದರಲ್ಲಿ ಇಲ್ಲವೆಂದು) ಅದು ಅಸತ್ಯವು (ಆದರೂ ದೇಶ ಕಾಲಾದಿಗಳ ಬಾಧೆಯಿಲ್ಲದುದು ಎಂದು) ಸನ್ಮಯವು (ಯಾವುದೊಂದು ವಿಕಾರವೂ ಇಲ್ಲವೆಂದು) ಶಾಂತವು. (ಅದು ಒಂದೇ ಒಂದಾಗಿರುವುದರಿಂದ) ಸತ್ಯ, ಅಸತ್ಯ ಎಂಬ ಭಾಗಗಳಿಲ್ಲದಿರುವುದು. ತಾನೇ ತಾನಾಗಿ ಹರಡಿಕೊಂಡಿರುವುದರಿಂದ ಬಹು ದೊಡ್ಡದಾಗಿ ಕಾಣಿಸುವ ಈ ಜಗತ್ತೂ, ಇದಕ್ಕೆ ಕಾರಣವಾದ ಈಶ್ವರನೂ ಅಂತವಾದ ಮೇಲೆಯೂ ಉಳಿಯುವ ಚಿನ್ಮಾತ್ರವಾದುದು ಯಾವುದೋ (ಅದೇ ಬ್ರಹ್ಮವು) ಇನ್ನೊಂದೂ ಅಲ್ಲ ಎಂದು ತಿಳಿ.

(ಸತ್ಯೇನ ವ್ಯಾವಹಾರಿಕೇಣ, ಅಸತ್ಯೇನ ಪ್ರಾತಿಭಾಸಿಕೇನ ಚ ಅವಸ್ಥಾತ್ರಯೇಣ ವಿವರ್ಜಿತಂ. —ತಾ. ಪ್ರ.)

೭. ಅದು ತಾನೇ ಮತ್ತೊಂದರ ಅಪೇಕ್ಷೆಯಿಲ್ಲದೆ, ರಾಗಾತ್ಮಕವಾಗುವುದು. (ಭೋಗ ಪ್ರವೃತ್ತಿಗೆ ಕಾರಣವಾಗುವುದು.) ತಾನೇ ಭೋಗ ಸಾಮಗ್ರಿಯಾಗುವುದು. ತಾನೇ ಭೋಗವಾಗುವುದು. ತಾನೇ ಭೋಗ ಪ್ರವೃತ್ತಿಯೂ ಆಗುವುದು. ತಾನು ಆಕಾಶದಂತೆ ನಿರವಯವಾಗಿದ್ದರೂ ಚಿತ್ರ ವಿಚಿತ್ರವಾದ ಮೂರ್ತ ವಸ್ತುವೂ ಆಗುವುದು.

(ರಂಜನ ಬೀಜಾವಸ್ಥಾಯಾಂ ರಾಗಾತ್ಮಾ । ವಿಷಯಸ್ಮೃತೌ ಚಿತ್ತಕ್ಷೋಭಕತ್ವಾತ್ ರಂಜಕಃ । ವಿಷಯ ಸಂಬಂಧೇ ರಂಜನಂ । ತದ್ವಿಯೋಗೇ ಚಿತ್ತಮಾಲಿನ್ಯಹೇತುತ್ವಾ ದ್ರಜಃ. —ತಾ. ಪ್ರ.)

(೬, ೭, ೮ ಶ್ಲೋಕಗಳಲ್ಲಿ ಕ್ರಮವಾಗಿ ಸತ್ತ್ವ ರಜಸ್ತಮೋಗುಣಗಳನ್ನು ಹೇಳಿದೆಯೆಂದು ನಮ್ಮ ಅಭಿಪ್ರಾಯ.)

ಅಸ್ಮಿಂಶ್ಚಿಚ್ಚೇತಸಿ ಸ್ಫಾರೇ ಜಗನ್ಮರುಮರೀಚಯಃ ।
ಸ್ಫುರಿತಾಃ ಪ್ರಸ್ಫುರಿಷ್ಯಂತಿ ಪ್ರಸ್ಫುರಂತಿ ಚ ಕೋಟಿಯಃ ॥ ೮ ॥

ಸ್ವಸತ್ತಾಮಾತ್ರಸಂಪನ್ನಂ ಪದಮಸ್ಮಿನ್ಸ್ವತೇಜಸಿ ।
ನ ಕಿಂಚನ ಚ ಸಂಪನ್ನಮನ್ಯದೌಷ್ಣ್ಯಾದಿವಾನಲೇ ॥ ೯ ॥

ಗರ್ಭೀಕೃತಮಹಾಮೇರುಂ ಪರಮಾಣುಸಮಂ ವಿದುಃ ।
ಆಚ್ಛಾದಿತಮಹಾಮೇರುಂ ಪರಮಾಣುಸಮಂ ವಿದುಃ ॥ ೧೦ ॥

ಗರ್ಭೀಕೃತಮಹಾಕಲ್ಪೋ ನಿಮೇಷೋಸಾವುದಾಹೃತಃ ।
ಆಕ್ರಾಂತಕಲ್ಪನಾನೇನ ನ ಸಂತ್ಯಕ್ತಾ ನಿಮೇಷತಾ ॥ ೧೧ ॥

---

೮. ಈ ಚಿಚ್ಚೇತನವು ವಿಸ್ತಾರವಾಗಿ ಹರಡಲಾಗಿ ಜಗತ್ತುಗಳೆಂಬ ಮರುಮರೀಚಿಕೆಗಳು ಕೋಟಿಕೋಟಿಯಾಗಿ ಸ್ಫುರಿಸಿದವು. ಸ್ಫುರಿಸುತ್ತವೆ. ಮುಂದೆಯೂ ಸ್ಫುರಿಸುವುವು.

೯. ಈ ಬ್ರಹ್ಮದಲ್ಲಿ ಸ್ವಸತ್ತಾಮಾತ್ರವಲ್ಲದೆ ಇನ್ನೇನೂ ಇಲ್ಲವೇ ಇಲ್ಲ. ಸ್ವತೇಜಸಾವ್ಯಾಪ್ತವಾದುದು ಇದು. ಬೆಂಕಿಯಲ್ಲಿ ಬಿಸಿಯಿಲ್ಲದೆ ಇನ್ನೇನೂ ಹೇಗೆ ಹೇಗೂ ಇಲ್ಲವೋ ಹಾಗೆಯೇ ಇದರಲ್ಲಿ ಇದಲ್ಲದೆ ಇನ್ನೇನೂ ಇಲ್ಲ.

೧೦. ಮಹಾ ಮೇರುವನ್ನಾದರೂ ಹೊಟ್ಟೆಯಲ್ಲಿಟ್ಟುಕೊಳ್ಳಬಲ್ಲುದಾದರೂ ಇದು ಪರಮಾಣುವಿನಷ್ಟೇ ಇರುವುದು. ಮಹಾ ಮೇರುವನ್ನು (ದುಪ್ಪಟಿಯಂತೆ) ಮುಚ್ಚಬಲ್ಲುದಾದರೂ ಪರಮಾಣುವಿನಷ್ಟೇ ಇರುವುದು.

(ಅತಏವ "ಅಣೋರಣೀಯಾನ್ ಮಹತೋ ಮಹೀಯಾನ್" ಇತಿಶ್ರುತಿಃ ಸರ್ವ ವಿರುದ್ಧ ಧರ್ಮಾಣಾಂ ತತ್ರ ಸಮಾವೇಶಂ ದರ್ಶಯತಿ. —ತಾ. ಪ್ರ.)

೧೧. ಮಹಾಕಲ್ಪವೊಂದನ್ನು ತನ್ನಲ್ಲಿ ಅಡಗಿಸಿಕೊಳ್ಳಬಲ್ಲುದಾದರೂ ಒಂದು ನಿಮೇಷವೆನ್ನಿಸಿಕೊಳ್ಳುವುದು. ತಾನು ಒಂದು ಕಲ್ಪವನ್ನಾದರೂ ನುಂಗಬಲ್ಲುದಾದರೂ ತನ್ನ ನಿಮೇಷತೆಯನ್ನು ಬಿಡದಿರುವುದು. (೧೦–೧೧ ರಲ್ಲಿ ದೇಶ,

ವಾಲಾಗ್ರಕಾದಪ್ಯಣುನಾ ವ್ಯಾಪ್ತಾನೇನಾಖಿಲಾ ಮಹೀ ।
ಸಪ್ತಾಬ್ಧಿವಾಸನಾಪ್ಯುರ್ವೀ ನಾಸ್ಯಾಂತಮಧಿಗಚ್ಛತಿ ॥ ೧೨ ॥

ಅಕುರ್ವನ್ನೇವ ಸಂಸಾರರಚನಾಂ ಕರ್ತೃತಾಂ ಗತಃ ।
ಕುರ್ವನ್ನೇವ ಮಹಾಕರ್ಮ ನ ಕರೋತ್ಯೇವ ಕಿಂಚನ ॥ ೧೩ ॥

ದ್ರವ್ಯಮಪ್ಯೇಷ ನಿರ್ದ್ರವ್ಯೋ ನಿರ್ದ್ರವ್ಯೋಪಿಚ ದ್ರವ್ಯವಾನ್ !
ಅಕಾಯೋಪಿ ಮಹಾಕಾಯೋ ಮಹಾಕಾಯೋಪ್ಯಕಾಯವಾನ್ ॥ ೧೪ ॥

ಕಾಲ, ಇವುಗಳ ಪರಿಚ್ಛೇದವನ್ನು ಮೀರಬಲ್ಲುದಾದರೂ ಆ ಪರಿಚ್ಛೇದವನ್ನು ತಾನಾಗಿ ಅಂಗೀಕರಿಸಿರುವ ಚಿತ್ತನ್ನು ವರ್ಣಿಸಲಾಗಿದೆ.)

೧೨. ಕೂದಲಿನ ಕೊನೆಗಿಂತ ಚಿಕ್ಕುದಾದರೂ ವಿಸ್ತಾರವಾದ ಭೂಮಿಯನ್ನೆಲ್ಲ ಆವರಿಸಿರುವುದು. ಈ ಭೂಮಂಡಲ ಸಪ್ತ ಸಮುದ್ರಗಳ ಉಡುಗೆಯನ್ನುಟ್ಟಿರುವ ಈ ಉರ್ವಿಯು ಇದರ ಕೊನೆಯನ್ನು ಕಾಣಲಾರದು.

೧೩. ಇದು ತಾನು ಕರ್ತೃತ್ವರಹಿತವಾಗಿದ್ದರೂ ಏನೂ ಮಾಡದಿದ್ದರೂ ಸಂಸಾರ ರಚನೆಯ ಕರ್ತೃವಾಗಿರುವುದು. ಇಂತಹ ಮಹಾ ಕರ್ಮಗಳನ್ನು ಮಾಡುತ್ತಿದ್ದರೂ ಏನೂ ಮಾಡದೆ ಕುಳಿತಿರುವುದು.

೧೪. ಈ ಬ್ರಹ್ಮವು ದ್ರವ್ಯವೇ ಎಂದರೆ ನಿರ್ದ್ರವ್ಯವು (ಅದರಲ್ಲಿ ಏನೂ ಇಲ್ಲ.) ನಿರ್ದ್ರವ್ಯವೋ ಎಂದರೆ, ಇದರಲ್ಲಿ (ಜಗದಾದಿಯಾದ ಸರ್ವ) ದ್ರವ್ಯವೂ ಉಂಟು. ಇದು ಅಕಾಯವಾದರೂ ಮಹಾ ಕಾಯವು: ಮಹಾ ಕಾಯವಾದರೂ ಕಾಯವಿಲ್ಲದುದು,

ಅದ್ಯಾಪ್ಯೇಷ ಸದಾ ಪ್ರಾತಃ ಪ್ರಾತರಪ್ಯದ್ಯತಾಂ ಗತಃ ।
ನ ವಾದ್ಯಮದ್ಯ ನ ಪ್ರಾತಸ್ತ್ವದ್ಯ ಪ್ರಾತಶ್ಚ ವಾ ಸದಾ ॥ ೧೫ ॥

ಭಿಂಡಿಂ ಭಿಂಡಿಂ ಖಿಲೇ ಮತ್ತಾ ಪುರುಪಿಚ್ಛಿಲಿಸಾಲಘಂ ।
ವಿವಿಚ್ಛಲಿತ್ಸದಾಲೋಕಾ ಲಾಸೋ ಗುಲುಗುಲುಃ ಶಿಲೀ ॥ ೧೬ ॥

ಇತ್ಯಾದ್ಯನರ್ಥಕಂ ವಾಕ್ಯಂ ತಥಾ ಸತ್ಯಂ ಸ ಏವ ಚ ।
ನ ತದಸ್ತಿ ನ ಯತ್ಸತ್ಯಂ ನ ತದಸ್ತಿ ನ ಯತ್ತ್ವಸೌ ॥ ೧೭ ॥

ಯಸ್ಮಿನ್ಸರ್ವಂ ಯತಃ ಸರ್ವಂ ಯಃ ಸರ್ವಂ ಸರ್ವತಶ್ಚ ಯಃ ।
ಯಶ್ಚ ಸರ್ವಮಯೋ ನಿತ್ಯಂ ತಸ್ಮೈ ಸರ್ವಾತ್ಮನೇ ನಮಃ ॥ ೧೮ ॥

---

೧೫. ಈಗಲೂ ಕೂಡ ಇದು ಯಾವಾಗಲೂ ಪ್ರಾತಃಕಾಲವೇ ಆಗಿರುವುದು, ಪ್ರಾತಃಕಾಲವೇ ಆಗಿದ್ದರೂ ವರ್ತಮಾನವಾಗಿರುವುದು. ವರ್ತಮಾನವೂ ಅಲ್ಲದೆ, ಪ್ರಾತಃಕಾಲವೂ ಅಲ್ಲದೆ, ವರ್ತಮಾನವೂ ಆಗಿ ಪ್ರಾತಃಕಾಲವೂ ಆಗಿರುವುದು.

೧೬-೧೭. ಭಿಂಡಿ, ಭಿಂಡಿ, ಖಿಲೇ, ಮತ್ತಾ, ಮೊದಲಾದ ಅರ್ಥವಿಲ್ಲದ ಪ್ರಲಾಪಗಳಾಗಲಿ, (ಅಥವಾ ವಿವಕ್ಷಾಪೂರ್ವವಾದ ಅರ್ಥ ಸಹಿತ) ವಾಕ್ಯವಾಗಲಿ, (ವಾಕ್ಯದಿಂದ ದ್ಯೋತಿತವಾದ) ಸತ್ಯವಾಗಲಿ, ಎಲ್ಲವೂ ಆ ಬ್ರಹ್ಮವೇ! (ಅಷ್ಟೇನು?) ಸತ್ಯವಲ್ಲದುದು ಯಾವುದೋ ಅದು ಇರುವುದು ಎನ್ನುವುದಿಲ್ಲ: ಯಾವುದು ಇರುವುದು ಅದು ಇದು ಅಲ್ಲದೆ ಇನ್ನೇನೂ ಅಲ್ಲ.

೧೮, ಯಾವುದರಲ್ಲಿ ಸರ್ವವೂ ಇರುವುದೋ (ಯಾವುದು ಎಲ್ಲದಕ್ಕೂ ಅಧಿಷ್ಠಾನವೋ), ಯಾವುದರಿಂದ ಎಲ್ಲವೂ ಹುಟ್ಟಿಬರುವುದೋ (ಯಾವುದು ಎಲ್ಲದಕ್ಕೂ ನಿಮಿತ್ತೋಪಾದನ ಕಾರಣವೋ), ಯಾವುದು ಎಲ್ಲವೂ ತಾನೇ ಆಗಿರುವುದೋ, ಯಾವುದು ಎಲ್ಲೆಲ್ಲಿಯೂ ಇರುವುದೋ, ಯಾವುದು ನಿತ್ಯವಾಗಿ ಸರ್ವದರಲ್ಲಿಯೂ ಇರುವುದೋ ಅಂತಹ ಸರ್ವಾತ್ಮನಿಗೆ ನಮಸ್ಕಾರವು.

ಯತ್ರಾಂತರಾಲಗಹನೇನ ವಿಲಾಸವತ್ಯಾ ।
ಹೇಲಾವಿಲೋಲಘನಸರ್ಜಿತಯಾ ಮಲೇನ ।
ಮಲ್ಲೇನ ಪಲ್ಲವದಲಾಮಲಮಾಲಿತಾನಾಂ ।
ಲಕ್ಷ್ಮೀಲತಾವಿರಲಿತಾ ವಲಿತೇವ ಮುಷ್ಟಿಃ ॥ ೧೯ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ "ಪರಮೇಶ್ವರ ವರ್ಣನಂ" ನಾಮ ಷಟ್‌ತ್ರಿಂಶಃ ಸರ್ಗಃ

---

೧೯. (ಇದೂ ಮೇಲಿನ ೧೬ ನೆಯ ಶ್ಲೋಕದ ಹಾಗೆ ಅರ್ಥವಿಲ್ಲದ ಒಂದು ಶ್ಲೋಕ. ತಾತ್ಪರ್ಯ ಪ್ರಕಾಶಕಾರರು ಇದರ ವಿಚಾರವಾಗಿ ಹೀಗೆ ಹೇಳಿದ್ದಾರೆ:— ಯತ್ರಾರೋಪಾತ್ ಅಸತೋಽಪಿ ಸತ್ತಾ ಭವತೀತಿ ಯದುಕ್ತಂ, ಸತ್ಸಂಭಾವನಾಯ ಯಥಾ ಯತ್ರ ಅನರ್ಥಕಾ ಅಪಿಶ್ಲೋಕಾಃ ಸಾರ್ಥಕಾಭವಂತೀತಿ ದೃಷ್ಟಾಂತ ಪ್ರದರ್ಶನಂ ಅಭಿಪ್ರೇತ್ಯ ಅನರ್ಥಕಂ ಶ್ಲೋಕ ಮುದಾಹರತಿ ಯತ್ರೇತಿ । ಯತ ಇತ್ಯಾದಿಕಾನಾಂ ಶಬ್ದಾನಾಂ ಅರ್ಥಶ್ರೀಃ ಸತ್ಯರೂಪಿಣೀ ಇತಿ ಉತ್ತರ ಸರ್ಗಾತ್ ಯೇನ ಅನ್ವಯಃ ತತ್ರ ಏತದ್ ವ್ಯಾಖ್ಯಾಸ್ಯಾಮಃ)

(ಈ ಶ್ಲೋಕಕ್ಕೆ ಮುಂದಿನ ಸರ್ಗದಲ್ಲಿ ತಾತ್ಪರ್ಯ ಪ್ರಕಾಶಕಾರರು ಹೀಗೆ ಅರ್ಥ ಮಾಡಿದ್ದಾರೆ:—

ತಸ್ಯ ಶ್ಲೋಕಸ್ಯ ಲೋಕತಃ ಪರಮಾರ್ಥತಶ್ಚಯಥಾ ಸತ್ಯಾರ್ಥತಾ ತಥಾ ವರ್ಣ್ಯತೇ । ತತ್ರ ಲೋಕತಃ ತಾವತ್ ಕಶ್ಚಿದ್ವೃಕ್ಷೋಽನೇನ ವರ್ಣ್ಯತೇ । (ಪಲ್ಲವ ದಲಾಮಲ ಮಾಲಿತಾನಾಂ) ಪಲ್ಲವೈಃಕಿಸಲಯೈಃ ದಲೈಃ ಹರಿತ ಪತ್ರೈಶ್ಚ ಅಮಲೈಃ ಅಮ್ಲಾನೈಃ ಮಾಲಿತಾನಾಂ ಲತಾನಾಂ । ಮಲ್ಲೇನ ಕಾಂತೇನ-ಸರ್ವತೋ ಲತಾಭಿ ರಾಲಿಂಗಿತೇನೇತಿ ಯಾವತ್ । (ಅಂತರಾಲಗಹನೇನ) ಅತ ಏವ ಅಂತರಾಲೇಷು ಸ್ಕಂಧ ಕೋಟರ ಶಾಖಾಂತರಾಲೇಷು ಕರಾಲೇಷು ಗಹನೇನ ದುಷ್ಪ್ರವೇಶೇನ ದುರಾರೋಹೇಣೇತಿ ಯಾವತ್। ಸ್ವಯಂಚಾಮಲೇನ ಅಮ್ಲಾನೇನ ಅನೇನ ತರುಣಾ ಪುಷ್ಪ ಫಲಪಲ್ಲವ ಭ್ರಮರ ಖಗಾದಿ ಸಮೃದ್ಧ್ಯಾ ವಿಲಾಸವತ್ಯಾ (ಹೇಲಾ ವಿಲೋಲ

ಘನ ಸರ್ಜಿತಯಾ) ಹೇಲಯಾ ಅವಹೇಲನೇನ ವಿಲೋಲಾನಿ ತರಲಿತಾನಿ ಘನಾನಾಂ ಮೇಘಾನಾಂ ವಿದ್ಯುತ್ ಸಂವಲನ ಸ್ನಿಗ್ಧ ಶಿಶಿರ ಶ್ಯಾಮತಾ ಸೌಂದರ್ಯಾತಿಶಯ ವಿಭ್ರಮ ಸರ್ಜಿತಾನಿ ಯಯಾ । ಗರ್ಜಿತಯಾ ಇತಿ ಪಾಠೇ ಸೌಂದರ್ಯಾತಿಶಯಾಭಿಮಾನ ಪ್ರಯುಕ್ತ ಗರ್ಜನಾನಿ ಯಯಾ ಇತಿ ಯೋಜ್ಯಂ । (ಲಕ್ಷ್ಮೀಲತಾವಿರಲಿತಾ) ತಥಾ ವಿಧಯಾ ಸ್ವಲಕ್ಷ್ಮ್ಯಾ ವೃಕ್ಷಾಂತರೇಷು ವನಾಂತರೇಷು ಸರ್ವ ಜಗತಿ ವಾ ಪ್ರಸಿದ್ಧಾ ಲಕ್ಷ್ಮೀಲತಾ ಸ್ವಾತ್ಮನ್ಯೇವ ಉಪಸಂಗ್ರಹಾದ್ವಲಿತಾ ಸಂಕೋಚಿತಾ ಮುಷ್ಟಿರಿವ ಅವಿರಲಿತಾ ಘನೀಕೃತಾ ಇತ್ಯರ್ಥಃ ।

ಅಥವಾ ಭಗವಾನ್ ವಿಷ್ಣುರತ್ರ ವರ್ಣ್ಯತೇ ।

ಪಲ್ಲವೈರ್ದಲೈಃ ಶ್ಯಾಮಲಯಾ ವನಮಾಲಯಾ ಮಾಲಿತಾನಾಂ ಪುರುಷಾಣಾಂ ಮಧ್ಯೇ ಮಲ್ಲೇನ ಶ್ರೇಷ್ಠೇನ ಅಮಲೇನ ಪರಮಾರ್ಥತೋ ವಸನ ಭೂಷಣಾದಿನಾ ಚ ನಿರ್ಮಲೇನ ಅಂತರಾಲೇ ಜಠರೇ ಚತುರ್ದಶ ಭುವನ ಭರಿತ್ವಾತ್ ಗಹನೇನ ವಿಷ್ಣುನಾ ಜಗನ್ಮೋಹನ ಸೌಂದರ್ಯ ವಿಲಾಸವತ್ಯಾ ಪ್ರಾಗ್ವದೇವ ಹೇಲಾವಿಲೋಲ ಘನಗರ್ಜಿತಯಾ ಸ್ವದೇಹಲಕ್ಷ್ಮ್ಯಾ ಸ್ವಮಾಲಿಂಗಂತೀ ಲಕ್ಷ್ಮೀ ಲಕ್ಷಣಾ ಲಲನಾಪಿ ವಲಿತಾ ಮುಷ್ಟಿರಿವ ಅವಿರಲಿತಾ ಅಪೃಥಕ್ ಕೃತಾ ಇತ್ಯರ್ಥಃ :—

ಪರಮಾರ್ಥತೋಽಪಿ ಅಂತರಾಲೇ ವಿಚಿತ್ರ ಕಾಮ ಕರ್ಮ ವಾಸನಾಗಹನೇನ ಅಜ್ಞಾನಲಕ್ಷಣೇನ ಮಲೇನ ಪಲ್ಲವ ಪ್ರಾಯೈಃ ಸೂಕ್ಷ್ಮ ಭೂತೈಃ ತತ್ಕಾರ್ಯೈಃ ದಲ ಪ್ರಾಯೈಃ ಸ್ಥೂಲ ಭೂತೈಃ ಭುವನ ಮಧ್ಯೈಃ (ಭುವನಾಮೋದೈಃ) ಚ ಮಾಲಿತಾನಾಂ ಜಗತಾಂ ಯಾ ಲಕ್ಷ್ಮೀಲತಾ ಸಾ ಹೇಲಯಾ ಲೀಲಯಾ ನಭಸಿ ವಿಲೋಲಾನಾಂ ಘನಾನಾಂ ಗರ್ಜಿತಮಿವ ಗರ್ಜಿತಂ ಯಸ್ಯಾಸ್ತಥಾವಿಧಯಾ ಮಹಾವಾಕ್ಯಶ್ರುತ್ಯಾ ವಿಲಸನಂ ವಿಲಾಸಃ ತದ್ವತ್ಯಾ ಬ್ರಹ್ಮವಿದ್ಯಾಕರಿಣ್ಯಾ ಮಲ್ಲೇನ ಪ್ರತಿಮಲ್ಲ ತಾಡನಾಯ ವಲಿತಾ ಮುಷ್ಟಿರಿವ ಅವಿರಲಿತಾ ಚಿದೇಕ ಘನೀಕೃತಾ । ಏವಮರ್ಥಾಂತರಾಣ್ಯಪಿ ಅಸ್ಯ ಶ್ಲೋಕಸ್ಯ ಸುಧೀಭಿರೂಹ್ಯಾನಿ ।

ಸಪ್ತತಿಂಶಃ ಸರ್ಗಃ

ಶ್ರೀ ಈಶ್ವರ ಉವಾಚ :—

ಇತ್ಯಾದಿಕಾನಾಂ ಶಬ್ದಾನಾಮರ್ಥಶ್ರೀಃ ಸತ್ಯರೂಪಿಣೀ ।
ತಸ್ಮಿನ್ ಸರ್ವೇಶ್ವರೇ ಸರ್ವಸತ್ತಾ ಮಣಿ ಸಮುದ್ಗಕೇ ॥ ೧ ॥

ಕಾ ನಾಮ ವಿಮಲಾಭಾಸಾಸ್ತಸ್ಮಿನ್ ಪರಮಚಿನ್ಮಣೌ ।
ನ ಕಚಂತಿ ವಿಚಿನ್ವಂತಿ ವಿಚಿತ್ರಾಣಿ ಜಗಂತಿ ಯಾಃ ॥ ೨ ॥

ಮೂವತ್ತೇಳನೆಯ ಸರ್ಗವು

ಶ್ರೀ ಈಶ್ವರನು ಹೇಳಿದನು :—

೧–೨. (ಹಿಂದಿನ ಸರ್ಗದ ಕೊನೆಯ ಶ್ಲೋಕದಲ್ಲಿ ಬಂದಿರುವಂತಹ) ಅರ್ಥವಿಲ್ಲದ ಮಾತುಗಳಿಗೂ ಕೂಡ, ಅರ್ಥ ರೂಪವಾದ ಸೌಭಾಗ್ಯವು (ಆಗುವುದು.) (ಕಾರಣವೇನೆಂದರೆ) ಸರ್ವ ಸ್ಥಾವರ ಜಂಗಮ ಪ್ರಾಣಿಗಳಿಗೂ ಆಧಾರವಾದ ಸತ್ತಾ ಸಾಮಾನ್ಯವೆಂಬ ಮಣಿಗಳ ಭರಣಿಯಾಗಿರುವ ಸರ್ವೇಶ್ವರನ (ಕೃಪೆಯು ಲಭಿಸಿದರೆ) ಪರಮವಾದ ಆ ಚಿತ್ತು ಎಂಬ ಶ್ರೇಷ್ಠ ರತ್ನವು ಬೆಳಗಿದರೆ, ಯಾವ ಯಾವ ಶುದ್ಧ ಪ್ರಕಾಶಗಳು ತಾನೇ ಬೆಳಗುವುದಿಲ್ಲ? ಯಾವ ಯಾವ ವಿಚಿತ್ರ ಚಿತ್ರವಾದ ಜಗತ್ತುಗಳು ತಾನೇ ಹುಟ್ಟುವುದಿಲ್ಲ?

ಇತ್ಯಾದಿಕಾನಾಂ ಇತ್ಯತ್ರ ಆದಿ ಪದಾತ್ ಅನರ್ಥಕತ್ವೇನ ಪ್ರಸಿದ್ಧತಮಾನಿ ಜರದ್ಗವ ದಶದಾಡಿಮಾದಿ ವಾಕ್ಯಾನಿ ಗೃಹ್ಯಂತೇ "ಜರದ್ಗವಃ ಕಂಬಲ ಪಾದುಕಾಭ್ಯಾಂ ದ್ವಾರಿಸ್ಥಿತೋ ಗಾಯತಿ ಮದ್ರಕಾಣಿ । ತಂಬ್ರಾಹ್ಮಣೀ ಪೃಚ್ಛತಿ ಪುತ್ರಕಾಮಾ । ರಾಜನ್ ರುಮಾಯಾಂ ಲಶುನಸ್ಯಕೋಽರ್ಘಃ ॥. ಅಸ್ಯಾಪಿ ಲೌಕಿಕಃ ಪಾರಮಾರ್ಥಿಕೋ ವಾರ್ಥೋ ಬ್ರಹ್ಮ ಸತ್ತಯೈವ ಕಲ್ಪಯಿತುಂ ಶಕ್ಯತೇ । ತಥಾಹಿ ಲೌಕಿಕಸ್ತಾವತ್ । ಕಶ್ಚಿತ್ ಮದ್ರದೇಶಜಃ ಕಂಬಲ ಪಾದುಕಾಭ್ಯಾಂ ಉಪಲಕ್ಷಿತೋ ಜರದ್ಗವ ಸಾದೃಶ್ಯಾದ್ ಜರದ್ಗವೋ ವಾಹೀಕಃ ಸ್ವಗೃಹದ್ವಾರಿ ಸ್ಥಿತಃ ಸನ್ ಮದ್ರಕಾಣಿ ಮದ್ರದೇಶ ಪ್ರಸಿದ್ಧಗೀತಾನಿ ಗಾಯತಿ । ತಂ ಕಾಚಿಲ್ಲಶುನ ಚಿಕಿತ್ಸ್ಯ ರೋಗಯುಕ್ತೇನ ಪುತ್ರೇಣ ಸಹ ಲವಣಾಕರಂ ಪ್ರತಿ ಕೇನ ಚಿದಾವಶ್ಯಕೇನ ಕಾರ್ಯೇಣ

ಏಷಾ ಬೀಜಕಣಾಂತಸ್ಥಾ ಚಿತ್ಸತ್ತಾ ಸ್ವವಪುರ್ಮಯಂ ।
ಲಬ್ಧ್ವಾ ವೃತ್ತ್ಯಾಲವಾದ್ಯಾದಿ ಕರೋತ್ಯಂಕುರಮೋದನಂ ॥ ೩ ॥

ಗಮಿಷ್ಯಂತೀ ತತ್ರ ಪುತ್ರ ಜೀವನ ಕಾಮಾ ಬ್ರಾಹ್ಮಣೀ ಲವಣಾಕರಾದಯು ಮಾಗತ ಇತಿ ಲೋಕೇಭ್ಯಃ ಶ್ರುತ್ವಾ ಹೇ ರಾಜನ್ ಇತಿ ಸಬಹುಮಾನಂ ಸಂಬೋಧ್ಯ ರುಮಾಯಾಂ ಲವಣಾಕರೇ ಲಶುನಸ್ಯಕೋಽರ್ಘಃ ಕಿಂ ಸಮರ್ಘಂ ಲಶುನ ಮುತ ಮಹರ್ಘಂ ಇತಿ ಪೃಚ್ಛತೀತ್ಯರ್ಥಃ । ಪಾರಮಾರ್ಥಿಕೋಪಿ । ಕಂಬಲಸದೃಶ್ಯಾ ಅವಿದ್ಯಯಾ ಪಾದುಕಾಪ್ರಾಯೇಣ ಲಿಂಗದೇಹೇನ ಚ ಚಕ್ಷುರಾದಿ ದ್ವಾರಿ ವಿಷಯ ಭೋಗಾರ್ಥಂ ಸ್ಥಿತೋ ಜರದ್ಗವ ಸದೃಶೋ ಜೀವೋ ವೈಷಯಿಕಾಣ್ಯೇವ ಮದ್ರಕಾಣಿ ಸ್ತ್ರೀ ಪುತ್ರಾದಿ ಮಂಗಲ ಗೀತಾನಿ ಬಹಿರ್ಮುಖೋ ಗಾಯತಿ । ನ.ಮನಾಗಪಿ ಸ್ವತತ್ತ್ವಂ ದಿದೃಕ್ಷತೇ । ತಮೇತಾದೃಶಂ ಉಪಲಭ್ಯ ಪುಂನಾಮ್ನಃ ಸಂಸಾರ ನರಕಾತ್ ತ್ರಾಯತ ಇತಿ ಪುತ್ರೋ ಬ್ರಹ್ಮಾತ್ಮತಾಬೋಧಃ ತತ್ಕಾಮಾ ಬ್ರಾಹ್ಮಣೀವ ಬ್ರಾಹ್ಮಣೀ ಶ್ರುತಿಃ ಪೃಚ್ಛತಿ । ಹೇ ರಾಜನ್, ಸ್ವಯಂಜ್ಯೋತಿಷ್ಟ್ವೇನ ವಿರಾಜಮಾನಃ ಸ್ವಚೈತನ್ಯೇನ ಸರ್ವ ಜಗತ್ ರಂಜಯಂಶ್ಚ ಹೇ ಆತ್ಮನ್, ರುಮಾಯಾಂ ಸರ್ವವಿದ್ಯಾ ಕಾಮಕರ್ಮ ಬೀಜ ವಿನಾಶಕತ್ವಾತ್ ಲವಣಾ ಕರೋಪಮ ಪ್ರಾಯೇ ತ್ವತ್ಸ್ವರೂಪೇ ಪರಮ ಶುದ್ಧೇ ಅತ್ಯಂತ ಪವಿತ್ರತ್ವಾತ್ ಬ್ರಾಹ್ಮಣಾಭೋಗ್ಯ ಲಶುನ ತುಲ್ಯಸ್ಯ ಬೋಗ್ಯಸ್ಯಕೋಽರ್ಘೋ ಮೌಲ್ಯ ವಿಚಾರ ಸ್ತವ । ತಸ್ಮಾತ್ ಪರಿತ್ಯಜ್ಯ ಬಾಹ್ಯದೃಷ್ಟಿಂ ಸ್ವಾತ್ಮಾರಾಮೋ ಭವ । ಇತ್ಯಾಶಯೇನ ಕೋಽಯಮಾತ್ಮೇತಿ ವಯ ಮುಪಾಸ್ಮಹೇ । ಕತರಸ್ಸ ಆತ್ಮಾ “ ಕಿಂಕಾರಣಂ ಬ್ರಹ್ಮ ಕುತಃಸ್ಮ ಜಾತಾಃ ” ಇತ್ಯಾದಿ ಪೃಚ್ಛತೀತ್ಯರ್ಥಃ । ಏವಂ ದಶದಾಡಿಮಾದಿ ವಾಕ್ಯೇಷ್ವಪಿ ಅರ್ಥಸತ್ತಾ ಊಹ್ಯಾ । ಭಿಂಡಿಂ ಭಿಂಡಿ ಮಿತಿ ಶ್ಲೋಕಸ್ಯತು ಬಾಲ ಮತ್ತಾದ್ಯವ್ಯಕ್ತ ಜಲ್ಪಿತಾನುಕರಣಸ್ಯ ಅನುಕಾರ್ಯೈರೇವ ಅರ್ಥವತ್ತಾ । ಅನುಕಾರ್ಯಸ್ಯತು ಅವ್ಯಕ್ತಾದೇಪ ನ ವಾಕ್ಯತೇತಿ ॥. —ತಾ. ಪ್ರ.)

೩. ಬೀಜ ಕಣಗಳಲ್ಲಿರುವ ಈ ಚಿತ್ಸತ್ತೆಯು ಸರಿಯಾದ ಕ್ಷೇತ್ರದಲ್ಲಿ ಸಕಾಲದಲ್ಲಿ ನೀರು ಮೊದಲಾದವುಗಳನ್ನು ಸರಿಯಾಗಿ ಹೊಂದಿದರೆ, ತಾನು ತನ್ನ ದೇಹವನ್ನು ವೃದ್ಧಿಪಡಿಸಿಕೊಂಡು ಅಂಕುರಾದಿಯಾಗಿ ಬೆಳೆದು ಧಾನ್ಯವಾಗಿ (ಪುರುಷನ ಅನ್ನವಾಗುವುದು.)

ಫೇನಾವರ್ತ ವಿವರ್ತಾಂತರ್ವರ್ತಿನೀ ರಸರೂಪಿಣೀ ।
ಕಠಿನೇಂದ್ರಿಯಸಂಬಂಧೇ ಕರೋತಿ ಸ್ಪಂದಮಂಭಸಾಂ ॥ ೪ ॥

ಏಷಾ ಕುಸುಮಗುಚ್ಛೇಷು ಗಂಧರೂಪೇಣ ಸಂಸ್ಥಿತಾ ।
ಕಚತಿ ಘ್ರಾಣರಂಧ್ರೇಷು ಕರೋತಿ ಪರಿಫುಲ್ಲತಾಂ ॥ ೫ ॥

ಶಿಲಾಂಗಸ್ಥಾ ಶಿಲಾಂಗಾಭಾಮಸತೀಂ ಸತ್ಯತಾಪದಂ ।
ಸರ್ಗಾಧಾರದಶಾಂ ಧತ್ತೇ ಗಿರೀಂದ್ರಃ ಸ್ಥಿತಿಲೀಲಯಾ ॥ ೬ ॥

ಪವನಸ್ಪಂದ ಕೋಶಾತ್ಮರೂಪಿಣೀವ ತ್ವಗಿಂದ್ರಿಯಂ ।
ಸಂಸಾಧಯತ್ಯಾತ್ಮಸುತಂ ಪಿತೇವಾತ್ಮತಯಾ ತಯಾ ॥ ೭ ॥

---

೪. ಇದೇ ಚಿತ್ಸತ್ತೆಯೇ ರಸರೂಪಿಣಿಯಾದಾಗ ಬಾಹ್ಯವಾಗಿ ನೀರಾಗಿ ಕಠಿನವಾದ ಶಿಲಾದಿಗಳ ಸಂಬಂಧದಿಂದ ನೊರೆ, ಸುಳಿ, ಹೊಳೆ ಮೊದಲಾದವುಗಳಾಗಿ, ಅಂತರ್ವರ್ತಿನಿಯಾಗಿ ಇಂದ್ರಿಯಗಳಲ್ಲಿ ರಸರೂಪವಾಗಿ ವ್ಯಾಪಾರ ಮಾಡುವುದು.

೫. ಇದೇ ಚಿತ್ಸತ್ತೆಯೇ ಹೊರಗೆ ಹೂವಿನ ಗೊಂಚಲುಗಳಲ್ಲಿ ಗಂಧರೂಪವಾಗಿ ಇದ್ದುಕೊಂಡು ನಾಸಾ ರಂಧ್ರಗಳಲ್ಲಿ (ಆ ಗಂಧ ತನ್ಮಾತ್ರಾಸಂಸ್ಪರ್ಶವಾದಾಗ) ಅರಳುವಿಕೆಯನ್ನು ಮಾಡುವುದು.

೬. ಇದೇ ಚಿತ್ಸತ್ತೆಯೇ ಶಿಲಾರೂಪವನ್ನು ಹೊಂದಿ ಸ್ಥಿತಿಲೀಲೆಯಿಂದ ಬೆಟ್ಟವಾಗಿದ್ದುಕೊಂಡು ಗಿಡ ಕಾಡು ಮೊದಲಾದವುಗಳಿಗೆ ಆಧಾರವಾಗಿಯೂ ಶಿಲಾಪ್ರತಿಮೆಯಾಗಿಯೂ ಇದ್ದುಕೊಂಡು (ಪಾರಮಾರ್ಥಿಕವಾಗಿ) ಅಸತ್ತಾದರೂ (ವ್ಯಾವಹಾರಿಕವಾಗಿ) ಸತ್ಯವಾಗಿರುವಂತೆ ಕಾಣುವುದು.

೭. ತಂದೆಯು ತಾನೇ ಮಗನಾಗುವಂತೆ, ಇದೇ ಚಿತ್ಸತ್ತೆಯೇ ವಾಯು (ರೂಪವಾಗಿ ಆ) ಭೂತ (ದ) ವ್ಯಾಪಾರವನ್ನು ಮಾಡುವ ಕ್ಷೇತ್ರರೂಪವಾದ ತ್ವಕ್ ಇಂದ್ರಿಯವಾಗುವುದು.

ಅಶೇಷಸಾರಸಂಪಿಂಡಮಧ್ಯಾತ್ಮಾನಂ ಸ್ವಸಿದ್ಧಯೇ ।
ಭಾವಯಿತ್ವಾ ನ ಕಿಂಚಿತ್ತ್ವಮಿವ ಖತ್ವಂ ಕರೋತ್ಯಲಂ ॥ ೮ ॥

ಸ್ವಸತ್ತಾ ಪ್ರತಿಬಿಂಬಾಭಮಾಕಾಶ ಮುಕುರೋದರೇ ।
ಧತ್ತೇ ಕಲ್ಪನಿಮೇಷಾಂಕಂ ಕಾಲಾಖ್ಯಮಮಲಂ ವಪುಃ ॥ ೯ ॥

ಆ ಮಹಾಪಂಚಮೇಶಾನಂ ಪರಿಣಾಮಮಯಾ ಇಮೇ ।
ಇದಮಿತ್ಥಮಿದಂ ನೇತಿ ನಿಯತಿರ್ಭವತಿ ಸ್ವಯಂ ॥ ೧೦ ॥

---

೮. (ಹೀಗೆ ಪ್ರವೃತ್ತಿ ರೂಪವಾಗಿ ಹೊರಟಾಗ, ಹೊರಗಡೆ ಅಧಿಭೂತವಾಗಿ ಪ್ರಪಂಚವಾಗಿ ಅಧ್ಯಾತ್ಮವಾಗಿ ಇಂದ್ರಿಯಗಳಾದ ಈ ಚಿತ್ಸತ್ತೆಯೇ ತಾನು ನಿವೃತ್ತಿ ಮುಖವಾಗಿ ಹೊರಟಾಗ) ಈ ಸರ್ವ ಸಂಸಾರಕ್ಕೂ ಬೀಜಭೂತನಾಗಿ, ಪ್ರತಿಯೊಂದರೊಳಗೂ ಇರುವ ಆತ್ಮನನ್ನು ಅಹಂಭಾವದಿಂದ ಗ್ರಹಿಸಿ, ತನ್ನ ಸ್ವರೂಪ ಸಿದ್ಧಿಗೋಸ್ಕರವಾಗಿ ಎಲ್ಲವನ್ನೂ (ನೇತಿ ನೇತಿಯೆಂದು) ಬಿಟ್ಟು ಕಳೆದು, ಆಕಾಶದಂತೆ ನಿರ್ಮಲವಾಗುವುದು.

೯. ತನ್ನ ಸತ್ತೆಯ ಪ್ರತಿಬಿಂಬವೋ ಎಂಬಂತಿರುವ ಆಕಾಶವೆಂಬ-ನಿರ್ಮಲವಾದ ಕನ್ನಡಿಯಲ್ಲಿ ತಾನೇ ಪ್ರತಿಬಿಂಬಸಿ, ನಿಮೇಷಾದಿಯಾಗಿ ಕಲ್ಪಾಂತವಾಗಿರುವ ಕಾಲವೆಂಬ ರೂಪವನ್ನು ಧರಿಸುವುದು.

೧೦. (ಲೋಕದಲ್ಲಿ ಪರಮರೆನ್ನಿಸಿಕೊಳ್ಳುವ) ಐವರು ಮಹೇಶರವರೆಗಿನ ಎಲ್ಲಾ ವಸ್ತುಜಾತವೂ ತಾನೇ ಆಗಿ, ಇದು ಇಂಥದು, ಇದು ಅಂಥದು, ಇದು ಎರಡೂ ಅಲ್ಲ ಎಂಬ ನಿಯತಿಯೂ ತಾನೇ ಆಗುವುದು

(ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಎಂಬರು ಐವರು ಮಹೇಶ್ವರರು ಇವರಲ್ಲಿ ಐದನೆಯವನಾದ ಸದಾಶಿವನಿಂದ ನಿಯತಿಯು. ತಾ. ಪ್ರ.)

ಸಾಕ್ಷಿಣಿ ಸ್ಫುರ ಆಭಾಸೇ ಗೃಹೇ ದೀಪ ಇವ ಕ್ರಿಯಾಃ ।
ಸತ್ಯೇ ತಸ್ಮಿನ್ಪ್ರಕಾಶಂತೇ ಜಗಚ್ಚಿತ್ರಪರಂಪರಾಃ ॥ ೧೧ ॥

ಪರಮಾಕಾಶನಗರನಾಟ್ಯಮಂಟಪಭೂಮಿಷು ।
ಸ್ವಶಕ್ತಿವೃತ್ತಂ ಸಂಸಾರಂ ಪಶ್ಯಂತೀ ಸಾಕ್ಷಿವತ್ಸ್ಥಿತಾ ॥ ೧೨ ॥

ಶ್ರೀ ವಸಿಷ್ಠ ಉವಾಚ :—

ಶಿವಸ್ಯಾಸ್ಯ ಜಗನ್ನಾಥ ಶಕ್ತಯಃ ಕಾಃ ಕಥಂ ಸ್ಥಿತಾಃ ।
ಸಾಕ್ಷಿತಾ ಕಾ ಚ ಕಿಂ ತಾಸಾಂ ವೃತ್ತಂ ಸ್ಯಾತ್ಕಿಯದೇವ ತತ್ ॥ ೧೩ ॥

---

೧೧. ದೀಪವು ಮನೆಯಲ್ಲಿ ಬೆಳಗುತ್ತಿದ್ದರೆ ಎಲ್ಲಾ ಕೆಲಸಗಳೂ ನಡೆಯುವುದಕ್ಕೆ ಅನುಕೂಲವಾಗಿರುವಂತೆ, ಸಾಕ್ಷಿರೂಪವಾಗಿ ನಿಂತ ಈ ಚಿತ್ಸತ್ತೆಯು ವಿಶದವಾಗಿ, ಅವಿಚ್ಛಿನ್ನವಾಗಿ ಪ್ರಕಾಶಿಸುತ್ತಿರಲು, ಜಗಚ್ಚಿತ್ರಗಳು ಪರಂಪರೆಯಾಗಿ ಪ್ರಕಾಶಕ್ಕೆ ಬರುವುವು.

೧೨. ಈ ಚಿತ್ಸತ್ತೆಯು ಆಕಾಶ ನಗರದಂತೆ (ಪ್ರಾತಿಭಾಸಿಕವಾಗಿ ತೋರುವ) ನಾಟ್ಯ ಮಂಟಪ ಭೂಮಿಯಲ್ಲಿ ತಾನು ಪರ (ಸರ್ವೋತ್ಕೃಷ್ಟ)ವಾಗಿ ಕುಳಿತು ತನ್ನ ಶಕ್ತಿಯಿಂದಲೇ ನಡೆಯುತ್ತಿರುವ ಸಂಸಾರವನ್ನು ನೋಡುತ್ತ ಸಾಕ್ಷಿಯಂತೆ ಕುಳಿತಿರುವುದು.

ಶ್ರೀ ವಸಿಷ್ಠನು ಹೇಳಿದನು :—

ಶಿವ ಸ್ವರೂಪವಾಗಿರುವ ಈ ಚಿತ್ತಿನ ಶಕ್ತಿಗಳು ಯಾವವು? ಅವು ಹೇಗೆ ಇರುವುವು? ಅದಕ್ಕೆ ಸಾಕ್ಷಿತ್ವವೆನ್ನುವುದು ಹೇಗೆ? ಆ ಶಕ್ತಿಗಳು ಮಾಡುವ ಕಾರ್ಯವೇನು? ಆ ಚಿತ್ತಿನ ಪ್ರಮಾಣವೆಷ್ಟು? ಎಲೈ ಜಗನ್ನಾಥನೇ, (ಅದೆಲ್ಲವನ್ನೂ ನನಗೆ ಹೇಳು.

ಶ್ರೀ ಈಶ್ವರ ಉವಾಚ:—

ಅಪ್ರಮೇಯಸ್ಯ ಶಾಂತಸ್ಯ ಶಿವಸ್ಯ ಪರಮಾತ್ಮನಃ ।
ಸೌಮ್ಯ ಚಿನ್ಮಾತ್ರರೂಪಸ್ಯ ಸರ್ವಸ್ಯಾನಾಕೃತೇರಪಿ ॥ ೧೪ ॥

ಇಚ್ಛಾಸತ್ತಾ ವ್ಯೋಮಸತ್ತಾ ಕಾಲಸತ್ತಾ ತಥೈವ ಚ ।
ತಥಾ ನಿಯತಿಸತ್ತಾ ಚ ಮಹಾಸತ್ತಾ ಚ ಸುವ್ರತ ॥ ೧೫ ॥

ಜ್ಞಾನಶಕ್ತಿಃ ಕ್ರಿಯಾಶಕ್ತಿಃ ಕರ್ತೃತಾಕರ್ತೃತಾಪಿ ಚ ।
ಇತ್ಯಾದಿಕಾನಾಂ ಶಕ್ತೀನಾಮಂತೋ ನಾಸ್ತಿ ಶಿವಾತ್ಮನಃ ॥ ೧೬ ॥

ಶ್ರೀ ಈಶ್ವರನು ಹೇಳಿದನು:—

೧೪-೧೫-೧೬. ಎಲೈ ಸೌಮ್ಯನೆ, ಅಪ್ರಮೇಯ (ಅರಿವಿಗೆ ಎಟಕದವ)ನಾಗಿ, ಶಾಂತ (ವಿಕಾರರಹಿತ)ನಾಗಿ, ಶಿವ (ಮಂಗಲ)ನಾಗಿ, ಚಿನ್ಮಾತ್ರ ಸ್ವರೂಪನಾಗಿ, ಸರ್ವವೂ ತಾನೇ ಆದರೂ ಆಕಾರರಹಿತನಾಗಿರುವ, ಆ ಪರಮಾತ್ಮನ (ಶಕ್ತಿಗಳು ನಾನಾವಿಧವಾಗಿರುವುವು.) ಎಲೈ ಸುವ್ರತನೇ, ಇಚ್ಛಾ, ವ್ಯೋಮ, ಕಾಲ, ನಿಯತಿ, ಮಹತ್ ಮೊದಲಾದ ಸತ್ತೆಗಳೂ, ಜ್ಞಾನ, ಕ್ರಿಯಾ, ಕರ್ತೃತಾ, ಅಕರ್ತೃತಾ ಮೊದಲಾದ ಶಕ್ತಿಗಳೂ ಅನಂತವಾಗಿ ಎಷ್ಟೋ ಉಂಟು.

(ಸೋಽಕಾಮಯತ ಬಹುಸ್ಯಾಂ ಇತಿ ಶ್ರುತೇಃ ಪ್ರಥಮಂ ಇಚ್ಛಾಸತ್ತಾ ಅಭಿವ್ಯಕ್ತಾ । ತತೋವ್ಯೋಮಾಭಿವ್ಯಕ್ತಾ ತತ್ಸತ್ತಾ । ತತ್ರ ಕಾಲಾತ್ಮನಃ ಸೂತ್ರಸ್ಯ ಅಭಿವ್ಯಕ್ತಾ ಕಾಲಸತ್ತಾ । ಸತೋ ನಿಯತ ಸಂಸ್ಥಾನ ಭೂತ ಭೌತಿಕಾವಿರ್ಭಾವೇ ನಿಯತಿಸತ್ತಾ ಅಭಿವ್ಯಜ್ಯತೇ । ತಾಸು ಸರ್ವಾಸು ಅನುಗತಾ ಮಹಾಸತ್ತಾ । ಐಶ್ವರಾನ್ ಅಸಾಧಾರಣ ಶಕ್ತಿ ಭೇದಾನ್ ಉಕ್ತ್ವಾ ಜೀವ ಸಾಧಾರಣಾನ್ ತಾನ್ ಆಹ. ಕರ್ತೃತಾ ಪ್ರವೃತ್ತಿ ಶಕ್ತಿಃ ಅಕರ್ತೃತಾ ನಿವೃತ್ತಿ ಶಕ್ತಿಶ್ಚ ಕ್ರಿಯಾಶಕ್ತೇಃ. ಅವಾಂತರ ಭೇದೌ । ಯದ್ಯಪಿ ಇಚ್ಛಾಶಕ್ತಿರಪಿ ಜೀವೇಽಸ್ತಿ ತಥಾಪಿ ಜ್ಞಾನೇಶ್ವರವತ್ ಕ್ರಿಯಾಂ ವಿನಾ ಸ್ವವಿಷಯಂ ಸಾಧಯತೀತಿ ಕ್ರಿಯಾಶಕ್ತಿ ಪರವಶಾ ತತ್ರೈವಾಂತ ರ್ಭೂತೇತಿ ಭಾವಃ ॥. —ತಾ. ಪ್ರ.)

ಶ್ರೀ ವಸಿಷ್ಠ ಉವಾಚ :—
ಶಕ್ತಯಃ ಕುತ ಏವೈತಾ ಬಹುತ್ವಂ ಕಥಮಾಸು ಚ ।
ಉದಯಶ್ಚ ಕಥಂ ದೇವ ಭೇದಾಭೇದಶ್ಚ ಕೀದೃಶಃ ॥ ೧೭ ॥

ಶ್ರೀ ಈಶ್ವರ ಉವಾಚ :—
ಶಿವಸ್ಯಾನಂತರೂಪಸ್ಯ ಏಷಾ ಚಿನ್ಮಾತ್ರತಾತ್ಮನಃ ।
ಏಷಾ ಹಿ ಶಕ್ತಿರಿತ್ಯುಕ್ತಾ ತಸ್ಮಾದ್ಭಿನ್ನಾ ಮನಾಗಪಿ ॥ ೧೮ ॥

ಜ್ಞತ್ವಕರ್ತೃತ್ವಭೋಕ್ತೃತ್ವ ಸಾಕ್ಷಿತ್ವಾದಿ ವಿಭಾವನಾತ್ ।
ಶಕ್ತಯೋ ವಿವಿಧಂ ರೂಪಂ ಧಾರಯಂತಿ ಬಹೂದಕಂ ॥ ೧೯ ॥

ಏವಂ ಜಗತಿ ನೃತ್ಯಂತಿ ಬ್ರಹ್ಮಾಂಡೇ ನೃತ್ಯಮಂಟಪೇ ।
ಕಾಲೇನ ನರ್ತಕೇನೇವ ಕ್ರಮೇಣ ಪರಿಶಿಕ್ಷಿತಾಃ ॥ ೨೦ ॥

ಶ್ರೀ ವಸಿಷ್ಠನು ಹೇಳಿದನು :—

೧೭. ಈ (ಅನಂತ) ಶಕ್ತಿಗಳು ಎಲ್ಲಿಂದ ಬರುವುವು? ಇವುಗಳು (ಏಕೈಕವಾದ ಚಿಚ್ಛಕ್ತಿಯಿಂದಲೇ ಬರುವುದಾದರೆ ಇವುಗಳು ಇಷ್ಟು) ಬಹುವಾಗುವುದು ಹೇಗೆ? ಇವು ಉದಯವಾಗುವುದೆಂತು? ದೇವನೆ, ಇವುಗಳ (ಪರಸ್ಪರ) ಭೇದ, ಅಭೇದಗಳು ಎಂತು?

ಶ್ರೀ ಈಶ್ವರನು ಹೇಳಿದನು :—

೧೮. ಅನಂತ ರೂಪನಾದರೂ ಏಕ ರೂಪನೇ ಆಗಿರುವ ಚಿತ್ ಎಂಬುದು ಯಾವುದುಂಟೋ ಅದೇ ಶಕ್ತಿ ಎನ್ನಿಸಿಕೊಳ್ಳುವುದು. ಅದಕ್ಕಿಂತ ಭಿನ್ನವಾದುದು, ಅದಲ್ಲದುದು ಯಾವುದೂ ಇಲ್ಲ.

೧೯. ಜ್ಞತ್ವ, ಕರ್ತೃತ್ವ, ಭೋಕ್ತೃತ್ವ, ಸಾಕ್ಷಿತ್ವ ಎಂದು ಮುಂತಾಗಿ, ವಿಭಾವನ ಮಾಡಿಕೊಳ್ಳುವುದರಿಂದಲೇ ಒಂದೊಂದೂ ಬೇರೆಬೇರೆಯಾದ ಶಕ್ತಿಯೇ ಆಗುವುದು. ನೀರು ಫೇನ, ತರಂಗಾದಿ ನಾನಾ ರೂಪವನ್ನು ಪಡೆಯುವುದೆಂತೋ ಇದೂ ಅಂತೆಯೇ!

೨೦. (ಹೀಗೆ ಬೇರೆಬೇರೆಯಾದ ಈ ಶಕ್ತಿಗಳು) ಕಾಲನೆಂಬ ನರ್ತಕನು

ಯೈಷಾ ಪರಾಪರಾಭಾಸಾ ಸೈಷಾ ನಿಯತಿರುಚ್ಯತೇ ।
ಕ್ರಿಯಾಥ ಕೃತಿರಿಚ್ಛಾವಾ ಕಾಲೇತ್ಯಾದಿಕೃತಾಭಿಧಾ ॥ ೨೧ ॥

ಆಮಹಾರುದ್ರಪರ್ಯಂತ ಮಿದಮಿತ್ಥಮಿತಿಸ್ಥಿತೇಃ ।
ಆತೃಣಾಪದ್ಮಜಸ್ಪಂದಂ ನಿಯಮಾನ್ನಿಯತಿಸ್ಸ್ಮೃತಾ ॥ ೨೨ ॥

ನಿಯತಿರ್ನಿತ್ಯಮುದ್ವೇಗವರ್ಜಿತಾ ಪರಿಮಾರ್ಜಿತಾ ।
ಏಷಾ ನೃತ್ಯತಿ ವೈ ನೃತ್ಯಂ ಜಗಜ್ಜಾಲಕನಾಟಕಂ ॥ ೨೩ ॥

ತಮಗೆ ಕೊಟ್ಟಿರುವ ಕ್ರಮವಾದ ವಿದ್ಯಾಭ್ಯಾಸದಿಂದ ಸುಶಿಕ್ಷಿತರಾಗಿರುವರೋ ಎಂಬಂತೆ, ಬ್ರಹ್ಮಾಂಡವೆಂಬ ನೃತ್ಯಮಂಟಪದಲ್ಲಿ (ಯಾವಾಗಲೂ) ಕುಣಿಯುತ್ತಾ ಇರುವರು.

೨೧. ಕ್ರಿಯಾ, ಕೃತಿ, ಇಚ್ಛಾ, ಕಾಲ ಮೊದಲಾದ ಹೆಸರುಗಳುಳ್ಳ ಒಂದೇ ಶಕ್ತಿಯೇ ಪರಾ, ಅಪರಾ ಎಂಬ ಹೆಸರಿನಿಂದ ತೋರುತ್ತಿರುವುದು. ಅದೇ ನಿಯತಿಯು.

[ಪರಾಭಿಧಾನಾ ಪರಾರ್ಧದ್ವಯ ಕಾಲಾ । ಅಪರಾಭಿಧಾನಾ ಅವಾಂತರ ಕಲ್ಪ ತದವಯವ ರೂಪಾ —ತಾ. ಪ್ರ.]

೨೨. ತೃಣದಿಂದ ಹಿಡಿದು ಮಹಾರುದ್ರನವರೆಗೂ ಇರುವ ಸರ್ವವೂ ಹೀಗೆಯೇ ಇದ್ದೇ ತೀರಬೇಕೆಂಬ [ಆಕಾರ ನಿಯಮವೊಂದು] ತೃಣದಿಂದ ಹಿಡಿದು ಬ್ರಹ್ಮನವರೆಗೆ ಸರ್ವವೂ ಹೀಗೇ ವ್ಯಾಪಾರ ಮಾಡಬೇಕೆಂಬ [ವಿಕಾರನಿಯಮ ವೊಂದು, ಇವೆರಡೂ ಕೂಡ] ನಿಯತಿಯೆನ್ನಿಸಿಕೊಳ್ಳುವುದು.

೨೩. ನಿಯತಿಯು ಯಾವಾಗಲೂ ಉದ್ವೇಗವಿಲ್ಲದಿರುವುದು. [ಬ್ರಹ್ಮ ಜ್ಞಾನದಿಂದ] ಅದನ್ನು ತೊಳೆಯುವವರೆಗೂ ಜಗಜ್ಜಾಲಕ ನಾಟಕವನ್ನು ಆಡುತ್ತಲೇ ಇರುವುದು.

ನಾನಾರಸವಿಲಾಸಾಢ್ಯಂ ವಿವರ್ತಾಭಿನಯಾನ್ವಿತಂ |
ಕಲ್ಪಕ್ಷಣಹತಾನೇಕ ಪುಷ್ಕರಾವರ್ತಘರ್ಘರಂ || ೨೪ ||

ಸರ್ವರ್ತುಕುಸುಮಾಕೀರ್ಣಂ ಧಾರಾಗೋಲಕಮಂದಿರಂ |
ಭೂಯೋಭೂಯಃ ಪತದ್ವರ್ಷಭೂರಿ ಸ್ವೇದಜಲೋತ್ಕರಂ || ೨೫ ||

ಪಯೋದಪಲ್ಲವಾಲೋಲ ನೀಲಾಂಬರ ಕೃತಭ್ರಮಂ |
ಪೂರ್ಣಸಂಶುದ್ಧಸಪ್ತಾಬ್ಧಿ ರತ್ನೌಘವಲಯಾಕುಲಂ || ೨೬ ||

ಯಾಮ ಪಕ್ಷ ದಿನಪ್ರೇಕ್ಷಾ ಕಟಾಕ್ಷೋದ್ಭಾಸಿತಾಂಬರಂ |
ಮಜ್ಜನೋನ್ಮಜ್ಜನವ್ಯಗ್ರ ಕುಲಾದ್ರಿಕುಲಶೇಖರಂ || ೨೭ ||

---

೨೪. ಈ ನಾಟಕವು ನಾನಾರಸಗಳ ವಿಲಾಸದಿಂದ ಸೊಗಸಾಗಿರುವುದು. ವಿವರ್ತಎಂಬ ಅಭಿನಯದಿಂದ ಕೂಡಿರುವುದು. ಕಲ್ಪಗಳೆಂಬ ಗಳಿಗೆಗಳಿಗೆಗೂ [ಸತ್ತುಸತ್ತು] ಹೊಸದಾಗುತ್ತಿರುವ ಅನೇಕ ಪುಷ್ಕರ, ಆವರ್ತ, ಎಂಬ ತಾಳಗಳನ್ನುಳ್ಳುದು.

೨೫. ಸರ್ವ ಋತುಗಳ ಕುಸುಮಗಳೂ [ವರ್ಷ] ಧಾರೆಯಿಂದ ಕೂಡಿರುವ ಗೋಲಕವುಳ್ಳ ಮಂದಿರವೂ ಉಳ್ಳ ಆ ನಾಟಕದಲ್ಲಿ ಆಗಾಗ ಮಳೆಯೆಂಬ ಸ್ವೇದಜಲವು ವರ್ಷಿಸುವುದು.

೨೬. ಆ ನಾಟಕ ಮಂದಿರವಾದರೋ ಮೇಘಗಳೆಂಬ ಚಿಗುರುಗಳಿಂದ ಕೂಡಿ ಮನೋಹರವಾದ ಆಕಾಶವೆಂಬ ನೀಲವಸ್ತ್ರದ ಮೇಲ್ಕಟ್ಟುಳ್ಳುದು. ಸಪ್ತ ಸಮುದ್ರಗಳೆಂಬ ಪೂರ್ಣಗಳೂ ಶುದ್ಧಗಳೂ ರತ್ನಸಮೂಹಗಳಿಂದ ಆದ ಪಾದ ವಲಯಗಳಿಂದ ಕೂಡಿರುವುದು.

೨೭. ಯಾಮ, ಪಕ್ಷ, ದಿನಗಳನ್ನು ನೋಡುತ್ತಿರುವ ಕಟಾಕ್ಷಗಳಿಂದ ಸುಂದರವಾದ ಆಕಾಶವುಳ್ಳುದು. ಆಗಾಗ ಮುಳುಗಿ ಮುಳುಗಿ ಏಳುತ್ತಿರುವ ಕುಲ ಪರ್ವತಗಳ ಶೃಂಗಗಳನ್ನುಳ್ಳುದು.

ಭ್ರಮಚ್ಛಶಿಮಣಿಪ್ರೋತ ಗಂಗಾಮುಕ್ತಾಫಲತ್ರಯಂ |
ಸಂದೃಷ್ಟಾದೃಷ್ಟಸಂಧ್ಯಾಭ್ರ ವಿಲೋಲಕರ ಪಲ್ಲವಂ ‖ ೨೮ ‖

ಅನಾರತಂಣಲ್ಲೋಲ ಲೋಕಾಲಂಕಾರ ಕೋಮಲಂ |
ಭೂರಿ ಭೂತಲಪಾತಾಲ ನಭಸ್ತಲಪದಕ್ರಮಂ ‖ ೨೯ ‖

ಮಗ್ನೋನ್ಮಗ್ನಮಹಾನೇಕ ತಾರಾಘರ್ಮ ಕಣೋತ್ಕರಂ |
ಚಂದ್ರಾರ್ಕಕುಂಡಲಸ್ಪಂದ ಸ್ಮಿತಸ್ಫುಟನಭೋಮುಖಂ ‖ ೩೦ ‖

ಕಲ್ಪಿತಾನೇಕಬ್ರಹ್ಮಾಂಡ ಕಪಾಟಕ ವಿತಾನಕಂ |
ಲುಠಲ್ಲೋಕಾಂತರ ವ್ಯೂಹ ಧ್ವನನ್ಮುಕ್ತಾಂತಪಲ್ಲವಂ |
ಸುಖದುಃಖದಶಾದೋಷ ಭಾವಭಾವರಸಾಂತರಂ ‖ ೩೧ ‖

---

೨೮. ಅಲೆಯುತ್ತಿರುವ ಚಂದ್ರಬಿಂಬಗಳೆಂಬ ನಾಯಕಮಣಿಗಳುಳ್ಳ ಗಂಗಾ ನದಿಯೆಂಬ ಮುತ್ತಿನ ಮೂರೆಳೆ ಹಾರವನ್ನೂ, ಕಂಡೂ ಕಾಣದಂತಿದ್ದು ಮನೋಹರವಾಗಿರುವ ಸಂಧ್ಯಾ ಮೇಘಗಳೆಂಬ ಚಂಚಲವಾದ ಕರಪಲ್ಲವಗಳನ್ನೂ (ಉಳ್ಳುದಾಗಿ)

೨೯. ಒಂದೇ ಸಮನಾಗಿ ಝುಲ್ ಝುಲ್ ಎನ್ನುತ್ತಿರುವ ಲೋಕಗಳೆಂಬ ಅಲಂಕಾರಗಳಿಂದ ಸುಂದರವಾಗಿರುವ, ಭೂತಲ ಪಾತಾಲ ನಭಸ್ತಲಗಳನ್ನು ಆಕ್ರಮಿಸುತ್ತಿರುವ ಪಾದನ್ಯಾಸವನ್ನು

೩೦ ಮುಳುಗಿ ಮುಳುಗಿ ಏಳುತ್ತಿರುವ ಅನೇಕಾನೇಕ ಮಹಾ ನಕ್ಷತ್ರಗಳೆಂಬ ಬೆವರು ಹನಿಗಳನ್ನೂ, ಸೂರ್ಯ ಚಂದ್ರರೆಂಬ ಕುಂಡಲಗಳ ಚಲನಗಳಿಂದ ಪ್ರಕಾಶಮಾನವಾಗಿರುವ ಆಕಾಶವನ್ನೂ

೩೧. ಹುಟ್ಟಿ ಹುಟ್ಟಿ ಬರುತ್ತಿರುವ ಬ್ರಹ್ಮಾಂಡ ಸಮೂಹಗಳೆಂಬ ಮೇಲ್ಕಟ್ಟುಗಳನ್ನೂ ಒದ್ದಾಡುತ್ತಿರುವ ಲೋಕಲೋಕಾಂತರ ವ್ಯೂಹಗಳ ಧ್ವನಿಗಳಿಂದ ಕೂಡಿರುವ ಮುತ್ತಿನ ಮಣಿಗಳನ್ನೂ ಕೊನೆಗೆ ಕಟ್ಟಿರುವ ಉತ್ತರೀಯವನ್ನೂ, ಸುಖದುಃಖಗಳು ಇರುವುದು ಹೋಗುವುದು ಎಂಬ ದಶೆಗಳಿಂದ ಉಂಟಾಗಿರುವ ದೋಷಗಳ (ಸ್ಥಾಯಿ) ಭಾವ (ವಿಭಾವ, ಸಂಚಾರೀ ಭಾವರೂಪವಾದ) ಅ-ಭಾವಗಳಿಂದ ವ್ಯಕ್ತವಾಗುತ್ತಿರುವ ರಸಾಂತರಗಳನ್ನೂ ಉಳ್ಳುದು.

ಅಸ್ಮಿನ್ವಿಕಾರ ವಲಿತೇ ನಿಯತೇರ್ವಿಲಾಸೇ |
ಸಂಸಾರನಾಮ್ನಿ ಚಿರನಾಟಕ ನಾಟ್ಯಸಾರೇ ||
ಸಾಕ್ಷೀಸದೋದಿತವಪುಃ ಪರಮೇಶ್ವರೋಽಯ
ಮೇಕಸ್ಸ್ಥಿತೋ ನಚ ತಯಾ ನಚ ತೇನ ಭಿನ್ನಃ || ೩೨ ||

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ "ನಿಯತಿನೃತ್ಯಂ" ನಾಮ ಸಪ್ತತ್ರಿಂಶಃ ಸರ್ಗಃ

---

೩೨. ವಿಕಾರಗಳಿಂದ ಕೂಡಿರುವ ಈ ನಿಯತಿಯ ವಿಲಾಸವೆಂಬ ಈ ಸಂಸಾರ ನಾಮಕವಾದ ಚಿರನಾಟಕದ ಸ್ವಾರಸ್ಯವಾದ ನಾಟ್ಯದಲ್ಲಿ, ಸಾಕ್ಷಿಯಾಗಿ ಇದ್ದುಕೊಂಡು ಆ ನಾಟ್ಯಕ್ಕಿಂತ ಭಿನ್ನನಾಗದಿದ್ದರೂ, ಆ ನಿಯತಿಯಿಂದ ಭಂಗಪಡದೆ, ಯಾವಾಗಲೂ ದರ್ಶನ ಕೊಡುವ ಪರಮೇಶ್ವರನೊಬ್ಬನು ಉಂಟು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ನಿಯತಿ ನೃತ್ಯ" ಎಂಬ
ಮೂವತ್ತೇಳನೆಯ ಸರ್ಗವು

ಅಷ್ಟತ್ರಿಂಶಃ ಸರ್ಗಃ

ಶ್ರೀ ಈಶ್ವರ ಉವಾಚ:—

ಏಷದೇವಸ್ಸಪರಮಃ ಪೂಜ್ಯ ಏಷಸದಾಸತಾಂ |
ಚಿನ್ಮಾತ್ರ ಮನುಭೂತ್ಯಾತ್ಮ ಸರ್ವಗಸ್ಸರ್ವ ಸಂಶ್ರಯಃ ॥ ೧ ॥

ಘಟೇಪಟೇ ವಟೇ ಕುಡ್ಯೇ ಶಕಟೇ ವಾನರೇ ಸ್ಥಿತಃ
ಶಿವೋಹರೋ ಹರಿರ್ಬ್ರಹ್ಮಾ ಶಕ್ರೋವೈಶ್ರವಣೋಯಮಃ ॥ ೨ ॥

ಬಹಿರಂತಶ್ಚ ಸರ್ವಾತ್ಮಾ ಸದಾ ಸ್ವಾತ್ಮಾ ಸುಬುದ್ಧಿಭಿಃ |
ವಿವಿಧೇನ ಕ್ರಮೇಣೈಷ ಭಗವಾನ್ ಪರಿಪೂಜ್ಯತೇ ॥ ೩ ॥

ಮೂವತ್ತೆಂಟನೆಯ ಸರ್ಗವು

ಶ್ರೀ ಈಶ್ವರನು ಹೇಳಿದನು :—

೧. (ಹಿಂದೆ ಹೇಳಿದಂತೆ ನಿಯತ ನಾಟಕ ಸಾಕ್ಷಿಯಾಗಿರುವ) ಅವನೇ ದೇವನು. ಆತನು ಪರಮನು. ಯಾವಾಗಲೂ ಸತ್ಪುರುಷರು ಪೂಜೆ ಮಾಡುವುದು ಇವನನ್ನೇ! ಈತನು ಚಿನ್ಮಾತ್ರನು. ಅನುಭೂತಿಯೇ ಆತ್ಮವಾಗಿ ಉಳ್ಳವನು. ಸರ್ವದರಲ್ಲಿಯೂ ಇದ್ದು ಸರ್ವಕ್ಕೂ ಆಶ್ರಯನಾಗಿರುವನು.

೨. ಘಟ, ಪಟ, ವಟ (ಮರ), ಕುಡ್ಯ (ಗೋಡೆ) ಶಕಟ, ಮರ್ಕಟಗಳಲ್ಲೆಲ್ಲ ಇರುವನು. ಶಿವ, ಹರ, ಹರಿ, ಬ್ರಹ್ಮಾ, ಶುಕ್ರ, ವೈಶ್ರವಣ, ಯಮ, ಎಲ್ಲರೂ ಈತನೇ!

೩. ಒಳಗೆ ಹೊರಗೆಲ್ಲ ವ್ಯಾಪಿಸಿಕೊಂಡು ಸರ್ವಾತ್ಮನಾಗಿರುವ ಈ ದೇವನು ಆತ್ಮಜ್ಞಾನ ಸಂಪನ್ನರಾಗಿರುವವರು ಎಲ್ಲರಿಂದಲೂ ನಾನಾ ಕ್ರಮಗಳಿಂದ ಭಗವಂತನೆಂದು ಪೂಜೆಗೊಳ್ಳುವನು.

ಬಹಿಸ್ತಾವರ್ತ ಮಹಾಬುದ್ಧೇ ಕ್ರಮೇಣ ಪರಿಪೂಜ್ಯತೇ ।
ಯೇನ ತಚ್ಛೃಣು ತತ್ವಜ್ಞ ಶ್ರೋಷ್ಯಸ್ಯಂತಃ ಕ್ರಮಂ ತತಃ ॥ ೪ ॥

ಪೂಜಾಕ್ರಮೇಷು ಸರ್ವೇಷು ದೇಹಗೇಹಃ ಪವಿತ್ರಕಂ ।
ತ್ಯಾಜ್ಯಂ ದೇಹಾವಬೋಧಾತ್ಮ ಪರಂ ಯತ್ನಾತ್ಪವಿತ್ರಕಂ ॥ ೫ ॥

ಪೂಜನಂ ಧ್ಯಾನ ಮೇವಾಂತರ್ನಾನ್ಯದ ಸ್ತ್ಯಸ್ಯ ಪೂಜನಂ ।
ತಸ್ಮಾತ್ತ್ರಿಭುವನಾಧಾರಂ ನಿತ್ಯಂ ಧ್ಯಾನೇನ ಪೂಜಯೇತ್ ॥ ೬ ॥

ಚಿದ್ರೂಪಂ ಸೂರ್ಯಲಕ್ಷಾಭಂ ಸಮಸ್ತಾಭಾಸ ಭಾಸನಂ ।
ಅಂತಸ್ಥ ಚಿತ್ಪ್ರಕಾಶಂತ ಮಹಂತಾ ಸಾರಮಾಶ್ರಯೇತ್ ॥ ೭ ॥

---

೪. ಎಲೈ ಮಹಾ ಬುದ್ಧಿಯಾದ ವಸಿಷ್ಠನೆ, ಆ ದೇವನು ಬಹಿಃಕ್ರಮದಿಂದ ಹೇಗೇ ಪೂಜೆಗೊಳ್ಳುವನೋ ಅದನ್ನು ಕೇಳು. ಅನಂತರ ಅಂತಃ ಕ್ರಮವನ್ನು ಕೇಳುವೆಯಂತೆ.

೫. ಪೂಜಾ ಕ್ರಮವು ಅಂತಃ ಆಗಲಿ ಬಾಹ್ಯವೇ ಆಗಲಿ, ಸ್ನಾನಾಚಮನಾದಿಗಳಿಂದ ಎಷ್ಟೇ ಪವಿತ್ರವಾಗಿದ್ದರೂ ದೇಹಮಂದಿರವನ್ನು ದಾಟಿ, ದೇಹವನ್ನು ಬೆಳಗುವ ಚಿತ್ಸ್ವರೂಪವು ಯಾವುದುಂಟೋ ಅದನ್ನು ಗ್ರಹಿಸಬೇಕು.

೬. ಪೂಜನವೆನ್ನುವುದು ಯಾವುದೋ ಅದೇ ಅಂತಃ ನಡೆಯುವ ಧ್ಯಾನವು. ಅದರಿಂದ ತ್ರಿಭುವನಗಳಿಗೂ ಆಧಾರನೂ ನಿತ್ಯನೂ ಆದ ದೇವನನ್ನು ಧ್ಯಾನದಿಂದ ಪೂಜಿಸಬೇಕು.

೭. ಚಿದ್ರೂಪನೂ, ಲಕ್ಷಸೂರ್ಯರಷ್ಟು ಪ್ರಕಾಶವುಳ್ಳವನೂ ಬೆಳಗುವ ಸಮಸ್ತಕ್ಕೂ ಬೆಳಕು ಕೊಡುವವನೂ, ಅಂತಸ್ಥನಾಗಿ ಚಿತ್ಪ್ರಕಾಶದಿಂದ ಬೆಳಗುತಿರುವವನೂ ಅಹಂ ಎಂಬುದಕ್ಕೆ ಸಾರವಾಗಿರುವವನೂ ಆದ "ಸ್ವ" ಎಂದರೆ ತಾನು ಎಂಬ ದೇವನನ್ನು ಆಶ್ರಯಿಸಬೇಕು.

ಅಪಾರ ಪರಮಾಕಾಶ ವಿಪುಲಾಭೋಗಕಂಧರಂ |
ಅನಂತಾಧಸ್ತನಾಕಾಶ ಕೋಶಪಾದ ಸರೋರುಹಂ || ೮ ||

ಅನಂತದಿಕ್ತಟಾಭೋಗ ಭುಜಮಂಡಲ ಮಂಡಿತಂ |
ನಾನಾವಿಧ ಮಹಾಲೋಕ ಗೃಹೀತ ಪರಮಾಯುಧಂ || ೯ ||

ಹೃತ್ಕೋಶ ಕೋಣವಿಶ್ರಾಂತ ಬ್ರಹ್ಮಾಂಡೌಘ ಪರಂಪರಂ |
ಪ್ರಕಾಶ ಪರಮಾಕಾಶ ಪಾರಗಾಪರ ವಿಗ್ರಹಂ || ೧೦ ||

ಅಧಊರ್ಧ್ವಂ ಚತುರ್ದಿಕ್ಷು ವಿದಿಕ್ಷುಚ ನಿರಂತರಂ |
ಬ್ರಹ್ಮೇಂದ್ರ ಹರಿರುದ್ರೇಶ ಪ್ರಮುಖಾಮರಮಂಡಿತಂ |
ಇಮಾಂ ಭೂತಶ್ರಿಯಂತಸ್ಯ ರೋಮಾಲಿಂ ಪ್ರವಿಚಿಂತಯೇತ್ || ೧೧ ||

---

೮. ಅಪಾರವಾಗಿರುವ ಎಲ್ಲದಕ್ಕಿಂತ ಸೂಕ್ಷ್ಮವಾಗಿರುವ ಆಕಾಶಕ್ಕಿಂತ ವಿಪುಲವಾಗಿ ಹರಡಿರುವ ಶಿರಸ್ಸು ಉಳ್ಳವನು ಯಾರೋ, ಯಾವನ ಪಾದನಂಬ ಕಮಲ ಕೋಶದಲ್ಲಿ ಅನಂತವಾದ ಆಕಾಶವು ಅಡಗಿ ಹೋಗಿರುವುದೋ,

೯. ಕೊನೆಯೇ ಕಾಣದಿರುವ ದಿಕ್ತಟಗಳಿಗಿಂತ ವಿಶಾಲವಾದ ಭುಜಮಂಡಲ ಗಳಿಂದ ಶೋಭಿತನಾದವನು ಯಾರೋ, ಸತ್ಯಾದಿ ಮಹಾ ಮಹಾ ಲೋಕಗಳನ್ನು ಯಾರು ಆಯುಧಗಳಂತೆ ಕೈಗಳಲ್ಲಿ ಧರಿಸಿರುವನೋ,

೧೦. ಯಾವನ ಹೃದಯಾಕಾಶದ ಮೂಲೆಯೊಂದರಲ್ಲಿ ಬ್ರಹ್ಮಾಂಡ ಬ್ರಹ್ಮಾಂಡಗಳು ಗುಂಪು ಗುಂಪಾಗಿ ಸೇರಿಕೊಂಡಿರುವುವೋ, ಪ್ರಕಾಶಮಯವಾದ ಪರಮಾಕಾಶದ ಹೊರಗೆ ಇರುವ ಅನಂತಮೂರ್ತಿಯು ಯಾರೋ,

೧೧. ಯಾವನ ಮೇಲೆ, ಕೆಳಗೆ, ನಾಲ್ಕು ದಿಕ್ಕು ನಾಲ್ಕು ವಿದಿಕ್ಕುಗಳಲ್ಲಿ ಸಂತತವಾಗಿ ಬ್ರಹ್ಮ, ಇಂದ್ರ, ಹರಿ, ರುದ್ರ, ಈಶ ಮೊದಲಾದ ಪ್ರಮುಖರಾದ ಅಮರರು ಸೇರಿಕೊಂಡಿರುವರೋ, ಆ ಮಹಾ ದೇವನಿಗೆ ಈ ಪ್ರಾಣಿ ಸಮೂಹ ಗಳೆಲ್ಲವೂ ರೋಮಾಲಿಗಳು ಎಂದು ಚಿಂತಿಸಬೇಕು.

ವಿವಿಧಾಂಭಕಾರಿಣ್ಯಃ ತ್ರಿಜಗದ್ಯಂತ್ರರಜ್ಜವಃ |
ಇಚ್ಛಾದ್ಯಾಃ ಶಕ್ತಯಸ್ತಸ್ಯ ರೋಮಿಲಿಂ ಪ್ರವಿಚಿಂತಯೇತ್ || ೧೨ ||

ಏಷದೇವಸ್ಸಪರಮಃ ಪೂಜ್ಯಏಷ ಸದಾಸತಾಂ |
ಚಿನ್ಮಾತ್ರಮನು ಭೂತ್ಯಾತ್ಮಾ ಸರ್ವಗಸ್ಸರ್ವಸಂಶ್ರಯಃ |
ಘಟೇ ಪಟೇ ವಟೇ ಕುಡ್ಯೇ ಶಕಟೇವಾನರೇಸ್ಥಿತಃ || ೧೩ ||

ಶಿವೋಹರೋಹರಿಬ್ರಹ್ಮ- ಶಕ್ರೋವೈಶ್ರವಣೋಯಮಃ |
ಅನಂತೈಕಸದಾಧಾರ ಸತ್ತಾಮಾತ್ರೈಕವಿಗ್ರಹಃ || ೧೪ ||

ವಿವರ್ತಿತಜಗಜ್ಜಾಲಃ ಕಾಲೋಽಸ್ಯದ್ವಾರಪಾಲಕಃ || ೧೫ ||

---

೧೨. ನಾನಾ ವಿಧವಾದ ಕಾರ್ಯಗಳನ್ನು ಮಾಡುವ, ಮೂರು ಜಗತ್ತುಗಳೆಂಬ ಯಂತ್ರಗಳ ಸೂತ್ರಗಳಾಗಿರುವ, ಇಚ್ಛಾ ಕ್ರಿಯಾ ಜ್ಞಾನಾದಿ ಶಕ್ತಿಗಳು ಈ ಮಹಾದೇವನ ಶರೀರದಲ್ಲಿವೆ ಎಂದು ಚಿಂತಿಸಬೇಕು.

೧೩. ಇಂತಹ ಯಾವ ದೇವನುಂಟೋ ಆತನು ಎಲ್ಲರಿಗಿಂತ ಶ್ರೇಷ್ಠನು. ಚಿನ್ಮಾತ್ರನಾಗಿ, ಅನುಭೂತರೂಪನಾಗಿ ಸರ್ವಗತನಾಗಿ, ಸರ್ವಾಶ್ರಯನಾಗಿ, ಘಟ, ಪಟ, ವಟ, ಕುಡ್ಯ, ಶಕಟ, ಮರ್ಕಟಗಳಲ್ಲಿ ಇರುವನು. ಇಂತಹ ದೇವನನ್ನು ಸತ್ಪುರುಷರು ಸದಾ ಪೂಜೆ ಮಾಡುವರು.

೧೪. ಆತನು ಶಿವ, ಹರ, ಹರಿ, ಬ್ರಹ್ಮ, ಇಂದ್ರ, ಕುಬೇರ, ಯಮ ಮೊದಲಾದ ಎಲ್ಲಾ ಅನಂತ ರೂಪಗಳನ್ನು ಧರಿಸಿ ಎಲ್ಲಕ್ಕೂ ಆಧಾರನಾಗಿರುವ ಸತ್ತಾ ಮಾತ್ರ ಸ್ವರೂಪನು.

೧೫. ತನ್ನ ಬಲದಿಂದ ಅವಿಕಾರಿಯಾದ ಬ್ರಹ್ಮವನ್ನೂ ವಿಕಾರಿಯಾದ ಜಗತ್ತಾಗಿ ತೋರಿಸಬಲ್ಲ ಕಾಲನು ಈ ಮಹಾದೇವನ ದ್ವಾರಪಾಲಕನು.

(ದ್ವಾರಪಾಲಕಃ ಅವಿಶುದ್ಧಿಕಾಲೇ ಮನಸೋಽಂತಃ ಪ್ರವೇಶನಿರೋಧಕಃ; ವಿಶುದ್ಧೌತು ಪ್ರವೇಶಾನುಕೂಲ ಇತಿ—ತಾ. ಪ್ರ.)

ಸಶೈಲ ಭುವನಾ ಭೋಗವಿದಂ ಬ್ರಹ್ಮಾಂಡಮಂಡಲಂ |
ದೇಹಕೋಣೇಽಸ್ಯಕಸ್ಮಿಂಶ್ಚಿತ್ ಸ್ವಾಂಗಾವಯವತಾಗತಂ || ೧೬ ||

ವಿಚಿಂತಯೇನ್ಮಹಾದೇವಂ ಸಹಸ್ರಶ್ರವಣೇಕ್ಷಣಂ |
ಸಹಸ್ರಶಿರಸಂಶಾಂತಂ ಸಹಸ್ರ ಭುಜ ಭೂಷಣಂ || ೧೭ ||

ಸರ್ವತ್ರೇಕ್ಷಣ ಶಕ್ತ್ಯಾಢ್ಯಂ ಸರ್ವತೋ ಘ್ರಾಣಶಕ್ತಿಕಂ |
ಸರ್ವತ ಸ್ಸ್ಪರ್ಶನಮಯಂ ಸರ್ವತೋರಸನಾನ್ವಿತಂ || ೧೮ ||

ಸರ್ವತ್ರ ಶ್ರವಣಾಕೀರ್ಣಂ ಸರ್ವತ್ರಮನನಾನ್ವಿತಂ |
ಸರ್ವತೋಮನನಾತೀತಂ ಸರ್ವತಃ ಪರಮಂ ಶಿವಂ || ೧೯ ||

---

೧೬. ಮಹಾ ಶೈಲಾದಿಗಳನ್ನೆಲ್ಲ ಉಳ್ಳ ವಿಸ್ತಾರವಾದ ಈ ಬ್ರಹ್ಮಾಂಡ ಮಂಡಲವು ಆ ಮಹಾದೇವನ ದೇಹದಲ್ಲಿ ಎಲ್ಲಿಯೋ ಒಂದು ಮೂಲೆಯಾಗಿರುವುದು.

೧೭. ಸಹಸ್ರ ಸಹಸ್ರ ಶ್ರವಣಗಳೂ ನೇತ್ರಗಳೂ ಉಳ್ಳವನು,ಸಹಸ್ರ ಸಹಸ್ರ ಶಿರಸ್ಸುಗಳುಳ್ಳವನು, ಸಹಸ್ರ ಸಹಸ್ರ ಭುಜಗಳಿಂದ ಶೋಭಿಸುವನು, ಶಾಂತನಾಗಿರುವವನು, (ಉದ್ವೇಗಕರಗಳಾದ ರಾಗದ್ವೇಷಗಳಿಲ್ಲದವನು,) ಎಲ್ಲಿ ಬೇಕೆಂದರಲ್ಲಿ ನೋಡಬಲ್ಲವನು, ಎಲ್ಲೆಂದರಲ್ಲಿ ಘ್ರಾಣಶಕ್ತಿಯುಳ್ಳವನು;

೧೮. ಸ್ಪರ್ಶನ, ರಸನ, ಶ್ರವಣ, ಮನನಗಳನ್ನೂ ಯಾವ ಅಡ್ಡಿಯೂ ಇಲ್ಲದೆ ಎಲ್ಲೆಂದರಲ್ಲಿ ಪಡೆಯ ಬಲ್ಲವನು ಎಂದು ಆ ಮಹಾದೇವನನ್ನು ಚಿಂತಿಸಬೇಕು.

೧೯. ಯಾವ ರೀತಿಯಿಂದಲೂ ಯಾರಿಂದಲೂ ಮನನಮಾಡಲು ಸಾಧ್ಯವಿಲ್ಲದವನು. ಸರ್ವರೀತಿಯಿಂದಲೂ ಪರಮನೂ ಶಿವನೂ ಆದವನು. ಯಾವಾಗ ಏನು ಬೇಕೆಂದರೆ ಅದನ್ನು ಮಾಡಬಲ್ಲವನು.

ಸರ್ವದಾ ಸರ್ವಕರ್ತಾರಂ ಸರ್ವಸಂಕಲ್ಪಿತಾರ್ಥದಂ |
ಸರ್ವ ಭೂತಾಂತರಾವಸ್ಥಂ ಸರ್ವ ಸರ್ವೈಕ ಸಾಧನಂ |
ಇತಿ ಸಂಚಿತ್ಯದೇವೇಶಮರ್ಚಯೇತ್ ವಿಧಿವತ್ತತಃ || ೨೦ ||

ವಿಧಾನಮರ್ಚನಸ್ಯೇದಂ ಶೃಣು ಬ್ರಹ್ಮವಿದಾಂವರ |
ಸ್ವಸಂವಿದಾತ್ಮಾ ದೇವೋಽಯಂ ನೋಪಹಾರೇಣ ಪೂಜ್ಯತೇ || ೨೧ ||

ನ ದೀಪೇನ ನ ಧೂಪೇನ ನ ಪುಷ್ಪ ವಿಭವಾರ್ಪಣೈಃ |
ನಾನ್ನದಾನಾದಿದಾನೇನ ನ ಚಂದನ ವಿಲೇಪನೈಃ || ೨೨ ||

ನಚ ಕುಂಕುಮ ಕರ್ಪೂರ ಭೋಗೈಶ್ಚಿತ್ರೈರ್ನಚೇತರೈಃ || ೨೩ ||

ನಿತ್ಯಮಕ್ಲೇಶಲಭ್ಯೇನ ಶೀತಲೇನಾವಿನಾಶಿನಾ |
ಏಕೇನೈವಾಮೃತೇನೈಷಾ ಬೋಧೇನ ಸ್ವೇನ ಪೂಜ್ಯತೇ. |
ಏತದೇವ ಪರಂ ಧ್ಯಾನ- ಪೂಜೇವೈಷಾ ಪರಾ ಸ್ಮೃತಾ || ೨೪ ||

---

೨೦. ಎಲ್ಲಾ ಪ್ರಾಣಿಗಳ ಒಳಗೆ ಇರುವವನೂ ಅವನೇ, ಸರ್ವವೂ ತಾನೇ ಆಗಿ, ಸರ್ವರಿಗೂ ಇಷ್ಟಾರ್ಥ ಸಿದ್ಧಿಗೆ ಏಕೈಕ ಸಾಧನನಾಗಿರುವವನೂ ಈತನೇ! ಹೀಗೆ ಈ ದೇವ ದೇವನನ್ನು ಮೊದಲು ಚಿಂತನಮಾಡಿ ಅನಂತರ ವಿಧಿಪೂರ್ವಕ ವಾಗಿ ಪೂಜೆಮಾಡಬೇಕು.

೨೧. ಎಲೈ ಬಹ್ಮವೇತ್ತರಲ್ಲಿ ಶ್ರೇಷ್ಠನಾದವನೇ! ದೇವಾರ್ಚನದ ವಿಧಾನ ವನ್ನು ಕೇಳು. ಸ್ವಸಂವಿತ್ಸ್ವರೂಪನಾದ ಈ ದೇವನನ್ನು ಇನ್ನು ಯಾವ ಉಪ ಹಾರಗಳಿಂದಲೂ ಪೂಜಿಸುವಂತಿಲ್ಲ.

೨೨. ದೀಪ, ಧೂಪ, ಪುಷ್ಪಹಾರಾದಿಗಳು, ಅನ್ನದಾನಾದಿಗಳು, ಚಂದನ ವಿಲೇಪನಗಳು ಇವು ಯಾವವೂ (ಬೇಕಿಲ್ಲ)

೨೩. ಕುಂಕುಮ ಕೇಸರದ ವಿಲೇಪನಗಳು, ಕರ್ಪೂರದ ಆರತಿಗಳು ಮೊದ ಲಾದ ಭೋಗಗಳಾಗಲಿ, ಚಿತ್ರ ವಿಚಿತ್ರವಾದ ಇತರ ಭೋಗಗಳಾಗಲಿ ಬೇಕಾಗಿಲ್ಲ.

೨೪. ಯಾವಾಗಲೂ ಯಾವ ಕಷ್ಟವೂ ಇಲ್ಲದೆ ಸಿಕ್ಕುವ, ಶಾಂತವೂ ಶಾಶ್ವ ತವೂ ಆದ ಸ್ವಾತ್ಮಜ್ಞಾನವೆಂಬ ಅಮೃತವೊಂದರಿಂದ ಮಾತ್ರ ಈತನಿಗೆ ಪೂಜೆಯು ನಡೆಯುವುದು. ಇದೇ ಉತ್ತಮವಾದ ಧ್ಯಾನವು. ಇದೇ ಶ್ರೇಷ್ಠವಾದ ಪೂಜೆಯು.

ಯದನಾರತಮಂತಸ್ಥ ಶುದ್ಧ ಚಿನ್ಮಾತ್ರವೇದನಂ ।
ಪಶ್ಯ‌ೃ ಶೃಣ್ವ‌ೃ ಸ್ಪೃಶ‌ೃ ಜಿಘ್ರ‌ೃ ಅಶ್ನ‌ೃ ಗಚ್ಛ‌ೃ ಸ್ವಪ‌ೃ ಶ್ವಸ‌ೃ ॥ ೨೫ ॥

ಪ್ರಲಪ‌ೃ ವಿಸೃಜ‌ೃ ಗೃಹ್ಣ‌ೃ ಶುದ್ಧ ಸಂವಿನ್ಮಯೋ ಭವೇತ್ ।
ಧ್ಯಾನಾಮೃತೇನ ಸಂಪೂಜ್ಯ ಸ್ವಯಮಾತ್ಮಾನಮೀಶ್ವರಂ ॥ ೨೬ ॥

ಪರಮಾಸ್ವಾದಯುಕ್ತೇನ ಮುಕ್ತೇನ ಕುಸುಮೇಹಿತೈಃ ।
ಧ್ಯಾನೋಪಹಾರ ಏವಾತ್ಮ ಧ್ಯಾನಂ ಹ್ಯಸ್ಯಸಮೀಹಿತಂ ॥ ೨೭ ॥

ಧ್ಯಾನಮರ್ಘ್ಯಂಚ ಪಾದ್ಯಂಚ ಶುದ್ಧ ಸಂವೇದನಾತ್ಮಕಂ ।
ಧ್ಯಾನಸಂವೇದನಂ ಪುಷ್ಪಂ ಸರ್ವಂ ಧ್ಯಾನಪರಂವಿದುಃ ॥ ೨೮ ॥

ವಿನಾ ತೇನೇತರೇಣಾಯಮಾತ್ಮಾ ಲಭ್ಯತ ಏವನೋ ।
ಧ್ಯಾನಾತ್ಪ್ರಸಾದಮಾಯಾತಿ ಸರ್ವಭೋಗಸುಖಶ್ರಿಯಃ ॥ ೨೯ ॥

೨೫–೨೬. ತನ್ನೊಳಗೆ ಇರುವ, ಶುದ್ಧನಾದ ಚಿನ್ಮಾತ್ರನಾಗಿ ವೇದನ ಸ್ವರೂಪನಾದ ದೇವನನ್ನು ಎಡಬಿಡದೆ, ಯಾವ ಕೆಲಸ ಮಾಡುತ್ತಿದ್ದರೂ, ನೋಡುತ್ತಿರಲಿ, ಕೇಳುತ್ತಿರಲಿ, ಮುಟ್ಟುತ್ತಿರಲಿ, ಮೂಸುತ್ತಿರಲಿ, ತಿನ್ನುತ್ತಿರಲಿ, ನಡೆಯುತ್ತಿರಲಿ, ನಿದ್ರಿಸುತ್ತಿರಲಿ, ಶ್ವಾಸವಾಡುತ್ತಿರಲಿ, ಅಳುತ್ತಿರಲಿ, ವಿಸರ್ಜನೆ ಮಾಡುತ್ತಿರಲಿ, ತೆಗೆದುಕೊಳ್ಳುತ್ತಿರಲಿ, ಧ್ಯಾನಾಮೃತದಿಂದ ಈಶ್ವರನಾದ ಆತ್ಮನನ್ನು ಪೂಜೆಮಾಡಿ ತಾನೂ ಶುದ್ಧಸಂವಿನ್ಮಯನಾಗಬೇಕು.

೨೭. ಮುಕ್ತನಾಗಿ ಪರಮಾನಂದ ಭರಿತನಾಗಿರುವವನು ಕುಸುಮಗಳಿಂದ (ಪೂಜೆಮಾಡಬೇಕಾಗಿಲ್ಲ)ಧ್ಯಾನವೆ ಕಾಣಿಕೆಯು. ಈ ದೇವನ ಪೂಜೆಗೆ ಬೇಕಾಗಿರುವುದು ಆತ್ಮಧ್ಯಾನವೇ !

೨೮. ಧ್ಯಾನ, ಅರ್ಘ್ಯ, ಪಾದ್ಯಗಳು ಕೂಡ ಶುದ್ಧ ಜ್ಞಾನಾತ್ಮಕವಾದವೇ! ಧ್ಯಾನ ಸಂವೇದನವೇ ಪುಷ್ಪವು. ಮಾಡಬೇಕಾದ ಉಪಚಾರಗಳೆಲ್ಲ ಧ್ಯಾನವೇ !

೨೯. ಅದನ್ನು ಬಿಟ್ಟು ಇನ್ನೇನು ಅರ್ಪಿಸಿದರೂ ಈ ಆತ್ಮನು ಲಭಿಸುವುದೇ ಇಲ್ಲ. ಧ್ಯಾನಮಾತ್ರದಿಂದ ಸರ್ವಭೋಗ ಸಂಪತ್ತಿಗಳೂ ಪ್ರಸನ್ನವಾಗಿ ಒಲಿಯುವುವು.

ಅಯಮಾತ್ಮಾ ಮುನೇ ಭುಂಕ್ತೇ ದೇಹರೂಪೋ ಗೃಹೇ ಯಥಾ ॥ ೩೦ ॥

ಧ್ಯಾನೇನಾನೇನ ಸುಮತೇ ನಿಮೇಷಾಂಸ್ತು ತ್ರಯೋದಶ ।
ಮೂಢೋಽಪಿ ಪೂಜಯಿತ್ವೇಶಂ ಗೋಪ್ರದಾನ ಫಲಂ ಲಭೇತ್ ॥ ೩೧ ॥

ಪೂಜಯಿತ್ವಾ ನಿಮೇಷಾಣಾಂ ಶತಮೇಕಮಿತಿಪ್ರಭುಂ ।
ಅಶ್ವಮೇಧಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಮಾನವಃ ॥ ೩೨ ॥

ಪೂಜಯಿತ್ವಾ ಸ್ವಮಾತ್ಮಾನಂ ಘಟಿಕಾರ್ಧಮಿತಿ ಪ್ರಭುಂ ।
ಅಶ್ವಮೇಧ ಸಹಸ್ರಸ್ಯ ಫಲಂ ಪ್ರಾಪ್ನೋತಿ ಮಾನವಃ ॥ ೩೩ ॥

ಧ್ಯಾನಬಲ್ಯುಪಹಾರ್ಯೇಣ ಸ್ವಯಮಾತ್ಮಾನಮಾತ್ಮನಾ ।
ಘಟಿಕಾಂ ಪೂಜಯೇದ್ಯಸ್ತು ರಾಜಸೂಯಂ ಲಭೇತ ಸಃ ॥ ೩೪ ॥

---

೩೦. ದೇಹ ರೂಪವಾದವನು ಮನೆಯಲ್ಲಿ ಊಟಮಾಡುವ ಹಾಗೆ, ಈ ಆತ್ಮನು ಅನುಭವಿಸುವನು.

೩೧. ಎಲೈ ಸುಮತಿಯೆ, ಈ ರೀತಿಯಾಗಿ ಹದಿಮೂರು ನಿಮಿಷಗಳು ಈ ಧ್ಯಾನದಿಂದ ಪೂಜೆಮಾಡಿದವನು ಮೂಢನಾಗಿದ್ದರೂ ಗೋ ಪ್ರದಾನ ಫಲವನ್ನು ಹೊಂದುವನು.

೩೨. ಈ ಧ್ಯಾನದಿಂದ ನೂರೊಂದು ನಿಮಿಷಗಳು ಆ ಪ್ರಭುವನ್ನು ಪೂಜಿಸಿದವನು ಅಶ್ವಮೇಧದ ಫಲವನ್ನು ಹೊಂದುವನು.

೩೩. ಆತ್ಮನನ್ನು ಹೀಗೆ ಧ್ಯಾನಾಮೃತದಿಂದ ಘಟಿಕಾರ್ಧಕಾಲ ಪೂಜೆ ಮಾಡಿದವನು ಒಂದು ಸಾವಿರ ಅಶ್ವಮೇಧಗಳ ಫಲವನ್ನು ಪಡೆಯುವನು.

೩೪. ಒಂದು ಘಟಿಕಾಕಾಲ ಹೀಗೆ ಪೂಜೆಮಾಡಿ, ಆತ್ಮನಿಂದಲೇ ಧ್ಯಾನ, ಬಲಿ, ಉಪಹಾರಗಳನ್ನು ಆತ್ಮನಿಗೆ ಕೊಟ್ಟವನು ರಾಜಸೂಯ ಫಲವನ್ನು ಪಡೆಯುವನು.

ಮಧ್ಯಾಹ್ನಪೂಜನಾದಿತ್ಥಂ ರಾಜಸೂಯೈಕಲಕ್ಷಭಾಕ್ ।
ದಿನಸಂ ಪೂಜಯಿತ್ವೈವಂ ಪರೇ ಧಾಮ್ನಿ ವಸೇನ್ನರಃ　　　　॥ ೩೫ ॥

ಏಷೋಽಸೌ ಪರಮೋ ಯೋಗ ಏಷಾ ಸಾ ಪರಮಾಕ್ರಿಯಾ ।
ಬಾಹ್ಯಸಂಪೂಜನಂ ಪ್ರೋಕ್ತಮೇತದುತ್ತಮಮಾತ್ಮನಃ　　　　॥ ೩೬ ॥

ಏತತ್ಪವಿತ್ರಮಖಿಲಾಘ ವಿಘಾತಹೇತುಂ ।
ಯಸ್ತ್ವಾ ಚರಿಷ್ಯತಿ ನರಃ ಕ್ಷಣಮಪ್ಯಖಿನ್ನಃ ॥
ತಂ ವನ್ದಯಿಸ್ಯತಿ ಸುರಾಸುರ ಲೋಕಪೂಗಃ ।
ಪ್ರಾಪ್ತಾಸ್ಪದಂ ಜಗತಿ ಮಾಮಿವ ಮುಕ್ತಮಾತ್ಮನ್　　॥ ೩೭ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ "ಬಾಹ್ಯಪೂಜನಂ" ನಾಮ ಅಷ್ಟತ್ರಿಂಶಃ ಸರ್ಗಃ

---

೩೫. ಹೀಗೆ ಒಂದು ಮಧ್ಯಾಹ್ನ ಪೂಜೆಮಾಡಿದವನಿಗೆ ಒಂದು ಲಕ್ಷ ರಾಜಸೂಯಯಾಗಗಳ ಫಲವು ಲಭಿಸುವುದು. ಒಂದು ದಿನವೆಲ್ಲಾ ಹೀಗೆ ಪೂಜೆಮಾಡಿದವನು ಪರಂಧಾಮದಲ್ಲಿ ನಿಲ್ಲುವನು.

೩೬. ಇದೇ ಶ್ರೇಷ್ಠವಾದ ಯೋಗವು. ಇದೇ ಶ್ರೇಷ್ಠವಾದ ಪೂಜೆಯು. ಆತ್ಮನ ಬಾಹ್ಯ ಪೂಜನವೂ ಇದೇ !

೩೭. ಇಂತಹ ಪವಿತ್ರವಾದ, ಸಮಸ್ತ ಪಾಪಗಳನ್ನೂ ನಾಶಪಡಿಸುವ ಪೂಜೆಯನ್ನು ಯಾವ ಮನುಷ್ಯನು ಖೇದ ರಹಿತನಾಗಿ ಒಂದು ಕ್ಷಣಕಾಲ ಆಚರಿಸುವನೋ ಅವನನ್ನು ಸುರಾಸುರರ ಲೋಕ ಲೋಕಗಳೆಲ್ಲವೂ "ಪರಮ ಪದವನ್ನು ಪಡೆದು ಮುಕ್ತನಾದವನೀತನು" ಎಂದು ನನ್ನನ್ನು ಹೇಗೋ ಹಾಗೆ ವಂದಿಸುವರು.

(ನನು ಘಟಿಕಾರ್ಧಧ್ಯಾನೇ ಅಶ್ವಮೇಧ ಸಹಸ್ರ ಫಲಂ ಚೇತ್ ಘಟಿಕಾಧ್ಯಾನೇ ತತೋಽಪ್ಯಧಿಕಂ ಫಲಂ ವಾಚ್ಯಂ । ತತ್ಕಥಂ ಏಕ ರಾಜಸೂಯ ಫಲ ಕೀರ್ತನಂ । ನಹಿ ಅಶ್ವಮೇಧಾತ್ ರಾಜಸೂಯಸ್ಯ ಫಲಮಧಿಕಂ ।

ಬೃಹದಾರಣ್ಯಕೇ ಭುಜ್ಯುಪ್ರಶ್ನೇ "ಕ್ವಸ್ವಶ್ವಮೇಧಯಾಜಿನೋ ಗಚ್ಛಂತೀತಿ ದ್ವಾತ್ರಿಂಶತಂ ವೈ ದೇವರಥಾಹ್ನಾನ್ಯಯಂ ಲೋಕಃ" ಇತ್ಯಾದಿನಾ ಪೃಥಿವೀ ಸಮುದ್ರಾದಿ ಪರಿಣಾಮಮುಕ್ತ್ವಾ "ತತಃ ಪರತಃ ತದ್ಯಾವತೀಕ್ಷುರಸ್ಯಧಾರಾ

ಯಾವದ್ಧ್ವಾಮಕ್ಷಿ ಕಾಯಾಃ ಪತ್ರಂ ತಾವಾ೯ ಅಂತರೇಣ ಆಕಾಶಃ" ಇತಿ ಬ್ರಹ್ಮಾಂಡ ಖರ್ಪರದ್ವಯ ಸಂಧಿಮುಕ್ತ್ವಾ "ತಾನಿಂದ್ರಸ್ಸುಪರ್ಣೋಭೂತ್ವಾ ವಾಯವೇ ಪ್ರಾಯಚ್ಛತ್ | ತಾ೯ ವಾಯುರಾತ್ಮನಿಸ್ಥಿತ್ವಾ ತತ್ರಾಗಮಯತ್ ಯತ್ರ ಅಶ್ವಮೇಧಯಾಜಿನೋಽಭರ್ವ" ಇತಿ ಅಶ್ವಮೇಧಯಾಜಿನಾಂ ಬ್ರಹ್ಮಾಂಡ ಖರ್ಪರ ಸಂಧಿದ್ವಾರಾ ವಾಯುನಾ ಬಹಿರ್ನಿಸ್ಸಾರ್ಯ ಸರ್ವಕರ್ಮ ಫಲೋತ್ಕರ್ಷ ಸ್ಥಾನ ಪ್ರಾಪಣ ಶ್ರವಣ ವಿರೋಧಾತ್ ||

"ಬ್ರಹ್ಮಹತ್ಯಾಶ್ವಮೇಧಾಭ್ಯಾಂ ನಪರಂ ಪುಣ್ಯಪಾಪಯೋಃ"ಇತಿ ಪ್ರಸಿದ್ಧೇಃ| ಪೂರ್ವರಾಮಾಯಣೇ ಇಲೋಪಾಖ್ಯಾನೇ "ನಾಶ್ವಮೇಧಾತ್ಪರೋ ಯಜ್ಞಃ| ಪ್ರಿಯಶ್ಚೈವ ಮಹಾತ್ಮನಃ |" ಇತಿ ರಾಮವಚನ ವಿರೋಧಾತ್ |

ಶಾರೀರಕೇ ಇತರ ಕರ್ಮಿಣಾಂ ಧೂಮಾದಿ ಮಾರ್ಗೇಣ ಚಂದ್ರಮಂಡಲ ಪ್ರಾಪ್ತಿರೇವ, ಅಶ್ವಮೇಧಯಾಜಿನ ಏಕಸ್ಯತು ಅರ್ಚಿರಾದಿ ಮಾಗೇಣ ಬ್ರಹ್ಮ ಲೋಕಾವಾಪ್ತಿರಿತಿ ಸಿದ್ಧಾಂತಾದಿಕರಣಾಚ್ಚ ಅಶ್ವಮೇಧಸ್ಯ ರಾಜಸೂಯಾಪೇಕ್ಷಯಾ ಫಲಾಧಿಕ್ಯಸ್ಯ ಸಿದ್ಧತ್ವಾದಿತಿಚೇತ್ | ನೈಷದೋಷಃ| ಪರಸ್ಯ ಪೂರ್ವಾವಿರೋಧೇನ ಅಬಾಧಕತ್ವಾದೇವಉಪಪತ್ತೇಃ | ಯತ್ರ ಘಟಿಕಾರ್ಧ ಪೂಜನೇನ ಅಶ್ವಮೇಧ ಸಹಸ್ರ ಫಲಂ ತತ್ರ ಘಟಿಕಾ ಮಾತ್ರ ಪೂಜನೇನ ತಸ್ಯ ದ್ವೈಗುಣ್ಯಂ ಪ್ರಾಪ್ತಮೇವ ತತ್ರ ರಾಜಸೂಯಫಲಂ ಸ್ವಾರಾಜ್ಯ ಲಕ್ಷಣಂ ಶ್ರೂಯಮಾಣಮಿತರೇಷಾಂ ಅಶ್ವ ಮೇಧಯಾಜಿನಾಂ ಸ್ವಾರಾಜ್ಯೇ ಪರ್ಯವಸ್ಯತೀತಿ ಪ್ರಜಾಭ್ಯೋ ರಾಜ್ಞ ಇವ ಮಹಾ೯ ಭೋಗೋತ್ಕರ್ಷೋ ಘಟಿಕಾ ಪೂಜಕಸ್ಯ ಸಿದ್ಧ್ಯತಿ | ನಚಾತ್ರ ತತ್ರ ಕೌಂಡಿನ್ಯ ನ್ಯಾಯಾಶ್ರಯಣಂ ಯುಕ್ತಂ | ವಾಕ್ಯವೈಯರ್ಥ್ಯ ಪ್ರಸಂಗಾತ್ | ತಥಾಚೇದೃಶೇ ವಿಷಯೇ ಮಹಾಭಾಷ್ಯೇ ಉಕ್ತಂ | ಅಸತಿ ಖಲ್ವಪಿ ಸಂಭವೇ ಬಾಧನಂ ಭವತಿ ಅಸ್ತಿಚ ಸಂಭವೋ ಯದುಭಯಂ ಸ್ಯಾದಿತಿ |ನಾಪ್ಯತ್ರಾಪಚ್ಛೇದಾಧಿಕರಣನ್ಯಾಯಾ ವಸರಃ| ಅದಕ್ಷಿಣತ್ವ ಸರ್ವವೇದಸದಕ್ಷಿಣತ್ವಯೋರಿವ ಬ್ರಹ್ಮಲೋಕ ತತ್ಸ್ವಾರಾಜ್ಯ ಫಲಯೋಃ ವಿರೋಧಾಭಾವಾದಿತಿ ವಿಶೇಷದ್ಯೋತನಾಯತು ಶಬ್ದಃ|| —ತಾ. ಪ್ರ.)

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಬಾಹ್ಯಪೂಜನ" ಎಂಬ
ಮೂವತ್ತೆಂಟನೆಯ ಸರ್ಗವು

ಏಕೋನಚತ್ವಾರಿಂಶಃ ಸರ್ಗಃ

ಶ್ರೀ ಈಶ್ವರ ಉವಾಚ:—

ಪಾವನಂ ಪಾವನಾನಾಂ ಯದ್ಯತ್ಸರ್ವತಮಸಾಂಕ್ಷಯಃ ।
ತದಿದಾನೀಂ ಪ್ರವಕ್ಷ್ಯೇಽಹಮನ್ತಃ ಪೂಜನಮಾತ್ಮನಃ ॥ ೧॥

ಗಚ್ಛತಸ್ತಿಷ್ಠತಶ್ಚೈವ ಜಾಗ್ರತಃ ಸ್ವಪತೋಽಪಿ ಚ ।
ಸರ್ವಾಚಾರ ಗತಾ ಪೂಜಾ ನಿತ್ಯಂ ಧ್ಯಾನಾತ್ಮಿಕಾ ಕ್ರಿಯಮ್ ॥ ೨ ॥

ನಿತ್ಯಮೇವ ಶರೀರಸ್ಥಮಿಮಂ ಧ್ಯಾಯೇತ್ಪರಂ ಶಿವಮ್ ।
ಸರ್ವಪ್ರತ್ಯಯ ಕರ್ತಾರಂ ಸ್ವಯಮಾತ್ಮಾನಮಾತ್ಮನಾ ॥ ೩ ॥

ಮೂವತ್ತೊಂಭತ್ತನೆಯ ಸರ್ಗವು

ಶ್ರೀ ಈಶ್ವರನು ಹೇಳಿದನು :

೧ ಪಾವನವಾದುದಕ್ಕೆಲ್ಲ ಪಾವನವಾಗಿ ಸರ್ವವಿಧವಾದ ಅಜ್ಞಾನಗಳಿಗೂ ಕ್ಷಯವನ್ನುಂಟುಮಾಡುವ ಆತ್ಮನ ಅಂತಃಪೂಜನವನ್ನು ಹೇಳುವೆನು ಕೇಳು.

೨. ಈ ಅಂತಃಪೂಜೆಯು ಯಾವಾಗಲೂ ಧ್ಯಾನಾತ್ಮಕವಾಗಿಯೇ ಇರುವುದರಿಂದ ನಡೆಯುತ್ತಿರಲಿ ನಿಂತಿರಲಿ ಎಚ್ಚರವಾಗಿರಲಿ ಏನೇ ಮಾಡುತ್ತಿದ್ದರೂ ನಡೆಯುತ್ತಲೇ ಇರುವುದು.

೩. ಶರೀರದಲ್ಲಿಯೇ ಇರುತ್ತ, ಎಲ್ಲಾ ಪ್ರತ್ಯಯ (ಜ್ಞಾನ,) ಗಳನ್ನೂ ಉಂಟುಮಾಡುತ್ತಿರುವ ಶಿವಸ್ವರೂಪನಾದ ಆತ್ಮನನ್ನು ಮನಸ್ಸಿನಿಂದ ಸರ್ವಕಾಲದಲ್ಲಿಯೂ ಧ್ಯಾನಮಾಡಬೇಕು.

ಶಯಾನ ಮುತ್ಥಿತಂ ಚೈವ ವ್ರಜನ್ತ ಮಥವಾ ಸ್ಥಿತಮ್ ।
ಸ್ಪೃಶಂತಮ ಭಿತಃ ಸ್ಪೃಶ್ಯಂ ತ್ಯಜ್ಯನ್ತಮಥವಾಭಿತಃ ॥ ೪ ॥

ಭುಂಜಾನಂ ಸಂತ್ಯಜನ್ತಂ ಚ ಭೋಗಾನಾಭೋಗಪೀವರಾನ್ ।
ಬಾಹ್ಯಾರ್ಥ ಪರಿಕರ್ತಾರಂ ಸರ್ವಕಾರ್ಯ ಸ್ವರೂಪದಮ್ ॥ ೫ ॥

ದೇಹ ಲಿಂಗೇಷು ಶಾನ್ತಸ್ಥಂ ತ್ಯಕ್ತಲಿಂಗಾಂತರಾದಿಕಮ್ ।
ಯಥಾಪ್ರಾಪ್ತಾರ್ಥ ಸಂವಿತ್ಯಾ ಬೋಧಲಿಂಗಂ ಪ್ರಪೂಜಯೇತ್ ॥ ೬ ॥

ಪ್ರವಾಹಪತಿತಾರ್ಥಸ್ಥಃ ಸ್ವಬೋಧಸ್ನಾನ ಶುದ್ಧಿಮಾನ್ ।
ನಿತ್ಯಾವಬೋಧಾರ್ಹಣಯಾ ಬೋಧಲಿಂಗಂ ಪ್ರಪೂಜಯೇತ್ ॥ ೭ ॥

೪–೫–೬—ಆಯಾ ದೇಹಗಳಲ್ಲಿ ಜೀವರೂಪನಾಗಿ ಇದ್ದುಕೊಂಡು, ಶಯನ, ಉತ್ಥಾನ, ಗಮನ, ಸ್ಥಿತಿ, ಅಭಿಸ್ಪರ್ಶನ, ಅಭಿತ್ಯಾಗ, ಭೋಗ, ತ್ಯಾಗ, ಅತ್ಯಂತ ಸುಖಕರಗಳಾದ ಭೋಗಗಳನ್ನು ಅನುಭವಿಸೋಣ, ಬಾಹ್ಯಾರ್ಥಗಳನ್ನು ಮಾಡಿಸೋಣ, ತನ್ನ ಸತ್ತೆಯಿಂದ ಕಾರ್ಯಗಳನ್ನು ಮಾಡಿಸೋಣ, ಶಾಂತವಾಗಿರೋಣ, ಮೊದಲಾದ ಕೆಲಸಗಳನ್ನೆಲ್ಲ ಮಾಡಿಸುತ್ತಿರುವ, (ಸಚ್ಚಿದಾನಂದವಲ್ಲದ) ಇತರ ಲಿಂಗಗಳು ಯಾವುದೂ ಇಲ್ಲದ, ಯಾವಯಾವ ಪ್ರತ್ಯಯ(ಜ್ಞಾನ)ವು ಬಂದರೂ ಅಲ್ಲಲ್ಲಿ ಜ್ಞಾನಸ್ವರೂಪನಾಗಿಯೇ ವ್ಯಕ್ತನಾಗುವ ಬೋಧಲಿಂಗ ಸ್ವರೂಪನನ್ನು ಪೂಜಿಸಬೇಕು.

[ಸ್ವದೇಹ ಲಕ್ಷಣೇಷು ಲಿಂಗೇಷು । ತಥಾಹಿ । ಪದ್ಮಾದ್ಯಾಸನಸ್ಥಃ ಪುರಃ ಪ್ರಸಾರಿತ ಪಾಣಿಃ ಬದ್ಧಾಂಜಲಿರ್ದೇಹಃ ಶಿವಲಿಂಗಾಕಾರೋ ಭವತೀತಿ ಪ್ರಸಿದ್ಧಂ। ಅತ ಏವ ತ್ಯಕ್ತಂ ಮೃದ್ದಾರುಶಿಲಾದಿ ಲಿಂಗಾಂತರಂ ಆದಿಪದಾತ್ ಪ್ರತಿಮಾಂತರಂ ಚ ಯತ್ರ। ಶಾಂತೇ ನಿರ್ವಿಕ್ಷೇಪಸ್ವಭಾವೇ ಸ್ಥಿತಂ ಬೋಧಲಿಂಗಂ ॥—ತಾ. ಪ್ರ.)

೭. (ಪ್ರಾರಬ್ಧ ಕರ್ಮವೆಂಬ) ಪ್ರವಾಹವು ತಂದ ಭೋಗಗಳನ್ನು ಅನುಭವಿಸುವವನಾಗಿ, ಆತ್ಮಬೋಧವೆಂಬ ಗಂಗಾಸ್ನಾನವನ್ನು ಮಾಡಿದವನಾಗಿ, ಧಾರಾಕಾರವಾಗಿರುವ ಆತ್ಮಜ್ಞಾನವೆಂಬ ಪೂಜಾದ್ರವ್ಯಗಳಿಂದ ಬೋಧಲಿಂಗವನ್ನು ಪೂಜೆಮಾಡಬೇಕು.

(ಹಾಗೆ ಪೂಜೆಮಾಡುವಾಗ ಮನಸ್ಸು ತಮನಸ್ಸಿನಲ್ಲಿ ಮುಳುಗುವುದುಂಟು. ಆಗ ಅಂತರ್ಬಹಿಃ ಇರುವ ಆಕಾಶವನ್ನೆಲ್ಲ ತನ್ನ ಆತ್ಮನೆಂಬ ಆದಿತ್ಯನು ಅಖಂಡ

ಆದಿತ್ಯಭಾವನಾಭೋಗಭಾವಿತಾಮ್ಬರ ಭಾಸ್ವರಮ್ ।
ಶಶಾಂಕ ಭಾವನಾಭೋಗಭಾವಿತೇನ್ದುತಯೋದಿತಮ್ ॥ ೮ ॥

ಪ್ರತಿಭಾಸ ಪದಾರ್ಥೌಘ ನಿತ್ಯಾವಗತಸಂವಿದಮ್ ।
ದ್ವಾರೈರ್ವಹನ್ತಂ ಶಾರೀರೈರ್ಮುಖೇ ಪ್ರಾಣಸ್ವರೂಪಿಣಮ್ ॥ ೯ ॥

ರಸೀ ಕೃತ್ಯರಸಂ ಪ್ರಾಣಸ್ವಾನ್ತೋದಾತ್ತತುರಂಗಮಮ್ ।
ಪ್ರಾಣಾಪಾನರಥಾರೂಢಂ ಗೂಢಮನ್ತರ್ಗುಹಾಶಯಮ್ ॥ ೧೦ ॥

ವಾಗಿ ಪರಿಪೂರ್ಣವಾಗಿ ಬೆಳಗುತ್ತಿರುವಂತೆ ಭಾವನೆಮಾಡಿಕೊಳ್ಳುವುದು. ಒಂದು ವೇಳೆ ಆ ಆದಿತ್ಯನ ತೇಜಸ್ಸಿನಿಂದ ತಾಪವು ಹೆಚ್ಚಾದರೆ, ಆದಿತ್ಯನನ್ನು ಚಂದ್ರನನ್ನಾಗಿ ಭಾವಿಸಿಕೊಳ್ಳುವುದು ಎಂಬರ್ಥದಿಂದ ಮುಂದಿನ ಶ್ಲೋಕವನ್ನು ಹೇಳಿದೆ.—ತಾ. ಪ್ರ.)

೮. ಆದಿತ್ಯಭಾವನೆಯಿಂದ ಹೃದಯಾಕಾಶವನ್ನೆಲ್ಲ ಬೆಳಗಿಸಿಕೊಂಡು, (ಆವಶ್ಯಕವಾದರೆ) ಚಂದ್ರಭಾವನೆಯಿಂದ ಆಕಾಶವನ್ನು ತಂಪುಮಾಡಿಕೊಳ್ಳುತ್ತ,

೯. (ಈ ಜಗತ್ತು ವ್ಯಾವಹಾರಿಕವಾಗಿ ಸತ್ಯವಾಗಿ ಕಂಡರೂ ಪರಮಾರ್ಥವಾಗಿ ಅಸತ್ಯವಾದುದರಿಂದ ಇದರ ಸತ್ಯತೆಯು ಪ್ರಾತಿಭಾಸಿಕವೆಂಬುದನ್ನು ಮನಸ್ಸಿನಲ್ಲಿ ದೃಢಪಡಿಸಿಕೊಂಡು) ಇಂದ್ರಿಯಗೋಚರವಾಗುವ ಪದಾರ್ಥಗಳ ಗುಂಪುಗಳನ್ನೆಲ್ಲ ನೋಡುವಾಗ (ಅವುಗಳಲ್ಲಿ ಸತ್ತಾರೂಪವಾಗಿ) ನಿತ್ಯವಾಗಿ ಇದ್ದೇ ಇರುವ ಸಂವಿತ್ತೇ ಧ್ಯಾನಮಾಡುತ್ತ, ಶರೀರದ್ವಾರಗಳಿಂದ ಯಾವಾಗಲೂ ಹೊರಗೆ ಹೋಗಿ ಬರುತ್ತಿರುವ ಪ್ರಾಣಸ್ವರೂಪವಾಗಿ ಮುಖದಲ್ಲಿರುವುದೆಂದು (ಧ್ಯಾನಿಸುತ್ತಿರಬೇಕು.)

೧೦. (ಶಬ್ದಾದಿ ವಿಷಯರೂಪ) ರಸವನ್ನು ತನ್ನ ಆನಂದರಸದಿಂದಲೇ ಮಧುರಮಾಡಿಕೊಂಡು ಭೋಗಿಸುವ, ಪ್ರಾಣವೆಂಬ ಉತ್ತಮವಾದ ಕುದುರೆಯನ್ನು ಕಟ್ಟಿರುವ ಪ್ರಾಣಾಪಾನ ವ್ಯೂಹವೆಂಬ ರಥವನ್ನು ಹತ್ತಿರುವ, ಗೂಢವಾಗಿ, ಎಲ್ಲದರ ಒಳಗೆ ಗುಹೆಯೆಂಬ ವಿಜ್ಞಾನಮಯ ಕೋಶದಲ್ಲಿರುವ (ಆತ್ಮನನ್ನು ಧ್ಯಾನಿಸಬೇಕು.)

ಜ್ಞಾತಾರಂ ಜ್ಞೇಯದೃಷ್ಟೀನಾಂ ಕರ್ತಾರಂ ಸರ್ವಕರ್ಮಣಾಮ್ ।
ಭೋಕ್ತಾರಂ ಸರ್ವ ಭೋಜ್ಯಾನಾಂ ಸ್ಮರ್ತಾರಂ ಸರ್ವಸಂವಿದಾಮ್ ॥ ೧೧ ॥

ಸಮ್ಯಕ್ಸಂವಿದಿತಾಂಗೌಘಂ ಭಾವಾಭಾವನಭಾವಿತಮ್ ।
ಆಭಾಸಭಾಸ್ವರಂ ಭೂರಿ ಸರ್ವಗಂ ಚಿನ್ತಯೇಚ್ಛಿವಮ್ ॥ ೧೨ ॥

---

೧೧. ತಿಳಿಯಬೇಕಾಗಿರುವ ಎಲ್ಲವನ್ನೂ ತಿಳಿಸುವವನಾಗಿ, ಸರ್ವಕರ್ಮಗಳನ್ನೂ ಮಾಡುವವನಾಗಿ, ಸರ್ವಭೋಗಗಳನ್ನೂ ಭೋಗಿಸುವವನಾಗಿ, ಸರ್ವ ಪ್ರತ್ಯಯಗಳನ್ನೂ ಸ್ಮರಿಸುವವನಾಗಿ (ಇರುವ ಆತ್ಮನನ್ನು ಧ್ಯಾನಿಸಬೇಕು)

೧೨. ದೇಹದಲ್ಲಿರುವ ಸರ್ವಾಂಗಗಳನ್ನೂ ಬಲ್ಲವನಾಗಿ (ವ್ಯಾಪಾರ ಮಾಡಿಸಬಲ್ಲವನಾಗಿ) ಭಾವ, ಅಭಾವ, ಎರಡರಲ್ಲೂ ಗೋಚರವಾಗುವವನಾಗಿ, ತನ್ನ ಪ್ರಕಾಶದಿಂಪ ಎಲ್ಲವನ್ನೂ ಚೆನ್ನಾಗಿ ಬೆಳಗುವವನಾಗಿ, ಎಲ್ಲೆಲ್ಲಿಯೂ ಇರುವ ಶಿವ (ಸ್ವರೂಪನನ್ನು) ಚಿಂತಿಸಬೇಕು.

> (ಯಥಾ ಪ್ರಕಾಶಯತ್ಯೇಕಃ ಕೃತ್ಸ್ನಂಲೋಕಮಿಮಂ ರವಿಃ ಕ್ಷೇತ್ರಂಕ್ಷೇತ್ರೀತಥಾ ಕೃತ್ಸ್ನಂ ಪ್ರಕಾಶಯತಿಭಾರತ-ಗೀತಾ ೧೩-೩೩
>
> ಇತಿಭಗವದುಕ್ತರೀತ್ಯಾ ಸಮ್ಯಕ್ಸಂವಿದಿತ ಸರ್ವಾಂಗೌಘಂ ಭಾವೈಃ ವಿಷಯಭಾವನೈಃ ಅಭಾವನೈಶ್ಚ ಭಾವಿತಂಲಕ್ಷಿತಂ ಆಭಾಸೇಭ್ಯಃ ಸರ್ವಪ್ರಕಾಶೇಭ್ಯೋಽಪಿ ಭೂರಿ ಭಾಸ್ವರಂ—ತಾ. ಪ್ರ.

ಭಾವ ಎಂದರೆ ಇರುವ ಪದಾರ್ಥಗಳು ಅವು ಇಂದ್ರಿಯಗೋಚರಗಳಾಗುವುವು. ಇಲ್ಲದಪದಾರ್ಥವು ಇಲ್ಲವೆಂದೇ ತಿಳಿಯುವುದು. ಇವೆರಡೂ ಪತ್ಯಕ್ಷ, ಅನುಪಲಬ್ಧಿ ಎಂಬ ಎರಡು ಪ್ರಮಾಣಗಳು. ಅದ್ವೈತಿಗಳು ಭಾಟ್ಟರಂತೆ ಪ್ರತ್ಯಕ್ಷ ಅನುಮಾನ, ಉಪಮಾನ, ಶಬ್ದ, ಅರ್ಥಾಪತ್ತಿ ಅನುಪಲಬ್ಧಿ, ಎಂಬ ಆರು ಪ್ರಮಾಣಗಳನ್ನು ಒಪ್ಪುವರು.)

ನಿಷ್ಕಲಂ ಸಕಲಂ ಚೈವ ದೇಹಸ್ಥಂ ವ್ಯೋಮಚಾರಿಣಮ್ ।
ಅರಂಜಿತಂ ರಂಜಿತಂ ಚ ನಿತ್ಯ ಮಂಗಾಂಗಸಂವಿದಮ್ ॥ ೧೩ ॥

ಮನೋಮನನಶಕ್ತಿಸ್ಥಂ ಪ್ರಾಣಾಪಾನಾನ್ತರೋದಿತಮ್ ।
ಹೃತ್ಕಂಠ ತಾಲು ಮಧ್ಯಸ್ಥಂ ಭ್ರೂನಾಸಾಪುಟಪೀಠಗಮ್ ॥ ೧೪ ॥

ಷಟ್‌ತ್ರಿಂಶತ್ಪದಕೋಟಿಸ್ಥಮುನ್ಮನ್ಯನ್ತದಶಾತಿಗಮ್ ।
ಕುರ್ವನ್ತಮನ್ತಃ ಶಬ್ದಾದೀಂಶ್ಚೋದಯನ್ತಂ ಮನಃ ಖಗಮ್ ॥ ೧೫ ॥

---

೧೩. (ಈ ಆತ್ಮನು) ನಿಷ್ಕಲನು (ಭಾಗಗಳಿಲ್ಲದವನು) ಸಕಲನು (ಭಾಗಗಳಿಲ್ಲವನ್ನೂ ಉಳ್ಳವನು) ದೇಹದಲ್ಲಿರುವವನು, ಆಕಾಶದತುಂಬ ತುಂಬಿರುವವನು, ಯಾವುದರಲ್ಲಿಯೂ ಆಸಕ್ತಿಯಿಲ್ಲದವನು, ಎಲ್ಲದರಲ್ಲಿಯೂ ಆಸಕ್ತಿಯುಳ್ಳವನು, ನಿತ್ಯವಾಗಿರುವವನು, ಅಂಗಾಂಗಗಳಲ್ಲಿಯೂ ಬೋಧರೂಪನಾಗಿ ತುಂಬಿರುವವನು (ಆದ ಆತ್ಮನನ್ನು ಧ್ಯಾನಿಸುತ್ತಿರಬೇಕು.)

(ವ್ಯೋಮ್ನಿ ಹೃದಯಾಕಾಶೇ ಚರಣಶೀಲಂ—ತಾ.ಪ್ರ)

೧೪. ಮನಸ್ಸಿನ ಮನನಶಕ್ತಿಯಾಗಿರುವವನು, ಪ್ರಾಣಾಪಾನಗಳ ಮಧ್ಯದಲ್ಲಿ ಗೋಚರವಾಗುವವನು, ಹೃದಯ ಕಂಠ ತಾಲು ಮಧ್ಯಗಳಲ್ಲಿರುವವನು, ಭ್ರೂಮಧ್ಯ, ನಾಸಾ ಪುಟಗಳು ಎಂಬ ಪೀಠದಲ್ಲಿ ಇರುವವನು (ಆದ ಆತ್ಮನನ್ನು ಧ್ಯಾನಿಸುತ್ತಿರಬೇಕು.)

ಮನೋಬ್ರಹ್ಮೇತ್ಯುಪಾಸೀತ [ಛಾಂ. ೩-೧೮-೧] ಎಂಬ ಶ್ರುತಿಯನ್ನು ಚಿಂತಿಸಿ. ಹಿಂದೆ ಭುಶುಂಡೋಪಾಖ್ಯಾನದಲ್ಲಿ ಪ್ರಾಣವು ಮುಗಿದು ಅಪಾನವು ಆರಂಭವಾಗುವ, ಅಪಾನವು ಮುಗಿದು ಪ್ರಾಣವು ಆರಂಭವಾಗುವ ಸಂಧಿಸ್ಥಾನಗಳಲ್ಲಿ ಬ್ರಹ್ಮವು ಕಾಣುವುದು ಎಂದಿರುವುದನ್ನು ಸ್ಮರಿಸಿ. ಹೃದಯ ಕಂಠ ತಾಲು ನಾಸಾಪುಟಗಳು ಆತ್ಮಧ್ಯಾನಸ್ಥಾನಗಳೆಂದು ಯೋಗಿಸಮಯ. ಭ್ರೂಮಧ್ಯವು ವಿಶ್ವಸ್ಥಾನ, ದ್ಯುಲೋಕಸಂಧಿ. ಅಲ್ಲಿ ಅನುಸಂಧಾನ ಮಾಡುವವರಿಗೆ ದೇವತಾ ದರ್ಶನವಾಗುವುದು.

೧೫. ಮೂವತ್ತಾರು ತತ್ತ್ವಗಳ ಮತ್ತು ಉನ್ಮನೀಶಕ್ತಿಯ ಆಚೆಯಲ್ಲಿರುವ

ವಿಕಲ್ಪಿನ್ಯವಿಕಲ್ಪೇ ಚ ದ್ವಿವಿಧೇ ವಾಕ್ಯಥೇ ಸ್ಥಿತಮ್ ।
ತಿಲೇ ತೈಲಮಿವಾಂಗೇಷು ಸರ್ವೇಷ್ವೇವಾನ್ತರಂ ಸ್ಥಿತಮ್ ॥ ೧೬ ॥

ಕಲಾಕಲಂಕರಹಿತಮ್ ಕಠಿನಂ ಚ ಕಲಾಗಣೈಃ ।
ಏಕದೇಶೇ ಸುಹೃತ್ಪದ್ಮೇ ಸರ್ವೇ ದೇಹೇ ಚ ಸಂಸ್ಥಿತಮ್ ॥ ೧೭ ॥

ಅಂತಶ್ಶಬ್ದಾದಿಗಳನ್ನು ಮಾಡುವ, ಮನಸ್ಸೆಂಬ ಹಕ್ಕಿಯನ್ನು ಪ್ರೇರಿಸುವ [ಆ ಆತ್ಮನನ್ನು ಧ್ಯಾನಮಾಡಬೇಕು.]

[ಷಟ್ತ್ರಿಂಶತ್‌ಪದಾನಿ ಶೈವಶಾಸ್ತ್ರಪ್ರಸಿದ್ಧ ಷಟ್‌ತ್ರಿಂಶತ್ತತ್ವಾನಿ ತೇಷಾಂ ಚರಮಸ್ಥಾನಸ್ಥಂಕಾಲೀ ರೌದ್ರೀಕಲವಿಕರಣೀ ಇತ್ಯಾದಿ ಶಕ್ತಿ ವಿಭಾಗೇ ಉನ್ಮನ್ಯಾ ಮನೋನ್ಮನ್ಯಾ ಅಂತದಶಾಂ ಅಪ್ಯತಿಗತಂಶಿವಯೋಗ ಪ್ರಸಿದ್ಧಾ ವಾ ಉನ್ಮನ್ಯಂತ ದಶಾ ಸಬೀಜ ಸಮಾಧಿರೂಪಾ ತಮತಿಗತಂ—ತಾ. ಪ್ರ.]

ಶಿವಯೋಗ ವಿಚಾರವಾಗಿ ನಿಜಗುಣರ ವಿವೇಕಚಿಂತಾಮಣಿಯನ್ನು ನೋಡಿ.

೧೬. ವ್ಯವಹಾರದಲ್ಲಿ ವಿಕಲ್ಪವಾಗುತ್ತಿದ್ದರೂ ಶಾಸ್ತ್ರಾರ್ಥವಚನದಲ್ಲಿ ಅವಿಕಲ್ಪವಾಗಿರುವ ವಾಕ್ಯಾರ್ಥದಲ್ಲಿ ಇರುವ ಎಳ್ಳಿನಲ್ಲಿರುವ ಎಣ್ಣೆಯಂತೆ, ಸರ್ವಾಂಗ ಗಳಲ್ಲಿಯೂ ಅಂತಃಸ್ಥಿತನಾಗಿ ಇರುವ [ಆತ್ಮನನ್ನು ಧ್ಯಾನಮಾಡಬೇಕು.]

[ವ್ಯವಹಾರೇ ವಿಕಲ್ಪಿನಿ, ನಿರ್ಬೀಜಸಮಾಧಿ ಮೋಕ್ಷಯೋರವಿಕಲ್ಪೇಚ— ವಾಚ್ಯ ಲಕ್ಷ್ಯೆ ರೂಪೇ ವಾಕ್ಯಥೇ—ತಾ. ಪ್ರ.

೧೭. ಯಾವಯಾವ ಸಂಕಲ್ಪಗಳಿಂದಲೂ ಕಲಂಕಿತನಾಗದಿರುವ, ಪಂಚ ಭೂತ ಮಾತ್ರೆಗಳಿಂದ ಆಗಿರುವ ಕಠಿಣವಾದ ಸ್ಥೂಲದೇಹವುಳ್ಳವನೂ ಹೃದಯ ಕಮಲಮಧ್ಯದಲ್ಲಿ ಒಂದು ಮೂಲೆಯಲ್ಲಿರುವನಾದರೂ ಸರ್ವ ದೇಹದಲ್ಲಿಯೂ ಇರುವ [ಆತ್ಮನನ್ನು ಧ್ಯಾನಮಾಡಬೇಕು.]

ಚಿನ್ಮಾತ್ರಮಮಲಾಭಾಸಂ ಕಲಾಕಲನ ಕಲ್ಪನಮ್ ।
ಪ್ರತ್ಯಕ್ಷ ದೃಶ್ಯಂ ಸರ್ವತ್ರ ಸ್ವಾನುಭೂತಿಮಯಾತ್ಮಕಮ್ ॥ ೧೮ ॥

ಪ್ರತ್ಯಕ್ಚೇತನಮಾತ್ಮೀಯ ಮರ್ಥಿತ್ವೇನ ಪುನಃ ಸ್ಥಿತಮ್ ।
ಪದಾರ್ಥಾನಾಮುಪೇತ್ಯಾಶು ಕ್ಷಣಾದ್ದ್ವಿತ್ವಮಿವಾಗತಮ್ ॥ ೧೯ ॥

ಸಹಸ್ರಪಾದಾವಯವಃ ಸಕೇಶನಖದನ್ತಕಃ ।
ಸ್ವದೇಹಸಂವಿದಾಭಾಸೋ ದೇವೋಽಯಮಿತಿ ಭಾವಯೇತ್ ॥ ೨೦ ॥

ವಿಚಿತ್ರಾಃ ಶಕ್ತಯೋ ಬಹ್ವ್ಯೋ ನಾನಾಚಾರಾಮನೋದೃಶಾಮ್ ।
ಉಪಾಸತೇ ಮಾಮನಿಶಂ ಪತ್ನ್ಯಃ ಕಾನ್ತಮಿವೋತ್ತಮಮ್ ॥ ೨೧ ॥

ಮನೋ ಮೇ ದ್ವಾರಪಾಲೋಽಯಂ ನಿವೇದಿತ ಜಗತ್ತ್ರಯಃ ।
ಚಿನ್ತೇಯಂ ಮೇ ಪ್ರತೀಹಾರೀ ದ್ವಾರಸ್ಥಾ ಶುದ್ಧರೂಪಿಣೀ ॥ ೨೨ ॥

---

೧೮. ಚಿನ್ಮಾತ್ರನೂ, ನಿರ್ಮಲವಾದ ಪ್ರಕಾಶವುಳ್ಳವನೂ, ಕಲಾ [ಅಧ್ಯಾಸ] ಕಲನಾ [ವಿಕಲ್ಪ] ಗಳಿಗೆ ಕಲ್ಪನ [ಅಧಿಷ್ಠಾನ] ನಾಗಿರುವವನೂ, ಪ್ರತ್ಯಕ್ಷವಾಗಿ ದರ್ಶನ ಮಾಡಲು ಸಾಧ್ಯನಾಗಿರುವವನೂ, ಸ್ವಾನುಭೂತಿಮಯನೂ [ಆಗಿರುವ ಆತ್ಮನನ್ನು ಧ್ಯಾನಮಾಡಬೇಕು.]

೧೯. ಪ್ರತ್ಯಗಾತ್ಮಸ್ವರೂಪನಾಗಿದ್ದರೂ ಭೋಗಾಸಕ್ತಿಯಿಂದ ಕೂಡಿರುವನಂತೆ ಇರುವ ಸ್ವಸಂಕಲ್ಪದಿಂದಲೇ ಪದಾರ್ಥಗಳ ರೂಪವನ್ನು ಪಡೆದು ಒಂದೇ ಕ್ಷಣದಲ್ಲಿ ದ್ವಿತ್ವವನ್ನು ಪಡೆದಂತೆ ಇರುವ [ಆತ್ಮನನ್ನು ಧ್ಯಾನಮಾಡಬೇಕು.]

೨೦. ಕೈ, ಕಾಲು, ಅವಯವಗಳು, ಕೇಶನಖದಂತಗಳು, ಉಳ್ಳ ಸ್ವದೇಹ ಸಂವಿತ್‌ಸ್ವರೂಪವಾಗಿ ಗೋಚರನಾಗುವವನೇ ಈ ದೇವನೆಂದು ಭಾವಿಸಬೇಕು.

೨೧. ವಿಚಿತ್ರಗಳೂ ಅನೇಕಗಳೂ ಮನೋದೃಷ್ಟಿಯುಳ್ಳವರಿಗೆ ಮಾತ್ರ ಕಾಣುವ ನಾನಾಚಾರಗಳೂ ಉಳ್ಳ ಶಕ್ತಿಸಮೂಹಗಳೂ, ಹೆಂಡತಿಯರು ಗಂಡನನ್ನು ಓಲೈಸುವಂತೆ ಆತ್ಮಸ್ವರೂಪನಾದ ನನ್ನನ್ನು ಓಲೈಸುವರು.

೨೨. ಮನಸ್ಸೆಂಬ ದ್ವಾರಪಾಲಕನು ಜಗತ್ತ್ರಯದಲ್ಲಿ ನಡೆಯುವುದನ್ನೆಲಾ

ಶಕ್ತಿರ್ಮನ್ಮಾತ್ಮಿಕಾ ಬುದ್ಧಿಃ ಕ್ರಿಯಾ ಚೈವ ವರಾಂಗನಾ ।
ಜ್ಞಾನಾನಿಚ ವಿಚಿತ್ರಾಣಿ ಭೂಷಣಾನ್ಯೈನ್ಗಗಾನಿಮೇ ॥ ೨೩ ॥

ಕರ್ಮೇಂದ್ರಿಯಾಣಿ ದ್ವಾರಾಣಿ ಬುದ್ಧೀನ್ದ್ರಿಯಗಣೈಃ ಸಹ ।
ಅಯಂ ಸೋಽಹಮನನ್ತಾತ್ಮಾ ವ್ಯವಚ್ಛೇದೋಜ್ಝಿತಾಕೃತಿಃ ॥ ೨೪ ॥

ತಿಷ್ಠಾಮಿ ಭರಿತೈಕಾತ್ಮಾ ಪೂರ್ಣಃ ಸರ್ವಾರ್ಣವಪೂರಕಃ ।
ಇತಿ ದೈವೀಮುಪಾಶ್ರಿತ್ಯ ಸ್ವಚ್ಛಾಮಾತ್ಮಚಮತ್ಕೃತಿಮ್ ॥ ೨೫ ॥

ನನಗೆ ತಿಳಿಸುತ್ತ ಬಾಗಿಲಲ್ಲಿ ದ್ವಾರಪಾಲಕನಾಗಿ ನಿಂತಿರುವನು. ಚಿಂತೆಯೆಂಬ ಪ್ರತೀಹಾರಿಯು ಶುದ್ಧ ರೂಪದಿಂದ ಬಾಗಿಲಲ್ಲಿ ಅಪ್ಪಣೆಯನ್ನು ನಿರೀಕ್ಷಿಸುತ್ತ ನಿಂತಿರುವಳು.

೨೩. ನನ್ನಿಂದಲೇ ಜನಿಸಿರುವ ಬುದ್ಧಿಯೆಂಬ ಶಕ್ತಿಯೂ, ಕ್ರಿಯೆಯೆಂಬ ಉತ್ತಮಸ್ತ್ರೀಯೂ, ಚಿತ್ರವಿಚಿತ್ರಗಳಾದ ಜ್ಞಾನಿಗಳು, ನನ್ನಅಂಗಗಳಲ್ಲಿ ತೊಟ್ಟಿರುವ ಭೂಷಣಗಳು.

[ಆತ್ಮಿಕಾ ಆತ್ಮವತ್ ಪರಪ್ರೀತಿ ವಿಷಯೀಕೃತಾ ಬುದ್ಧಿಃ ಜ್ಞಾನಶಕ್ತಿಃ । ಕ್ರಿಯಾ ಪ್ರಾಣಶಕ್ತಿಃ । ವಿಚಿತ್ರಾಣಿ ಶಾಸ್ತ್ರೀಯಾಣಿ ಲೌಕಿಕಾನಿ ಚ ಜ್ಞಾನಾನಿ ಭೂಷಣಾನಿ ।—ತಾ. ಪ್ರ.]

೨೪. ಜ್ಞಾನೇಂದ್ರಿಯಗಳೂ ಕರ್ಮೇಂದ್ರಿಯಗಳೂ ಸಹ ದ್ವಾರಗಳಾಗಿ ಉಳ್ಳ ಈ ಆತ್ಮನು ದೇಶಕಾಲೋಪಾಧಿಗಳಿಂದ ತನ್ನ ಮೂಲ ಸ್ವಭಾವವನ್ನು ಬಿಟ್ಟು ಆಕೃತಿಯನ್ನು ವಹಿಸಿದಂತೆ ತೋರುತ್ತಿದ್ದರೂ ಈತನೇ ಅನಂತನಾದ ಆ ಆತ್ಮನು.

೨೫. 'ಅಹಂ' ಶಬ್ದವಾಚ್ಯನಾದ ಈ ಆತ್ಮನಾದ ನಾನು [ಈ ಬ್ರಹ್ಮಾಂಡವನ್ನೆಲ್ಲಾ] ತುಂಬಿ, ಏಕಾತ್ಮನಾಗಿ, ಎಲ್ಲಕ್ಕೂ ಪೂರ್ಣತೆಯನ್ನು ಕೊಡುವ ಪೂರ್ಣನಾಗಿರುವೆನು. ಎಂದು ತನ್ನ [ಬ್ರಹ್ಮದ] ಅಲೌಕಿಕಸ್ವಭಾವವಾದ, ಶುದ್ಧವಾದ, ದೈವೀ ವಿಭೂತಿಯನ್ನು ಆಶ್ರಯಿಸಿ,

ದೇವತ್ವಪರಿಪೂರ್ಣೋಂತರದೀನಾತ್ಮಾವತಿಷ್ಠತೇ ।
ನಾಸ್ತಮೇತಿ ನ ಚೋದೇತಿ ನ ತುಷ್ಯತಿ ನ ಕುಪ್ಯತಿ ॥ ೨೬ ॥

ನ ತೃಪ್ತಿಂ ನ ಕ್ಷುಧಂ ಯಾತಿ ನಾಭಿವಾಂಛತಿ ನೋಜ್ಝತಿ ।
ಸಮಃ ಸಮಸಮಾಚಾರಃ ಸಮಾಭಾಸಃ ಸಮಾಕೃತಿಃ ॥ ೨೭ ॥

ಸೌಮ್ಯತಾಮಲಮಾಯಾತಃ ಸಮಂತಾತ್ಸುಂದರಾಶಯಃ ।
ಆದೇಹಮೇಕ ಏವಾಸಾವವ್ಯುಚ್ಛಿನ್ನಮಹಾಮತಿಃ ॥ ೨೮ ॥

ದೇವಾರ್ಚನಂ ಕರೋತ್ಯೇವ ದೀರ್ಘದೀರ್ಘಮಹರ್ನಿಶಂ ।
ಚಿತ್ತತ್ತ್ವಚಲಿತೋ ದೇಹೋ ದೇವೋಸ್ಯ ಸಮುದಾಹೃತಃ ॥ ೨೯ ॥

---

೨೬. ದೇವತ್ವಪರಿಪೂರ್ಣನಾಗಿ, ಅಂತಃ ಅಧೀನಾತ್ಮನಾಗಿ [ಯಾವುದೊಂದು ರೀತಿಯಲ್ಲಿಯೂ ದೀನನಾಗದೆ] ಕುಳಿತಿರುವನು. ಈ ಆತ್ಮನು [ಭಾವಾಪನ್ನ] ನು ಅಸ್ತವಾಗುವುದಿಲ್ಲ; ಉದಯವಾಗುವುದಿಲ್ಲ; ಕೋಪಿಸುವುದಿಲ್ಲ;

೨೭. ತೃಪ್ತಿಯನ್ನೇ ಆಗಲಿ, ಕ್ಷುಧೆಯನ್ನೇ ಆಗಲಿ, ಹೊಂದುವುದಿಲ್ಲ ಅಭಿವಾಂಛಿಸುವುದಿಲ್ಲ; ತ್ಯಜಿಸುವುದಿಲ್ಲ; ಅಂತಃ [ಬ್ರಹ್ಮಸ್ವರೂಪ] ನಾಗಿ, ಬಃಹಿ ಜೀವನ್ಮುಕ್ತರಿಗೆ ಸರಿಯಾದ ಆಚಾರವುಳ್ಳವನಾಗಿ, ಸಮ [ಬಹ್ಮ] ಪ್ರಕಾಶನಾಗಿ ಸಮ [ಬಹ್ಮ] ದಂತಹ ತೇಜಸ್ಸಮನ್ವಿತ ಆಕಾರವುಳ್ಳವನಾಗಿರುವನು.

೨೮. ಸೌಮ್ಯತೆಯನ್ನು ಸಂಪೂರ್ಣವಾಗಿ ಪಡೆದವನಾಗಿ, ಪೂರ್ಣವಾಗಿ ಸತ್ ಸಂಕಲ್ಪವುಳ್ಳವನಾಗಿ ಆದೇಹಂ [ದೇಹ ದೇಹದಲ್ಲಿಯೂ] ತಾನು ಒಬ್ಬನೇ ಇರುವನೆಂಬ] ಏಕಭಾವವುಳ್ಳವನಾಗಿ, ತನ್ನ ಮಹಾಮತಿ [ಬ್ರಹ್ಮವು ತಾನೆಂಬ ಪ್ರಜ್ಞೆ] ಯನ್ನು ಬಿಡದವನಾಗಿ ಇರುವನು.

೨೯. ಇಂತಹವನು ಮಾಡುವ ದೇವಾರ್ಚನೆಯು ಬಹು ದೀರ್ಘವಾದುದು; ಅಹರ್ನಿಶಗಳಲ್ಲೆಲ್ಲಾ ನಡೆಯುತ್ತಲೇ ಇರುವುದು. ಚಿತ್ ತತ್ತ್ವವು ನಡೆಯಿಸುತ್ತಿರುವ ಈ ದೇಹವೇ ದೇವನು ಎಂದು ಬಲ್ಲವರು ಹೇಳುವರು.

ಯಥಾ ಪ್ರಾಪ್ತೇಣ ಸರ್ವೇಣ ತಮರ್ಚಯತಿ ವಸ್ತುನಾ ।
ಸಮಯಾ ಸರ್ವಯಾ ಬುದ್ಧ್ಯಾ ಚಿನ್ಮಾತ್ರಂ ದೇವಚಿತ್ಪರಂ ॥ ೩೦ ॥

ಯಥಾಪ್ರಾಪ್ತಕ್ರಮೋತ್ಥೇನ ಸರ್ವಾರ್ಥೇನ ಸಮರ್ಚಯೇತ್ ।
ಮನಾಗಪಿ ನ ಕರ್ತವ್ಯೋ ಯತ್ನೋಽತ್ರಾಪೂರ್ವವಸ್ತುನಿ ॥ ೩೧ ॥

ಪ್ರಾಪ್ತದೇಹತಯಾ ನಿತ್ಯಂ ತಥಾರ್ಥಕ್ರಿಯಯಾನಯಾ ।
ಕಾಮಸಂಸೇವನೇನಾಥ ಪೂಜಯೇಚ್ಛೋಭನಂ ವಿಭುಂ ॥ ೩೨ ॥

ಭಕ್ಷ್ಯಭೋಜ್ಯಾನ್ನಪಾನೇನ ನಾನಾವಿಭವಶಾಲಿನಾ ।
ಶಯನಾಸನಯಾನೇನ ಯಥಾಪ್ತೇನಾರ್ಚಯೇಚ್ಛಿವಂ ॥ ೩೩ ॥

---

೩೦. ಚಿನ್ಮಾತ್ರವಾಗಿ ಎಲ್ಲಕ್ಕಿಂತ ಹೆಚ್ಚಿನ ಚಿತ್ತೇ ದೇವ ಇಂದು ಬಲ್ಲವನಾಗಿ ತಾನಾಗಿ ಏನೇನು ಸಿಕ್ಕಿದರೆ ಅವೆಲ್ಲದರಿಂದಲೂ ದೇವನನ್ನು ವಿಕಾರರಹಿತವಾಗಿ ಸರ್ವವೂ ತಾನೇ ಎಂದು ತಿಳಿದಿರುವ ಬುದ್ಧಿಯಿಂದ ಪೂಜಿಸುವನು.

[ವಸ್ತುನಾ ತ್ರಿಪುಟೀರೂಪೇಣ ದೇವಚಿದ್ಭ್ಯಃ ಐಂದ್ರಿಯಕವೃತ್ತಿ ಪ್ರತಿಬಿಂಬ ಚಿದ್ಭ್ಯಃ ಪರಂ ತದ್ಬಿಂಬಭೂತಂ —ತಾ. ಪ್ರ.]

೩೧. ಹೀಗೆ ಈ ದೇವನನ್ನು ಏನೇನು ಸಿಕ್ಕಿದರೆ ಅದೆಲ್ಲದರಿಂದಲೂ ಪೂಜೆ ಮಾಡಬೇಕೇ ಹೊರತು ಯಾವಾಗಲೂ ಯಾವುದಾದರೊಂದು ಅಪೂರ್ವವಸ್ತುವು ಸಿಕ್ಕಲೆಂದು ಪ್ರಯತ್ನ ಮಾಡಬಾರದು.

೩೨. ಮಂಗಲಕ್ಕೂ ಮಂಗಲನಾದ ಈ ವಿಭುವನ್ನು ಸ್ವಜಾತ್ಯಾನುಗುಣ ವಾಗಿ ಪ್ರಾಪ್ತವಾದ ಕಾರ್ಯಕಲಾಪಗಳಿಂದಲೂ ಕಾಮ ಸಂಸೇವನದಿಂದಲೂ ಪೂಜಿಸುತ್ತಿರಬೇಕು.

[ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಂ। ಸ್ವಕರ್ಮಣಾ ತಮಭ್ಯರ್ಚ್ಯಸಿದ್ಧಿಂ ವಿಂದತಿ ಮಾನವಃ ॥—ಗೀತಾ

೩೩. ಭಕ್ಷ್ಯ, ಭೋಜ್ಯ, ಅನ್ನಪಾನ, ಶಯನ, ಆಸನ, ಯಾನ, ಗೀತ, ಮೊದಲಾದವುಗಳು ಬೇಕಾದಹಾಗೆ ವೈಭವಸಂಪನ್ನವಾಗಿರಲಿ, ಅಥವಾ ಅನ್ಯಥಾ

ಕಾಂತಾನ್ನಪಾನಸಂಭೋಗ ಸಂಭಾರಾದಿವಿಲಾಸಿನಾ ।
ಸುಖೇನ ಸರ್ವರೂಪೇಣ ಸಂಬುದ್ಧ್ಯಾತ್ಮಾನಮರ್ಚಯೇತ್ ॥ ೩೪ ॥

ಆಧಿವ್ಯಾಧಿಪರೀತೇನ ಮೋಹಸಂರಂಭಶಾಲಿನಾ ।
ಸರ್ವೋಪದ್ರವದುಃಖೇನ ಪ್ರಾಪ್ತೇನಾತ್ಮಾನಮರ್ಚಯೇತ್ ॥ ೩೫ ॥

ಸಮಸ್ತೈಶ್ಚ ಸಮಸ್ತಾನಾಂ ಚೇಷ್ಟಾನಾಂ ಜಗತಃ ಸ್ಥಿತೇಃ ।
ಮೃತಿಜೀವಿತಸ್ವಪ್ನಾದ್ಯೈಃ ಪ್ರಾಪ್ತೈರಾತ್ಮಾನಮರ್ಚಯೇತ್ ॥ ೩೬ ॥

ಆಗಿರಲಿ, ಯಾವಯಾವದು ಅಪ್ರಯತ್ನವಾಗಿ ಲಭಿಸುವುವೋ ಅವುಗಳಿಂದಲೇ ಈ ಶಿವಸ್ವರೂಪನನ್ನು ಅರ್ಚಿಸಬೇಕು

೩೪. ಕಾಂತೆಯರು, ಅನ್ನ, ಪಾನ, ಸಂಭೋಗ ಮೊದಲಾದ ವಿಲಾಸಗಳನ್ನೆಲ್ಲ (ಆತನಿಗೊಪ್ಪಿಸಿ) ಸರ್ವರೂಪವಾದ ಸುಖಗಳಿಂದಲೂ ಬುದ್ಧಿಪೂರ್ವಕವಾಗಿ ಆತ್ಮನನ್ನು ಅರ್ಚಿಸಬೇಕು.

(ಸಂಬುದ್ಧ್ಯ ತತ್ತ್ವತೋ ಜ್ಞಾತ್ವಾ—ತಾ. ಪ್ರ)

೩೫. ಆಧಿ, ವ್ಯಾಧಿಗಳಿಂದ ಕೂಡಿ, ಮೋಹದ ಸಂಭ್ರಮದಿಂದ ಕೂಡಿರುವ ಸಮಸ್ತ ವಿಧವಾದ ಉಪದ್ರವಗಳು ಪ್ರಾಪ್ತವಾದರೆ ಅವುಗಳಿಂದಲೂ ಕೂಡ ಆತ್ಮನನ್ನು ಅರ್ಚಿಸಬೇಕು.

(ಏವಂ ಯಥಾ ಪ್ರಾಪ್ತದುಃಖಭೋಗೇಽಪಿ ಪೂಜಾಬುದ್ಧಿರೇವ ಕಾರ್ಯಾ ನೋದ್ವೇಗ ಇತ್ಯಾಹ —ತಾ. ಪ್ರ)

೩೬. ಜಗತ್ತಿನ ಸ್ಥಿತಿಗೆ ಕಾರಣವಾದ, ಸ್ಥಿತಿಯಿಂದ ಸಂಭವಿಸುವ, ಸರ್ವ ಸಮಸ್ತ ಚೇಷ್ಟೆ (ವ್ಯಾಪಾರ) ಗಳನ್ನೂ ಒಪ್ಪಿಸಿ, ಮೃತಿ, ಜೀವಿತ, ಸ್ವಪ್ನಾದಿಗಳಲ್ಲಿ ನಡೆಯುವ ಸಮಸ್ತ ಕಾರ್ಯಗಳ ಫಲಗಳನ್ನು ಆತನಿಗೆಂದೊಪ್ಪಿಸಿ, ಆತ್ಮನನ್ನು ಪೂಜಿಸಬೇಕು.

(ಜಗತಃ ಸ್ಥಿತೇಃ ಸಂಬಂಧಿನಾಂ ಸಮಸ್ತಾನಾಂ ಚೇಷ್ಟಾನಾಂ ಫಲೈರಿತಿ ಭಾವಃ —ತಾ. ಪ್ರ)

ದಾರಿದ್ರ್ಯೇಣಾಥ ರಾಜ್ಯೇನ ಪ್ರವಾಹಪತಿತಾತ್ಮನಾ ।
ವಿಚಿತ್ರಚೇಷ್ಟಾಪುಷ್ಪೇಣ ಶುದ್ಧಾತ್ಮಾನಂ ಸಮರ್ಚಯೇತ್ ॥ ೩೭ ॥

ನಾನಾಕಲಹ ಕಲ್ಲೋಲ ಲಲನೋಲ್ಲಾಸಶಾಲಿನಾ ।
ರಾಗದ್ವೇಷವಿಲಾಸೇನ ಸೌಮ್ಯಮಾತ್ಮಾನಮರ್ಚಯೇತ್ ॥ ೩೮ ॥

ಸತಾಂ ಹೃದಯಗಾಮಿನ್ಯಾ ರೂಢಯಾ ಶಶಿಶೀತಯಾ ।
ಮೈತ್ರ್ಯಾ ಮಾಧುರ್ಯಧರ್ಮಿಣ್ಯಾ ಹೃತ್ಸ್ಥಮಾತ್ಮಾನಮರ್ಚಯೇತ್ ॥ ೩೯ ॥

ಉಪೇಕ್ಷಯಾ ಕರುಣಯಾ ಸದಾ ಮುದಿತಯಾ ಹೃದಿ ।
ಶುದ್ಧಯಾ ಶಕ್ತಿಪದ್ಧತ್ಯಾ ಬೋಧೇನಾತ್ಮಾನಮರ್ಚಯೇತ್ ॥ ೪೦ ॥

---

೩೭. ದಾರಿದ್ರ್ಯವಾಗಿರಲಿಅಥವಾ ರಾಜ್ಯಭೋಗವೇ ಇರಲಿ, ಪ್ರಾರಬ್ಧವಶದಿಂದ ಸಂಪ್ರಾಪ್ತವಾಗಿರುವ ತನ್ನ ಅವಸ್ಥೆಗನುಸಾರವಾಗಿ ತಾನು ಮಾಡುವ ಚಿತ್ರವಿಚಿತ್ರ ಕಾರ್ಯರೂಪವಾದ ಪುಷ್ಪಗಳನ್ನೊಪ್ಪಿಸಿ, ಶುದ್ಧಾತ್ಮನನ್ನು ಪೂಜಿಸಬೇಕು.

೩೮. ನಾನಾ ಕಲಹಗಳಿಂದ ಉಂಟಾಗುವ ಕಲ್ಲೋಲಗಳು, ಲಲನೆಯರ ಉಲ್ಲಾಸಗಳ ಸಂಭ್ರಮಗಳು, ಇವುಗಳಿಂದ ಕೂಡಿರುವ ರಾಗದ್ವೇಷಗಳ ವಿಲಾಸರೂಪವಾದ ವ್ಯಾಪಾರಗಳನ್ನೆಲ್ಲ ಒಪ್ಪಿಸಿ ಸೌಮ್ಯನಾದ ಆತ್ಮನನ್ನು ಸಮರ್ಚನ ಮಾಡಬೇಕು.

೩೯. ಸತ್ಪುರುಷರ ಮನಸ್ಸಿಗೆ ಒಪ್ಪುವ, ದೃಢವಾಗಿ ಚಂದ್ರಿಕೆಯಂತೆ ಮನೋಹರವಾಗಿರುವ, ಮಾಧುರ್ಯವೇ ಧರ್ಮವಾಗುಳ್ಳ, ಮೈತ್ರಿಯಿಂದ, ಹೃದಯದಲ್ಲಿರುವ ಆತ್ಮನನ್ನು ಅರ್ಚನ ಮಾಡಬೇಕು.

೪೦. ಶುದ್ಧವಾದ ಶಕ್ತಿಪದ್ಧತಿಯನ್ನು ಹಿಡಿದು, (ಪಾಪಿಗಳಲ್ಲಿ) ಉಪೇಕ್ಷೆಯಿಂದಲೂ, (ದೀನರಲ್ಲಿ) ಕರುಣೆಯಿಂದಲೂ, (ಸತ್ಪುರುಷರಲ್ಲಿ) ಮುದಿತೆಯಿಂದಲೂ, ಜ್ಞಾನಪೂರ್ವಕವಾಗಿ ಆತ್ಮನನ್ನು ಅರ್ಚನಮಾಡಬೇಕು.

ಆಕಸ್ಮಿಕೋಪಯಾತೇನ ಸ್ಥಿತೇನನಿಯತೇನ ಚ ।
ಭೋಗಾಭೋಗೈಕಭೋಗೇನ ಪ್ರಾಪ್ತೇನಾತ್ಮಾನ ಮರ್ಚಯೇತ್ ॥ ೪೧ ॥

ಭೋಗಾನಾಮನಿಷಿದ್ಧಾನಾಂ ನಿಷಿದ್ಧಾನಾಂಚ ಸರ್ವದಾ ।
ತ್ಯಾಗೇನ ವೀತರಾಗೇಣ ಸ್ವಾತ್ಮಾನಂ ಶುದ್ಧಮರ್ಚಯೇತ್ ॥ ೪೨ ॥

ಈಹಿತಾನೀಹಿತೌಘೇನ ಯುಕ್ತಾಯುಕ್ತಮಯಾತ್ಮನಾ ।
ತ್ಯಕ್ತೇನಾತ್ತೇನ ಚಾರ್ಥೇನ ಹ್ಯರ್ಥಾನಾಮೀಶಮರ್ಚಯೇತ್ ॥ ೪೩ ॥

ನಷ್ಟಂ ನಷ್ಟಮುಪೇಕ್ಷೇತ ಪ್ರಾಪ್ತಂ ಪ್ರಾಪ್ತಮುಪಾಹರೇತ್ ।
ನಿರ್ವಿಕಾರತಯೈತದ್ಧಿ ಪರಮಾರ್ಚನಮಾತ್ಮನಃ ॥ ೪೪ ॥

---

೪೧. ಆಕಸ್ಮಿಕವಾಗಿ ಲಭಿಸುವ, ಲಭಿಸಿ ಅನುಭವದಲ್ಲಿರುವ, ಮುಂದೆ ಆಗಾಮಿಯಾಗಿರುವ, ಭೋಗ, ಅಭೋಗ, ಏಕ (ದೇಶೀಯ) ಭೋಗಗಳಿಂದ ಆತ್ಮನನ್ನು ಅರ್ಚನಮಾಡಬೇಕು.

೪೨. ಪ್ರಾಪ್ತವಾಗುವ ಭೋಗಗಳು ವಿಹಿತವಾಗಿರಲಿ, ನಿಷಿದ್ಧವಾಗಿರಲಿ, ಯಾವಾಗಲೂ ಅವುಗಳಲ್ಲಿ ತ್ಯಾಗಬುದ್ಧಿಯುಳ್ಳವನಾಗಿ ವೈರಾಗ್ಯ ಸಂಪನ್ನನಾಗಿ ಶುದ್ಧನಾದ ಆತ್ಮನನ್ನು ಅರ್ಚನಮಾಡಬೇಕು.

(ಮೂಲದಲ್ಲಿ ತ್ಯಾಗೇನ ವಾತಿರಾಗೇಣ ಎಂದಿದೆ: ಅದನ್ನು ಒಪ್ಪಿಕೊಂಡರೆ ನಿಷಿದ್ಧವಾದವುಗಳಲ್ಲಿ ತ್ಯಾಗದಿಂದ, ಅನಿಷಿದ್ಧವಾದವುಗಳಲ್ಲಿ ಪರಮ ಪ್ರೇಮದಿಂದ ಎಂದಾಗುತ್ತದೆ. ಜೀವನ್ಮುಕ್ತನಭೋಗದಲ್ಲಿ ಅತಿರಾಗಕ್ಕೆ ಆಸ್ಪದವಿಲ್ಲವಾಗಿ ಅದನ್ನು ವೀತರಾಗೇಣ ಎಂದು ಮಾಡಿದೆ.)

೪೩. ಅಪೇಕ್ಷೆಪಟ್ಟೋ, ಅಪೇಕ್ಷೆಪಡದೆಯೋ ಲಭಿಸುವ, ಯುಕ್ತವೋ ಅಯುಕ್ತವೋ ಆಗಿರುವ, ಬಿಟ್ಟ ಅಥವಾ ಸಂಪಾದಿಸಿದ ಅರ್ಥಗಳಿಂದ ಈಶ್ವರ ರೂಪನಾದ ಆತ್ಮನನ್ನು ಅರ್ಚನ ಮಾಡಬೇಕು.

೪೪. ಯಾವುದು ಯಾವುದು ನಷ್ಟವಾದರೆ ಅದದನ್ನು ಉಪೇಕ್ಷಿಸಬೇಕು. ಯಾವುದು ಯಾವುದು ಪ್ರಾಪ್ತವಾದರೆ ಅದನ್ನದನ್ನು ಸಂಗ್ರಹಿಸಬೇಕು. ನಷ್ಟದಲ್ಲಿಯಾಗಲಿ ಪ್ರಾಪ್ತಿಯಲ್ಲಾಗಲೀ ನಿರ್ವಿಕಾರವಾಗಿ ಇರಬೇಕು. ಇದೇ ಆತ್ಮನಿಗೆ ಪರಮ ಪ್ರಿಯವಾದ ಅರ್ಚನವು.

ಸರ್ವದೈವ ಸಮುಗ್ರಾಸು ಚೇಷ್ಟಾನಿಷ್ಟಾಸು ದೃಷ್ಟಿಷು ।
ಪರಮಂ ಸಾಮ್ಯಮಾಧಾಯ ನಿತ್ಯಾತ್ಮಾರ್ಚಾವ್ರತಂ ಚರೇತ್ ॥ ೪೫ ॥

ಸರ್ವಂ ವಿಂದೇತ ಸುಶುಭಂ ಸರ್ವಂ ವಿದ್ಯಾಚ್ಛುಭಾಶುಭಂ ।
ಸರ್ವಮಾತ್ಮಮಯಂ ಕುರ್ಯಾನ್ನಿತ್ಯಾತ್ಮಾರ್ಚಾವ್ರತಂ ಚರೇತ್ ॥ ೪೬ ॥

ಆಪಾತರಮಣೀಯಂ ಯದ್ಯಚ್ಚಾಪಾತಸುದುಃಸಹಂ ।
ತತ್ಸರ್ವಂ ಸುಸಮಂ ಬುದ್ಧ್ವಾ ನಿತ್ಯಾತ್ಮಾರ್ಚಾವ್ರತಂ ಚರೇತ್ ॥ ೪೭ ॥

ಅಯಂ ಸೋಽಹಮಯಂ ನಾಹಂ ವಿಭಾಗಮಿತಿ ಸಂತ್ಯಜೇತ್ ।
ಸರ್ವಂ ಬ್ರಹ್ಮೇತಿ ನಿಶ್ಚಿತ್ಯ ನಿತ್ಯಾತ್ಮಾರ್ಚಾವ್ರತಂ ಚರೇತ್ ॥ ೪೮ ॥

ಸರ್ವದಾ ಸರ್ವರೂಪೇಣ ಸರ್ವಾಕಾರ ವಿಕಾರಿಣಾ ।
ಸರ್ವಂ ಸರ್ವಪ್ರಕಾರೇಣ ಪ್ರಾಪ್ತೇನಾತ್ಮಾನಮರ್ಚಯೇತ್ ॥ ೪೯ ॥

---

೪೫. ಯಾವಾಗಲೂ ತಾನುಮಾಡುತ್ತಿರುವ ಸಕಲ ಕಾರ್ಯಗಳಲ್ಲೂ ಸಂಕಲ್ಪಗಳಲ್ಲೂ ಕೂಡ, ಅತ್ಯುತ್ತಮವಾದ ಬ್ರಹ್ಮದೃಷ್ಟಿಯನ್ನುಅವಲಂಬಿಸುವುದು ಎಂಬ ಆತ್ಮಾರ್ಚನೆಯ ನಿತ್ಯವ್ರತವನ್ನು ಆಚರಿಸಬೇಕು.

೪೬. ಶುಭವಾದುದೆಲ್ಲವನ್ನೂ ಸಂಪಾದಿಸಬೇಕು: ಎಲ್ಲವೂ ಶುಭ–ಅಶುಭ ಗಳೆರಡೂ ಕೂಡಿದವು ಎಂಬುದನ್ನು ಅರಿಯಬೇಕು. ಎಲ್ಲವೂ ಆತ್ಮಮಯವಾಗಿ ಕಾಣುವಂತೆ ಮಾಡಿಕೊಳ್ಳಬೇಕು. ಹೀಗೆ ಆತ್ಮಾರ್ಚನೆಯ ನಿತ್ಯವ್ರತವನ್ನು ಆಚರಿಸಬೇಕು.

೪೭. ಆಪಾತ ರಮಣೀಯವಾದುದನ್ನೂ ಆಪಾತಸುದುಃಸಹವಾದುದನ್ನೂ ಸಮಬುದ್ಧಿಯಿಂದ ಕಾಣುತ್ತ ಆತ್ಮಾರ್ಚನೆಯ ನಿತ್ಯವ್ರತವನ್ನು ಆಚರಿಸಬೇಕು.

೪೮. ಇದು ನಾನು, ಇದು ನಾನಲ್ಲ, ಎಂಬ ವಿಭಾಗವನ್ನು ಬಿಟ್ಟು, ಸರ್ವವೂ ಬ್ರಹ್ಮವೇ ಎಂದು ನಿಶ್ಚಯಿಸಿಕೊಂಡು ಆತ್ಮಾರ್ಚನೆಯ ನಿತ್ಯವ್ರತವನ್ನು ಆಚರಿಸಬೇಕು.

೪೯. ಯಾವಾಗಲೂ, ಸರ್ವರೂಪಗಳಲ್ಲಿಯೂ ಆತ್ಮನನ್ನು ಕಾಣುತ್ತ, ಆಕಾರ ಸ್ವರೂಪವನ್ನು ಕಾಣಲಿ, ವಿಕಾರ (ಕುರೂಪ)ವನ್ನು ಕಾಣಲಿ, ಯಾವುದು

ಅನೀಹಿತ ಪರಿತ್ಯಜ್ಯ ಪರಿತ್ಯಜ್ಯ ಕಥೇಹಿತಂ ।
ಉಭಯಾಶ್ರಯಣೇನಾಪಿ ನಿತ್ಯಮಾತ್ಮಾನಮರ್ಚಯೇತ್ ॥ ೫೦ ॥

ನ.ವಾಂಛತಾ ನ ತ್ಯಜತಾ ದೈವಪ್ರಾಪ್ತಾಃ ಸ್ವಭಾವತಃ ।
ಸರಿತಃ ಸಾಗರೇಣೇವ ಭೋಕ್ತವ್ಯಾ ಭೋಗಭೂಮಯಃ ॥ ೫೧ ॥

ಉದ್ವೇಗೋ ನಾನುಗಂತವ್ಯಸ್ತುಚ್ಛಾತುಚ್ಛಾಸು ದೃಷ್ಟಿಷು ।
ವ್ಯೋಮ್ನಾ ಚಿತ್ರಪದಾರ್ಥೇಷು ಪತಿತೋ ಹ್ಯಾತತೇಷ್ವಿವ ॥ ೫೨ ॥

ದೇಶಕಾಲಕ್ರಿಯಾ ಯೋಗಾದ್ಯದುಪೈತಿ ಶುಭಾಶುಭಂ ।
ಅವಿಕಾರಂ ಗೃಹೀತೇನ ತೇನೈವಾತ್ಮಾನಮರ್ಚಯೇತ್ ॥ ೫೩ ॥

ಹೇಗಾದರೂ ಆಗಲಿ, (ಆತ್ಮನನ್ನೇ ಚಿಂತಿಸುತ್ತ) ಆತ್ಮಾರ್ಚನೆಯ ನಿತ್ಯವ್ರತವನ್ನು ಆಚರಿಸಬೇಕು.

೫೦. ಅಪೇಕ್ಷೆಯಿಲ್ಲದುದನ್ನು ಬಿಡುವಂತೆಯೇ ಅಪೇಕ್ಷೆಯಿರುವುದನ್ನು ಬಿಟ್ಟು, ಅಪೇಕ್ಷೆಯಿಲ್ಲದುದನ್ನೂ ಅಪೇಕ್ಷೆಯಿರುವುದನ್ನೂ ಒಂದೇಸಮನಾಗಿ ಅಂಗೀಕರಿಸುತ್ತ, ಆತ್ಮಾರ್ಚನೆಯ ನಿತ್ಯವ್ರತವನ್ನು ಆಚರಿಸಬೇಕು.

೫೧. ಸಾಗರವು ನದಿಗಳನ್ನು ಬರಲಿ ಎನ್ನದೆ, ಬಂದವುಗಳನ್ನು ಹೋಗಲಿ ಎನ್ನದೆ, ಬರಮಾಡಿಕೊಳ್ಳುವಂತೆ, ಸ್ವಭಾವಾನುಗುಣವಾಗಿ ದೈವವಶವಾಗಿ ಬಂದವುಗಳನ್ನು ಬೇಡವೆನ್ನದೆ, ಬರದವುಗಳನ್ನು ಬರಲಿ ಎನ್ನದೆ, ಭೋಗಗಳನ್ನು ಅನುಭವಿಸುವುದು ಎಂಬ ಆತ್ಮಾರ್ಚನೆಯ ನಿತ್ಯವ್ರತವನ್ನು ಆಚರಿಸಬೇಕು.

೫೨. ತನಗೆ ದೊರತದ್ದು ಹೀನವಾಗಲಿ ಮಾನವಾಗಲೀ ಅವುಗಳಿಗಾಗಿ ಮನಸ್ಸಿನಲ್ಲಿ ಕೊರಗದೆ, ಹಿಗ್ಗದೆ, ಚಿತ್ರಪಟದಲ್ಲಿ ವಸ್ತುಗಳನ್ನು ಕಂಡವನಂತೆ, ತನ್ನ ಮನಸ್ಸನ್ನು ಆಕಾಶದಂತೆ ನಿರ್ಮಲವಾಗಿಟ್ಟುಕೊಂಡಿರುವುದು (ಎಂಬ ಆತ್ಮಾರ್ಚನೆಯ ನಿತ್ಯವ್ರತವನ್ನು ಆಚರಿಸಬೇಕು.)

೫೩. ದೇಶಕಾಲ ಕ್ರಿಯಾಯೋಗಗಳಿಂದ ಪ್ರಾಪ್ತವಾಗುವ ಶುಭಾಶುಭಗಳನ್ನು ನಿರ್ವಿಕಾರವಾಗಿ ಗ್ರಹಣಮಾಡಿ ಅವುಗಳಿಂದಲೇ ಆತ್ಮನನ್ನು ಅರ್ಚಿಸಬೇಕು.

ಆತ್ಮಾರ್ಚನ ವಿಧಾನೇಸ್ಮಿನ್ಪ್ರೋಕ್ತಾ ದ್ರವ್ಯಶ್ರಿಯಸ್ತು ಯಾಃ ।
ಏಕೇನೈವ ಸಮೇನೈತಾ ರಸೇನ ಪರಿಭಾವಿತಾಃ ॥ ೫೪ ॥

ನಾಮ್ಲಾನಕಟ್ವ್ಯೋ ನೋತಿಕ್ತಾ ನ ಕಷಾಯಾಶ್ಚ ಕಾಶ್ಚನ ।
ಚಿತ್ರೈರಪಿ ರಸೈರ್ದಿಗ್ಧಾ ಮಧುರಾ ಏವ ತಾಃ ಕಿಲ ॥ ೫೫ ॥

ಸಮತಾ ಮಧುರಾ ರಸ್ಯಾ ರಸಶಕ್ತಿರತೀಂದ್ರಿಯಾ ।
ತಯಾ ಯದ್ಭಾವಿತಂ ಚೇತ್ಯಮಮೃತಂ ತತ್ ಕ್ಷಣಾದ್ಭವೇತ್ ॥ ೫೬ ॥

ಸಮತಾಮೃತರೂಪೇಣ ಯದ್ಯನ್ನಾಮ ವಿಭಾವ್ಯತೇ ।
ತತ್ತದಾಯಾತಿ ಮಾಧುರ್ಯಂ ಪರಮಿಂದೋರಿವ ಚ್ಯುತಂ ॥ ೫೭ ॥

---

೫೪ ಈ ಆತ್ಮಾರ್ಚನೆಯ ವಿಧಾನದಲ್ಲಿ ಯಾವ ಯಾವ ಪೂಜಾದ್ರವ್ಯಗಳು ಬೇಕೆಂದು ಹೇಳಿದೆಯೋ ಅವೆಲ್ಲಕ್ಕೂ ಬೇಕಾಗಿರುವುದು ಒಂದೇ ಒಂದು ರಸವು (ಅದು ಆನಂದವು, ಅದರಿಂದ ಎಲ್ಲವೂ ಇದ್ದಂತಾಗುವುದು.)

೫೫. ಹುಳಿ, ಒಗರು, ಕಹಿ, ಮೊದಲಾದವು ಯಾವವೂ ಇಲ್ಲ. ನಾನಾ ವಿಧವಾದ ರಸಗಳು ಇದ್ದರೂ, ಆ ಪೂಜಾದ್ರವ್ಯಗಳೆಲ್ಲವೂ ಒಂದೇ ಒಂದು ರಸದಿಂದ ಕೂಡಿವೆ. ಆ ರಸವು ಮಧುರವು.

೫೬. ಸಮತೆಯು ಬಹು ಮಧುರವೂ ರಮ್ಯವೂ ಆದುದು. ಅದು ಅತೀಂದ್ರಿಯವಾದುದು. ಅದು ಯಾವ ದೃಶ್ಯ ವಸ್ತುವನ್ನು ಸೋಂಕಿದರೂ ಅದು ಆ ಕೂಡಲೇ ಅಮೃತವಾಗುವುದು.

(ಆನಂದೈಕರಸ ವಿವರ್ತತ್ವೇನ ಸಮತಾ ದರ್ಶನಾದ್ವಾ ತಾಸಾಂ ಅವಿಕಾರೇಣ ಗ್ರಹಣ ಸಿದ್ಧಿರ್ಹಿ ಇತ್ಯಾಶಯನೇನ ಅಹ–ಸಮತೇತಿ । ರಸ ಶಕ್ತಿರ್ಹಿ ''ರಸೋ ವೈ ಸಃ'' ಇತಿ ಶ್ರುತಿದರ್ಶಿತ ಆತ್ಮಾ। —ತಾ. ಪ್ರ)

೫೭. ಸಮತಾ ಎಂಬ ಅಮೃತದಿಂದ ಯಾವ ಯಾವುದು ಸಂಸ್ಕಾರವನ್ನು ಪಡೆಯುವುದೋ ಅದೆಲ್ಲವೂ ಚಂದ್ರನಿಂದ ಕರೆದ ಅಮೃತದಂತೆಯೇ ಉತ್ತಮವಾದ ಮಾಧುರ್ಯವನ್ನು ಪಡೆಯುವುದು.

ಸಮತಾಕಾಶವದ್ಭೂತ್ವಾ ಯತ್ತು ಸ್ಯಾಲ್ಲೀನಮಾನಸಂ ।
ಅವಿಕಾರಮನಾಯಾಸಂ ತದೇವಾರ್ಚನಮುಚ್ಯತೇ ॥ ೫೮ ॥

ಪೂರ್ಣೇಂದುನೇವ ಪೂರ್ಣೇನ ಭಾವ್ಯಂ ಸಮಸಮತ್ವಿಷಂ ।
ಸ್ವಚ್ಛೇನ ಚಿದ್ಘನೈಕೇನ ಜ್ಞೇನಾಪ್ಯುಪಲರೂಪಿಣಾ ॥ ೫೯ ॥

ಅಂತರಾಕಾಶವಿಶದೋ ಬಹಿಃ ಪ್ರಕೃತಕಾರ್ಯಕೃತ್ ।
ರಂಜನಾಮಿಹಿಕಾಮುಕ್ತಃ ಸಂಪೂರ್ಣೋಽಜ್ಞ ಉಪಾಸಕಃ ॥ ೬೦ ॥

ಸ್ವಪ್ನೇಪ್ಯದೃಷ್ಟ ಹೃಲ್ಲೇಖಮಜ್ಞಾನಾಭ್ರಪರಿಕ್ಷಯೇ ।
ಶಾಂತಾಹಂತಾದಿಮಿಹಿಕಂ ಜ್ಞಃ ಶರದ್ವ್ಯೋಮ ರಾಜತೇ ॥ ೬೧ ॥

---

೫೮. ಸಮತೆಯನ್ನು ಪಡೆದು ಆಕಾಶದಂತೆ ನಿರಂಜನವಾಗಿ ವಿಕಾರಗಳಿಂದಲೂ ಆಯಾಸದಿಂದಲೂ ಕಷ್ಟಪಡದಂತೆ ಮನಸ್ಸನ್ನು ಲೀನಮಾಡುವುದು ಯಾವುದುಂಟೋ ಅದೇ ಆತ್ಮಾರ್ಚನವು.

(ಬ್ರಹ್ಮೈಕ್ಯ ದರ್ಶನ ಲಕ್ಷಣಯಾ ಸಮತಯಾ ಸ್ವಯಮಾಕಾಶವದ್ಭೂತ್ವಾ
—ತಾ. ಪ್ರ.)

೫೯. ಪೂರ್ಣ ಚಂದ್ರನಂತೆ ಪೂರ್ಣನಾಗಬೇಕು. ಕೇವಲ ಶಾಂತ ತೇಜೋಮಯನಾಗಬೇಕು. ಸ್ವಚ್ಛವಾಗಿರುವ ಚಿದ್ಘನ ಸ್ವರೂಪವೊಂದೇ ಉಳಿದವನಾಗಬೇಕು. ಸ್ಫಟಿಕಶಿಲಾಮೂರ್ತಿಯಂತೆ ಆಗಬೇಕು. ಆತನು ಬಲ್ಲವನು.

೬೦. ಒಳಗೆ ಆಕಾಶದಂತೆ ನಿರಂಜನನಾಗಿ, ಹೊರಗೆ ಪ್ರಕೃತವಾದ ಕಾರ್ಯಗಳನ್ನೆಲ್ಲ ಮಾಡುತ್ತ ಆಸಕ್ತಿಯೆಂಬ ಹಿಮ (ಬಾಧೆ) ಯಿಲ್ಲದವನೇ ಸಂಪೂರ್ಣನು. ಆತನೇ ಬಲ್ಲವನು. ಆತನೇ ಉಪಾಸಕನು.

೬೧. ಅಜ್ಞಾನವೆಂಬ ಮೋಡವೂ ಸಂಪೂರ್ಣವಾಗಿ ಕ್ಷಯವಾಗಿ ಹೋಗಲು, ಸ್ವಪ್ನದಲ್ಲಿಯೂ, ಕೂಡ ಕಾಮವೆಂಬ ಮಿಂಚು ಹೃದಯವನ್ನು ಅಲ್ಲಾಡಿಸದಿರಲು, ಅಹಂತಾದಿ ಹಿಮಗಳೆಲ್ಲವೂ ಅಡಗಿರಲು, ಬ್ರಹ್ಮಜ್ಞನೆಂಬ ಶರತ್ಕಾಲದ ಆಕಾಶವು ವಿರಾಜಿಸುವುದು.

ಸೋಮಾರ್ಕಮಸ್ತಮಿತಮಾನಸಮಾತೃಮೇಯಂ
ಸದ್ಯಃಪ್ರಸೂತ ಶಿಶುವೇದನವದ್ವಿತಾನಂ ।
ಪಶ್ಯನ್ಪ್ರಶಾಂತಮತಿಚೇತನಚಿತ್ತಬೀಜಂ ಜೀವನ್ನನುತ್ತಮಪದಸ್ಥಿತ ಏವತಿಷ್ಟ॥೬೨॥

ದೇಶಕಾಲಕರಣಕ್ರಮೋದಿತೈಃ ಸರ್ವವಸ್ತುಸುಖದುಃಖವಿಭ್ರಮೈಃ ।
ನಿತ್ಯಮರ್ಚಯ ಶರೀರನಾಯಕಂ ತಿಷ್ಠ ಶಾಂತಸಕಲೇಹಯಾ ಧಿಯಾ ॥ ೬೩ ॥

ಇತ್ಯಾರ್ಷೇ ! ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ "ದೇವಾರ್ಚನ ವಿಧಿ" ನಾಮ ಏಕೋನಚತ್ವಾರಿಂಶಃ ಸರ್ಗಃ

---

೬೨. (ಆನಂದಾಮೃತ ಪರಿಪೂರ್ಣನಾಗಿದ್ದುಕೊಂಡು) ಸೋಮನಂತೆಯೂ (ನಿಷ್ಕಲ್ಮಕನೂ ನಿತ್ಯ ಪ್ರಕಾಶಕನೂ ಆಗಿದ್ದುಕೊಂಡು) ಸೂರ್ಯನಂತೆಯೂ, ಇದ್ದೂ ಮಾತೃ, ಮೇಯ ಮೊದಲಾದ ಮಾನಸ ವೃತ್ತಿಗಳೆಲ್ಲ ಅಸ್ತವಾಗಿ ಬಿಟ್ಟಿರಲು, ಆಗ ತಾನೇ ಹುಟ್ಟಿದ ಮಗುವಿನ ಜ್ಞಾನದಂತೆ ನಿಸ್ಸಂಕಲ್ಪವಾದ ಮನಸ್ಸಿನಿಂದ ಕೂಡಿ, ಬುದ್ಧಿಯು ಪ್ರಸನ್ನವಾಗಿರುವುದರಿಂದ ಚೇತನ, ಚಿತ್ತ, ಇವೆರಡಕ್ಕೂ ಬೀಜವಾದ ಬ್ರಹ್ಮವನ್ನು ದರ್ಶನ ಮಾಡುತ್ತ, ಬದುಕಿರುವಾಗಲೇ ಅನುತ್ತಮವಾದ ಶ್ರೇಷ್ಠ ಪದದಲ್ಲಿ ನಿಂತು (ಸುಖವಾಗಿ) ಇರುವನಾಗು.

೬೩. ದೇಶಕಾಲ ಕರಣ ವಶವಾಗಿ ಪ್ರಾಪ್ತವಾದ ವ್ಯಾಪಾರಗಳೆಲ್ಲದರಿಂದಲೂ, ಸರ್ವ ವಸ್ತುಗಳಿಂದಲೂ, ಸುಖದುಃಖ ರೂಪ ಮನೋವೃತ್ತಿಗಳಿಂದಲೂ ಶರೀರ ನಾಯಕನಾದ ಆತ್ಮನನ್ನು ಯಾವಾಗಲೂ, ಅರ್ಚಿಸುತ್ತಿರು. ಸಕಲವಾದ ಕಾಮನೆಗಳೂ ಶಾಂತವಾಗಿರುವ ಮನಸ್ಸಿನಿಂದ (ಸುಖವಾಗಿ) ಇರುವನಾಗು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ದೇವಾರ್ಚನ ವಿಧಿ" ಎಂಬ
ಮೂವತ್ತೊಂಭತ್ತನೆಯ ಸರ್ಗವು

ಚತ್ವಾರಿಂಶಃ ಸರ್ಗಃ

ಶ್ರೀ ಈಶ್ವರ ಉವಾಚ :—

ಯಥಾಕಾಲಂ ಯಥಾರಂಭಂ ನಕರೋಷಿ ಕರೋಷಿ ಯತ್ ।
ಚಿನ್ಮಾತ್ರಸ್ಯ ಶಿವಸ್ಯಾಂತಸ್ತದೇವಾರ್ಚನಮಾತ್ಮನಃ ॥ ೧ ॥

ತೇನೈವಾಹ್ಲಾದ ಮಾಯಾತಿ ಯಾತಿ ಪ್ರಕಟತಾಂ ತಥಾ ।
ತಥಾ ಸ್ಥಿತೇನ ರೂಪೇಣ ಸ್ವೇನೈವ ಸ್ವಯಮೀಶ್ವರಃ ॥ ೨ ॥

ರಾಗದ್ವೇಷಾದಿ ಶಬ್ದಾರ್ಥಾ ನಾತ್ಮನ್ಯನ್ಯತಯಾಮಲೇ ।
ಸಂಭವಂತಿ ಪೃಥಗ್ರೂಪಾ ವಹ್ನೌ ವಹ್ನಿಕಣಾ ಇವ ॥ ೩ ॥

ನಾಲ್ವತ್ತನೆಯ ಸರ್ಗವು

ಶ್ರೀ ಈಶ್ವರನು ಹೇಳಿದನು :

೧. ಯಾವ ಯಾವ ಕಾಲಕ್ಕೆ ಏನಾಗಬೇಕೋ, ಯಾವ ಯಾವ ಕರ್ಮಕ್ಕಾಗಿ ಯಾವ ಯಾವುದಾಗಬೇಕೋ, ಅದನ್ನೆಲ್ಲಾ ಮಾಡುವುದು, ಬಿಡುವುದು, ಎಂಬುದು ಯಾವುದುಂಟೋ, ಅದೇ ಚಿನ್ಮಾತ್ರನಾದ ಶಿವನಿಗೆ ಸಲ್ಲಿಸಬೇಕಾದ ಆತ್ಮದೇವನ ಅಂತರರ್ಚನವು.

೨. ಈಶ್ವರನು ಇಂತಹ ಅರ್ಚನದಿಂದ ಆನಂದ ಪಡುವನು. ತಾನು ಯಾವರೂಪದಲ್ಲಿ ಇದ್ದರೆ ಅದೇ ರೂಪದಲ್ಲಿಯೇ ಪ್ರಕಟನಾಗುವನು.

೩. ರಾಗದ್ವೇಷಾದಿ ಶಬ್ದಗಳ ಅರ್ಥಗಳು ಕೂಡ ನಿರ್ಮಲನಾದ ಆತ್ಮನಲ್ಲಿಯೇ ಪೃಥಗ್ರೂಪವಾಗಿ ಬೇರೆಯಾಗಿ (ಇರುವುದು ಹೇಗೆ ಎಂದರೆ) ಬೆಂಕಿಯಿಂದ (ಹಾರಿದ ಕಿಡಿಗಳಂತೆ)

ಯದ್ಯದ್ರಾಜತ್ವದೀನತ್ವ ಸುಖದುಃಖಾದಿ ವೇದನಮ್ ।
ಆತ್ಮೀಯಂ ಪರಕೀಯಂ ಚ ತತ್ತದರ್ಚನ ಮಾತ್ಮನಃ ॥ ೪ ॥

ವಿಶ್ವಸಂವಿತ್ತಿರೇವಾರ್ಚಾ ನಿತ್ಯ ಸ್ಯಾತ್ಮನಏವಚ ॥ ೫ ॥

ಘಟಾದ್ಯಾತ್ಮತಯಾ ಬ್ರಹ್ಮ ಸ್ವಯಮಾತ್ಮಾ ತಥೈವ ಚ ।
ಶಿವಂ ಶಾನ್ತಮನಾಭಾಸಮೇಕಂ ಭಾಸ್ವರಮಾಗತಮ್ ।
ಜಗತ್ಪ್ರತ್ಯಯ ವತ್ಸರ್ವ ಮಾತ್ಮರೂಪಮಿದಂ ಸ್ಥಿತಮ್ ॥ ೬ ॥

ಅಹೋನು ಚಿತ್ರಮಾತ್ಮೈವ ಘಟಾದ್ಯನ್ಯದ್ಯವಸ್ಥಿತಮ್ ।
ಜೀವಾದಿಸ್ವಸ್ವಭಾವೋನ್ತರ್ನೂನಂ ವಿಸ್ಮೃತಿಮಾನಿವ ॥ ೭ ॥

---

೪. ರಾಜತ್ವ, ದೀನತ್ವ, ದೀನತ್ವ, ಮೊದಲಾದ ಅವಸ್ಥೆಗಳಲ್ಲಿ ಕಾಣುವ ಸುಖದುಃಖಾದಿ ಜ್ಞಾನವು ಯಾವುದುಂಟೋ, ಅದು ತನ್ನದೇ ಆಗಿರಲಿ, ಇನ್ನೊಬ್ಬರದೇ ಆಗಿರಲಿ, ಅದದೇ ಆತ್ಮನ ದರ್ಶನವು.

(ಆದಿಪದಾತ್ ಅಶನಾಯಾಪಿ ಪಾಸಾದಯೋ ಗೃಹ್ಯಂತೇ । ತೇಷಾಂ ವೇದನಮಧ್ಯಾರೋಪಣಂ ದೇವೇ ಪುಷ್ಪ ಪತ್ರಾದ್ಯಾರೋಪಣ ಸ್ಯೇವಪೂಜಾತ್ವ ಪ್ರಸಿದ್ಧೇರಿತಿ ಭಾವಃ— ತಾ. ಪ್ರ.)

೫. ನಿತ್ಯನಾದ ಆತ್ಮನನ್ನು (ಪ್ರತಿಯೊಂದರಲ್ಲೂ ಭಾವಿಸುವ) ವಿಶ್ವ ಸಂಪತ್ತಿಯು, ಯಾವುದುಂಟೊ ಅದೇ ಆತನಿಗೆ ಸಲ್ಲಬೇಕಾದ ಅರ್ಚನವು.

೬. ಬ್ರಹ್ಮವು ಘಟಾದಿಯಾಗಿಯೂ ಇರುವುದು. ಆತ್ಮರೂಪವಾಗಿಯೂ ಇರುವುದು. ಶಿವವಾಗಿ, ಶಾಂತವಾಗಿ, ಬೇರೊಂದರಿಂದ ಬೆಳಗಿಸಿಕೊಳ್ಳದೆ ತಾನೇ ಎಲ್ಲವನ್ನೂ ಬೆಳಗುತ್ತ, ಏಕೈಕವಾಗಿ ಆತ್ಮವೇ ಈ ಜಗತ್ತಿನ ರೂಪವಾಗಿರುವುದೆಂದು (ಚಿಂತಿಸುವುದೇ ವಿಶ್ವಸಂಪತ್ತಿಯು)

೭ ಆತ್ಮನೇ ಹೊರಗೆ ತನಗಿಂತ ಭಿನ್ನವಾಗಿ ತೋರುವ ಘಟಾದಿಗಳಾಗಿ

ಸರ್ವಾತ್ಮಕಸ್ಯಾನನ್ತಸ್ಯ ಶಿವಾಸ್ಯಾನ್ತಃ ಕಿಲಾತ್ಮನಃ ।
ಪೂಜ್ಯ ಪೂಜಕ ಪೂಜಾಖ್ಯೋ ವಿಭ್ರಮಃ ಪ್ರೋದಿತಃ ಕೃತಃ ॥ ೮ ॥

ನಿಯತಾಕಾರತಾ ಶಾನ್ತೇನ ಚ ಸಂಭವತೀಶ್ವರೇ ।
ಯತ್ರಸಂಕಲ್ಪ್ಯತೇ ಬ್ರಹ್ಮನ್ಪೂಜ್ಯ ಪೂಜಾಮಯಃ ಕ್ರಮಃ ॥ ೯ ॥

ಪೂಜ್ಯ ಪೂಜಾದ್ಯವಚ್ಛಿನ್ನೋ ದೇವೋ ನಿತ್ಯಾಮಲಾತ್ಮನಃ ।
ಸರ್ವೇಶಕ್ತೇರನನ್ತಸ್ಯ ನೇಶ್ವರತ್ವಸ್ಯ ಭಾಜನಮ್ ॥ ೧೦ ॥

ಇರುವನು. ಜೀವಾದಿ ಸ್ವಭಾವಗಳಿಂದ ಒಳಗೆ ತೋರುವನು. ಆದರೆ ತಾನೇ ಇದೆಲ್ಲವೂ ಆಗಿರುವೆನು ಎಂಬುದನ್ನು ಮರೆತಂತೆ ಇರುವುದು ಮಾತ್ರ ಚಿತ್ರವು!

೮. ಸರ್ವಾತ್ಮಕನಾದ, ಅನಂತನಾದ, ಶಿವನಾದ, ಆತ್ಮನ ಒಳಗೆ, ಪೂಜ್ಯ ಪೂಜಕ ಪೂಜಾ ಎಂಬ (ತ್ರಿಪುಟೀ) ವಿಭ್ರಮವು ಎಲ್ಲಿಂದ ಬಂತು? (ಅದರಿಂದ ತ್ರಿಪುಟಿಯಿಂದ ಆಚೆ ಇರುವ ಆತ್ಮನನ್ನು ಚಿಂತಿಸುತ್ತಿರುವುದೇ ಆತ್ಮಾರ್ಚನವು.)

೯. ಶಾಂತನಾಗಿ (ಪ್ರಪಂಚೋಪಶಮನಾದ) ಈಶ್ವರನಲ್ಲಿ 'ನಿಯತವಾದ ಆಕಾರ ವೊಂದುಂಟು' ಎಂಬುವುದೇ ಅಸಂಭವವು. ಎಲೈ ಬ್ರಹ್ಮನೇ, ಆ ಆಕಾರ ವಿದ್ದರಲ್ಲವೆ ಪೂಜ್ಯ, ಪೂಜಾ, ಎಂಬ ಕ್ರಮವು ಏರ್ಪಡುವುದು ?

೧೦. ಪೂಜ್ಯ ಪೂಜಾ ಪೂಜಕ ಎಂಬ ತ್ರಿಪುಟೀಭಾವದಿಂದ ಅವಚ್ಛಿನ್ನ (ಪರಿಮಿತ) ನಾದ ದೇವನೊಬ್ಬನುಂಟು ಎನ್ನುವುದೇ ನಿತ್ಯವೂ ನಿರ್ಮಲನೂ ಸರ್ವ ಶಕ್ತನೂ ಅನಂತನೂ ಈಶ್ವರನೂ ಆದ ಆತ್ಮನಿಗೆ ಒಪ್ಪುವುದಿಲ್ಲ.

ತ್ರಿಜಗತ್ಪ್ರಸೃತಾಚ್ಛಾಚ್ಛ ಸಂವಿದ್ರೂಪಸ್ಯ ಚಾತ್ಮನಃ ।
ನೇಶ್ವರಸ್ಯಾ ಕೃತೇರ್ಬ್ರಹ್ಮನ್ವ್ಯಪದೇಶೋ ಹಿ ಯುಜ್ಯತೇ ॥ ೧೧ ॥

ದೇಶಕಾಲ ಪರಿಚ್ಛಿನ್ನೋ ಯೇಷಾಂ ಸ್ಯಾತ್ಪರಮೇಶ್ವರಃ ।
ಅಸ್ಮಾಕಮುಪದೇಶ್ಯಾಸ್ತೇ ನ ವಿಪಶ್ಚಿದ್ವಿಪಶ್ಚಿತಾಮ್ ॥ ೧೨ ॥

ತದೀಯಾಂ ದೃಷ್ಟಿಮುತ್ಸೃಜ್ಯ ತಥೇಮಾಮವಲಂಬ್ಯ ಚ ।
ಸಮಃಸ್ವಚ್ಛಮನಾಃ ಶಾನ್ತೋ ವೀತರಾಗೋ ನಿರಾಮಯಃ ॥ ೧೩ ॥

ಕಾಮೋಪಹಾರೈರಭೀತೋ ಯಥಾಪ್ರಾಪ್ತೈರಖಿನ್ನಧೀಃ ।
ಆತ್ಮಾನಮರ್ಚಯಂಸ್ತಿಷ್ಠ ಸುಖದುಃಖಶುಭಾಶುಭೈಃ ॥ ೧೪ ॥

---

೧೧. ಜಗತ್ತ್ರಯವನ್ನೂ ವ್ಯಾಪಿಸಿಕೊಂಡು, ಅತ್ಯಂತ ಶುದ್ಧವಾಗಿ ಕೇವಲ ಚಿದ್ರೂಪನಾಗಿರುವ ಆತ್ಮನಲ್ಲಿ, ಎಲೈ ಬ್ರಹ್ಮನೇ, ಮೂರ್ತಿಮಂತನಾದ ಈಶ್ವರನ ಕಲ್ಪನೆಯನ್ನು ಮಾಡುವುದು ಕೂಡ ಸರಿಯಲ್ಲ.

೧೨. ಯಾವ ವಿದ್ವಾಂಸರಿಗೆ "ಪರಮೇಶ್ವರನು ದೇಶಕಾಲಗಳಿಂದ ಪರಿಚ್ಛಿನ್ನನಾಗಿರುವನು" ಎನ್ನಿಸುವುದೋ, ಅಂತಹವರಿಗೆ, ಎಲೈ ವಿದ್ವಾಂಸನೆ, ನಮ್ಮ ಉಪದೇಶವು ಬೇಕಿಲ್ಲ, (ನಾವು ಅವರಿಗೆ ಉಪದೇಶ ಕೊಡಬಾರದು)

೧೩. (ಅದರಿಂದ ಪರಮೇಶ್ವರನು ಪರಿಚ್ಛಿನ್ನನು ಎಂಬ) ಆ ದೃಷ್ಟಿಯನ್ನು ಬಿಟ್ಟು (ಪರಮೇಶ್ವರನು ಅನವಚ್ಛಿನ್ನನು ಎಂಬ) ಈ ದೃಷ್ಟಿಯನ್ನು ಅವಲಂಬಿಸಿ, (ಸುಖದುಃಖಾದಿಗಳಿಗೆ ವಶನಾಗದೆ) ಸಮನಾಗಿ, (ಸಂಕಲ್ಪರಹಿತವಾಗಿರುವುದರಿಂದ) ನಿರ್ಮಲವಾಗಿರುವ ಮನಸ್ಸುಳ್ಳವನಾಗಿ, ಶಾಂತನಾಗಿ, ವೈರಾಗ್ಯವಂತನಾಗಿ, ನಿಶ್ಚಿಂತನಾಗಿ, ತಾವಾಗಿ ಒದಗಿದ ಸುಖದುಃಖ ಶುಭ ಅಶುಭ ರೂಪಗಳಾದ ಉಪಹಾರಗಳಿಂದ, ಯಥೇಚ್ಛವಾಗಿ, ಎಲ್ಲೆಲ್ಲೂ, ಆತನನ್ನು ಅರ್ಚಿಸುತ್ತಿರು.

ಅಧಿಗತವತಿ ಸಾಧೌ ಚೈತಮೇವಾನುರೂಪಂ ।
ತ್ವಯಿ ತರಲಿತ ಜೀವೇ ಜನ್ಮಾದುಃಖಾದಿ ಕಿಂಚಿತ್ ।
ನ ಲಗತಿ ಪರಿಶೂನ್ಯೇ ಸರ್ವತಃ ಸ್ಫಾಟಿಕಾಂಗೇ ।
ನವಸದನ ಇವಾಂಕೇ ನಿಷ್ಕಲಂಕೇ ಕಲಂಕಃ ॥ ೧೫ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ "ದೇವತಾ ತತ್ತ್ವವಿಚಾರೋ" ನಾಮ ಚತ್ವಾರಿಂಶಃ ಸರ್ಗಃ

---

೧೫. (ಶೋಧನಮಾಡಿ ದೇಹದಿಂದ)ಜೀವನು ತರಲಿತ(ಪ್ರತ್ಯೇಕನು)ಎಂಬು ದನ್ನು ತಿಳಿದುಕೊಂಡು(ರಾಗದ್ವೇಷಾದಿಗಳನ್ನೆಲ್ಲಾ ಬಿಟ್ಟು)ಸಾಧುವಾಗಿ,(ತ್ರಿಪುಟೀ ರಹಿತವಾದ) ಏಕೈಕವಾದ ಆತ್ಮಕ್ಕೆ ಸರಿಯಾದ (ಸ್ಥಿತಿಯನ್ನು) ಹೊಂದಿದ ನಿನ್ನಲ್ಲಿ ಜನ್ಮ(ಮರಣಗಳಿಂದ ಆಗುವ) ದುಃಖಾದಿಗಳು ಯಾವವೂ ಎಳ್ಳಷ್ಟೂ ಅಂಟುವುದಿಲ್ಲ. ವರ್ಣಾಂತರಗಳಿಲ್ಲದೆ ಶುದ್ಧವಾದ ಸ್ಫಟಿಕಶಿಲೆಯಿಂದಲೇ ಕಟ್ಟಿರುವ ಹೊಸಮನೆಯಲ್ಲಿ ಯಾವ ವಿಧದಿಂದಲೇ ಆಗಲಿ ಏನಾದರೂ ಕಲಂಕವು ತೋರಬಲ್ಲುದೇನು?

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ದೇವತಾ ತತ್ತ್ವವಿಚಾರ" ಎಂಬ
ನಾಲ್ವತ್ತನೆಯ ಸರ್ಗವು

ಏಕಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚಃ—

ಶಿವಃ ಕಿಮುಚ್ಯತೇ ದೇವ ಪರಂಬ್ರಹ್ಮ ಕಿಮುಚ್ಯತೇ ।
ಆತ್ಮಾ ಕಿಮುಚ್ಯತೇ ನಾಥ ಪರಮಾತ್ಮಾ ಕಿಮುಚ್ಯತೇ ॥ ೧ ॥

ತತ್ಸತ್ಕಿಂಚಿನ್ನ ಕಿಂಚಿನ್ನಶೂನ್ಯಂ ವಿಜ್ಞಾನಮೇವಚ ।
ಇತ್ಯಾದಿ ಭೇದೋ ಭಗವಂಸ್ತ್ರಿಲೋಕೇಶ ಕಿಮುಚ್ಯತೇ ॥ ೨ ॥

ನಾಲ್ವತ್ತೊಂದನೆಯ ಸರ್ಗವು

ಶ್ರೀ ವಸಿಷ್ಠನು ಕೇಳಿದನು :—

೧. ಎಲೈ ದೇವನೆ, ಶಿವನೆಂದು ಯಾವುದನ್ನು ಹೇಳುವುದು? ಪರಬ್ರಹ್ಮನೆಂದು ಯಾವುದನ್ನು ಹೇಳುವುದು? ಆತ್ಮಾ ಎನ್ನುವುದು ಯಾವುದು? ಎಲೈ ನಾಥನೆ, ಪರಮಾತ್ಮಾ ಎನ್ನುವುದು ಯಾವುದು?

(ಯದುಕ್ತಂ "ನೇಶ್ವರಸ್ಯಾಕೃತೇ ಬ್ರಹ್ಮ್ರ ವ್ಯಪದೇಶೋ ಹಿ ಯುಜ್ಯತೇ" ಸರ್ಗ—೪೦ನೇ ಶ್ಲೋಕ ೧೧) ಇತ್ಯಾದಿನಾ ಪೂಜ್ಯತತ್ವಂ ಅರೂಪಕಂ, ಅವ್ಯಪದೇಶ್ಯಂ, ತಸ್ಯ ಶಿವಾದಿ ಶಬ್ದೈರಪಿ ಕಥಂ ವ್ಯಪದೇಶಃ ಇತ್ಯಾಶಯೇನ ಪೃಚ್ಛತಿ ಇತ್ಯರ್ಥಃ. ತಾ. ಪ್ರ.)

೨. ತತ್, ಸತ್, ಕಿಂಚಿತ್ ನಕಿಂಚಿತ್, ಶೂನ್ಯ, ವಿಜ್ಞಾನ, ಇತ್ಯಾದಿ ಭೇದಗಳು, ತ್ರಿಲೋಕಾಧಿಪತಿಯಾದ ಭಗವಂತನೆ, ಏನು?

" ಓಂ ತತ್ಸದಿತಿನಿರ್ದೇಶೋ ಬ್ರಾಹ್ಮಣಸ್ತ್ರಿವಿಧಃ ಸ್ಮೃತಃ" ಇತ್ಯಾದಿ ವ್ಯಪದೇಶೇಷು ಭಿನತ್ತೀತಿ ಭೇದ ಪರಸ್ಪರ ವ್ಯಾವರ್ತಕ ಪ್ರವೃತ್ತಿನಿಮಿತ್ತಕನಾಮವಿಶೇಷಃ ಕಿಂ ನಿಮಿತ್ತಮುಚ್ಯತೇ ಇತ್ಯರ್ಥಃ— ತಾ. ಪ್ರ.

ಶ್ರೀ ಈಶ್ವರ ಉವಾಚ:—

ಅನಾದ್ಯನ್ತಮನಾಭಾಸಂ ಸತ್ಕಿಂಚಿದಿಹವಿದ್ಯತೇ ।
ಇಂದ್ರಿಯಾಣಾಮಗಮ್ಯತ್ವಾದ್ಯನ್ನ ಕಿಂಚಿದಿವಸ್ಥಿತಮ್ ॥ ೩ ॥

ಶ್ರೀ ವಸಿಷ್ಠ ಉವಾಚ:—

ಯದಿಂದ್ರಿಯಾಣಾಂ ಬುದ್ಧ್ಯಾದಿಯುಕ್ತಾನಾಮಪ್ಯದೃಶ್ಯತಾಮ್ ।
ಗತಃ ತತ್ಕಥಮಿಶಾನ ತ್ವಶಂಕೇನೋಪಗಮ್ಯತೇ ॥ ೪ ॥

ಶ್ರೀ ಈಶ್ವರ ಉವಾಚ:—

ಯೋ ಮುಮುಕ್ಷುರವಿದ್ಯಾಂಶಃ ಕೇವಲೋ ನಾಮ ಸಾತ್ವಿಕಃ ।
ಸಾತ್ವಿಕೈರೇವ ಸೋಽವಿದ್ಯಾಭಾಗೈಃ ಶಾಸ್ತ್ರಾದಿನಾಮಭಿಃ ॥ ೫ ॥

ಶ್ರೀ ಈಶ್ವರನು ಹೇಳಿದನು :—

೩. ಆದಿ ಅಂತಗಳೂ ಇಲ್ಲದೆ ಯಾರಿಗೂ ಗೋಚರಿಸದೇ ಇರುವ ಯಾವುದೋ ಒಂದು 'ಸತ್' ಪದಾರ್ಥವು ಇದೆ. ಅದು ಇಂದ್ರಿಯಗಳಿಗೆ ದೊರಕುವುದಿಲ್ಲವಾಗಿ ಅದು ಹೀಗೇ ಇದೆಯೆಂದು ಹೇಳುವುದೇ ಸಾಧ್ಯವಿಲ್ಲ.

ಶ್ರೀ ವಸಿಷ್ಠನು ಹೇಳಿದನು :—

೪. ಬುದ್ಧಿ ಮನಸ್ಸು ಮೊದಲಾದವುಗಳಿಂದ ಕೂಡಿರುವ ಇಂದ್ರಿಯಗಳಿಗೂ ಗೋಚರವಿಲ್ಲವೆಂದಮೇಲೆ, ಎಲೈ ಈಶಾನನೆ,ಅದನ್ನು ನಿಶ್ಶಂಕೆಯಾಗಿ ಆರಾಧಿಸುವುದೆಂತು ?

ಶ್ರೀ ಈಶ್ವರನು ಹೇಳಿದನು :—

೫. ಮುಮುಕ್ಷುವು(ಗುರು)ಶಾಸ್ತ್ರ(ಸತ್ಸಂಗ)ಗಳೆಂಬ ಸಾತ್ವಿಕವಾದ ಅವಿದ್ಯಾಭಾಗಗಳಿಂದ (ಸಾಧಿಸಿದ ತಪಸ್ಸಿನ ಫಲವಾಗಿ) ಸಾತ್ವಿಕವಾದ ಅವಿದ್ಯಾಂಶದಿಂದ ಇನ್ನೂ ಕೂಡಿರುವ ಕೇವಲವೆಂಬ (ಬುದ್ಧಿ ವೃತ್ತಿ ಪ್ರತಿಬಿಂಬಿತ ಬ್ರಹ್ಮ ಸಾಕ್ಷಾತ್ಕಾರವನ್ನು ಹೊಂದುವನು)

(ಗಾಯತ್ರಿಯು"ಧಿಯೋ ಯೋನಃ ಪ್ರಚೋದಯಾತ್ ತತ್ ಸವಿತುಃ ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ" ಎಂದು ಹೇಳುವುದು. ಮಾನವನು ಮಾನವ ದೇಹದಲ್ಲಿದ್ದು ಕೊಂಡು ಪಡೆಯಬಹುದಾದ ಸಾಕ್ಷಾತ್ಕಾರಗಳಲ್ಲಿ ಪರಮವದು. ಬುದ್ಧಿ

ಅವಿದ್ಯಾಂ ಶ್ರೇಷ್ಠಯಾ ಶ್ರೇಷ್ಠಾಂ ಕ್ಷಾಲಯನ್ನಿಹ ತಿಷ್ಠತಿ ।
ಮಲಂ ಮಲೇನಾಪಹರನ್ಯುಕ್ತಿಜ್ಞೋ ರಜಕೋಯಥಾ ॥ ೬ ॥

ಕಾಕತಾಲೀಯವತ್ಪಶ್ಚಾದವಿದ್ಯಾಕ್ಷಯ ಆಗತೇ ।
ಪ್ರಪಶ್ಯತ್ಯಾತ್ಮನೈವಾತ್ಮಾ ಸ್ವಭಾವಸ್ಯೈಷ ನಿಶ್ಚಯಃ ॥ ೭ ॥

ಯಥಾಕಥಂಚಿದಂಗಾರೇ ನಿಘೃಷ್ಯ ಕ್ಷಾಲಯಚ್ಛಿಶುಃ ।
ಕರನ್ನೈರ್ಮಲ್ಯಮಾಪ್ನೋತಿ ಕಾಷ್ಣ್ಯಾರ್ಣಂಗಾರಕ್ಷಯೇ ಯಥಾ ॥ ೮ ॥

ಯಲ್ಲಿ ವೃತ್ತಿಯು ಹುಟ್ಟುವಂತೆ ಮಾಡುವ ದೇವನು ಸವಿತೃವು. ಆತನು ಪ್ರಜೋದಕನು. ಜನ್ಮಕಾರಣನು. ಆತನನ್ನು ನೋಡುವುದು ಎಂದರೆ ಆತನ ತೇಜಸ್ಸು ಧ್ಯಾನಕ್ಕೆ ಸಿಕ್ಕುವುದು. ಇದೇ ಇಲ್ಲಿ ಹೇಳಿರುವ ಕೇವಲಭಾವ. ಅದು ಶುದ್ಧ ಸಾತ್ವಿಕವಾದರೂ ಅದರಲ್ಲೂ ಅವಿದ್ಯಾಂಶವು ಸೂಕ್ಷ್ಮವಾಗಿ ಇದ್ದೇ ಇರುವುದು ಎಂಬುದು ಭಾವ.)

೬. (ಹೀಗೆ ಸೂಕ್ಷ್ಮವಾಗಿ ಉಳಿದಿರುವ) ಅವಿದ್ಯಾಭಾಗವನ್ನೂ, ಯುಕ್ತಿಯನ್ನು ಬಲ್ಲ ಅಗಸರವನು (ಬಟ್ಟೆಯ) ಮಲವನ್ನು, (ಚೌಳು ಮೊದಲಾದ) ಮಲದಿಂದಲೇ ತೊಳೆಯುವಂತೆ, ಶ್ರೇಷ್ಟ (ವಾದ ಸ್ವಾತಿಕ ವಿದ್ಯಾಂಶ) ವನ್ನು ಶ್ರೇಷ್ಟ (ವಾದ ನಿರ್ಗುಣಧ್ಯಾನರೂಪವಾದ ಸಾತ್ವಿಕ ಸಾಧನ) ದಿಂದಲೇ ತೊಳೆದು ತಾನೇ ತಾನಾಗಿ ನಿಲ್ಲುವನು.

೭. ಹೀಗೆ ಕಾಕತಾಲೀಯವಾಗಿ ಅವಿದ್ಯಾಕ್ಷಯವಾಗಲು (ಗುಹಾನಾಮಕ ವಿಜ್ಞಾನಮಯ ಕೋಶವನ್ನು ಹೊಕ್ಕು ದೇಹಾಭಿಮಾನದಿಂದ ದೇಹಿಯೆಂದು ಕೊಳ್ಳುವ) ಆತ್ಮನು ಆತ್ಮನಿಂದಲೇ ಆತ್ಮದರ್ಶನ ಮಾಡುವನು. ಇದೇ ಸ್ವಭಾವದ ನಿಶ್ಚಯವು.

೮ ಇದ್ದಲನ್ನು ಮುಟ್ಟಿ ಕೈಯಲ್ಲ ಕಪ್ಪುಮಾಡಿಕೊಂಡ ಮಗುವು ತೊಳೆದು ಕೊಳ್ಳಲು ಕೈಯ ಕಪ್ಪೆಲ್ಲ ಹೋಗಿ ನೈರ್ಮಲ್ಯವನ್ನು ಪಡೆಯುವಂತೆಯೇ ಇದು.

ಯಥಾಕಥಂ ಚಿಚ್ಛಾಸ್ತ್ರೈರ್ಭಾಗೈರ್ಭಾಗಂ ವಿಚಾರಯೇತ್ ।
ಸಾತ್ವಿಕಸ್ತಾಮಸೋ ಭಾಗೋ ದ್ವಯೋರಾತ್ಮೋದಯಸ್ತಥಾ ॥ ೯ ॥

ಪಶ್ಯತ್ಯಾತ್ಮಾನಮಾತ್ಮೈವ ವಿಚಾರಯತಿ ಚಾತ್ಮನಾ ।
ಆತ್ಮೈವೇಹಾಸ್ತಿ ನಾವಿದ್ಯಾ ಇತ್ಯವಿದ್ಯಾಕ್ಷಯಂ ವಿದುಃ ॥ ೧೦ ॥

ಯಾವತ್ಕಿಂಚಿದಿದಂ ವಸ್ತು ನಾನಾ ನಾತ್ಮಾವಗಮ್ಯತಾಮ್ ।
ಕ್ರಮಾ ಗುರೂಪದೇಶಾದ್ಯಾ ನಾತ್ಮಜ್ಞಾನಸ್ಯ ಕಾರಣಮ್ ॥ ೧೧ ॥

ಗುರುರ್ಹೀಂದ್ರಿಯವೃತ್ತ್ಯಾತ್ಮಾ ಬ್ರಹ್ಮ ಸರ್ವೇಂದ್ರಿಯಕ್ಷಯಾತ್ ।
ಯದ್ವಸ್ತು ಯತ್ಕ್ಷಯೇ ಪ್ರಾಪ್ಯಂ ತತ್ತಸ್ಮಿನ್ಸತಿ ನಾಪ್ಯತೇ ॥ ೧೨ ॥

---

೯. ಸಾತ್ವಿಕ ತಾಮಸ ಎಂದು ಎರಡು ಭಾಗಗಳು (ಅವಿದ್ಯೆಯಲ್ಲಿ.) ಶಾಸ್ತ್ರಾದಿಗಳೆಂಬ ಸಾತ್ವಿಕ ಭಾಗಗಳಿಂದ (ಅಜ್ಞಾನಾದಿ ತಾಮಸ ಭಾಗಗಳನ್ನು ವಿಚಾರಿಸಿ (ತೊಳೆಯಬೇಕು.) ಈ ಎರಡು ಭಾಗಗಳೂ ಹೋದಮೇಲೆ ಆತ್ಮ ಸಾಕ್ಷಾತ್ಕಾರವಾಗುವುದು.

೧೦. ಆತ್ಮನನ್ನೇ ಆತ್ಮನೇ ನೋಡುವನು. ಆತ್ಮನೇ ಆತ್ಮನಿಂದಲೇ ವಿಚಾರಮಾಡುವನು. ಇರುವುದೆಲ್ಲ ಆತ್ಮನೇ! ಅವಿದ್ಯಾ ಎನ್ನುವುದು ಇಲ್ಲವೇ ಇಲ್ಲ ಎಂಬುದು(ಅರ್ಥವಾಗುವು) ದೇ ಅವಿದ್ಯಾಕ್ಷಯವೆನ್ನುವರು.

೧೧. ಎಲ್ಲಿಯವರೆಗೆ ವಸ್ತು ಸ್ವರೂಪವು ನಾನಾ ಎಂಬ ಬುದ್ಧಿಯಿರುವುದೋ ಅಲ್ಲಿಯವರಿಗೂ ಆತ್ಮದರ್ಶನ ಎನ್ನುವುದು ಇಲ್ಲವೇ ಇಲ್ಲ. ಗುರೂಪದೇಶ ಮೊದಲಾದ ಸಂಪ್ರದಾಯಗಳು ಆತ್ಮಜ್ಞಾನಕ್ಕೆ (ಪರಂಪರಾ ಕಾರಣಗಳೇ ಹೊರತು ಪ್ರತ್ಯಕ್ಷ) ಕಾರಣಗಳಲ್ಲ.

೧೨. (ಹಾಗಾದರೆ ಗುರುವು ಅಪ್ರಯೋಜಕನೋ ಎಂದರೆ) ಗುರು ಎನ್ನುವವನು ಇಂದ್ರಿಯಗಳಿಂದ ಸೇರಿರುವ ಆತ್ಮನು. ಆ ಇಂದ್ರಿಯಗಳೆಲ್ಲವೂ ಕ್ಷಯವಾಗಿ ಹೋದರೆ ಬ್ರಹ್ಮವು. ಯಾವುದು ಕ್ಷಯವಾಗುವವರೆಗೂ ವಸ್ತುವು ಪ್ರಾಪ್ತವಾಗುವುದಿಲ್ಲವೋ, ಅದು ಇರುವವರೆಗೂ ವಸ್ತುವು ಲಭಿಸುವುದೆಂತು?

ಅಕಾರಣಾನ್ಯಪಿ ಪ್ರಾಪ್ತಾ ಭೃಶಂ ಕಾರಣತಾಂ ದ್ವಿಜ ।
ಕ್ರಮಾ ಗುರೂಪದೇಶಾದ್ಯಾ ಆತ್ಮಜ್ಞಾನಸ್ಯ ಸಿದ್ಧಯೇ ॥ ೧೩ ॥

ಕ್ರಮೇ ಗುರೂಪದೇಶಾನಾಂ ಪ್ರವೃತ್ತೇ ಶಿಷ್ಯಬೋಧತಃ ।
ಅನಿರ್ದೇಶ್ಯೋಽಪ್ಯ ದೃಶ್ಯೋಽಪಿಸ್ವಯಮಾತ್ಮಾ ಪ್ರಸೀದತಿ ॥ ೧೪ ॥

ಶಾಸ್ತ್ರಾರ್ಥೈರ್ಬುಧ್ಯತೇ ನಾತ್ಮಾ ಗುರೋರ್ವಚನತೋ ನ ಚ ।
ಬುಧ್ಯತೇ ಸ್ವಯಮೇವೈಷ ಸ್ವಬೋಧವಶತಸ್ತತಃ ॥ ೧೫ ॥

ಗುರೂಪದೇಶ ಶಾಸ್ತ್ರಾರ್ಥೈರ್ವಿನಾ ಚಾತ್ಮಾ ನ ಬುಧ್ಯತೇ ।
ಏತತ್ಸಂಯೋಗಸತ್ತೈವ ಸ್ವಾತ್ಮಜ್ಞಾನ ಪ್ರಕಾಶಿನೀ ॥ ೧೬ ॥

---

೧೩. ಎಲೈ ಬ್ರಾಹ್ಮಣನೆ, ಆತ್ಮಜ್ಞಾನ ಪ್ರಾಪ್ತಿಗೆ ಗುರೂಪದೇಶಾದಿ ಸಂಪ್ರದಾಯಗಳು (ಪ್ರತ್ಯಕ್ಷವಾಗಿ) ಅಕಾರಣಗಳೇ ಆದರೂ (ಪರೋಕ್ಷವಾಗಿ) ಕಾರಣಗಳು ಹೌದೇ ಹೌದು.

೧೪. ಗುರೂಪದೇಶಾದಿ ಸಂಪ್ರದಾಯಗಳು ತಮ್ಮ ಕಾರ್ಯದಲ್ಲಿ ಪ್ರವ್ಯಕ್ತವಾಗಿ ಸಫಲವಾಗಲು, ಶಿಷ್ಯನಿಗೆ ಬೋಧವು ಪ್ರಾಪ್ತವಾಗಿ, ಆತ್ಮನು ಅನಿರ್ದೇಶ್ಯನಾದರೂ, ಅದೃಶ್ಯನಾದರೂ, ತಾನೇ ಪ್ರಸನ್ನನಾಗುವನು.

(ಯಮೇವೈಷ ಆತ್ಮಾ ವೃಣುತೇ ತಸ್ಯ ಸ್ವಾಂ ತನುಂ ವಿವೃಣೋತಿಃ-ಶ್ರುತಿಃ)

೧೫. ಆತ್ಮನನ್ನು ಶಾಸ್ತ್ರಾರ್ಥಗಳಿಂದ ತಿಳಿಯಲಾಗುವುದಿಲ್ಲ. ಗುರುವಚನದಿಂದಲೂ, ತಿಳಿಯಲಾಗುವುದಿಲ್ಲ. ತಾನಾಗಿ ಪ್ರಾಪ್ತವಾಗುವ ಸ್ವಬೋಧ ವಶನಾಗಿ ಆತ್ಮನು ತಾನಾಗಿ ತಿಳಿಯಬೇಕು.

೧೬. (ಹಾಗೆಂದು ಅವುಗಳನ್ನು ಬಿಡುವುದಕ್ಕೂ ಇಲ್ಲ, ಏಕೆಂದರೆ) ಆತ್ಮನ (ಸ್ವರೂಪವ) ನ್ನು ಗುರೂಪದೇಶ ಶಾಸ್ತ್ರಾರ್ಥಗಳಿಂದಲೇ ತಿಳಿಯಬೇಕಾಗಿದೆ. ಇವುಗಳ ಸಂಯೋಗವು ಆತ್ಮಜ್ಞಾನವು ಪ್ರಕಾಶವಾಗುವುದಕ್ಕೆ ಕಾರಣವಾಗುವುದು.

ಗುರುಶಾಸ್ತ್ರಾರ್ಥಶಿಷ್ಯಾಣಾಂ ಚಿರಸಂಯೋಗಸತ್ತಯಾ ।
ಅಹನೀವ ಜನಚಾರ ಆತ್ಮಜ್ಞಾನಂ ಪ್ರವರ್ತತೇ ॥ ೧೭ ॥

ಕರ್ಮಬುದ್ಧೀನ್ದ್ರಿಯಾದ್ಯನ್ತ ಸುಖದುಃಖಾದಿ ಸಂಕ್ಷಯೇ ।
ಶಿವ ಆತ್ಮೇತಿ ಕಥಿತಸ್ತತ್ಸದಿತ್ಯಾದಿ ನಾಮಭಿಃ ॥ ೧೮ ॥

ಯತ್ರೇದಮಖಿಲಂ ನಾಸ್ತಿ ತದ್ರೂಪೇಣೈವಚಾಸ್ತಿವಾ ।
ತದಾಕಾಶಾದಚ್ಛತರಮನನ್ತಂ ಸದಿವಾಸ್ತಿ ಹಿ ॥ ೧೯ ॥

ಅವಿಶ್ರಾನ್ತತಯಾ ಯತ್ರ ತನುವಿದ್ಯೈರ್ಮುಮುಕ್ಷುಭಿಃ ।
ವಿಚಿತ್ರಶುದ್ಧ ಮನನಕಲಂಕ ಕಲಿತಾತ್ಮಭಿಃ ॥ ೨೦ ॥

---

೧೭. ಗುರು, ಶಾಸ್ತ್ರಾರ್ಥ, ಶಿಷ್ಯ, ಇವರುಗಳು ಬಹುಕಾಲ ಜೊತೆಯಲ್ಲಿದ್ದರೆ, ಹಗಲು ಹರೆಯುತ್ತಲೂ (ತಾನಾಗಿ ಆಗುವ) ಜನಗಳ ವ್ಯವಹಾರದಂತೆ, ಆತ್ಮಜ್ಞಾನವು ಸ್ವಯಂ ಪ್ರವರ್ತಿಸುವುದು.

೧೮. ಕರ್ಮ, ಬುದ್ಧಿ, ಇಂದ್ರಿಯಗಳು, ಸುಖ ದುಃಖಗಳು ಆದ್ಯಂತವಾಗಿ ಕ್ಷಯಿಸಿ ಹೋದರೆ, ಉಳಿಯುವ ವಸ್ತುವನ್ನೇ ಶಿವ, ಆತ್ಮಾ, ತತ್ಸತ್, ಇತ್ಯಾದಿ ನಾಮಗಳಿಂದ ಬಲ್ಲವರು ಕರೆಯುವರು.

೧೯. ಆದರೆ ಆತ್ಮವ್ಯತಿರಿಕ್ತವಾದ 'ಇದಂ' ಎಂಬುದು ಇಲ್ಲವೇ ಇಲ್ಲ; ಅಥವಾ ಇರುವುದೆಲ್ಲವೂ ಆತ್ಮರೂಪವಾಗಿಯೇ ಇದೆ. ಆ ಆತ್ಮವು ಆಕಾಶಕ್ಕಿಂತಲೂ ಸೂಕ್ಷ್ಮವಾಗಿ ಅನಂತವಾಗಿರುವುದು. (ನಾವು ಇದೆಯೆಂದು ಬುದ್ಧಿಯಿಂದ ಗ್ರಹಿಸುವ ಸದ್ಭಾವಕ್ಕಿಂತ ಬೇರೆಯಾದ) ಸತ್ತಾಗಿ ಅದು ಇರುವುದು.

೨೦. (ಅವಿದ್ಯೆಗೆ ಪ್ರತಿಯಾಗಿ) ಸೂಕ್ಷ್ಮವಾದ (ಬ್ರಹ್ಮವೃತ್ತಿ ಸ್ವರೂಪವಾದ) ವಿದ್ಯೆಯನ್ನು ಆಶ್ರಯಿಸಿರುವ ಮುಮುಕ್ಷುಗಳು ಒಂದೇ ಸಮನಾಗಿ ಬ್ರಹ್ಮವೃತ್ತಿಯಲ್ಲಿದ್ದರೂ ಅವರ ಮನಸ್ಸಿನಲ್ಲಿ ಬ್ರಹ್ಮವು ಜಗದ್ವಿಲಕ್ಷಣವಾದುದು ಎಂಬ ವಿಚಿತ್ರವೂ ಶುದ್ಧವೂ ಆದರೂ, ಮನನವಾದ ಮಾತ್ರದಿಂದಲೇ ಕಲಂಕವಾಗಿರುವ ಕಲ್ಮಷವು ಇರುವುದು.

(ಶಿವಬ್ರಹ್ಮಸದಾದಿ ನಾಮ ಕಲ್ಪನಾಪಿ ಜೀವನ್ಮುಕ್ತಾನಾಂ ಅಧಿಕಾರ

ಅದೂರ ಏವತಿಷ್ಠದ್ಭಿರ್ಜೀವನ್ಮುಕ್ತಸ್ಯ ದೃಕ್ಪಥೇ ।
ಮೋಕ್ಷೋಪಾಸಕ ಬೋಧಾಯ ಶಾಸ್ತ್ರಾರ್ಥರಚನಾಯಚ ॥ ೨೧ ॥

ಬ್ರಹ್ಮೇಂದ್ರರುದ್ರ ಪ್ರಮುಖೈರ್ಲೋಕಪಾಲೈಃ ಸುಪಂಡಿತೈಃ ।
ಪುರಾಣವೇದ ಸಿದ್ಧಾಂತ ಸಿದ್ಧಯೇ ಭಾವಿತಾತ್ಮಭಿಃ ॥ ೨೨ ॥

ಚಿದ್ಬ್ರಹ್ಮ ಶಿವ ಆತ್ಮೇಶ ಪರಮಾತ್ಮೇಶ್ವರಾದಿಕಾ ।
ಏತಸ್ಮಿನ್ಕಲ್ಪಿತಾ ಸಂಜ್ಞಾಂನಿಃಸಜ್ಞೇ ಪೃಥಗೀಶ್ವರೇ ॥ ೨೩ ॥

ಏವಮೇತ ಜ್ಜಗತ್ತತ್ವಂ ಸ್ವಂ ತತ್ತ್ವಂ ಶಿವನಾಮಕಮ್ ।
ಸರ್ವಥಾ ಸರ್ವದಾ ಸರ್ವ ಸರ್ವಂ ಚುತ್ಸುಖಮಾಸ್ವಭೋ ॥ ೨೪ ॥

ಪ್ರಬೋಧನಾಯೈವ ಇತ್ಯಾಹ-ಅವಿಶ್ರಾಂತೇತ್ಯಾದಿನಾ-ಮುಮುಕ್ಷುಭಿಃ ಅಧಿಕಾರಿ ಲೋಚನೇಚ್ಛುಭಿಃ ವಿಚಿತ್ರಸ್ಯ ಜಗತಃ ಶುದ್ಧಸ್ಯ ತತ್ತ್ವಸ್ಯ ಚ ಮನನಂ ತಲ್ಲಕ್ಷಣೋ ಯಃ ಶುದ್ಧಾತ್ಮನಿ ಕಲಂಕಃ ತದ್ಯುಕ್ತಃ ಆತ್ಮಾನುನೋಯೇಷಾಂ—ತಾ. ಪ್ರ.)

೨೧-೨೨-೨೩. ಜೀವನ್ಮುಕ್ತರಾಗಿ ಪರಮಾರ್ಥದ ಸಮೀಪದಲ್ಲಿಯೇ ಇರುವ, ಲೋಕಪಾಲರೂ, ಚೆನ್ನಾಗಿ ತಿಳಿದವರೂ ಆದ ಬ್ರಹ್ಮ, ಇಂದ್ರ, ರುದ್ರ, ಪ್ರಮುಖ ಮಹಾತ್ಮರಿಂದ, ಮೋಕ್ಷವು ಬೇಕೆನ್ನುವವರಿಗೆ ಅರ್ಥವಾಗಲೆಂದೂ ಮೋಕ್ಷಶಾಸ್ತ್ರವನ್ನು ರಚಿಸಲು ಸಾಧ್ಯವಾಗಲೆಂದೂ, ವೇದಶಾಸ್ತ್ರ ಪುರಾಣಗಳಲ್ಲಿ ಹೇಳಿರುವ ಸಿದ್ಧಾಂತವು ಲಭಿಸುವುದಕ್ಕೆ ಸಾಧಕವಾಗಲೆಂದೂ, ಎಲ್ಲದಕ್ಕಿಂತಲೂ ಪ್ರತ್ಯಕ್ ಆಗಿ, ಯಾವು ಗುರುತುಗಳೂ ಇಲ್ಲದ ಬ್ರಹ್ಮದಲ್ಲಿ, ಚಿತ್, ಬ್ರಹ್ಮ, ಶಿವ, ಆತ್ಮಾ, ಈಶ, ಪರಮಾತ್ಮಾ, ಈಶ್ವರ, ಮೊದಲಾದ ಸಂಜ್ಞೆಗಳು ಕಲ್ಪಿತಗಳಾಗಿರುವುವು.

೨೪. ಎಲೈ ವಸಿಷ್ಠ ಮಹರ್ಷಿಯೇ, ಇದೆಯೇ ಜಗತ್ತೆಂಬ ತತ್ವವು. ಶಿವನಾಮಕವಾದ 'ಸ್ವ' ತತ್ತ್ವವೂ ಇದೆ! ಸರ್ವಥಾ (ಹೇಗೆ ಹೇಗೆಯೂ) ಸರ್ವದಾ (ಯಾವಕಾಲದಲ್ಲಾದರೂ) ಸರ್ವ (ಎಲ್ಲೇ ಆದರೂ) ಎಲ್ಲವೂ ಇಷ್ಟೇ! ಅದರಿಂದ ಸುಖವಾಗಿರು.

ಶಿವ ಆತ್ಮಾ ಪರಂ ಬ್ರಹ್ಮೇತ್ಯಾದಿ ಶಬ್ದೈಸ್ತು ಭಿನ್ನತಾ ।
ಪುರಾತನೈರ್ವಿರಚಿತಾ ತಸ್ಯ ಭೇಧೋ ನ ವಸ್ತುತಃ ॥ ೨೫ ॥

ಏವಂ ದೇವಾರ್ಚನಂ ನಿತ್ಯಂ ಜ್ಞಃ ಕುರ್ವನ್ಮುನಿನಾಯಕ ।
ಯತ್ರಾಸ್ಮದಾದಯೋ ಭೃತ್ಯಾಸ್ತತ್ಪ್ರಯಾನ್ತಿ ಪರಂ ಪದಮ್ ॥ ೨೬ ॥

ಶ್ರೀ ವಸಿಷ್ಠ ಉವಾಚ:—

ಅವಿದ್ಯಮಾನಮೇವೇದಂ ವಿದ್ಯಮಾನಮಿವ ಸ್ಥಿತಮ್ ।
ಯಥಾತನ್ಮೇ ಸಮಾಸೇನ ಭಗರ್ವವಮ್ತುಮರ್ಹಸಿ ॥ ೨೭ ॥

ಶ್ರೀ ಈಶ್ವರ ಉವಾಚ:—

ಯೋಽಸೌ ಬ್ರಹ್ಮಾದಿಶಬ್ದಾರ್ಥಃ ಸಂವಿದಂ ವಿದ್ಧಿ ಕೇವಲಮ್ ।
ಸ್ವಚ್ಛಮಾಕಾಶ ಮಪ್ಯಸ್ಯ ಸ್ಥೂಲಂ ಮೇರುರಣೋರಿವ ॥ ೨೮ ॥

---

೨೫. ಶಿವ, ಆತ್ಮ, ಪರಬ್ರಹ್ಮ, ಇತ್ಯಾದಿ ಶಬ್ದಗಳಿಂದ ತೋರುವ ಭಿನ್ನ ಭಿನ್ನತೆಯು ಯಾವುದುಂಟೋ ಅದು ಪುರಾತನರಿಂದ ಆದುದು. ವಸ್ತುತಃ ಯಾವ ಭೇದವೂ ಇಲ್ಲ.

೨೬. ಹೀಗೆ ನಿತ್ಯವೂ ದೇವಾರ್ಚನವನ್ನು ಮಾಡುವವನು, ಎಲೈ ಮುನೀಂದ್ರನೇ, ಎಲ್ಲಿ ನಾವೆಲ್ಲರೂ ಭೃತ್ಯರಾಗಿರುವೆವೋ ಅಂತಹ ಪರಮಪದವನ್ನು ಪಡೆಯುವನು.

ಶ್ರೀ ವಸಿಷ್ಠನು ಹೇಳಿದನು:—

೨೭. ಇಲ್ಲದುದಾದರೂ ಇದ್ದಂತೆಯೇ ಇರುವ ಈ ಸದ್ವಸ್ತು ವಿಷಯವನ್ನು (ಇದುವರೆಗೂ ವಿಸ್ತಾರವಾಗಿ ವ್ಯಾಸದೃಷ್ಟಿಯಿಂದ ಹೇಳಿದೆ. ಈಗ ಅದನ್ನೆಲ್ಲ ಸಂಗ್ರಹಿಸಿ ಸಮಾಸ ದೃಷ್ಟಿಯಿಂದ) ಎಲೈ ಭಗವಂತನೇ, ಹೇಳುವ ದಯೆಮಾಡು.

ಶ್ರೀ ಈಶ್ವರನು ಹೇಳಿದನು:—

೨೮. ಬ್ರಹ್ಮ ಮೊದಲಾದ ಶಬ್ದಗಳಿಂದ ವಾಚ್ಯನಾಗಿರುವ ಅರ್ಥವು ಯಾವುದೋ ಅದು ಕೇವಲ ಸಂವಿತ್ ಸ್ವರೂಪವು. ಸ್ವಚ್ಛವಾದ ಆಕಾಶವೂ ಅದಕ್ಕೆ ಹೋಲಿಸಿದರೆ ಅಣುವಿಗೆ ಹೋಲಿಸಿದ ಮೇರುವಿನಂತೆ ಸ್ಥೂಲವಾಗುವುದು.

ಸಾವೇದ್ಯಮಿಹ ಗಚ್ಛನ್ತಿ ಯಾತಿ ಚಿನ್ನಾಮಯೋಗ್ಯತಾಮ್ ।
ಅಪ್ಯವೇದ್ಯವತೀ ನೂನಮುನ್ಮನ್ಯನ್ತ ಪದಸ್ಥಿತಾ ॥ ೨೯ ॥

ಕ್ಷಣಾದ್ಭವಿತವೇದ್ಯತ್ವಾದಹಂತಾಮನುಗಚ್ಛತಿ ।
ಪುರುಷತ್ವಾತ್ಪುಮಾನ್ಸ್ವಪ್ನೇ ವನವಾರಣತಾಮಿವ ॥ ೩೦ ॥

ಅಸ್ಯಾಹಂತಾದಿರೂಪಾಯಾ ದೇಶತಾಂ ಕಾಲತಾಂ ಗತಾಃ ।
ಸಂಪದ್ಯನ್ತೇತತಃ ಶೂನ್ಯರೂಪಿಣ್ಯಃ ಸಖ್ಯಏವತಾಃ ॥ ೩೧ ॥

ತಾಭಿಃ ಸಂವಲಿತಾ ಸೈವ ಸತ್ತಾ ಜೀವಾಭಿಧಾನಿಕಾ ।
ಭವತಿ ಸ್ಪನ್ದವಿಜ್ಞಾನಾ ಪವನಸ್ಯೇವ ಲೇಖಿಕಾ ॥ ೩೨ ॥

(ಇದಾನೀಂ ವಸಿಷ್ಠಃ ಶುದ್ಧಚಿತಿ ಜೀವಾಭಾವ ತತ್ಸಂಸರಣಾರೋಪ ಕ್ರಮಂ ಜಿಜ್ಞಾಸುಃ ಪೃಚ್ಛತಿ—ಅವಿದ್ಯಮಾನಮಿತಿ (೨೭.) ಉತ್ತರೋತ್ತರಾ ರೋಪೇ ಸ್ಥೌಲ್ಯೋಪಚಯಂ ವಕ್ತುಂ ಪರಮ ಸೂಕ್ಷ್ಮರೂಪಂ ಮೂಲಂ ದರ್ಶ ಯತಿ। ಯೋಽಸಾವಿತಿ। ಮೇರುರಣೋರಿತಿ।ಚಿತ್ ಸೌಕ್ಷ್ಮ್ಯಸ್ಯ ಜಡ ಸೌಕ್ಷ್ಮ್ಯಸ್ಯ ಚ–ಸ್ಪಷ್ಟಮೇವಾಂತರಮಿತಿ ಭಾವಃ (೨೮) ತಾ. ಪ್ರ.)

೨೯. ಚಿತ್ ಯಾವುದೋ ಅದು ವೇದ್ಯವಾಗುವ ಅವಸ್ಥೆಗೆ ಬಂತೆಂದರೆ ಅದಕ್ಕೆ ನಾಮವನ್ನು ಪಡೆಯುವ ಯೋಗ್ಯತೆಯೂ ಬರುವುದು. ಅವೇದ್ಯವಾಗಿ ರುವಾಗ ಅದೇ ಚಿತ್ತೇ ಉನ್ಮನಿಯು ಆಚೆ ಇರುವುದು.

೩೦. ವೇದ್ಯವಾಗಿ ವೇದ್ಯತ್ವವನ್ನು ಕ್ಷಣಮಾತ್ರ ಅನುಭವಿಸುವುದರೊಳ ಗಾಗಿ ಅಹಂತಾ ಆಗಿಬಿಡುವುದು. ಮನುಷ್ಯನು ಸ್ವಪ್ನದಲ್ಲಿ ತನ್ನ ಮನುಷ್ಯತ್ವ ವನ್ನು ಬಿಟ್ಟು ಕಾಡಾನೆಯಾಗುವನಲ್ಲವೇ? ಅದರಂತೆಯೇ ಇದು!

೩೧.. ಅಹಂತಾರೂಪವನ್ನು ಪಡೆದ ಈ ಚಿತ್ತೆಗೆ ಶೂನ್ಯರೂಪಿಣಿಯರಾದ ಶಕ್ತಿಗಳು ಹುಟ್ಟಿ ದೇಶತಾ, ಕಾಲತಾಗಳನ್ನು ಹೊಂದಿ ಸಖಿಯರಾಗುವರು.

೩೨ ಆ ದೇಶತಾ ಕಾಲತಾ ಶಕ್ತಿಗಳಿಂದ ಕೂಡಿರುವ ಆ ಅಹಂತಾ ರೂಪಿಣಿಯಾದ ಚಿತ್ಸತ್ತೆಯೇ ಜೀವ ಎಂಬ ಅಭಿಧಾನವನ್ನು ಹೊಂದುವುದು. ಗಾಳಿಯಲ್ಲಿ ಸುಳಿಯುವ ಸುಳಿಗಾಳಿಯಂತೆ, ಆಗ ಅಲ್ಲಿ ಪ್ರಾಣವೂ ಪ್ರಾಣ ವ್ಯಾಪಾರವೂ ತಲೆದೋರುವುವು.

ಜೀವಶಕ್ತಿಸ್ತಥಾ ಭೂತಾ ನಿಶ್ಚಯೈಕವಿಲಾಸಿನೀ ।
ಬುದ್ಧಿತಾನುಯಾತಾಸಾ ಭವತ್ಯಜ್ಞಪದೇಸ್ಥಿತಾ		॥ ೩೩ ॥

ಶಬ್ದಶಕ್ತ್ಯಾ ಕ್ರಿಯಾಶಕ್ತ್ಯಾ ಜ್ಞಾನಶಕ್ತ್ಯಾನುಗಮ್ಯತೇ ।
ಪ್ರತ್ಯೇಕಂ ಪ್ರಸ್ಫುರತ್ಯಂನ್ತರ ಪ್ರದರ್ಶಿತರೂಪಯಾ		॥ ೩೪ ॥

ಮಿಲಿತ್ವೈಷಗಣಃ ಕ್ಷಿಪ್ರಂ ಸ್ಮೃತಿಂ ಸಮನುಕೂಲಯನ್ ।
ಮನೋ ಭವತಿ ಭೂತಾತ್ಮ ಬೀಜಂ ಸಂಕಲ್ಪಶಾಖಿನಃ		॥ ೩೫ ॥

ಆತಿವಾಹಿಕದೇಹೋಕ್ತಿ ಭಾಜನಂ ತದ್ವಿದುರ್ಬುಧಾಃ ।
ಅನ್ತಸ್ಥಯಾ ಬ್ರಹ್ಮಶಕ್ತ್ಯಾಜ್ಞರೂಪಂ ಸ್ವಾತ್ಮನಾತ್ಮದೃಕ್		॥ ೩೬ ॥

ಸಂಪದ್ಯಮಾನಾ ಏವಾಂ ಸ್ಮಿಶ್ಚೇತಸೀಮಾ ಹಿ ಶಕ್ತಯಃ ।
ಪಶ್ಚಾದಿಹ ಬಹಿಷ್ಠಾಸ್ತಾ ಉದ್ಯನ್ತ್ಯನುದಿತಾಅಪಿ		॥ ೩೭ ॥

---

೩೩. ಹೀಗೆ ಆದ ಜೀವ ಶಕ್ತಿಯು ನಿಶ್ಚಯವನ್ನು ಹಿಡಿದು ವ್ಯಾಪಾರ ಮಾಡುವ ಬುದ್ಧಿಶಕ್ತಿಯಾಗುವುದು. ಅಲ್ಲಿ ಅದಕ್ಕೆ ಅಜ್ಞತ್ವಬರುವುದು.

೩೪. ಆಗ ಅಲ್ಲಿ ತತ್ತ್ವವು ಸ್ಪಷ್ಟವಾಗಿ ಹೊರಗೆ ಕಾಣಿಸದೆ ಒಳಗೆ ಸೇರಿ ಕೊಳ್ಳುವುದು. ಶಬ್ದಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿಗಳು ಆ ಬುದ್ಧಿ ಶಕ್ತಿಯನ್ನು ಹಿಡಿದು ಪ್ರಕಟವಾಗಿ ಬೇರೆಬೇರೆಯಾಗಿ ಸ್ಫುರಣವಾಗುವುವು.

೩೫. ಈ ಗುಂಪು ಸೇರಿಕೊಂಡು ಸ್ಮೃತಿಯೆಂಬ ಹೊಸದೊಂದು ಶಕ್ತಿಯನ್ನು ಸೃಷ್ಟಿಮಾಡಿಕೊಂಡು, ಸಂಕಲ್ಪವೆಂಬ ಮರದ ಬೀಜವಾದ ಮನಸ್ಸು ಆಗುವುದು.

೩೬. "ಇದೆಲ್ಲವೂ ಸೇರಿ ಆತಿವಾಹಿಕದೇಹ ಎನ್ನಿಸಿಕೊಳ್ಳುವುದು. ಅದರೊಳಗೆ ಇರುವ ಬ್ರಹ್ಮಶಕ್ತಿಯಿಂದ ಪ್ರಮಾತೃ (ಜ್ಞ) ರೂಪವನ್ನು ಹೊಂದಿ ತನ್ನ ಬಲದಿಂದ ದೃಕ್ಕಾಗುವುದು.'' ಎಂದು ವಿದ್ವಾಂಸರು ಹೇಳುವರು.

೩೭. (ಹೀಗೆ)ಈ ಚಿತ್ತೆಂಬ ಚೇತಸ್ಸಿನಲ್ಲಿ ಈ ಶಕ್ತಿಗಳು ಪ್ರಾದುರ್ಭವವಾಗಿ ಹೊರಗೆ ಅನುದಿತಗಳೇ ಆಗಿದ್ದರೂ ಬಹಿರ್ಮುಖಗಳಾಗಿ ಉದಿತಗಳಂತೆ ತೋರಿಸಿ ಕೊಳ್ಳುವುವು.

ವಾತಸತ್ತಾ ಸ್ಪನ್ದಸತ್ತಾ ಸ್ಪರ್ಶಸತ್ತಾ ತಥೈವಚ ।
ತ್ವಕ್ಸತ್ತಾ ತೇಜಸಾಂಸತ್ತಾ ತಥಾಸತ್ತಾ ಪ್ರಕಾಶಿನೀ ॥ ೩೮ ॥

ರೂಪಸತ್ತಾ ಜಲಸತ್ತಾ ಸ್ವಾದುಸತ್ತಾ ತಥೈವಚ ।
ತಥೈವರಸಸತ್ತಾ ಚ ಗನ್ಧಸತ್ತಾ ತಥೈವಚ ॥ ೩೯ ॥

ಭೂಸತ್ತಾ ಹೇಮಸತ್ತಾ ಚ ಪಿಂಡಸತ್ತಾ ಚ ಪೀವರೀ ।
ದೇಶಸತ್ತಾ ಕಾಲಸತ್ತಾ ಸರ್ವಾಥ್ಯಾಕಾರ ವರ್ಜಿತಾ ॥ ೪೦ ॥

ಸರ್ವಸತ್ತಾಗಣಂ ಚೈತತ್ಕ್ರೋಡೀಕೃತ್ಯ ಸ್ವರೂಪವತ್ ।
ಸ್ಫುರತ್ಯಾಶ್ರಿತ್ಯ ಪತ್ರಾದಿ ಬೀಜಂ ಬೀಜಾದಿತಾಂ ಗತಮ್ ॥ ೪೧ ॥

ಏತತ್ಪುರ್ಯಷ್ಟಕಂ ವಿದ್ಧಿ ದೇಹೋಽಯಂ ಚಾತಿ ವಾಹಿಕಃ ।
ಅಪಾರ ಬೋಧಮೇತತ್ತು ಸ್ಫುರತ್ಯಂಗ ವಿಭಾಗವತ್ ॥ ೪೨ ॥

೩೮–೩೯. ವಾತ, ಸ್ಪಂದ, ಸ್ಪರ್ಶ, ತ್ವಕ್, ಪ್ರಕಾಶಗೊಳಿಸುವ ತೇಜಸ್, ರೂಪ; ಜಲ, ಸ್ವಾದು, ರಸ, ಗಂಧ, ಮೊದಲಾದ ಸತ್ತಾಗಳಿಗೆಲ್ಲ ಇವೇ ಕಾರಣವಾಗುವುವು.

೪೦. ಭೂ, ಹೇಮ, ಭಾರಿಯಾದ ಪಿಂಡ, ದೇಶ, ಸರ್ವರೂಪಗಳನ್ನು ತರಬಲ್ಲುದಾಗಿದ್ದರೂ ಆಕಾರವರ್ಜಿತವಾದ ಕಾಲ, ಇವುಗಳ ಸತ್ತೆಯೂ ಆಗುವುದು.

೪೧. ಈ ಸರ್ವಸತ್ತಾಗಣವೆಲ್ಲವೂ ಸೇರಿ, ಒಂದು ಆಗಿ, ಮುಂದೆ ಪತ್ರ ಪುಷ್ಪ ಫಲ ಬೀಜಗಳನ್ನು ಬಿಡುವ ಚಿಗುರು ಆದಂತೆ ಆಗುವುದು.

೪೨. ಇದೇ ಪುರ್ಯಷ್ಟಕವು. ಇದೇ ಆತಿವಾಹಿಕ ದೇಹವು. ಅಪಾರ ಜ್ಞಾನ ಸ್ವರೂಪವಾದ ಚಿತ್ತೇ, ಆಹಾ! ವಿಭಾಗಗಳಿಂದ ಕೂಡಿರುವಂತೆ ಕಾಣಿಸುವುದು.

ಏವಮಾದ್ಯಂಗಸಂಪನ್ನ್ಮಂ ಸಂಪನ್ನಂ ನಚ ಕಿಂಚನ ।
ನ ಜ್ಞಾನಂ ನಚ ತದ್ರೂಪಂ ನವಿದಾಚಿತಚೇತನಮ್ ॥ ೪೩ ॥

ಪರಂ ಪರೇ ಪ್ರಸ್ಫುರಿತಂ ಕೇವಲಂ ಕೇವಲಾತ್ಮಸತ್ ।
ಜಲಪೀಠಸ್ಯ ಜಠರೇ ಜಲದ್ರವವಿಲಾಸವತ್ ॥ ೪೪ ॥

ಸಂವಿತ್ಸಂವೇದನೈಕಾತ್ಮ ಪೃಥಗೇತದಚೇತನಮ್ ।
ಸಂಪದ್ಯತೇ ಪರಿಜ್ಞಾತಂ ಸಂಕಲ್ಪನಗರೋಪಮಮ್ ॥ ೪೫ ॥

ಸಂವೇದನಾತ್ಪರಿ ಜ್ಞಾನಾಚ್ಛಿವತಾಮೇವ ಗಚ್ಛತಿ ।
ಅಜ್ಞಾತಮೇವ ವಾ ಯತ್ತತ್ಕಥಂ ಗಚ್ಛತಿ ವಸ್ತುತಾಮ್ ॥ ೪೬ ॥

---

೪೩. ಹೀಗೆ ಅಂಗಾಂಗ ಸಂಪನ್ನವಾದಂತೆ ಕಾಣುತ್ತಿದ್ದರೂ ಈ ಪುರ್ಯಷ್ಟಕವು ನಿಜವಾಗಿಯೂ ಅಂಗಾಂಗ ಸಂಪನ್ನವಲ್ಲ. ಇದು ಜ್ಞಾನವಲ್ಲ: ಜ್ಞಾನರೂಪವಲ್ಲ. ಇದರಲ್ಲಿ ಜ್ಞಾತೃಸ್ವರೂಪನಾದ ಜೀವನಿದ್ದರೂ ಇದು ಚೇತನವಲ್ಲ.

೪೪. ಜಲಪೀಠವಾದ ಸಮುದ್ರದ ಉದರದಲ್ಲಿ ನಡೆಯುವ ಜಲದ ವಿಲಾಸದಂತೆ, ಪರವಸ್ತುವಿನಲ್ಲಿ ಕೇವಲ ಕೇವಲವಾದ ಆತ್ಮಸತ್ತೇ ಸೂಕ್ಷ್ಮವಾಗಿ ಸ್ಫುರಣ ಮಾಡಿದುದರಿಂದ ಇದೆಲ್ಲವೂ ಆಗಿರುವುದು.

೪೫. (ಅದರಿಂದ) ಸಂವಿತ್ತೇ ಸಂವೇದನ ಸ್ವರೂಪವಾಗಿ ತಾನೇ ತಾನಾಗಿರುವುದು. ಅದೇ ಬೇರೆಯಾದಾಗ ಅಚೇತನತ್ವವನ್ನು ಹೊಂದಿದಂತೆ ಆಗುವುದು. ಅದರ ಸ್ವರೂಪವನ್ನು ಪರಾಮರ್ಶಮಾಡಿ ತಿಳಿದರೆ ಅದು ಗಂಧರ್ವನಗರದಂತೆ ಎಂಬುದು ತಿಳಿಯುವುದು.

೪೬. ಸಂವೇದನದಿಂದಲೂ ಪರಾಮರ್ಶದಿಂದಲೂ ಶಿವನಾಗಿ ಉಳಿಯುವ ಈ ವಸ್ತುವು ಅಜ್ಞಾತವಾಗಿದ್ದರೂ ಹಾಗೆಯೇ ಉಳಿಯಬೇಕು. ಹಾಗಿಲ್ಲದೆ ಅಜ್ಞಾತವಾದ ಮಾತ್ರಕ್ಕೇ ಪ್ರತ್ಯೇಕವಾದ ವಸ್ತುವಾಗುವುದು ಹೇಗೆ ?

ಅಥೈತದ್ವಿನ್ನತೇ ಸ್ವಾಂತಃ ಸಂಕಲ್ಪಾದಂಶತಾಂ ಸ್ವತಃ ।
ತನ್ಮಾತ್ರಸತ್ತಾ ತಸ್ಯಾಣೋರೇತಾಂ ಪಶ್ಯತಿ ದೇಹಕೇ ॥ ೪೭ ॥

ಸರ್ವಂ ಸ್ಥೂಲತ್ವಮಾಪನ್ನಂ ತದೇವಾಶು ಪ್ರಪಶ್ಯತಿ ।
ತಸ್ಯ ತನ್ಮಾತ್ರ ರಂಧ್ರಾಣಿ ಯಥಾದೇಶಂ ಪ್ರಪಶ್ಯತಿ ॥ ೪೮ ॥

ತತಃ ಪುರುಷರೂಪೈಕ ಭಾವನಾತ್ಪುರುಷಾಕೃತಿಮ್ ।
ಕಾಕತಾಲೀಯವತ್ ದೃಷ್ಟ್ವಾ ತುಷ್ಟಂ ಪುಷ್ಟಂ ಭವತ್ಯಲಮ್ ॥ ೪೯ ॥

ಜೀವದೇತ ದವಸ್ಥಾಕಂ ಸ್ಥಿತಂ ಪಶ್ಯತಿ ದೇಹಕಮ್ ।
ಅಸನ್ಮಯೇವ ಗಂಧರ್ವಪುರಂ ಸ್ವಪ್ನನರಂ ಯಥಾ ॥ ೫೦ ॥

---

೪೭. ಈ ಪುರ್ಯಷ್ಟಕವು ತನ್ನೊಳಗೇ ಮಾಡಿಕೊಂಡ ಸಂಕಲ್ಪದಿಂದ ಅಂಶತ್ವವನ್ನು ತಾನೇ ಹೊಂದುವುದು. ಆ ಪರಮ ಸೂಕ್ಷ್ಮವಾದ ಚಿತ್ತಿನ ತನ್ಮಾತ್ರ ಸತ್ತೆಯು ಆಗ ಆ ಅಂಶತ್ವವನ್ನು ದೇಹವನ್ನಾಗಿ ಕಾಣುವುದು.

[ತನ್ಮಾತ್ರಗಳೆಂದರೆ ಪಂಚಭೂತಗಳ ಸೂಕ್ಷ್ಮರೂಪಗಳು.]

೪೮. ಆಕೂಡಲೇ ಆಪುರ್ಯಷ್ಟಕಕ್ಕೆ ಸರ್ವವೂ ಸ್ಥೂಲವಾಗಿರುವಂತೆ ಕಾಣುವುದು. ಆಗ ತನ್ಮಾತ್ರಗಳಿಂದ ಆದ ರಂಧ್ರಗಳು ಇಂದ್ರಿಯಗೋಲಕಗಳಾಗಿ ತಮ್ಮ ತಮ್ಮ ಸ್ಥಾನದಲ್ಲಿರುವುದನ್ನು ಪುರ್ಯಷ್ಟಕವು ಕಾಣುವುದು ; (ಎಂದರೆ ಏಕರೂಪವಾಗಿದ್ದ ಪ್ರಾಣ ಸ್ಪಂದ ವ್ಯಾಪಾರವು ಇಂದ್ರಿಯ ಗೋಲಕಗಳಲ್ಲಿ ಸೇರಿ ಪಂಚಧಾ ಆಗುವುದು.)

೪೯. ಅಲ್ಲಿ ತಾನು ಮನುಷ್ಯನು (ಮುಂತಾಗಿ) ಭಾವಿಸಿಕೊಳ್ಳುವುದರಿಂದ ಪುರುಷ (ಆದಿ) ಆಕೃತಿಯನ್ನು (ಪಡೆಯುವುದು. ಹೀಗೆ ಸ್ವಸಂಕಲ್ಪವಾಗಿ ಬಂದ ಆಕೃತಿಯನ್ನು) ಕತಾಕಾಲೀಯವಾಗಿ ಪಡದೆನೆಂದುಕೊಂಡು ಬಹು ಸಂತೋಷಪಟ್ಟುಕೊಳ್ಳುವುದು.

೫೦. ಹೀಗೆ ಪುರ್ಯಷ್ಟಕವು ಪ್ರಾಣ ವ್ಯಾಪಾರದಿಂದ ಬದುಕಿರುವ ದೇಹವನ್ನು ಕಾಣುವುದು, ಈ ದೇಹವು ನಿಜವಾಗಿಯೂ ಗಂಧರ್ವಪುರದಂತೆಯೂ ಸ್ವಪ್ನದಲ್ಲಿ ಕಾಣುವ ಮನುಷ್ಯನಂತೆಯೂ ಅಸತ್ತಾಗಿಯೇ ಇರುವುದು.

ಶ್ರೀ ವಸಿಷ್ಠ ಉವಾಚ:—

ಗಂಧರ್ವನಗರಾಕಾರಮಪಿ ಸ್ವಪ್ನನರೋಪಮಮ್ ।
ಜಗದ್ದುಃಖಾಯ ದುಃಖಸ್ಯ ಕಾತ್ರ ಯುಕ್ತಿಃ ಪರಿಕ್ಷಯೇ ॥ ೫೧ ॥

ಶ್ರೀ ಈಶ್ವರ ಉವಾಚ:—

ವಾಸನಾವಶತೋ ದುಃಖಂ ವಿದ್ಯಮಾನೇ ಚ ಸಾ ಭವೇತ್ ।
ಅವಿದ್ಯಮಾನಂಚ ಜಗನ್ಮೃಗ ತೃಷ್ಣಾಂಬು ಭಂಗವತ್ ॥ ೫೨ ॥

ಅತಃ ಕಿಂವಾಸ್ಯತೇಕೇನ ಕಸ್ಯ ವಾ ವಾಸನಾ ಕುತಃ ।
ಕಥಂ ಸ್ವನರೇಣಾಂ ಮೃಗತೃಷ್ಣಾಂಬು ಪೀಯತೇ ॥ ೫೩ ॥

ಸದ್ರುಷ್ಟುರಿ ಸಾಹಂತೇ ಸಮನೋ ಮನನಾದಿಕೇ ।
ಅವಿದ್ಯಮಾನೇ ಜಗತಿ ಯತತ್ತತ್ಪರಿದೃಶ್ಯತೇ ॥ ೫೪ ॥

ಶ್ರೀ ವಸಿಷ್ಠನು ಕೇಳಿದನು:—

೫೧ ಈ ಜಗತ್ತು (ನೀನು ಹೇಳಿದಂತೆ) ಗಂಧರ್ವನಗರದಂತೆಯೂ ಸ್ವಪ್ನ ಮನುಷ್ಯನಂತೆಯೂ ಇದ್ದರೂ ದುಃಖ ಫಲವನ್ನು ಕೊಡುವುದು: ದುಃಖಕ್ಕೆ ಕಾರಣವಾಗಿರುವುದು. ಇದನ್ನು ಪರಿಹರಿಸಿಕೊಳ್ಳಲು ಉಪಾಯವೇನು?

ಶ್ರೀ ಈಶ್ವರನು ಹೇಳಿದನು:-

೫೨. ದುಃಖವೆನ್ನುವುದು ವಾಸನಾವಶದಿಂದ ತೋರುವ ಮನೋಭಾವವು. ಅದು ಇದ್ದರಲ್ಲವೇ ಅದಕ್ಕೆ ಪರಿಹಾರವನ್ನೂ ಸೂಚಿಸುವುದು? ಮೃಗ ತೃಷ್ಣೆಯು ಜಗತ್ತೇ ಇಲ್ಲದಿರಲು ಇದಕ್ಕೆ ಪರಿಹಾರೋಪಾಯವನು ಸೂಚಿಸುವುದು ಜಲವನ್ನು ಓಡಿಸುವುದು ಹೀಗೆ ಎಂಬತಾಂಗುವುದು.

೫೩. ಅದರಿಂದ ಈ ದುಃಖದಿಂದ ನಿನಗೇನು ಹಾನಿ? ವಾಸನಾ ಎನ್ನುವುದು ತಾನೇ ಯಾರಿಂದ, ಯಾರಿಗೆ, ಎಲ್ಲಿಂದ ಬಂತು? ಆಹಾ! ಸ್ವಪ್ನಮನುಷ್ಯನು ಮೃಗತೃಷ್ಣಿಕೆಯ ನೀರನ್ನು ಕುಡಿದನೆಂಬಂತಾಯಿತು!

೫೪. ನೋಡುವವನು ಒಬ್ಬನಿದ್ದರೆ, ಅವನಿಗೆ ಅಹಂ ಎಂಬುದೂ, ಮನಸ್ಸು ಮನನಗಳೂ ಇದ್ದರೆ, ಜಗತ್ತೂ ಇದ್ದೀತು. ಇವೆಲ್ಲವೂ ಕೂಡಿದ ಜಗತ್ತೇ

ಯತ್ರನೋ ವಾಸನಾ ನೈವ ವಾಸಕೋ ನೈವ ವಾಸ್ಯತಾ ।
ಕೇವಲಂ ಕೇವಲೀ ಭಾವಃ ಸಂಶಾನ್ತ ಕಲನಭ್ರಮಃ ॥ ೫೫ ॥

ಯಸ್ಯಸತ್ಯೋಽಪ್ಯಸತ್ಯೋಽವಾ ಶೂನ್ಯ ಏವ ಹಿ ಯಕ್ಷಕಃ ।
ವಿಲೀನಸ್ತಸ್ಯ ಕೈವಲ್ಯಾತ್ಕಿ ಮನ್ಯದವಶಿಷ್ಯತೇ ॥ ೫೬ ॥

ಶೂನ್ಯ ಏವ ಹಿ ವೇತಾಲ ಇವೇತ್ಥಂ ಚಿತ್ತ ವಾಸನಾ ।
ಉದಿತೇಯಂ ಜಗನ್ನಾಮ್ನಿ ತಚ್ಛಾಂತೌ ಶಾನ್ತಿರಕ್ಷತಾ ॥ ೫೭ ॥

ಅಹಂತಾಯಾಂ ಜಗತಿ ಚ ಮೃಗತೃಷ್ಣಾ ಜಲೇ ಚ ಯಃ ।
ಸಾಸ್ಥಸ್ತಂ ಧಿಕ್ ಹ ತನರಂ ನೋಪದೇಶ್ಯಸ್ತ್ವಸಾವಿತಿ ॥ ೫೮ ॥

ಇಲ್ಲದಿರುವಾಗ, ಯಾವುದು ಇರುವುದೋ ಆ ಬ್ರಹ್ಮವೊಂದೇ ಕಾಣುವುದು (ಎನ್ನ ಬೇಕು).

೫೫. ಎಲ್ಲಿ ವಾಸನೆ ಇಲ್ಲವೋ, ವಾಸಕನು (ವಾಸನಾ ಸಹಿತನಾದವನು) ಎಲ್ಲಿ ಇಲ್ಲವೋ ವಾಸ್ಯತಾ (ವಾಸನಾ ವಶವಾಗುವಿಕೆ) ಎಲ್ಲಿ ಇಲ್ಲವೋ, ಅಲ್ಲಿ ಸಂಕಲ್ಪಬ್ರಹ್ಮವು ಸಂಶಾಂತವಾಗಿರುವುದರಿಂದ ಕೇವಲವಾದ ಕೇವಲೀ ಭಾವ ವೊಂದೇ ಉಳಿಯುವುದು.

೫೬. ಯಕ್ಷನು ಸತ್ಯವೇ ಆಗಿರಲಿ ಅಸತ್ಯವೇ ಆಗಿರಲಿ, ಯಕ್ಷನಿಲ್ಲ ವೆಂದು ತಿಳಿದಿರುವ ಪ್ರೌಢನಾದ ಯಾವನಿಗೆ ವಿಲೀನನಾಗಿ ಹೋಗಿರುವನೋ ಅಂತಹವನಿಗೆ ಕೈವಲ್ಯವಲ್ಲದೆ ಇನ್ನೇನು ತಾನೇ ಉಳಿದೀತು ?

೫೭. ಶೂನ್ಯದಲ್ಲಿಯೇ ಕಾಣಿಸುವ ವೇತಾಲನಂತೆ, ಚಿತ್ತವಾಸನೆಯು ಶೂನ್ಯದಲ್ಲಿಯೇ ಹುಟ್ಟುವುದು. ಈ ವಾಸನೆಗೇ ಜಗತ್ತೆಂಬ ಹೆಸರು. ಅದು ಶಾಂತಿ ಯಾದರೆ ಶಾಂತಿಯು ತಾನೇ ತಾನಾಗುವುದು.

೫೮. ಅಹಂತೆಯನ್ನೂ, ಜಗತ್ತನ್ನೂ, ಮೃಗತೃಷ್ಣಾ ಜಲವನ್ನೂ ಯಾವನು ಉಂಟೆಂದುಕೊಂಡು ಅವುಗಳಲ್ಲಿ ಆಸ್ಥೆಪಡುವನೋ, ಅಂತಹವನು ಹತನು. ಅವನು ಉಪದೇಶಕ್ಕೆ ಅರ್ಹನಲ್ಲ.

ಜೀವಂ ವಿವೇಕಿನಮಿಹೋಪದಿಶನ್ತಿ ತಜ್ಞಾ ।
ನೋ ಬಾಲಮುದ್ಭ್ರಮಮಸನ್ಮಯ ಮಾರ್ಯಮುಕ್ತಮ್ ।
ಅಜ್ಞಂ ಪ್ರಶಾಸ್ತಿ ಕಿಲ ಯಃ ಕನಕಾವದಾತಾಂ ।
ಸ ಸ್ವಪ್ನದೃಷ್ಟಪುರುಷಾಯ ಸುತಾಂ ದದಾತಿ ॥ ೫೯ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ "ಜಗನ್ಮಿಥ್ಯಾತ್ವ ಪ್ರತಿಪಾದನಂ" ನಾಮ ಏಕಚತ್ವಾರಿಂಶಃ ಸರ್ಗಃ

---

೫೯. ಬಲ್ಲವರು ವಿವೇಕಿಯಾದ ಪುರುಷನಿಗೇ ಉಪದೇಶವನ್ನು ಹೇಳುವರು. ಬಾಲಸದೃಶನಾಗಿ, ಉದ್ಭ್ರಾಂತಿ ಯುಳ್ಳವನಾಗಿ, ಅಸತ್ತನ್ನು ನಂಬಿದವನಾಗಿ, ಅನಾರ್ಯನಾಗಿ, ಇರುವ ಅಜ್ಞನಿಗೆ ಯಾವನಾದರೂ ಉಪದೇಶ ಕೊಡುವುದಾದರೆ ಅವನು ತಾನು ಸ್ವಪ್ನದಲ್ಲಿ ಕಂಡವನಿಗೆ, ಕನಕಾಭರಣ ಭೂಷಿತಳಾದ ಮಗಳನ್ನು ಕೊಟ್ಟವನಾಗುವನು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಜಗನ್ಮಿಥ್ಯಾತ್ವ ಪ್ರತಿಪಾದನ" ಎಂಬ
ನಾಲ್ವತ್ತೊಂದನೆಯ ಸರ್ಗವು

ದ್ವಿಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ತತಃ ಸಜೀವೋ ಭಗವನ್ ದೃಷ್ಟ ವಾನ್ದೇಹಸಂಭ್ರಮಮ್ ।
ಆದಿಸರ್ಗೇ ನಭಃಸಂಸ್ಥಃ ಕಾಮವಸ್ಥಾಮುಪೈತಿ ಹಿ ॥ ೧ ॥

ಶ್ರೀ ಈಶ್ವರ ಉವಾಚ:—

ಪರಸ್ಮಾತ್ಪರಮೇ ವ್ಯೋಮ್ನಿ ಪೂರ್ವೋಕ್ತ ಕ್ರಮತೋ ವಪುಃ ।
ಜಿವಃ ಪಶ್ಯತಿ ಸಂಪನ್ನಂ ಸ ಚ ಸ್ವಪ್ನನರೋ ಯಥಾ ॥ ೨ ॥

ನಾಲ್ವತ್ತೆರಡನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧. ದೇಹಸಂಭ್ರಮವನ್ನು ಪಡೆದ ಆ ಜೀವನು ಆದಿಸೃಷ್ಟಿಯಲ್ಲಿ ಆಕಾಶ ಸಂಸ್ಥನಾಗಿರುವನಲ್ಲ, ಆಗ ಅವನ ಅವಸ್ಥೆಯು ಯಾವುದು ?

(ಉತ್ಪತ್ತಿ ಪ್ರಕರಣದ ಆಕಾಶಜೋಪಾಖ್ಯಾನವನ್ನು ಇಲ್ಲಿ ಚಿಂತಿಸಿ.)

ಶ್ರೀ ಈಶ್ವರನು ಹೇಳಿದನು :—

೨. ಪರಕ್ಕಿಂತಲೂ ಪರವಾಗಿರುವ ಆಕಾಶದಲ್ಲಿ ಹಿಂದೆ ಹೇಳಿದಂತೆ, ದೇಹವು ಬಂತೆಂದುಕೊಂಡ ಜೀವನು ಸ್ವಪ್ನಮನುಷ್ಯನಂತೆಯೇ ಎಂದು ತಿಳಿ.

(ಸ್ವಪ್ನನರೋ ಯಥಾ ಸೂಕ್ಷ್ಮತಮನಾಡೀಷು ವಿಸ್ತೃತತಮಂ ಬ್ರಹ್ಮಾಂಡಂ ಪಶ್ಯತಿ ತದ್ವತ್ ಪರಮ ಸೂಕ್ಷ್ಮೇ ಚಿದಾಕಾಶೇಽಪಿ ಸ ಚ–ಜೀವಃಪಶ್ಯತೀತ್ಯರ್ಥಃ:–
—ತಾ. ಪ್ರ.)

ಸರ್ವಗತ್ವಾಚ್ಚಿದ್ಘನಸ್ಯ ಕಾರ್ಯಂ ಸ್ವಪ್ನನರೋಽಪಿ ಹಿ ।
ಯಥಾಕರೋತ್ಯಾಶು ತಥಾ ಜೀವೋದ್ಯಾಪಿ ಶರೀರಧೃಕ್ ॥ ೩ ॥

ಸನಾತನೋಽಹಮವ್ಯಕ್ತಃ ಪುಮಾನಿತ್ಯಭಿಧಾಂ ತತಃ ।
ಕರೋತ್ಯಾತ್ಮನಿ ತೇನಾಶು ಪ್ರಥಮಃ ಪ್ರಥಿತಃ ಪುಮಾನ್ ॥ ೪ ॥

ಏವಂ ಸ ಸರ್ಗೇ ಕಸ್ಮಿಂಶ್ಚಿತ್ಪ್ರಥಮೋಽಥ ಸದಾಶಿವಃ ।
ಕಸ್ಮಿಂಶ್ಚಿದ್ವಿಷ್ಣುರಿತ್ಯುಕ್ತೋ ನಾಭ್ಯುತ್ಪನ್ನಃ ಪಿತಾಮಹಃ ॥ ೫ ॥

ಪಿತಾಮಹಃ ಸ ಕಸ್ಮಿಂಶ್ಚಿತ್ಕಸ್ಮಿಂಶ್ಚಿದಪಿ ಚೇತರಃ ।
ಸ ಚ ಸಂಕಲ್ಪಪುರುಷಃ ಸಂಕಲ್ಪಾನ್ಮೂರ್ತಿಮಾಸ್ಥಿತಃ ॥ ೬ ॥

---

೩. ಚಿದ್ಘನವು ಎಲ್ಲೆಲ್ಲಿಯೂ ಇರುವುದರಿಂದ, ಸ್ವಪ್ನಮನುಷ್ಯನು ಕಾರ್ಯಗಳನ್ನು ಮಾಡುವಂತೆಯೇ ಶರೀರಧಾರಿಯಾದ ಜೀವನೂ ಈಗಲೂ ಕಾರ್ಯಮಾಡುತ್ತಿರುವನು.

೪. ಸನಾತನನು ನಾನು, ನಾನು ಅವ್ಯಕ್ತನು, ನಾನು ಪುರುಷನು ಎಂದುಕೊಳ್ಳುವನು. ಅದರಿಂದ ಹಾಗೆ ಮೊದಲು ಸೃಷ್ಟಿಯಾದ ಜೀವನು ಪ್ರಥಮಜ ಪುರುಷನೆಂದು ಕೊಳ್ಳುವನು.

(ಸ ಏವ ಆದಿಸರ್ಗೇ ಸಮಷ್ಟ್ಯುಪಾಧಿಕೋ ಹಿರಣ್ಯಗರ್ಭಾಖ್ಯಃ ಸ್ವಾತ್ಮನಿ ಬಾಹ್ಯವಸ್ತುಷು ಚ–ನಾಮಭೇಧಮಪಿ ಕಥಯತೀತ್ಯರ್ಥ :—ತಾ.ಪ್ರ)

೫. ಹೀಗೆ ಯಾವುದೋ ಒಂದು ಕಲ್ಪದಲ್ಲಿ ಸದಾಶಿವನು ಆ ಪ್ರಥಮ ಪುರುಷನಾಗುವನು. ಇನ್ನೊಂದರಲ್ಲಿ ವಿಷ್ಣುವಾಗುವನು. ಆತನ ನಾಭಿಯಲ್ಲಿ ಪಿತಾಮಹನಾದ ಚತುರ್ಮುಖನು ಉದಯಿಸುವನು.

೬. ಆ ಪಿತಾಮಹನೇ ಒಂದೊಂದು ಕಲ್ಪದಲ್ಲಿ ಪ್ರಥಮಜ ಪುರುಷನಾಗುವನು, ಮತ್ತೊಂದು ಕಲ್ಪದಲ್ಲಿ ಇನ್ನೊಬ್ಬ ಪ್ರಥಮಜ ಪುರುಷನಾಗುವನು. ಆ ಸಂಕಲ್ಪ ಪುರುಷನು ಸಂಕಲ್ಪದಿಂದಲೇ ಆಕಾರವನು ಹೊಂದುವನು.

ಪೃಷ್ಟಃ ಪ್ರಥಮಸಂಕಲ್ಪಸ್ತಾಂ ಮನೋಮೂರ್ತಿಮಾಸ್ಥಿತಃ ।
ಯದ್ಯಥಾ ಕಲ್ಪಯತ್ಯಾಶು ತತ್ತಥಾನುಭವತ್ಯಲಮ್ ॥ ೭ ॥

ತತ್ತು–ಅಸದ್ರೂಪಮಖಿಲಂ ಶೂನ್ಯವೇತಾಲಕೋ ಯಥಾ ।
ಭ್ರಮದೃಷ್ಟ್ಯಾತು ಸದ್ರೂಪಮಿತ್ಯಹನ್ತಾ ಜಗದ್ಗತೇ: ॥ ೮ ॥

ದೃಷ್ಟಾದಿಪುರುಷಸ್ತ್ವೇವಂ ಸ್ವಯಂ ಸ ಪದ್ಯತೇ ಹಿ ಯಃ ।
ಸನಿಮೇಷಂ ಪ್ರತಿವ್ಯೋಮ ಸಮುದೇತ್ಯಥ ನೀಯತೇ ॥ ೯ ॥

ನಿಮೇಷ ಏವಕಲ್ಪೋ ಯೋ ಮಹಾಕಲ್ಪಪರಂಪರಾಮ್ ।
ಪ್ರತಿಭಾಗವಿಪರ್ಯಾಸ ಮಾತ್ರೇಣಾನುಭವತ್ಯಲಮ್ ॥ ೧೦ ॥

---

೭. ಹೀಗೆ ಬೆಳೆದ ಆ ಪ್ರಥಮ ಸಂಕಲ್ಪವು ಒಂದು ಮನೋಮಯವಾದ ಆಕಾರವನ್ನು ಪಡೆದು, ಹೇಗೆ ಹೇಗೆ ಸಂಕಲ್ಪ ಮಾಡುವುದೋ ಹಾಗೆ ಹಾಗೆ ಆಗುವುದು. (ಅದದನ್ನು ಅನುಭವಿಸುವುದು)

೮. ಇಷ್ಟಾದರೂ ಆ ರೂಪವು ಶೂನ್ಯದಲ್ಲಿ ಕಂಡುಬರುವ ವೇತಾಲನಂತೆ ಪೂರ್ಣವಾಗಿ ಅಸತ್ತೇ ! ಭ್ರಮದೃಷ್ಟಿಯುಳ್ಳವರಿಗೆ, ಅಹಂತಾರೂಪವಾದ ಜಗತ್ತಿನ ಪವಾಹವು ಸದ್ರೂಪವಾಗಿ ತೋರುವುದು.

೯. ದ್ರಷ್ಟೃ, ಮೊದಲಾದ ನಾಮಗಳಿಂದ ವ್ಯವಹಾರ ಮಾಡಿಸಿಕೊಳ್ಳುವ ಪುರುಷನು ಹೀಗೆ ತನ್ನ ಸೃಷ್ಟಿಯನ್ನು ತಾನು ಕಂಡು ದ್ರಷ್ಟೃವಾಗುವನು. ಅವನೇ ಒಂದೇ ನಿಮಿಷದಲ್ಲಿ ಚಿದಾಕಾಶನಾಗುವನು. ಇನ್ನೊಂದು ನಿಮಿಷದಲ್ಲಿ (ತನ್ನನ್ನು ಮರೆತ ನಿಮಿಷದಲ್ಲಿ) ಸಂಸಾರಗಳಲ್ಲಿ ಸಿಕ್ಕಿ ಕೊಚ್ಚಿ ಹೋಗುವನು.

೧೦. ನಿಮಿಷವೇ ಕಲ್ಪವು. ಅದೇ ಪ್ರತಿಭಾಸ ವಿಪರ್ಯಾಸಗಳಿಂದ ಮಹಾಕಲ್ಪಪರಂಪರೆಯಾಗುವರು.

(ಪ್ರತಿಭಾಸ ಎಂದರೆ ಒಂದು ರೂಪದಲ್ಲಿ ತೋರುವುದು : ವಿಪರ್ಯಾಸ ಎಂದರೆ ಅದಕ್ಕೆ ಪ್ರತಿಯಾಗಿ ತೋರುವುದು)

ಪರಮಾಣೌ ಪರಮಾಣೌ ವ್ಯೋಮ್ನಿ ವ್ಯೋಮ್ನಿ ಕ್ಷಣೇ ಕ್ಷಣೇ ।
ಸರ್ಗಕಲ್ಪ ಮಹಾಕಲ್ಪ ಭಾವಾಭಾವಾ ಭವನ್ತಿ ತೇ ॥ ೧೧ ॥

ದೃಶ್ಯಂತೇ ಕೇಚಿದನ್ಯೋನ್ಯಂ ಸಾಧರ್ಮ್ಯಾದ್ವಾಸನಾಗತೇಃ ।
ಮಿಥಃಕೇಚಿನ್ನ ದೃಶ್ಯಂತೇ ದೃಷ್ಟೇನಾಥ ಸದಾತ್ಮನಾ ॥ ೧೨ ॥

ಸರ್ಗಾಃ ಸರ್ಗೇಣ ಸರ್ವತ್ರ ಸಂಭವಂತಿ ನ ತೇ ಶಿವೇ ।
ಭವನ್ತಿ ಪರಮೇ ವ್ಯೋಮ್ನಿ ವ್ಯೋಮರೂಪಾ ಇತಿ ಸ್ವಯಮ್ ॥ ೧೩ ॥

ಸ್ವಯಂ ಚ ಸದಸದ್ರೂಪಾ ಲೀಯನ್ತೇ ಸ್ವಪ್ನಶೈಲವತ್ ।
ಸರ್ಗೈರ್ನದೇಶ ಆಕ್ರಾನ್ತೋ ನ ಚ ಕಾಲೋ ನ ಕರ್ತೃತಾ ॥ ೧೪ ॥

---

೧೧. ಪರಮಾಣು ಪರಮಾಣುವಿನಲ್ಲಿಯೂ ಆಕಾಶ ಆಕಾಶದಲ್ಲಿಯೂ ಕ್ಷಣ ಕ್ಷಣದಲ್ಲಿಯೂ, ಸ್ವರ್ಗ, ಕಲ್ಪ, ಮಹಾಕಲ್ಪಗಳ ಭಾವಅಭಾವಗಳು ಆಗುತ್ತಲೇ ಇವೆ.

(ವ್ಯೋಮ್ನಿ ಸೂಚೀ ಛಿದ್ರಾದ್ಯಾಕಾಶೇಽಪಿ-ತಾ. ಪ್ರ.)

೧೨. ಕೆಲವು ಒಂದೇ ಜಾತಿಯ ವಾಸನೆಗಳುಳ್ಳವಾಗಿ ಒಂದಕ್ಕೊಂದು ಅನ್ಯೋನ್ಯವಾಗಿರುವಂತೆಯೂ, ಇನ್ನು ಕೆಲವು ಅಂತಹ ವಾಸನಾ ಧರ್ಮವಿಲ್ಲದುದರಿಂದ ಹಾಗೆ ಕಾಣದೆಯೂ ಇರುವುವು.

(ಐಂದವೋಪಾಖ್ಯಾನವನ್ನು ಸ್ಮರಿಸಿ.)

೧೩. ಸರ್ಗಗಳು ಜೀವನಿಗೆ ಉಂಟೇ ಹೊರತು ಶಿವನಿಗೆ ಇಲ್ಲ. ಈ ಸರ್ಗಗಳು ಆಗುವುದೆಲ್ಲ ಚಿದಾಕಾಶದಲ್ಲಿ ಆಗುವುದು. ಅವೂ ವ್ಯೋಮ ರೂಪವಾಗಿಯೇ ಇರುವುವು.

೧೪. ಈ ಸೃಷ್ಟಿಗಳೆಲ್ಲವೂ (ವ್ಯವಹಾರಕಾಲದಲ್ಲಿ ಇದ್ದು ಪರಮಾರ್ಥವಾಗಿ ಇಲ್ಲವಾದ್ದರಿಂದ) ಸತ್-ಅಸತ್ ರೂಪಗಳು. ಸ್ವಪ್ನದಲ್ಲಿ ಕಂಡ ಬೆಟ್ಟದಂತೆ ತಮಷ್ಟಕ್ಕೆ ತಾವೇ ಲೀನವಾಗಿ ಹೋಗುವುವು. ಅದರಿಂದ ಇಂತಹ ಸೃಷ್ಟಿಗಳು

ನಚೈತೇ ಸತ್ಸ್ವರೂಪಾ ವಾ ನ ಕಲ್ಪ್ಯಂ ನಾಪಿ ಚ ಕ್ಷಣಃ ।
ನ ಭೇದಂ ಜಾಯತೇ ಕಿಂಚಿನ್ನ ಚ ಕಿಂಚನ ನಶ್ಯತಿ ॥ ೧೫ ॥

ಯಾವ ದೇಶವನ್ನೂ ಹಿಡಿಯಲಿಲ್ಲ: ಯಾವ ಕಾಲವನ್ನೂ ಹಿಡಿಯಲಿಲ್ಲ: ಅವುಗಳಲ್ಲಿ ಯಾವ (ಯಾರ) ಕರ್ತೃತ್ವವೂ ಇಲ್ಲ.

(ನನು ಸರ್ಗಾ ಬ್ರಹ್ಮ ಸತ್ತಾ ನಿರಪೇಕ್ಷಾಃ ಸ್ವಸತ್ತಯಾ ವಾ ದೇಶಕಾಲ ಸಂಬಂಧ ಬಲ ಲಬ್ಧ ಸತ್ತಯಾ ವಾ ಸಂತು. (ಇತಿಚೇತ್) ತತ್ರಾಹ-ಸ್ವಯಂ ಚೇತಿ-ಸದಸದ್ರೂಪಾ ನೈಕತರನಿಯತ ಸ್ವಭಾವಾಃ। ಏವಂ ದೇಶಃ ಕಾಲಶ್ಚ ಸರ್ಗೈಃ ಪ್ರಾಙ್ನಾಕ್ರಾಂತಃ। ತಯೋರಪಿ ಸರ್ಗಾಂತರ್ಗತತ್ವಾತ್ ಸರ್ಗಸಾಪೇಕ್ಷರೂಪತ್ವೇನ ಸರ್ಗಾಧೀನ ಕಲ್ಪನತ್ವಾಚ್ಚ ಇತ್ಯರ್ಥಃ।ತರ್ಹಿ ಸರ್ಗಏವ ಸ್ವಸ್ಯಕಾಲಾದಿ ಸಂಬಂಧರೂಪಮನ್ಯಾದೃಶಂ ವಾ ಸತ್ವಂ.ಕರೋತು (ಇತಿಚೇತ್) ತತ್ರಾಹ-ನ ಕರ್ತೃತೇತಿ। ಸರ್ಗಾಣಾಮಿತಿ ಪರಿಣಾಮೇನ ಅನುಷಂಗಃ —ತಾ. ಪ್ರ)

೧೫. ಈ ಸೃಷ್ಟಿಗಳು ಯಾವವೂ ಸತ್ಸ್ವರೂಪಗಳಲ್ಲ. ಅವುಗಳಿಗೆ ಪ್ರತ್ಯೇಕವಾದ ಸ್ವರೂಪವೊಂದಿದೆಯೆಂದು ಕಲ್ಪಿಸುವುದೂ ಸಾಧ್ಯವಿಲ್ಲ. ಅವು ಒಂದು ಕ್ಷಣಕಾಲವೂ ಸತ್ ಆಗಿರಲು ಸಾಧ್ಯವಿಲ್ಲ. ಅದರಿಂದ 'ಇದಂ' ಎನ್ನಿಸಿಕೊಳ್ಳುವ ದೃಶ್ಯ ಜಾತವು ಹುಟ್ಟುವುದು ಎನ್ನುವುದೇ ಇಲ್ಲ: ಅದರಿಂದ ಸಾಯುವುದು ಎನ್ನುವುದೂ ಇಲ್ಲ.

(ತರ್ಹಿ ಸರ್ಗಾಃ ಸ್ವಯಮೇವ ಯಾವತ್ಪ್ರಲಯಂ ಸತ್ಸ್ವರೂಪಾಃ ಸಂತು (ಇತಿಚೇತ್) ತತ್ರಾಹ—ನಚೈತೇ ಇತಿ। ಸರ್ಗ ಸತ್ ಪದಯೋಃ ಪರ್ಯಾಯತ್ವಾಪತ್ತೇರ್ನಾಶಾ ನಾಪತ್ತೇಃ । "ನಾಭಾವೋ ವಿದ್ಯತೇ ಸತಃ" ಇತಿ ಭಗವತ್ಸಿದ್ಧಾಂತಾದಿತಿ ಭಾವಃ—ತರ್ಹಿ ಸರ್ಗೇ ಸತ್ವ ಮಧ್ಯಸ್ಥ ಮೇವಾಸ್ತು (ಇತಿ ಚೇತ್) ತತ್ರಾಹ–ನ ಕಲ್ಪ್ಯಂ ಇತಿ। ಅಸತಃ ಸತ್ತ್ವಾಧ್ಯಾಸಾಧಿಷ್ಠಾನತ್ವಾಸಂಭವಾದಿತಿ ಭಾವಃ । ತರ್ಹಿ ವೈನಾಶಿಕ ಮತವತ್ ತತ್ತತ್ಕ್ಷಣ ರೂಪಮೇವ ಸತ್ತ್ವಂ ಧಾರಯಾನುಗತಮಸ್ತು-(ಇತಿ ಚೇತ್) ತತ್ರಾಹ—ನಾಪೀತಿ। ಕ್ಷಣರೂಪಸ್ಯ ಸತ್ವಸ್ಯ ಪ್ರತೀತಿ ಕಾಲ ಪರ್ಯಂತಂ ಅನವಸ್ಥಿತೇಃ ಅತ್ಯಂತಾಪ್ರತೀತಸ್ಯ ಸತ್ತ್ವೇ ಅಲೀಕಸ್ಯಾಪಿ ತದಾಪತ್ತೇರಿತಿ ಭಾವಃ । ಏತೇನ ಅದ್ಯಂತ ಕ್ಷಣ ಸಂಬಂಧ ಲಕ್ಷಣೌ ಜನ್ಮನಾಶವಪಿ ಸರ್ಗಸ್ಯ ನಿರಸ್ತೌ ಇತ್ಯಾಶಯೇನಾಹಃ—ನಚೇದ ಮಿತಿ। ತಾ. ಪ್ರ.)

ಸರ್ವಂ ಸಂಕಲ್ಪರೂಪೇಣ ಚಿಚ್ಚಮತ್ಕುರುತೇ ಚಿತಿ ।
ಸ್ವಪ್ನಪತ್ತನನಿರ್ಮಾಣ ಪಾತೋತ್ಪಾತನ ವಜ್ಜಗತ್ ॥ ೧೬ ॥

ನ ದೇಶ ಕಾಲಕ್ರಮಣಂ ಕರೋತಿ ಚ ಮನಾಗಪಿ ।
ಯಥಾ ಸಂಕಲ್ಪಶೈಲೇನ ದೇಶಕಾಲಾದ್ಯನಂತಕಮ್ ॥ ೧೭ ॥

ಆಕ್ರಾಂತಮಪಿ ನಾಕ್ರಾಂತಂ ತಥೈವ ಜಗತಾ ಸತಾ ।
ಅಥ ನಾಕ್ರಾಂತ ಮಕ್ರಾಂತಮಿವ ಸಂಕಲ್ಪಮೇರುಣಾ ॥ ೧೮ ॥

---

೧೬. ಸ್ವಪ್ನದಲ್ಲಿ ಕಾಣುವ ನಗರವು ನಿರ್ಮಾಣವಾಗಿ, ನಾಶವಾಗಿ, ಮೇಲಕ್ಕೆ ಹಾರುವುದಾಗಿ ವ್ಯಾಪಾರವಂತವಾಗಿ ಕಂಡರೂ(ಅದಷ್ಟೂ ಮನಸ್ಸಂಕಲ್ಪ ದಿಂದ ಮನಸ್ಸಿನಲ್ಲಿಯೇ ಕಾಣುವುದು ಹೇಗೋ ಹಾಗೇ) ಜಗತ್ತು ಚಿತ್ತಿನಲ್ಲಿ ಚಿತ್ತಿನ ಸಂಕಲ್ಪರೂಪವಾಗಿ ಚಮಕಿಸುವುದು.

೧೭. (ಅದರಿಂದ ದೇಶಕಾಲಗಳು ನಿಜವಲ್ಲ.) ಸಂಕಲ್ಪ ಶೈಲವು ಯಾವ ದೇಶದಲ್ಲೂ ಯಾವ ಕಾಲದಲ್ಲೂ ಹೇಗೆ ಇರುವುದಿಲ್ಲವೋ ಹಾಗೇ (ಚಿತ್ತಿನ ಸಂಕಲ್ಪ ಮಾತ್ರದಿಂದ ಆಗಿರುವ ಈ ದೃಶ್ಯವೂ) ಪ್ರತ್ಯೇಕವಾದ ಸತ್ತಾಉಳ್ಳ ದೇಶ ಕಾಲ ಗಳನ್ನು ಆಶ್ರಯಿಸಿ ಇಲ್ಲ.

(ದೇಶ, ಕಾಲ, ಇವೆರಡೂ ಬೇರೆ ಬೇರೆಯಲ್ಲ. ಇವೆರಡೂ ಆಕಾಶದ ಸೃಷ್ಟಿಯಾದಮೇಲೆ ಆದ ಜೀವ ಸೃಷ್ಟಿಯನಂತರ ಬಂದವು. ಅದರಿಂದ ಇವನ್ನು ಆಕಾಶ ಧರ್ಮಗಳು ಎಂದರೂ ಎನ್ನಬಹುದು. ಕಾರ್ಯವು ನಮ್ಮ ಅರಿವಿಗೆ ಬರು ವಾಗ ಅದಕ್ಕೆ ದೇಶ ಕಾಲಗಳು ಸಂಬಂಧಿಸದೆ ಇದ್ದರೆ, ನಮಗೆ ಅರಿವಾಗುವುದಿಲ್ಲ. ಅದರಿಂದ ಅದ್ರವ್ಯವಾದ ಮನಸ್ಸು ದೃಶ್ಯವನ್ನು ಹಿಡಿಯುವುದಕ್ಕೆ ದೇಶಕಾಲ ಎಂಬ ಎರಡು ಅಂಚುಗಳು ಬೇಕು. ಅಥವಾ ಮನೋವ್ಯಾಪಾರವೆಂಬ ಬಟ್ಟೆಗೆ ದೇಶಕಾಲಗಳೆಂಬುವು ಅಂಚು ಶರಗೂ ಇದ್ದ ಹಾಗೆ.)

೧೮. ದೃಶ್ಯವಾದ ಜಗತ್ತು ದೇಶಕಾಲಗಳ ಹಿಡಿತಕ್ಕೆ ಸಿಕ್ಕಿರುವಂತೆ ಕಂಡು ಸತ್ಯವಾಗಿರುವಂತೆ ತೋರಿದರೂ ಅದು ಆಕ್ರಾಂತವಲ್ಲ. ಸಂಕಲ್ಪ ಮೇರುವು ಯಾವ ದೇಶವನ್ನು ಯಾವ ಕಾಲವನ್ನು ಆಕ್ರಮಿಸುವುದು ? (ಸಂಕಲ್ಪ ಕಾಲದಲ್ಲಿ ಮಾತ್ರ ಇರುವುದರಿಂದ ಸಂಕಲ್ಪ ಮೇರುವಿಗೆ ಸಂಕಲ್ಪ ದೇಶ, ಸಂಕಲ್ಪ ಕಾಲ ಗಳೇ ಹೊರತು ಸ್ವತಂತ್ರವಾದ ದೇಶ ಕಾಲಗಳಿಲ್ಲ. ನಾವು ಸತ್ಯ ಎನ್ನುವುದು

ಯಥೋಚ್ಚೈರ್ದೇಶ ಕಾಲಾದಿ ತಥೈವ ಜಗತಾ ಸತಾ ।
ಸಂಪದ್ಯತೇ ಯಥಾಯೋಽಸೌ ಪುರುಷಃ ಸರ್ವಕಾರಕಃ ॥ ೧೯ ॥

ಅನೇನೈವ ಕ್ರಮೇಣೇಹ ಕೀಟಃ ಸಂಪದ್ಯತೇ ಕ್ಷಣಾತ್ ।
ತಸ್ಥುಷಾ ಮೇವ ಮೇವೇಹ ಜಾತಯೋ ಹಿ ಚತುರ್ವಿಧಾಃ ॥ ೨೦ ॥

ರುದ್ರಾದ್ಯಾಸ್ತೃಣಪರ್ಯನ್ತಾಃ ಸಂಪದ್ಯಂತೇ ಕ್ಷಣಂಪ್ರತಿ ।
ಪರಮಾಣಾಂಪಮಾಃ ಸನ್ತಿ ತಥಾ ಕೇಚಿದಣಾಪಮಾಃ ॥ ೨೧ ॥

ಏಷಏವ ಕ್ರಮಸ್ತೇಷಾಂ ಸತಿವಾಸತಿ ಸರ್ಗಕೇ ॥ ೨೨ ॥

ನಮ್ಮ ಅನುಭವಕ್ಕೆ ಬಂದಿರುವುದನ್ನು. ನಮ್ಮ ಅನುಭವ ಎನ್ನುವುದು ಬಾಹ್ಯದಲ್ಲಿ ದೇಶಕಾಲಗಳನ್ನು ಆಶ್ರಯಿಸಿದೆ. ದೇಶ ಕಾಲಗಳಿಗೆ ಸಂಬಂಧಿಸದ ಸತ್ಯವನ್ನು ಮನಸ್ಸು ಹಿಡಿಯಬಲ್ಲುದೇನೋ ಪರೀಕ್ಷಿಸಿ ನೋಡಿ.)

೧೯. ಸತ್ಸ್ವರೂಪವಾಗಿ ಕಾಣುವ ಜಗತ್ತು ಹೇಗೋ ದೇಶ ಕಾಲಾದಿಗಳೂ ಹಾಗೆಯೇ! (ಅವು ಎಷ್ಟೇ ದೊಡ್ಡವಾಗಿ ಕಂಡರೂ ಅವೂ ಸಂಕಲ್ಪಜನ್ಯಗಳೇ) ಸಮಸ್ತ ಕಾರ್ಯಗಳನ್ನೂ ಮಾಡಬಲ್ಲ ಪುರುಷನೂ ಹೀಗೆಯೇ ಸಂಕಲ್ಪ ಜಾತನೇ!

೨೦. ಇದೇ ಕ್ರಮದಿಂದಲೇ (ಎಂದರೆ ಚಿತ್ತಿನ ಸಂಕಲ್ಪ ವಶವಾಗಿ) ಒಂದೇ ಕ್ಷಣದಲ್ಲಿ ಕೀಟವಾಗುವುದು. ಸ್ಥಾವರಗಳೂ ಹೀಗೆಯೇ! ಚತುರ್ವಿಧವಾದ (ಅಂಡಜಾದಿ) ಜಾತಿಗಳೂ ಹೀಗೆಯೇ (ಹುಟ್ಟುವುವು.)

೨೧. ರುದ್ರಾದಿಯಾಗಿ ತೃಣಪರ್ಯಂತವಾಗಿರುವ ಜಗತ್ತೆಲ್ಲವೂ ಹೀಗೆಯೇ ಹುಟ್ಟುವುದು. ಕೆಲವು ಪರಮಾಣುರೂಪವಾಗಿ, ಕೆಲವು ಅಣುರೂಪವಾಗಿ ಇರುವುವು.

೨೨. ವಾಸನಾರೂಪವಾಗಿರುವ ಜಗತ್ತು ಇರುವವರೆಗೂ ಇದೇ ಕ್ರಮವು.

ಅಸ್ಯಾಃ ಸಂಸಾರಮಾಯಾಯಾ ಏವಂ ಭೂತಾರ್ಥ ಭಾವನಾತ್ ।
ಭೇದೋಪಶಾನ್ತಾ ವಭ್ಯಾಸಾದ್ಭವತ್ಯುಗಪಗತಃ ಶಿವಃ ॥ ೨೩ ॥

ನಿಮೇಷಶತಭಾಗಾರ್ಧ ಮಾತ್ರಮೇವ ಪರಾ ಚಿತಿಃ ।
ಸ್ವರೂಪತಶ್ಚ್ಯೇಲ್ಲುಠಿತಾ ಸೈಷೋ ದೇತ್ಯನವಸ್ಥಿತಿಃ ॥ ೨೪ ॥

ಸಾಜ್ಞರೂಪಾ ಶಿಲಾಕಾಶ ಇವ ಚಿತ್ಸ್ವಾತ್ಮನಿ ಸ್ಥಿತಾ ।
ತದನಾದ್ಯವಭಾಸಾತ್ಮ ಬ್ರಹ್ಮಶಬ್ದೇನ ಗೀಯತೇ ॥ ೨೫ ॥

---

೨೩. ಹೀಗೆ ಪ್ರಬಲವಾಗಿ ಬೆಳೆದ ಸಂಸಾರ ಮಾಯೆಯು ಹೇಗೆ ಬಂತು ಎಂಬ ಭೂತಾರ್ಥವನ್ನು ಭಾವನೆ ಮಾಡುವುದರಿಂದ ಭೇದವು ಉಪಶಮವಾಗುವುದು. ಹಾಗೆ ಅಭ್ಯಾಸ ಬಲದಿಂದ ಭೇದ ಶಾಂತಿ ಮಾಡಿಕೊಂಡವನಿಗೆ ಶಿವ ಸ್ವರೂಪನಾದ ಆತ್ಮನು ದೊರೆಯುವನು.

೨೪. ಒಂದು ರೆಪ್ಪೆ ಹೊಡೆಯುವಷ್ಟು ಕಾಲದ ನೂರುಭಾಗದಲ್ಲಿ ಒಂದರ ಅರ್ಧದಷ್ಟು ಕಾಲಮಾತ್ರ ಚಿತ್ಸ್ವರೂಪವು ತನ್ನ ಸ್ವರೂಪವನ್ನು ಬಿಟ್ಟು ಬಹಿರ್ಮುಖವಾದರೆ ಸಾಕು, ಈ ಸಂಸಾರವೆಂಬ ಅನರ್ಥಸ್ಥಿತಿಯು ಉದಯುವಾಗುವುದು.

(ಕ್ಷಣಲೇಶಮಾತ್ರಮಪಿ ಚಿದಾತ್ಮನೋ ಬಹಿರ್ಮುಖತ್ವೇ ಕಲ್ಪಕೋಟಿ ವಿಸ್ತೃತಾನರ್ಥೋದಯ-ಇತಿ —ತಾ. ಪ್ರ.)

೨೫. ಆ ಚಿತ್ತು ಜ್ಞಾನರೂಪವಾಗಿ, ಶಿಲೆಯ ಮಧ್ಯದಲ್ಲಿರುವ ಆಕಾಶದಂತೆ, ತನ್ನಲ್ಲಿಯೇ ತಾನು ಇರುವುದು. ಅನಾದಿಯಾಗಿ ಎಲ್ಲವನ್ನೂ ಬೆಳಗುವ ಪ್ರಕಾಶ ಸ್ವರೂಪವಾಗಿ ಇರುವಾಗ ಬ್ರಹ್ಮ ಎನ್ನಿಸಿಕೊಳ್ಳುವುದು.

(ಜ್ಞರೂಪಾ-ಜ್ಞಃ ತತ್ತ್ವವಿತ್, ತೇನ ರೂಪ್ಯತೇ ಅನುಭೂಯತ ಇತಿ ಜ್ಞರೂಪಾ—ತಾ. ಪ್ರ.)

ಅಸ್ಮಿಪ್ರೌಢಿಂ ಗತೇ ಸರ್ಗೇ ಮಹಾಚಿದ್ಯೋತನಂ ನ ಚ।
ಸಂಗತಾಸತ್ಯ ದಿಗ್ದೇಶ ಕಾಲಾಂಶಾ ಪರಮಾಣುತಾ ।
ಜೀವತಾಮಾಗತಾ ಭೂತತನ್ಮಾತ್ರವಲನಾ ಕ್ರಮಾತ್ ॥ ೨೬ ॥

ಭವತ್ಯಂಗ ಮೃಗೀವೀರುತ್ಕೀಟ ದೇವಾಸುರಾದಿಕಮ್ ।
ಯಸ್ಮಿನ್ನಿತ್ಯೇ ತತೇಽನಂತೇದೃಢೇ ಸ್ರಗಿವತಿಷ್ಠತಿ ॥ ೨೭ ॥

ಸದಸದ್ಗ್ರಥಿತಂ ವಿಶ್ವಂ ವಿಶ್ವಗೇ ವಿಶ್ವಕರ್ಮಣಿ ।
ನತದ್ದೂರೇ ನ ನಿಕಟೇ ನೋರ್ಧ್ವೇ ನಾಧೋ ನ ತೇ ನ ಮೇ ।
ನ ಪೂರ್ವಂ ನಾದ್ಯ ನ ಪ್ರಾತರ್ನ ಸನ್ನಾಸನ್ನ ಮಧ್ಯಮಮ್ ॥ ೨೮ ॥

---

೨೬. (ಹೀಗೆ ಚಿತ್ತು ಬಹಿರ್ಮುಖವಾಗುವುದರಿಂದ) ಸೃಷ್ಟಿಯು ಮಹಾ ಪ್ರೌಢವಾಗಿ ಬೆಳೆದು ಬಿಡಲು, ಅಸತ್ಯವಾದ ದಿಕ್ ದೇಶಕಾಲಗಳು ಬಲವಾಗಿ ತಾನೇತಾನಾಗಿದ್ದ ಚಿತ್ತು ಸಣ್ಣದಾಗುತ್ತ ಬಂದು ಪರಮಾಣುವೂ ಆಗಿಹೋಗಲು, ಮಹಾಚಿತ್ತಿನ ಸ್ವರೂಪವು ಸೃಷ್ಟಿಯಲ್ಲಿ ಕಾಣದಾಗುವುದು.

ಹೀಗೆ ಜೀವತ್ವವೂ ಬರುವುದು. ಪಂಚಭೂತಗಳೂ ತನ್ಮಾತ್ರಗಳೂ ಹುಟ್ಟಿ ಅವುಗಳ ವ್ಯಾಪಾರವು ನಡೆಯುವುದು.

೨೭. ಮೃಗ, ಬಳ್ಳಿ, ಕೀಟ, ದೇವ, ಅಸುರ, ಮೊದಲಾದ ಸೃಷ್ಟಿಗಳೆಲ್ಲ ಹೀಗೆಯೇ! ಆದ ಸೃಷ್ಟಿಯೂ ನಿತ್ಯವೂ ತಾನೇತಾನಾಗಿ ತುಂಬಿರುವುದೂ, ಆನಂತವೂ, ದೃಢವೂ ಆದ ಚಿತ್ತಿನಲ್ಲಿ ಮಾಲೆಯಂತೆ ಇರುವುದು.

೨೮. ವಿಶ್ವಕರ್ಮವಾಗಿ (ಎಲ್ಲಾ ವ್ಯಾಪಾರಗಳನ್ನೂ ಮಾಡುವುದಾಗಿ), ವಿಶ್ವಗವಾಗಿ ಎಲ್ಲದರಲ್ಲಿಯೂ) ಇರುವ ಆ ಚಿತ್ತಿನಲ್ಲಿ ಸದಸತ್ ರೂಪವಾಗಿ ರುವ ಈ ವಿಶ್ವವೆಲ್ಲವೂ ಗಂಟು ಬಿದ್ದಿರುವುದು. ಆ ಚಿತ್ತಾದರೋ ದೂರದ ಲ್ಲಿಲ್ಲ. ಹತ್ತಿರದಲ್ಲಿಲ್ಲ. ಮೇಲಿಲ್ಲ. ಕೆಳಗಿಲ್ಲ. ನಿನ್ನದಲ್ಲ. ನನ್ನದಲ್ಲ. ಹಿಂದಿನದಲ್ಲ. ಇಂದಿನದಲ್ಲ. ಬೆಳಗಲ್ಲ. (ಬೈಗಲ್ಲ) : ಸತ್‌ಅಲ್ಲ. ಅಸತ್ ಅಲ್ಲ. ಎರಡಕ್ಕೂ ಮಧ್ಯವೂ ಅಲ್ಲ.

ಅನುಭವಕಲನಾಮೃತೇಽಸ್ಯ ಮಾತ್ರಾ ।
ಭವತಿ ನ ಸರ್ವವಿಕಲ್ಪನೇಷ್ವಸತ್ಸು ।
ಫಲದುರುವಿಭವಾ ಪ್ರಮಾಣ ಮಾಲಾ ।
ಸ್ಥಿತಿಮುಪಯಾತಿ ನ ವಾರಿಣೀವ ವಹ್ನಿಃ ॥ ೨೯ ॥

ಯಥಾಪೃಷ್ಟಂ ಮುನೇ ಪ್ರೋಕ್ತಂ ತ್ವಯಿ ಕಲ್ಯಾಣಮಸ್ತುತೇ ।
ದಿಶಂ ಪ್ರಯಾಮೋಽಭಿಮತಾಮಾಗಚ್ಛೋತ್ತಿಷ್ಠ ಪಾರ್ವತಿ ॥ ೩೦ ॥

ಶ್ರೀ ವಸಿಷ್ಠ ಉವಾಚ:—

ಇತ್ಯುಕ್ತ್ವಾ ನೀಲಕಣ್ಠೋಽಸೌ ತ್ಯಕ್ತಪುಷ್ಪಾಂಜಲೌ ಮಯಿ ।
ತತಾರ ಪರಿವಾರೇಣ ಸಮಮಂಬರ ಕೋಟರಮ್ ॥ ೩೧ ॥

---

೨೯. ಅಸತ್ಸ್ವರೂಪಗಳಾದ ನಾನಾ ವಿಧವಾದ (ಸಂಕಲ್ಪ) ವಿಕಲ್ಪಗಳು ತುಂಬಿಹೋಗಿರುವ ಈ ದೃಶ್ಯ ರೂಪವಾದ ಜಗತ್ತಿನಲ್ಲಿ (ನಾವು ಹೇಳುವ ಸಿದ್ಧಾಂತವು ಸತ್ಯವೆನ್ನುವುದಕ್ಕೆ) ತಾನು ಅನುಭವಿಸಿದ ಸ್ವಪ್ರಕಾಶ ಚೈತನ್ಯವನ್ನು ಬಿಟ್ಟು ಇನ್ನು ಯಾವುದೂ ಪ್ರಮಾತೃ (ಪ್ರಮಾಣ ಪ್ರಮೇಯಗಳು) ಇಲ್ಲ. ಮಿಕ್ಕ ಪ್ರಮಾಣಗಳು ಪರಂಪರೆಯಾಗಿ ಇದ್ದುಕೊಂಡು ತಮ್ಮ ವೈಭವದಿಂದ ಬೇರೆ ಬೇರೆ ಫಲಗಳನ್ನು ಕೊಟ್ಟರೂ ಈ ಆತ್ಮ ವಿಚಾರದಲ್ಲಿ ಬೆಂಕಿಯನ್ನು ನೀರಿನಲ್ಲಿ ಇಟ್ಟಂತಾಗಿ ಸಿದ್ಧಿಸುವುದಿಲ್ಲ.

(ತತ್ರ ತ್ರಿಪುಟೀ ಮಾತ್ರಸ್ಯ ಬಾಧಾತ್ ಇತ್ಯರ್ಥ:– ತಾ. ಪ್ರ.

(ಪ್ರಮಾಣಗಳು ತ್ರಿಪುಟಿಯಿರುವಲ್ಲಿ ಸಿದ್ಧಿಸುವವೇ ಹೊರತು ತ್ರಿಪುಟಿಯನ್ನು ಭೇದಿಸಿಕೊಂಡು ಹೋಗುವ ಸಿದ್ಧಾಂತದಲ್ಲಿ ಹೇಗೆ ತಾನೆ ಫಲಿಸಾವು?)

೩೦. ಎಲೈ ಮುನಿಯೇ, ನೀನು ಕೇಳಿದುದಕ್ಕೆ ನಾನು ಉತ್ತರವನ್ನು ಹೇಳಿದೆನು. ನಿನಗೆ ಒಳ್ಳೆಯದಾಗಲಿ. ನಾವು ನಮಗೆ ತೋರಿದ ಕಡೆಗೆ ಹೋಗೋಣ ಪಾರ್ವತಿ, ಏಳು.

ಶ್ರೀ ವಸಿಷ್ಠನು ಹೇಳಿದನು:—

೩೧. ಈಶ್ವರನು ಹೀಗೆ ಹೇಳಿ, ನಾನು ಒಪ್ಪಿಸಿದ ಪುಷ್ಪಾಂಜಲಿಯನ್ನು ಕೈಗೊಂಡು ತನ್ನ ಪರಿವಾರದೊಡನೆ ಆಕಾಶವನ್ನು ದಾಟಿಕೊಂಡು ಹೊರಟು ಹೋದನು.

ತಸ್ಮಿನ್ಗತೇ ತ್ರಿಭುವನಾಧಿಪತಾವುಮೇಶೇ ।
ಸ್ಥಿತ್ವಾ ಕ್ಷಣಂ ತದನುಸಂಸ್ಮೃತಿಪೂರ್ವಮೇವ ।
ಅಂಗೀಕೃತಂ ನವಪವಿತ್ರಧಿಯಾ ಮಯಾತ್ಮ-
ದೇವಾರ್ಚನಂ ಶಮವತೈವ ಜಿಹಾಸಿತಂತತ್ ॥ ೩೨ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ "ಪರಮಾತ್ಮಾಭಿಧಾನಂ" ನಾಮ ದ್ವಿಚತ್ವಾರಿಂಶಃ ಸರ್ಗಃ

---

೩೨. ಹೀಗೆ ಉಮಾಪತಿಯಾದ ತ್ರಿಭುವನೇಶ್ವರನಾದ ಮಹಾದೇವನು, ಹೊರಟು ಹೋಗಲು, ಒಂದು ಗಳಿಗೆ ಆ ಸಂಗತಿಯನ್ನೇ ಸ್ಮರಿಸಿಕೊಳ್ಳುತ್ತಿದ್ದು ಶಮವಂತರಾದವರು ಬೇಡವೆನ್ನುವ ಬಾಹ್ಯದೇವಾರ್ಚನವನ್ನು ತ್ಯಜಿಸಿ ಈಶ್ವರೋಪದೇಶದಿಂದ ಮತ್ತೆ ಶ್ರದ್ಧಾದಿಗಳು ಉದಯಿಸಿರಲು ಪವಿತ್ರವಾದ ಹೊಸ ಬುದ್ಧಿಯಿಂದ ಈಶ್ವರೋಕ್ತವಾದ ಆತ್ಮದೇವಾರ್ಚನವನ್ನು ಅಂಗೀಕರಿಸಿದೆನು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಪರಮಾತ್ಮಾಭಿಧಾನ" ಎಂಬ
ನಾಲ್ವತ್ತೆರಡನೆಯ ಸರ್ಗವು

ತ್ರಿಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಏತದುಕ್ತಂ ಪರಂ ತೇನ ಸ್ವಯಮೇವ ಚ ವೇದ್ಮ್ಯಹಮ್ ।
ರಾಮ ತ್ವಮಪಿ ಜಾನೀಷೇ ಯಥೇದಂ ಸಮುಪಸ್ಥಿತಮ್ ॥ ೧ ॥

ಯತ್ರಾಲೀಕಮಲೀಕೇನ ಕಿಲಾಲೀಕೇ ವಿಲೋಕ್ಯತೇ ।
ತಸ್ಯಾಂ ಸಂಸಾರಮಾಯಾಯಾಂ ಕಿಂ ಸತ್ಯಂ ಕಿಮಸನ್ಮಯಮ್ ॥ ೨ ॥

ಯಥಾ ಯೇನ ವಿಕಲ್ಪೇನ ಯದ್ವಿಕಲ್ಪೇನ ಕಥ್ಯತೇ ।
ತಥಾ ತೇನಾತ್ಮಕಲ್ಪೇನ ನಗತಾಪ್ಯನುಭೂಯತೇ ॥ ೩ ॥

ನಾಲ್ವತ್ತಮೂರನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು:—

೧. ಆ ಮಹಾದೇವನೂ ಈ ಆತ್ಮದೇವಾರ್ಚನವನ್ನು ಹೇಳಿದನು. ಅದನ್ನು ನಾನೂ ಬಲ್ಲೆನು. ನೀನೂ ಬಲ್ಲೆ. ಹಾಗೆಯೇ 'ಇದಂ' ಶಬ್ದ ವಾಚ್ಯವಾದ ಜಗತ್ತು ಏನು? ಎಂತು? ಎಂಬುದನ್ನೂ ಬಲ್ಲೆ.

೨. ಎಲ್ಲಿ ಅಲೀಕ(ಮಾಯೆ)ದಲ್ಲಿ ಅಲೀಕ (ಭ್ರಮ) ದಿಂದ ಅಲೀಕ(ಜೀವ)ನು ನೋಡುವವನಾಗುವನೋ. ಅಂತಹ ಸಂಸಾರ ಮಾಯೆಯಲ್ಲಿ ಸತ್ಯವು ಯಾವುದು? ಅಸತ್ಯವು ಯಾವುದು?

೩. ಕವಿಯು ಕಲ್ಪನೆಯಿಂದ ಇಲ್ಲದುದನ್ನು ವರ್ಣಿಸುತ್ತಿದ್ದರೂ ಅದೆಲ್ಲವನ್ನೂ ತನ್ನ ಎದುರಿಗೇ ಇರುವಂತೆ, ಬೆಟ್ಟವನ್ನೂ ಕೂಡ, ಕಾಣುವುದುಂಟಲ್ಲವೇ?

ಯಥಾ ದ್ರವತ್ವಂ ಪಯಸಿ ಯಥಾಸ್ಪಂದೋ ನಭಸ್ವತಿ ।
ಯಥಾ ನಭಸಿ ಶೂನ್ಯತ್ವಂ ತಥಾ ಸರ್ಗತ್ವಮಾತ್ಮನಿ ॥ ೪ ॥

ತತಃ ಪ್ರಭೃತಿ ತೇನೈವ ಕ್ರಮೇಣಾರ್ಚನಮಾತ್ಮನಃ
ಅದ್ಯ ಯಾವದ್ಗತ ವ್ಯಗ್ರಃ ಕುರ್ವನ್ನಹಮವಸ್ಥಿತಃ ॥ ೫ ॥

ಅನೇನಾರ್ಚ ವಿಧಾನೇನ ಮಯೇಮೇ ರಾಮ ವಾಸರಾಃ ।
ಅಖಿನ್ನೇನಾತಿವಾಹ್ಯನ್ತೇ ವ್ಯವಹಾರಪರಾ ಅಪಿ ॥ ೬ ॥

ಯಥಾಪ್ರಾಪ್ತೈಃ ಕ್ರಿಯಾಚಾರ ಕುಸುಮೈರಾತ್ಮನೋಽರ್ಚನಮ್ ।
ವ್ಯಚ್ಛಿನ್ನಮಪಿ ವ್ಯಚ್ಛಿನ್ನಂ ನ ಕದಾಚಿದಹರ್ನಿಶಮ್ ॥ ೭ ॥

---

೪. ನೀರಿನಲ್ಲಿರುವ ದ್ರವದಂತೆ, ವಾಯುವಿನಲ್ಲಿರುವ ಚಲನದಂತೆ, ಆಕಾಶದಲ್ಲಿರುವ ಶೂನ್ಯತ್ವದಂತೆ, ಆತ್ಮನಲ್ಲಿ ಸೃಷ್ಟಿಯಿರುವುದು.

೫. ಆ ಮಹಾದೇವನು ಉಪದೇಶಮಾಡಿದಂದಿನಿಂದ ಆ ಮಹಾದೇವನು ಹೇಳಿದ ಕ್ರಮದಿಂದಲೇ ಆತ್ಮಾರ್ಚನವನ್ನು ಮಾಡುತ್ತ, ಈಗ ಯಾವುದೊಂದೂ ಯೋಚನೆಯಿಲ್ಲದೆ ಸುಖವಾಗಿರುವೆನು.

(ಏವಂ ಸ್ವಾಭಾವಿಕಸ್ಯೈವ ವಿಕಲ್ಪಾಧ್ಯಾರೋಪಸ್ಯ ಅರ್ಚನತ್ವವಿಚಿಂತನಂ ತದಾ ಪ್ರಭೃತ್ಯದ್ಯ ಪರ್ಯಂತಂ ಕುರ್ವನ್ನೇವ ಸ್ಥಿತ ಇತ್ಯಾಹ :—ತಾ. ಪ್ರ.)

೬. ಹೀಗೆ ಈ ರೀತಿಯಾಗಿ ಆತ್ಮಾರ್ಚನವನ್ನು ಮಾಡುತ್ತಿರುವುದರಿಂದ, ನಾನು ವ್ಯವಹಾರದಲ್ಲಿದ್ದರೂ ಅದರಿಂದ ಯಾವರೀತಿಯಲ್ಲೂ ಖಿನ್ನನಾಗದೆ ದಿನದಿನಗಳನ್ನು ಕಳೆಯುತ್ತಿರುವೆನು.

೭. ದಿನದಿನವೂ ಮಾಡಬೇಕಾಗಿಬರುವ ಕ್ರಿಯಾಚರಣಗಳೆಂಬ ಕುಸುಮಗಳಿಂದಲೇ ಆತ್ಮಾರ್ಚನವನ್ನು ಮಾಡುತ್ತಿರುವೆನು. ಈ ಅರ್ಚನವು ಸುಷುಪ್ತಿ ಕಾಲದಲ್ಲಿ ವಿಚ್ಛಿನ್ನವಾದರೂ ಅಹರ್ನಿಶವೂ ವಿಚ್ಛಿತ್ತಿಯಿಲ್ಲದೆ ನಡೆಯುತ್ತಲೇ ಇರುವುದು.

ಗ್ರಾಹ್ಯ ಗ್ರಾಹಕಸಂಬಂಧೇ ಸಾಮಾನ್ಯೇ ಸರ್ವದೇಹಿನಾಮ್ ।
ಯೋಗಿನಃ ಸಾವಧಾನತ್ವಂ ಯತ್ತದರ್ಚನಮಾತ್ಮನಃ ॥ ೮ ॥

ದೃಷ್ಟ್ಯಾನಯಾ ರಘುಪತೇ ಸಂಗಮುಕ್ತೇನ ಚೇತಸಾ ।
ಸಂಸಾರ ವಿರಲಾರಣ್ಯೇ ವಿಹರಾಸ್ಮಿನ್ನ ಖಿದ್ಯಸೇ ॥ ೯ ॥

ದುಃಖೇ ಮಹತಿ ಸಂಪ್ರಾಪ್ತೇ ಧನಬಂಧು ವಿಯೋಗಜೇ ।
ಏತಾಂ ದೃಷ್ಟಿಮುಪಷ್ಟಭ್ಯ ವಿಚಾರಂ ಕುರು ಸುವ್ರತ ॥ ೧೦ ॥

ಸುಖ ದುಃಖೇ ನ ಕರ್ತವ್ಯೇ ಧನಬಂಧೂದಯಕ್ಷಯೇ ।
ಏವಂ ಪ್ರಾಯಾ ಏವ ಸರ್ವಾ ನಿತ್ಯಂ ಸಂಸಾರ ದೃಷ್ಟಯಃ ॥ ೧೧ ॥

(ಸುಷುಪ್ತಿ ಕಾಲೇ ವ್ಯಚ್ಛಿನ್ನಮಪಿ ಕದಾಪಿ ನ ವ್ಯಚ್ಛಿನ್ನಂ । ತದಾಪಿ ಸುಖ ಮಹ ಮಸ್ವಾಪ್ಸಂ ನಕಿಂಚಿದವೇದಿಷಂ ಇತಿ ಉತ್ಥಿತ ಪ್ರತಿ ಸಂಧಾನ ಹೇತು ಅವಿದ್ಯಾವೃತ್ತಿ ಪುಷ್ಪತ್ರಯಾಚ ಸದ್ಭಾವಾದಿತಿ ಭಾವಃ –ತಾ. ಪ್ರ.)

೮. ದೇಹಿ ಎಂದಮೇಲೆ ಇದು ಗ್ರಾಹ್ಯ, ನಾನು ಗ್ರಾಹಕ ಎಂಬ ಸಂಬಂಧವು ಸಾಮಾನ್ಯವಾಗಿ ಇದ್ದೇ ಇರುವುದು. ಆದರೆ ಯೋಗಿಗಳು 'ಇದಂ' ವಾಚ್ಯವಿದು "ಅಹಂ" ವಾಚ್ಯವಿದು ಎಂಬ ಅವಧಾನತೆಯನ್ನು ಯಾವಾಗಲೂ ಮರೆಯದೆ ಇರುವರು. ಅದೇ (ಅವರ) ಆತ್ಮಾರ್ಚನವು.

೯. ಈ ದೃಷ್ಟಿಯನ್ನು ಅವಲಂಬಿಸಿ, ಅಸಂಗವಾದ ಮನಸ್ಸಿನಿಂದ, ಎಲೈ ರಘುಪತಿಯೆ, ಸಂಸಾರವೆಂಬ ಈ ಗೊಂಡಾರಣ್ಯದಲ್ಲಿ ವಿಹರಿಸು. ನಿನಗೆ ಖೇದ ವಾಗುವುದಿಲ್ಲ.

೧೦. ಧನನಾಶವಾಗಿ, ಬಂಧುವಿಯೋಗವಾಗಿ, ಮಹದ್ದುಃಖವು ಒದಗಿದಾಗ ಈ ದೃಷ್ಟಿಯನ್ನು ಆಶ್ರಯಿಸಿ, ಎಲೈ ಸುವ್ರತನೆ, ವಿಚಾರ ಮಾಡಿ ನೋಡು.

೧೧. ಧನವು ಲಭಿಸಿದಾಗ, ನಾಶವಾದಾಗ, ಬಂಧುಗಳು ಸಿಕ್ಕಿದಾಗ, ಹೋದಾಗ, ಸುಖದುಃಖಗಳಿಗೆ ವಶನಾಗಬೇಡ. ಧನ ಬಂಧು ಲಾಭನಾಶಗಳಲ್ಲಿ ಸುಖದುಃಖಗಳಿಗೆ ವಶನಾಗುವುದೇ ಸಂಸಾರದೃಷ್ಟಿಯು.

ಜಾನಾಸ್ಯೇವ ಗತಿಂ ಚಿತ್ರಾಂ ವಿಷಯಾಣಾಂ ಪ್ರಮಾಥಿನೀಮ್ ।
ಯಥಾ ಯಾನ್ತಿ ಯಥಾಯಾನ್ತಿ ಯಥಾಪರಿಭವನ್ತಿ ಚ ॥ ೧೨ ॥

ಏವಮೇವ ಪ್ರವರ್ತನ್ತೇ ಪ್ರೇಮಾಣಿ ಚ ಧನಾನಿ ಚ ।
ಏವಮೇವಾವಹೀಯನ್ತೇ ನಿಮಿತ್ತೈರವಿಚಾರಿತೈಃ ॥ ೧೩ ॥

ನ ತಾಸ್ತವ ನ ತಾಸಾಂ ತ್ವಂ ನಿರ್ಮಲಾನ್ತರ್ಜಗತ್ಕ್ರಿಯಾಃ ।
ಇದಮಿತ್ಥಂ ಜಗತ್ಕಿಂಚಿತ್ಕಿಂ ಮುಧಾ ಪರಿತಪ್ಯಸೇ ॥ ೧೪ ॥

ತ್ವಮಿಹಾಸಿ ಜಗದ್ರೂಪಂ ಚಿನ್ಮಾತ್ರವಿತತಾಕೃತೇ ।
ನಿಜಾವಯವಕಾವೃತೌ ಕಃ ಕ್ರಮೋ ಹರ್ಷಶೋಕಯೋಃ ॥ ೧೫ ॥

---

೧೨. ವಿಷಯಗಳನ್ನು ಆಶ್ರಯಿಸಿದವರ ಗತಿಯು ಎಂದಿದ್ದರೂ ಪ್ರಮಾದಕರವು ಎಂಬುದನ್ನು ನೀನು ಬಲ್ಲೆ. ವಿಷಯಗಳು ಹೇಗೆ ಬರುವುವು? ಹೇಗೆ ಹೋಗುವುವು? ಹೇಗೆ ಪರಿಭವವನ್ನುಂಟುಮಾಡುವುವು? ಎಂಬುದನ್ನೂ ನೀನು ಬಲ್ಲೆ.

೧೩. ಪ್ರೇಮ, ಧನ, ಇವುಗಳ ಯಾತಾಯಾತವು ಹೀಗೆ ಹೀಗೆಯೇ ವಿಚಾರಕ್ಕೆ ಸಿಕ್ಕಿದ ನಿಮಿತ್ತಗಳಿಂದಲೇ ಆಗುವುದು.

೧೪. ಎಲೈ ನಿರ್ಮಲನೆ, ಈ ಜಗತ್ತಿನ ಕ್ರಿಯಾಕಲಾಪಗಳು ಯಾವುವುಂಟೋ ಅವುಗಳನ್ನು ಪರಿಭಾವಿಸಿ ನೋಡಿದರೆ, ಅವು ನಿನ್ನವಲ್ಲ, ನೀನು ಅವುಗಳವನೂ ಅಲ್ಲ. ಹೀಗಿರುವ ಈ ಜಗತ್ತು ಈ ಕಾರಣದಿಂದ ಕೇವಲ ಕಿಂಚಿತ್ಕರವಾದುದು, ತುಚ್ಛವಾದುದು. ವ್ಯರ್ಥವಾಗಿ ನೀನೇಕೆ ಪರಿತಪಿಸುವೆ?

೧೫. ಚಿನ್ಮಾತ್ರದಿಂದಲೇ ಹರಡಿರುವ ಆಕೃತಿಯುಳ್ಳವನೇ, ನೀನೇ ಈ ಜಗದ್ರೂಪನಾಗಿರುವೆ. ಇದೆಲ್ಲವೂ ನಿನ್ನ ಅಂಗೋಪಾಂಗಗಳೇ ಆಗಿರಲು ಹರ್ಷಶೋಕಗಳಿಂದ ನೀನೇಕೆ ಆಕ್ರಾಂತನಾಗಿ ವ್ಯಥಿಸಬೇಕು?

ತಾತ ಚಿನ್ಮಾತ್ರರೂಪೋಽಸಿ ನ ತೇ ಭಿನ್ನಮಿದಂ ಜಗತ್ ।
ಅತಸ್ತವ ಕಥಂ ಕೃತಹೇಯೋಪಾದೇಯಕಲ್ಪನಾ । ॥ ೧೬ ॥

ಇತಿಚಿಚ್ಚಕ್ರ ಚಾಂಚಲ್ಯೇ ಚಿನ್ಮಯೇ ಜಗದಮ್ಬುಧೌ ।
ತರಂಗಜಾಲೇ ಚಾಮ್ಭೋಧೌ ಕಃ ಕ್ರಮೋ ಹರ್ಷಶೋಕಯೋಃ ॥ ೧೭ ॥

ಚಿದೇಕತಾನತಾಮೇತ್ಯ ಸೌಷುಪ್ತೀ ಮಾಗತಃ ಸ್ಥಿತಿಮ್ ।
ಅದ್ಯಪ್ರಭೃತಿ ರಾಮ ತ್ವಂ ತುರ್ಯಾವಸ್ಥಾತ್ಮಕೋ ಭವ ॥ ೧೮ ॥

ಸಮಃ ಸಮಃ ಸಮಾಭಾಸೋ ಭಾಸ್ವದ್ವಪುರುದಾರಧೀಃ ।
ತಿಷ್ಠಾತ್ಮಾರ್ಚಾರತೋ ನಿತ್ಯಂ ಪರಿಪೂರ್ಣ ಇವಾರ್ಣವಃ ॥ ೧೯ ॥

---

೧೬. ತಾತ! ನೀನು ಚಿನ್ಮಾತ್ರರೂಪನಾಗಿರುವೆ! ಈ ಜಗತ್ತು ನಿನ್ನಿಂದ ಭಿನ್ನವಾದುದಲ್ಲ. ಅದರಿಂದ ಈ ಜಗತ್ತು ಹೇಯ (ಬಿಡಬೇಕಾದದ್ದು) ವೋ ಉಪಾದೇಯ (ಸಂಗ್ರಹಿಸಬೇಕಾದ್ದು) ವೋ ಎಂಬ ಯೋಚನೆಯು ಹೇಗೆ ಎಲ್ಲಿಂದ ಬಂದೀತು ?

೧೭. ಹೀಗೆ ಚಿನ್ಮಯವಾದ ಜಗತ್ತೆಂಬ ಸಮುದ್ರದಲ್ಲಿ ಚಿಚ್ಚಕ್ರವು ಸುತ್ತುತ್ತಿರುವುದರಿಂದ ಹುಟ್ಟುವ ತರಂಗಜಾಲದಂತೆ ಇರುವ ಹರ್ಷ ಶೋಕಗಳಲ್ಲಿ ಯಾವ ಕ್ರಮವನ್ನು ಹೇಳೋಣ !

೧೮. (ಜಗತ್ಕಾರಣವಾದ) ಚಿತ್ತಿನೊಡನೆ ಏಕತಾನತೆಯನ್ನು ಹೊಂದು. ಸುಷುಪ್ತಿಯಲ್ಲಿ ಹೇಗಿರುವುದೋ ಹಾಗೆ ಇರುವಂತಹ ತುರ್ಯಾವಸ್ಥೆಯನ್ನು ಹೊಂದು: ಇಂದಿನಿಂದ ಆ ತುರ್ಯದಲ್ಲಿ ಸ್ಥಿರವಾಗಿ ನಿಲ್ಲುವವನಾಗು.

೧೯. ಪರಿಪೂರ್ಣವಾಗಿ ತುಂಬಿರುವ ಸಮುದ್ರದಂತೆ, ಯಾವ ವಿಷಮ ಭಾವವೂ ಇಲ್ಲದ ಸಮನಾಗಿ, ಸಮ (ಬ್ರಹ್ಮದೊಡನೆ ಏಕರಸವಾಗಿರುವ) ಬ್ರಹ್ಮಾಭಾಸವೇ ಆಗಿರುವ ಜಗತ್ತುಳ್ಳವನಾಗಿ, ಆತ್ಮಾರ್ಚನಪರವಾಗಿ ಇರು.

ಏತತ್ತ್ವಂ ಶ್ರುತವಾನ್ಸರ್ವಂ ಸ್ಥಿತಸ್ತ್ವಂ ಪರಿಪೂರ್ಣಧೀಃ ।
ಯದಿಚ್ಛಸೀತರತ್ಪೃಷ್ಟಂ ತತ್ಪೃಚ್ಛ ರಘುನಂದನ ।
ಯತ್ಪೃಷ್ಟಂ ಪ್ರಥಮೇಕಲ್ಪೇ ತದದ್ಯ ಪರಿಚೋದಯ ॥ ೨೦ ॥

ಶ್ರೀ ರಾಮ ಉವಾಚ :—

ಇದಾನೀಂ ಸಂಶಯೋ ಬ್ರಹ್ಮನ್ವಿನಿವೃತ್ತೋ ವಿಶೇಷತಃ ॥ ೨೧ ॥

ಜ್ಞಾತಂ ಜ್ಞಾತವ್ಯಮಖಿಲಂ ಜಾತಾ ತೃಪ್ತಿರಕೃತ್ರಿಮಾ ।
ನ ಮುನೇಽಸ್ತಿ ಮಲಂ ದ್ವಿತ್ವಂ ನ ಚೇತ್ಯಂ ನ ಚ ಕಲ್ಪನಮ್ ॥ ೨೨ ॥

ತದಾ ಮಮಾಭೂದಜ್ಞಾನಂ ಪ್ರಶಾನ್ತಮಧುನಾ ತು ತತ್ ॥ ೨೩ ॥

---

೨೦. ಇದೆಲ್ಲವನ್ನೂ ಕೇಳಿದೆಯಲ್ಲವೆ? ಪರಿಪೂರ್ಣ ಬುದ್ಧಿವೃತ್ತಿಯುಳ್ಳವನಾದೆಯಲ್ಲವೆ? ರಘುನಂದನ, ಇನ್ನು ಏನಾದರೂ ಕೇಳುವುದಿದ್ದರೆ ಕೇಳು. ಹಿಂದೆ ಪ್ರಥಮದಲ್ಲಿ ಕೇಳಿದುದನ್ನು ಈಗ ಕೇಳು.

(ಪ್ರಥಮೇಕಲ್ಪೇ ವಿಚಾರಾರಂಭೇ ವೈರಾಗ್ಯಪ್ರಕರಣೇ ತ್ವಯಾ ಯತ್ಪೃಷ್ಟಂ ಯೇ ಪ್ರಶ್ನಾ ಕೃತಾಃ ತೇಷು ಅದ್ಯ ಕಿಂಚಿದವಶಿಷ್ಟಂ ಚೇದಸ್ತಿ ತರ್ಹಿ ತತ್ಪರಿಚೋದಯ ಪೃಚ್ಛ—ತಾ. ಪ್ರ.)

ಶ್ರೀರಾಮನು ಕೇಳಿದನು:—

೨೧. ಎಲೈ ಬ್ರಹ್ಮನೇ, ಈಗ ಸಂಶಯವು ಸಂಪೂರ್ಣವಾಗಿ ಅಡಗಿತು.

೨೨. ತಿಳಿಯಬೇಕಾದುದೆಲ್ಲ ತಿಳಿಯಿತು. ಸಹಜವಾದ ತೃಪ್ತಿಯು ಲಭಿಸಿತು. ಮಲ (ಅಜ್ಞಾನ) ರೂಪವಾದ ದ್ವಿತ್ವ (ದ್ವೈತ)ವಾಗಲಿ, (ನನ್ನಿಂದ ಬೇರೆಯಾದ) ಚೈತ್ಯ (ವಿರುವುದೆಂಬ ಭಾವ) ವಾಗಲಿ, ಕಲ್ಪನೆಗಳನ್ನು ಮಾಡುವ ಮನಸ್ಸೇ ಆಗಲಿ, ಇನ್ನು ಇಲ್ಲ.

೨೩. ಆ ಪ್ರಶ್ನೆಗಳನ್ನು ಕೇಳುವ ಕಾಲದಲ್ಲಿ ನನಗೆ ಅಜ್ಞಾನವು ತುಂಬಿತ್ತು, ಈಗ ಅದು ಪ್ರಶಾಂತವಾಯಿತು.

ಕಲಂಕ ಅತ್ಮನೋಽಸ್ತೀತಿ ತದಜ್ಞಾನವಶೇನ ಯಾ ।
ಭ್ರಾಂತಿರಾಸೀದಿದಾನೀಂ ಸಾ ನಿವೃತ್ತಾ ತ್ವತ್ಪ್ರಸಾದತಃ ॥ ೨೪ ॥

ನ ಜಾಯತೇ ನ ಮ್ರಿಯತೇ ನ ಚೈವಾತ್ಮಾ ಕಲಂಕಿತಃ ।
ಸರ್ವಂಚ ಖಲ್ವಿದಂ ಬ್ರಹ್ಮಮಯ ಮಿತ್ಯುದಿತೋಽಸ್ಮ್ಯಲಮ್ ॥ ೨೫ ॥

ಪ್ರಶ್ನೇಭ್ಯಃ ಸಂಶಯೇಭ್ಯಶ್ಚ ವಾಂಛಿತೇಭ್ಯಶ್ಚ ಸರ್ವತಃ ।
ಶುದ್ಧಂ ಮೇ ನಿರ್ಮಲಂ ಚೇತಸ್ತ್ವಷ್ಟ್ರಾ ಯನ್ತ್ರಭ್ರಮಾದಿವ ॥ ೨೬ ॥

ಸರ್ವಾಚಾರೋಪದೇಶೇಷು ಪ್ರಾಪ್ತಪ್ರೋಕ್ತೇಷು ಸಾಧುಭಿಃ ।
ನಿರಾಕಾಂಕ್ಷೀ ಸ್ಥಿತೋಸ್ಮ್ಯನ್ತಃ ಸುಮೇರುಃ ಕನಕೇಷ್ವಿವ ॥ ೨೭ ॥

---

೨೩. ಆತ್ಮನಿಗೆ ಒಂದು ಕಲಂಕವಿದೆಯೆಂಬ ಭ್ರಾಂತಿಯು ಅಜ್ಞಾನವಶವಾಗಿ ನನ್ನಲ್ಲಿ ಇತ್ತು. ನಿನ್ನ ಪ್ರಸಾದದಿಂದ ಈಗ ಅದು ತಿಳಿಯಿತು.

೨೫. ಆತ್ಮನು ಹುಟ್ಟುವುದಿಲ್ಲ: ಸಾಯುವುದಿಲ್ಲ: ಅವನಲ್ಲಿ ಯಾವ ಕಲಂಕವೂ ಇಲ್ಲ. (ಪ್ರತ್ಯೇಕವಾಗಿರುವಂತೆ ತೋರಿದರೂ) ಇರುವುದಿಲ್ಲ. ಸರ್ವವೂ ಬ್ರಹ್ಮವೇ ಎಂಬ ಜ್ಞಾನದ ಉದಯವಾಗಿ ಸಂತೋಷವಾಗಿರುವೆನು.

೨೬. ನಾನು ಕೇಳಿದ ಪ್ರಶ್ನೆಗಳು, ನನಗಿದ್ದ ಸಂಶಯಗಳು, ನನ್ನ ಮನಸ್ಸಿನಲ್ಲಿದ್ದ ಆಶೋತ್ತರಗಳು ಎಲ್ಲವೂ ಶಾಂತವಾಗಿ ನನ್ನ ಮನಸ್ಸು ಈಗ ಶುದ್ಧವೂ ನಿರ್ಮಲವೂ ಆಗಿ, ಶಿಲ್ಪಿಯು ಯಂತ್ರದಲ್ಲಿಟ್ಟು ಕಡೆದಂತೆ ಆಗಿರುವುದು.

(ತ್ವಷ್ಟ್ರಾ ಯಂತ್ರೇ ಆರೋಪ್ಯ ಭ್ರಮಣಂ ಭ್ರಮಸ್ತಲ್ಲಕ್ಷಿತಂ ತಕ್ಷಣಂ ತಸ್ಮಾತ್ಸೂರ್ಯಬಿಂಬಮಿವಶುದ್ಧಂ ಭಾಸ್ವರಂ–ತಾ. ಪ್ರ.)

೨೭. ಸಾಧು ಸಜ್ಜನರು ತಮ್ಮಲ್ಲಿಗೆ ಬಂದ ಶಿಷ್ಯರಿಗೆ ಹೇಳುವ ಸಮಸ್ತ ಆಚಾರಾದಿ ಉಪದೇಶಗಳಲ್ಲಿ, ಮೇರು ಪರ್ವತಕ್ಕೆ ಚಿನ್ನದಲ್ಲಿ ಹೇಗೆ ಅಪೇಕ್ಷೆಯಿಲ್ಲವೋ, ಹಾಗೆಯೇ ನಾನು ನಿರಪೇಕ್ಷನಾಗಿರುವೆನು.

ನ ತದಸ್ತ್ಯಸ್ತಿಯತ್ರಾಶಾ ನ ತದಸ್ತಿ ಯದೀಪ್ಸಿತಮ್ ।
ನ ತದಸ್ತಿ ಯದಾದೇಯಂ ಹೇಯಂ ಮಧ್ಯಂ ಚರಾಚರೇ ॥ ೨೮ ॥

ಇದಂ ಹೇಯ ಮುಪಾದೇಯ ಮಿದಂ ಸದಿದಮಪ್ಯಸತ್ ।
ಇತಿಚಿನ್ತಾಭ್ರಮಃ ಶಾನ್ತೋ ನಿಪುಣಂ ಪರಮೋ ಮುನೇ ! ॥ ೨೯ ॥

ನ ಸ್ವರ್ಗ ಮಭಿವಾಞ್ಛಾಮಿ ದ್ವೇಷ್ಮಿ ವಾಪಿನ ರೌರವಮ್ ।
ಆತ್ಮನ್ಯೇವಹಿತಿಷ್ಠಾಮಿ ಮನ್ದರಾದ್ರಿರಿವಾಭ್ರಮಃ ॥ ೩೦ ॥

ಕಣಶಃ ಕೀರ್ಣತ್ರಿಜಗತ್ಕ್ಷೀರ ಸಾಗರ ಸಂಸ್ಮೃತಿಃ ।
ವಿಶ್ರಾನ್ತ ಶ್ಚಿರಸಂಭ್ರಾನ್ತೋ ನಿರ್ಭ್ರಮೋ ರಾಮಮನ್ದರಃ ॥ ೩೧ ॥

ಸಾಧುಭಿಃ ಪ್ರಾಪ್ತೇಭ್ಯಃ ಪ್ರೋಕ್ತೇಷು ಸರ್ವೇಷಾಮಾಚಾರಾಣಾಂ ಸಾಧನಾನಾಂ ಉಪದೇಶೇಷು—ತಾ. ಪ್ರ.)

೨೮. ಚರಾಚರ ಸ್ವರೂಪವಾದ ಈ ಬ್ರಹ್ಮಾಂಡದಲ್ಲಿ ನನಗೆ ಆಶೆಯು ಯಾವುದರ ಮೇಲೂ ಇಲ್ಲ: ಆದೇಯವಾದುದೂ ಇಲ್ಲ: ಹೇಯವಾದುದೂ ಇಲ್ಲ: ಆದೇಯ ಹೇಯ ಎರಡು ಅಲ್ಲದ್ದೂ ಇಲ್ಲ.

(ಚಿರಲಭ್ಯೇ ಆಶಾ । ಅನುಪದಲಭ್ಯೇ ಈಹಾ ಇತಿಭೇದಃ – ತಾ. ಪ್ರ.)

೨೯. ಇದು ಹೇಯ, ಇದು ಉಪಾದೇಯ, ಇದು ಸತ್, ಇದು ಅಸತ್, ಎಂಬ ಚಿಂತೆಯ ರೂಪ ಭ್ರಮವು ಸಂಪೂರ್ಣವಾಗಿ, ಎಲೈ ಮುನೀಂದ್ರನೇ, ಶಾಂತವಾಯಿತು.

೩೦. ನನಗೆ ಸ್ವರ್ಗವು ಬೇಕೆಂಬ ಅಭಿಲಾಷೆಯಿಲ್ಲ: ರೌರವವು ಬೇಡವೆಂಬ ದ್ವೇಷವೂ ಇಲ್ಲ. ಸುತ್ತದಿರುವ ಮಂದರದಂತೆ ಸ್ಥಿರವಾಗಿ ಆತ್ಮ ಸಂಸ್ಥನಾಗಿ ಇರುವೆನು.

೩೧. ಕಡೆಗೋಲಾಗಿದ್ದ ಕಾಲದಲ್ಲಿ ಕ್ಷೀರ ಸಮುದ್ರದಿಂದ ತುಂತುರುಗಳನ್ನು ಹಾರಿಸಿ ಮೂರು ಲೋಕಗಳನ್ನೂ ತುಂಬುತ್ತಿದ್ದ ಮಂದರವು ಕಡೆಯುವುದು ನಿಂತಾಗ ಸುಮ್ಮನಾಗಿರುವಂತೆ ರಾಮನಾದ ನಾನು ನಿರ್ಭಯನಾಗಿ ಸುಖವಾಗಿರುವೆನು.

ಅವಸ್ತ್ವಿದಮಿದಂ ವಸ್ತು ಪಶ್ಯೇತಿಕಲನಾಸ್ತ್ಯಲಮ್ ।
ಹೃದಿ ತಸ್ಯ ಕುಸಂದೇಹ ಜಾಲೇನ ಜ್ವಲಿತಾಧಿಕಮ್ ॥ ೩೨ ॥

ಇದಮಿತ್ಥಂ ಜಗದಿತಿ ಜ್ಞಾತಂ ಯೇನ ಮುನೀಶ್ವರ ।
ಸ ಯತ್ರ ಯಾತಿ ಕಾರ್ಪಣ್ಯಂ ಜಗತಸ್ತನ್ನ ಲಭ್ಯತೇ ॥ ೩೩ ॥

ವಿಚಿತ್ರಾಕುಲ ಕಲ್ಲೋಲಾಜ್ಜಡಾಪ್ಪೃತ್ತಿ ವಿವರ್ಜಿತಾತ್ ।
ತ್ವತ್ಪ್ರಸಾದೇನ ಭಗವಂಸ್ತೀರ್ಣಾಃ ಸ್ಮೋ ಭವಸಾಗರಾತ್ ॥ ೩೪ ॥

ಸಂಪದಾಮವಧಿರ್ಜ್ಞಾತೋ ದೃಷ್ಟಃ ಸೀಮಾನ್ತ ಆಪದಾಮ್ ।
ಸರ್ವಸಾರೇಽಪ್ಯದೀನಾಃ ಸ್ಮಃ ಪೂರ್ಣಾಃ ಸ್ಮಃ ಪರಮೇಶ್ವರ ॥ ೩೫ ॥

---

೩೨. ಈ ರಾಮನ ಹೃದಯದಲ್ಲಿ ನಾನಾ ಕುಸಂದೇಹಗಳು ಹುಟ್ಟಿಕೊಂಡು: ಇದು ವಸ್ತು, ಇದು ಅವಸ್ತು, ನೋಡು ಎಂದು ಉರಿಗಳು ಉರಿದಂತೆ ಎದ್ದು ಕುಣಿಯುತ್ತಿದ್ದವಲ್ಲ! ಆ ಕಲ್ಪನೆಗಳೆ ಈಗ ಶಾಂತವಾಗಿರುವುವು.

೩೩. ಈ ಜಗತ್ತು ಈಗ ಕಣ್ಣಿಗೆ ಕಾಣುತ್ತಿರುವಂತೆಯೇ ಇರುವುದು ಎಂದು, ತಿಳಿದುಕೊಂಡು, ಈ ಜಗತ್ತಿನಿಂದ ಕಾರ್ಪಣ್ಯವನ್ನು ಹೊಂದುವ ಮೂಢನಂತೆ, ಎಲೈ ಮುನಿಶ್ವರ, ನಾನು ಇನ್ನು ಮುಂದೆ ಕಾರ್ಪಣ್ಯವನ್ನು ಹೊಂದುವುದಿಲ್ಲ.

೩೪. ಈ ಭವಸಾಗರವೆಂಬುದು ಚಿತ್ರ ವಿಚಿತ್ರಗಳಾದ ಆಕುಲತೆಗಳೆಂಬ ತರಂಗ ಮಾಲೆಗಳನ್ನುಳ್ಳದ್ದು. ಶುದ್ಧವಾಗಿ ಜಡವಾದುದು. ಯಾವುದೊಂದು (ಸ್ವತಂತ್ರ) ವೃತ್ತಿಯೂ ಇಲ್ಲದ್ದು. ಇಂತಹ ಸಾಗರವನ್ನು, ಎಲೈ ಭಗವಂತನೆ, ನಿನ್ನ ಪ್ರಸಾದದಿಂದ ದಾಟಿದೆವು.

೩೫. ಸಂಪತ್ತಿನ ಅವಧಿಯನ್ನು ತಿಳಿದೆವು. ಆಪತ್ತಿನ ಮೇರೆ ಯಾವುದು ಎಂಬುದನ್ನು ಅರಿತೆವು. ಪರಮೇಶ್ವರನೇ, (ನಿನ್ನ ದಯೆಯಿಂದ) ನಾವು ಪೂರ್ಣರಾಗಿರುವೆವು. ಅದರಿಂದ, ಸರ್ವಸಾರವಾದ ಭೂಮಾನಂದದ ವಿಷಯದಲ್ಲಿಯೂ ನಾವು ಅದೀನರಾಗಿರುವೆವು. (ಅದು ಸ್ವತಸ್ಸಿದ್ಧವಾಗಿರುವುದರಿಂದ, ಅದನ್ನೂ ನಾವು ಅರಸಿಕೊಂಡು ಹೋಗಬೇಕಾಗಿಲ್ಲ.)

ಯಯಾವ ಭೇದ್ಯಾಮುಪರೈರ್ದಲಿತಾಶಾಮತಂಗಜಮ್ |
ಸಂಸಾರ ಸಾಗರೇ ಸಮ್ಯಗ್ ವೀರತಾಮಾಗತಂ ಮನಃ || ೩೬ ||

ಪರಿಗಲಿತವಿಕಲ್ಪತಾಮುಪೇತಂ |
ಪ್ರಗಲಿತವಾಂಛಮದೀನ ಸಾರಸತ್ವಂ |
ತ್ರಿಜಗತಿ ಯದತಿ ಪ್ರಸನ್ನರೂಪಂ |
ಪ್ರಮುದಿತ ಮಂತರನುತ್ತಮಂ ಮನೋ ಮೇ || ೩೭ ||

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ "ವಿಶ್ರಾಂತಿ ವರ್ಣನಂ" ನಾಮ ತ್ರಿಚತ್ವಾರಿಂಶಃ ಸರ್ಗಃ

---

೩೬. ಆಶೆಯೆಂಬ ಮತ್ತ ಗಜವನ್ನು ಧ್ವಂಸಮಾಡಿ ಈ ಸಂಸಾರಸಾಗರದಲ್ಲಿ ಇತರರು ಯಾರೂ ಭೇದಿಸಲಾಗದ ವೀರತ್ವವನ್ನು ಮನಸ್ಸು ಪಡೆಯಿತು.

೩೭. ನನ್ನ ಮನಸ್ಸು ಸಂದೇಹಗಳನ್ನೆಲ್ಲ ನೀಗಿಕೊಂಡಿತು. ದೈನ್ಯವನ್ನು ಕಾಣದ ದೃಢವಾದ ಸತ್ತ್ವವನ್ನು ಪಡೆಯಿತು: ಮೂರು ಲೋಕಗಳಲ್ಲಿಯೂ ಅತಿ ಪ್ರಸನ್ನವಾದುದು ಯಾವುದೋ ಅಂತಹ ಪ್ರಮೋದವನ್ನು, ಅನುತ್ತಮವಾಗಿ ತಳೆಯಿತು.

(ಉಪನಿಷತ್ತುಗಳಲ್ಲಿ ಹೇಳುವ ದೇವಾಪ್ಯಯವನ್ನು ಕುರಿತು ಇಲ್ಲಿ ಚಿಂತಿಸಿ. ದೇವಾಪ್ಯಯ ಎಂದರೆ ಉಪಾಸನಾ ದೈವದೊಡನೆ ಬೆರೆತು ಹೋಗುವುದು.)

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ವಿಶ್ರಾಂತಿ ವರ್ಣನ" ಎಂಬ
ನಾಲ್ವತ್ತಮೂರನೆಯ ಸರ್ಗವು

ಹದಿನೈದನೆಯ ಸಂಪುಟವು ಮುಗಿದುದು.